ಗುರುವಾರ, ಏಪ್ರಿಲ್ 11, 2024 | ₹ 7.00
www.prajavani.net
prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಗು

ಮುಂಬೈನಲ್ಲಿ 'ದೋ ಔರ್ ದೋ ಪ್ಯಾರ್' ಸಿನಿಮಾ ಪ್ರಚಾರದ ವೇಳೆ ನಟಿ ವಿದ್ಯಾ ಬಾಲನ್ ಫೋಟೊಗೆ ಪೋಸು ನೀಡಿದ್ದು ಹೀಗೆ...





ಕೇಂದ್ರ ಸರ್ಕಾರದ ಆದೇಶ: ಧ್ವನಿ ಎತ್ತದ ರಾಜ್ಯ ಸರ್ಕಾರ, ಜನಪ್ರತಿನಿಧಿಗಳು

ಸಾರಿಗೆ ನಿಗಮದಲ್ಲಿ ಖಾಸಗೀಕರಣದ ಸದ್ದು

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಪರಿಸರ ಮಾಲಿನ್ಯ ಕಡಿಮೆ ಮಾಡಲು ಎಲೆಕ್ಟ್ರಿಕ್ ಬಸ್‌ಗಳನ್ನು ಹೆಚ್ಚಿಸುವ ನೆಪದಲ್ಲಿ ಸಾರಿಗೆ ನಿಗಮಗಳಿಗೆ ಖಾಸಗಿಯವರ ಪ್ರವೇಶಕ್ಕೆ ಕೇಂದ್ರದ ಬೃಹತ್ ಕೈಗಾರಿಕಾ ಸಚಿವಾಲಯ ಅವಕಾಶ ಮಾಡಿಕೊಟ್ಟಿದೆ. ಇದರ ವಿರುದ್ಧ ಜನಪ್ರತಿನಿಧಿಗಳು ಗಟ್ಟಿಯಾಗಿ ಧ್ವನಿ ಎತ್ತುತ್ತಿಲ್ಲ ಎಂದು ಸಾರಿಗೆ ನಿಗಮಗಳ ನೌಕರರು, ಒಕ್ಕೂಟಗಳು ಆರೋಪಿಸುತ್ತಿವೆ.

ಬಿಎಂಟಿಸಿಯನ್ನು ಭಾಗಶಃ ಖಾಸಗಿಯವರಿಗೆ ನೀಡಲು ಒಂದೂವರೆ ದಶಕದ ಹಿಂದೆ ಆಗಿನ ರಾಜ್ಯ ಸರ್ಕಾರದ ಸಾರಿಗೆ ಸಚಿವರು ನಿರ್ಧರಿಸಿದ್ದರು. ಆಗ ನಿಗಮಗಳ ನೌಕರರು, ವಿವಿಧ ಕಾರ್ಮಿಕ ಸಂಘಟನೆಗಳು ಪ್ರತಿಭಟನೆ ನಡೆಸಿದ್ದರಿಂದ ಖಾಸಗಿಯವರಿಗೆ ಒಪ್ಪಿಸುವ ನಿರ್ಧಾರವನ್ನು ಕೈಬಿಡಲಾಗಿತ್ತು. ಅಂದು ರಾಜ್ಯದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ ಸರ್ಕಾರಕ್ಕೆ ಆಗದ ಕೆಲಸವನ್ನು ಈಗಿನ ಕೇಂದ್ರ ಸರ್ಕಾರ ಮಾಡಲು ಹೊರಟಿದೆ.

ನಿಗಮಕ್ಕಿಲ್ಲ ಸಬ್ಸಿಡಿ: ಎಲೆಕ್ಟ್ರಿಕ್ ವಾಹನಗಳನ್ನು ಪ್ರೋತ್ಸಾಹಿಸಲು ಬೃಹತ್ ಕೈಗಾರಿಕಾ ಸಚಿವಾಲಯವು ಫೇಮ್–2 ಯೋಜನೆ ರೂಪಿಸಿತ್ತು. ಈ ಯೋಜನೆಯಡಿ ಬಸ್‌ಗಳಿಗೆ ₹39 ಲಕ್ಷದಿಂದ ₹50 ಲಕ್ಷದವರೆಗೆ ಸಬ್ಸಿಡಿ ಸಿಗುತ್ತದೆ. ಆದರೆ, ಈ ಸಬ್ಸಿಡಿ ಖಾಸಗಿ ಕಂಪನಿಗಳಿಗಷ್ಟೇ ಸಿಗಲಿದ್ದು, ಸಾರಿಗೆ ನಿಗಮಗಳಿಗೆ ಇಲ್ಲ. ಮಾತ್ರವಲ್ಲ, ಉತ್ಪಾದನಾ ಕಂಪನಿಗಳಿಗೇ ಮುಂದೆ ಬಸ್‌ಗಳನ್ನೂ ನಿರ್ವಹಿಸಲು ಅವಕಾಶ ನೀಡಲಾಗಿದೆ.

ಈಗಾಗಲೇ ಬಿಎಂಟಿಸಿಯಲ್ಲಿ 513 ಇವಿ ಬಸ್‌ಗಳು ಕಾರ್ಯಾಚರಣೆ ಮಾಡುತ್ತಿವೆ. ಕೆಎಸ್‌ಆರ್‌ಟಿಸಿಗೆ 50 ಇವಿ ಬಸ್‌ಗಳು ಬಂದಿವೆ. ಮುಂದೆ 300 ಹವಾ ನಿಯಂತ್ರಣ ರಹಿತ, 200 ಹವಾ ನಿಯಂತ್ರಿತ ಬಸ್‌ಗಳು ಬರಲಿವೆ. ಈಗ ದೂರದ ಊರಿಗೆ ಎಸಿ ಬಸ್‌ಗಳಿವೆ. ಎಲೆಕ್ಟ್ರಿಕ್ ಬಸ್‌ಗಳು ಬಂದರೆ ಕೆ ಎ ಸ್ ಆ ರ್ ಟಿ ಸಿ -ಯಿಂದಲೂ ಹತ್ತಿರದ ನಗರಗಳಿಗೆ ಎಸಿ ಬಸ್‌ಗಳು ಸಂಚರಿಸಲಿವೆ. ಈ ಬಸ್‌ಗಳಲ್ಲಿ ನಿರ್ವಾಹಕರು ಮಾತ್ರ ನಿಗಮದವರಾಗಿರುತ್ತಾರೆ. ಚಾಲಕ, ತಾಂತ್ರಿಕ ಸಿಬ್ಬಂದಿ, ವಾಹನ ನಿರ್ವಹಣೆ ಎಲ್ಲವೂ ಖಾಸಗಿ ಕಂಪನಿಯದ್ದಾಗಿರುತ್ತದೆ.

ಮುಚ್ಚಲಿವೆ ಕಾರ್ಯಾಗಾರಗಳು: 'ಹಿಂದೆ ಟಾಟಾ, ಲೈಲೆಂಡ್ ಸೇರಿದಂತೆ ಯಾವುದೇ ಕಂಪನಿಯಿಂದ ಬಸ್ ಚಾಸಿಗಳನ್ನು ಮಾತ್ರ ಖರೀದಿಸಲಾಗುತ್ತಿತ್ತು. ಆಯಾ ನಿಗಮಗಳ ಕಾರ್ಯಾಗಾರದಲ್ಲಿ ಅದಕ್ಕೆ 'ಬಾಡಿ' ಕಟ್ಟಲಾಗುತ್ತಿತ್ತು. ಕಾರ್ಯಾಚರಣೆ ಆರಂಭವಾದ ಮೇಲೆ ಏನೇ ತೊಂದರೆ ಕಾಣಿಸಿಕೊಂಡರೂ ಈ ಕಾರ್ಯಾಗಾರಗಳಲ್ಲಿಯೇ ರಿಪೇರಿ ಮಾಡಲಾಗುತ್ತಿತ್ತು. ಆದರೆ, ಈಗ ಪೂರ್ಣ ತಯಾರಾದ ಎಲೆಕ್ಟ್ರಿಕ್ ಬಸ್‌ಗಳನ್ನು ಒಡಂಬಡಿಕೆಯ ಆಧಾರದಲ್ಲಿ ನಿಗಮಗಳಿಗೆ ತೆಗೆದುಕೊಳ್ಳಲಾಗುತ್ತಿದೆ. ನಿಗಮಗಳ ಕಾರ್ಯಾಗಾರಗಳಲ್ಲಿ ಈ ಬಸ್‌ಗಳಿಗೆ ಸಂಬಂಧಿಸಿದ ಯಾವುದೇ ಕೆಲಸಗಳು ನಡೆಯುವುದಿಲ್ಲ. ಇವಿ ಬಸ್‌ಗಳು ಹೆಚ್ಚಾದಂತೆ ಒಂದೊಂದೇ ಕಾರ್ಯಾಗಾರ ಮುಚ್ಚಲಿದೆ ಎಂದು ತಾಂತ್ರಿಕ ಸಿಬ್ಬಂದಿ ಆತಂಕ ವ್ಯಕ್ತಪಡಿಸಿದ್ದಾರೆ.

ಅಧಿಕ ಪಾವತಿ: ಒಂದು ಬಿಎಂಟಿಸಿ ಬಸ್ ಒಂದು ಕಿ.ಮೀ.ಗೆ ಸರಾಸರಿ ₹35ರಿಂದ ₹36 ಆದಾಯ ಗಳಿಸುತ್ತದೆ. ಎಲೆಕ್ಟ್ರಿಕ್ ಬಸ್‌ಗಳಿಗೆ ಈಗಿನ ಒಪ್ಪಂದದ ಪ್ರಕಾರ ಕಿ.ಮೀ.ಗೆ ₹41 ಪಾವತಿಸಬೇಕು. ಅಂದರೆ ಆದಾಯಕ್ಕಿಂತ ಕನಿಷ್ಠ ₹5 ಹೆಚ್ಚು ಪಾವತಿ ಮಾಡಬೇಕು. 'ಹೀಗೆಯೇ ಮುಂದುವರಿದರೆ ನಿಗಮಗಳಲ್ಲಿ ಬಸ್‌ಗಳ ಕಾರ್ಯಾಚರಣೆ ನಷ್ಟದ ಕಾರ್ಯ ಎಂದು ಕೆಲವೇ ವರ್ಷಗಳಲ್ಲಿ ಬಿಂಬಿತವಾಗಲಿದೆ. ಖಾಸಗಿಯವರಿಗೆ ಹಸ್ತಾಂತರಿಸುವ ಕೆಲಸ ಸುಲಭವಾಗಲಿದೆ' ಎಂದು ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಶನ್ ರಾಜ್ಯ ಸಂಚಾಲಕ ಕೆ. ಪ್ರಕಾಶ್ ವಿಶ್ಲೇಷಿಸುತ್ತಾರೆ.

ಖಾಸಗಿ ಕೈಗೆ ಡಿಪೊ: ಬಿಎಂಟಿಸಿಗೆ ಇವಿ ಬಸ್‌ಗಳನ್ನು ಟಾಟಾ ಮೋಟಾರ್ಸ್ ಕಂಪನಿ ಪೂರೈಸುತ್ತಿದೆ. ಅವರಿಗೆ ಈಗಾಗಲೇ 10 ಡಿಪೊಗಳನ್ನು ಬಿಟ್ಟು ಕೊಡಲಾಗಿದೆ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ, ಕೆಕೆಆರ್‌ಟಿಸಿ, ಎನ್‌ಡಬ್ಲ್ಯುಆರ್‌ಟಿಸಿ ಈ ನಾಲ್ಕು ನಿಗಮಗಳು ದೇಶದಲ್ಲಿಯೇ ಉತ್ತಮ ನಿಗಮಗಳಾಗಿವೆ. ಹೀಗೆ ಖಾಸಗೀಕರಣ ಮುಂದುವರಿದರೆ ಮುಂದಿನ ದಿನಗಳಲ್ಲಿ ಉತ್ತರ ಭಾರತದ ನಿಗಮಗಳಂತೆ ದುರ್ಬಲಗೊಳ್ಳಲಿವೆ ಎಂದು ಅವರು ದೂರಿದರು.


ಬಿಎಂಟಿಸಿಗೆ ನೀಡಲಾಗಿರುವ ಎಲೆಕ್ಟ್ರಿಕ್ ಬಸ್


ಅಂಕಿ ಅಂಶಗಳು

- **2,071** ಬಿಎಂಟಿಸಿಗೆ ಬರಲಿರುವ ಒಟ್ಟು ಎಲೆಕ್ಟ್ರಿಕ್ ಬಸ್‌ಗಳು
- **500** ಕೆಎಸ್‌ಆರ್‌ಟಿಸಿಗೆ ಬರಲಿರುವ ಎಲೆಕ್ಟ್ರಿಕ್ ಬಸ್‌ಗಳು
- **300** ಎನ್‌ಡಬ್ಲ್ಯುಕೆಆರ್‌ಟಿಸಿಗೆ ಬರಲಿರುವ ಎಲೆಕ್ಟ್ರಿಕ್ ಬಸ್‌ಗಳು
- **400** ಕೆಕೆಆರ್‌ಟಿಸಿಗೆ ಬರಲಿರುವ ಎಲೆಕ್ಟ್ರಿಕ್ ಬಸ್‌ಗಳು

ಮತ ಮಂಥನ

ಪ್ರಜಾ ಮತ ಜನತಂತ್ರದ ಹಬ್ಬ
ಲೋಕಸಭಾ ಚುನಾವಣೆ - 2024

'ಒಂದು ಆದೇಶದಲ್ಲಿ ಸರಿಪಡಿಸಬಹುದಾದ ಸಮಸ್ಯೆ'



ಖಾಸಗಿಯವರಿಗಷ್ಟೇ ಬೆಂಬಲ ನೀಡಲು ಬೃಹತ್ ಕೈಗಾರಿಕಾ ಸಚಿವಾಲಯ ರೂಪಿಸಿರುವ ಫೇಮ್–2 ಯೋಜನೆ ಕಾಯ್ದೆ ರೂಪದಲ್ಲಿ ಬಂದಿರುವಂಥದ್ದಲ್ಲ. ಇಲಾಖೆಯ ಒಂದು ಆದೇಶದಿಂದ ಜಾರಿಯಾಗಿದೆ. ಹಾಗಾಗಿ ಇನ್ನೊಂದು ಆದೇಶ ಹೊರಡಿಸಿ, ಅದರಲ್ಲಿ 'ನಿಗಮಗಳು ಖರೀದಿ ಮಾಡಿದರೂ ಸಬ್ಸಿಡಿ ನೀಡಲಾಗುವುದು' ಎಂಬ ಒಂದು ವಾಕ್ಯ ಸೇರಿಸಿದರೂ ಸಾಕಾಗುತ್ತದೆ. ಈ ಬಗ್ಗೆ ಅಧಿಕಾರಿಗಳ ಮಟ್ಟದಲ್ಲಿ ಇಲ್ಲಿಂದ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಇದು ಸಾಕಾಗುವುದಿಲ್ಲ. ರಾಜ್ಯ ಸರ್ಕಾರವು ಇದನ್ನು ಒಂದು ಆಂದೋಲನದ ರೂಪದಲ್ಲಿ ಕೊಂಡೊಯ್ದರೆ ನಿಗಮಗಳು ನಷ್ಟದ ಕಡೆಗೆ ಹೋಗುವುದನ್ನು, ಖಾಸಗೀಕರಣಗೊಳ್ಳುವುದನ್ನು ತಪ್ಪಿಸಬಹುದು. ಅಂಥ ಇಚ್ಛಾಶಕ್ತಿಯನ್ನು ಪ್ರದರ್ಶಿಸುತ್ತಿಲ್ಲ.

ಕೆ. ಪ್ರಕಾಶ್, ರಾಜ್ಯ ಸಂಚಾಲಕ, ಆಲ್ ಇಂಡಿಯಾ ರೋಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಫೆಡರೇಶನ್

'ಎಲೆಕ್ಟ್ರಿಕ್ ಬಸ್‌ಗೆ ವಿರೋಧವಿಲ್ಲ'



ಎಲೆಕ್ಟ್ರಿಕ್ ಬಸ್ ಖರೀದಿಗೆ ನಮ್ಮ ವಿರೋಧವಿಲ್ಲ. ಆದರೆ, ಅದನ್ನು ಖಾಸಗಿಯವರಿಗೆ ವಹಿಸುವುದಕ್ಕೆ ಮಾತ್ರ ವಿರೋಧವಿದೆ. ಈ ಬಗ್ಗೆ ರಾಜ್ಯ ಸರ್ಕಾರ, ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಹಲವು ಬಾರಿ ಮನವಿ ಮಾಡಿದರೂ ಪ್ರಯೋಜನವಾಗಿಲ್ಲ. ಅಧಿಕ ಬೆಲೆಯ ಓಲ್ವೊ ಬಸ್‌ಗಳನ್ನೇ ನಮ್ಮ ಚಾಲಕರು, ನಿರ್ವಾಹಕರು, ತಾಂತ್ರಿಕ ಸಿಬ್ಬಂದಿ ನಿರ್ವಹಿಸಿದ್ದಾರೆ. ಎಲೆಕ್ಟ್ರಿಕ್ ಬಸ್‌ಗಳನ್ನು ನಿರ್ವಹಿಸುವುದು ಕಷ್ಟವಾಗುವುದಿಲ್ಲ. ಹಿಂದಿನ ಸರ್ಕಾರವು ಖಾಸಗಿ ಕಂಪನಿಗಳ ಜೊತೆಗೆ ಒಡಂಬಡಿಕೆ ಮಾಡಿದೆ. ಅದರ ಪ್ರಕಾರ ಬಸ್‌ಗಳು ಬರುತ್ತಲೇ ಇವೆ. ಈಗಿನ ಸರ್ಕಾರ ಒಡಂಬಡಿಕೆಯನ್ನು ಬದಲಾಯಿಸುವ ಪ್ರಯತ್ನ ಮಾಡಿಲ್ಲ. ಬಿಡದಿ, ಯಲಹಂಕ, ಶಾಂತಿನಗರ, ಹೆಣ್ಣೂರು ಸಹಿತ ನಮ್ಮ ಹಲವು ಡಿಪೊಗಳನ್ನು ಖಾಸಗಿಯವರಿಗೆ ನೀಡಲಾಗಿದೆ. ಆ ಡಿಪೊಗಳಿಗೆ ಉಚಿತ ವಿದ್ಯುತ್ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ಒದಗಿಸಲಾಗಿದೆ. ಅಲ್ಲಿದ್ದ ನಮ್ಮ ಚಾಲಕರು, ತಾಂತ್ರಿಕ ಸಿಬ್ಬಂದಿಯನ್ನು ಬೇರೆಡೆಗೆ ವರ್ಗ ಮಾಡಿದ್ದಾರೆ.

ಜಗದೀಶ ಎಚ್.ಆರ್., ರಾಜ್ಯಾಧ್ಯಕ್ಷ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಸಂಘ

ಒತ್ತಡ ಹೇರದ ರಾಜ್ಯ ಸರ್ಕಾರ

ವಿವಿಧ ಸಾರಿಗೆ ಒಕ್ಕೂಟಗಳು ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಮನವಿ ಮಾಡಿವೆ. ಎಲೆಕ್ಟ್ರಿಕ್ ಬಸ್‌ಗಳನ್ನು ನಿಗಮಗಳೇ ಖರೀದಿ ಮಾಡಬೇಕು ಎಂದು ಒಕ್ಕೂಟಗಳ ಸದಸ್ಯರು ಒತ್ತಾಯಿಸಿದ್ದಾರೆ. ಆ ಸಂದರ್ಭದಲ್ಲಿ 'ಖರೀದಿಗೆ ನಮಗೆ ಅವಕಾಶ ನೀಡಬೇಕು. ಸಬ್ಸಿಡಿಯನ್ನು ನಮಗೆ ಒದಗಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕು' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಪ್ರತಿಕ್ರಿಯಿಸಿದ್ದರು. ಇದನ್ನು ಹೊರತುಪಡಿಸಿ ಕೇಂದ್ರ ಸರ್ಕಾರದ ಆದೇಶವನ್ನು ರದ್ದುಪಡಿಸಲು ಒತ್ತಡ ಹೇರುವ ಕೆಲಸವನ್ನು ರಾಜ್ಯ ಸರ್ಕಾರ ಮಾಡಿಲ್ಲ ಎಂದು ಸಾರಿಗೆ ಒಕ್ಕೂಟದ ಪದಾಧಿಕಾರಿಗಳು ದೂರಿದರು.

ಲೋಕಸಭಾ ಚುನಾವಣೆ ಮತದಾರರು ಏನಂತಾರೆ?

'ಕೆರೆಗಳ ನಿರ್ಮಾಣದ ಸಂಕಲ್ಪ ಮಾಡಿ'



ನಗರದಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ. ಇದಕ್ಕೆ ಮೂಲ ಕಾರಣ ಬೆಂಗಳೂರಿನ ಕೆರೆಗಳನ್ನೆಲ್ಲ ಮುಚ್ಚಿ, ನಿವೇಶನಗಳನ್ನಾಗಿ ಪರಿವರ್ತನೆ ಮಾಡಿರುವುದು. ಪ್ರತಿ ಲೋಕಸಭೆ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರಗಳಲ್ಲಿ ಹೊಸ ಕೆರೆಗಳನ್ನು ನಿರ್ಮಾಣ ಮಾಡುವ ಸಂಕಲ್ಪವನ್ನು ಎಲ್ಲ ಲೋಕಸಭಾ ಸದಸ್ಯರು ಮಾಡಬೇಕು. ನೀರಿನ ಸಮಸ್ಯೆ ಎದುರಾದರೆ ಬೆಂಗಳೂರು ನಗರದ ಬೆಳವಣಿಗೆ ಅಸಾಧ್ಯ. ಆದ್ದರಿಂದ ಚುನಾವಣಾ ಪ್ರಣಾಳಿಕೆಯಲ್ಲಿ ಕೆರೆಗಳ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ಇಲ್ಲವಾದಲ್ಲಿ ಈ ನಗರವು ಸಂಪೂರ್ಣ ನೈಸರ್ಗಿಕ ಸಂಪನ್ಮೂಲಗಳನ್ನು ಕಳೆದುಕೊಂಡು, ಮಧುಮೇಹ ನಗರ, ಕ್ಯಾನ್ಸರ್ ನಗರವಾಗಿ ಪರಿವರ್ತನೆಯಾಗಲಿದೆ.

ಪರಿಸರ ಚಂದ್ರಶೇಖರ್, ಚಿಕ್ಕಪೇಟೆ

'ಮೂಲಭೂತ ಸೌಕರ್ಯಕ್ಕೆ ಆದ್ಯತೆ ನೀಡಿ'



ಲೋಕಸಭೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ನಗರದ ಮೂಲಸೌಕರ್ಯಗಳ ಬಗ್ಗೆ ಹೆಚ್ಚು ಗಮನಹರಿಸಬೇಕು. ಶಾಲಾ ಮಕ್ಕಳಿಗೆ ಮತ್ತು ಶಿಕ್ಷಕರಿಗೆ ಬಸ್‌ಗಳ ಅನನುಕೂಲತೆ ಇರುವುದರಿಂದ ಸರಿಯಾದ ಸಮಯಕ್ಕೆ ಶಾಲೆಗೆ ತಲುಪಲು ಸಮಸ್ಯೆಯಾಗುತ್ತಿದೆ. ಮಾರುತಿ ನಗರ ಕೆಂಪಾಪುರಕ್ಕೆ ಬಸ್‌ನ ವ್ಯವಸ್ಥೆ ಮಾಡಬೇಕು. ಕೂಲಿ ಕಾರ್ಮಿಕರು ಮಧ್ಯಮ ವರ್ಗದವರು ವಾಸಿಸುತ್ತಿರುವ ಈ ಕ್ಷೇತ್ರದಲ್ಲಿ ಒಳಚರಂಡಿ ವ್ಯವಸ್ಥೆಯ ಬಗ್ಗೆಯೂ ಗಮನಹರಿಸಬೇಕು. ಉದ್ಯಾನಗಳನ್ನು ಸರಿಯಾಗಿ ನಿರ್ವಹಣೆ ಮಾಡಬೇಕು.

ಗೀತಾ ವಿ.ಆರ್., , ಮಾರುತಿನಗರ

ನನ್ನ ಕ್ಷೇತ್ರ, ನನ್ನ ಕಾರ್ಯಸೂಚಿ

ಲೋಕಸಭೆ ಚುನಾವಣೆಯ ಅಭ್ಯರ್ಥಿಯು ನಿಮ್ಮ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾಡಬೇಕಾಗಿರುವುದೇನು? ನಿಮ್ಮ ಕಾರ್ಯಸೂಚಿಯನ್ನು 100 ಪದಗಳ ಮಿತಿಯಲ್ಲಿ ಬರೆಯಿರಿ. ಹೆಸರು, ವಿಳಾಸ, ಭಾವಚಿತ್ರ ಜತೆಗಿರಲಿ
96060 38256

ಎಂಇಎಸ್‌ನಿಂದ ಮಹಾದೇವ ಪಾಟೀಲ ಕಣಕ್ಕೆ



ಬೆಳಗಾವಿ: ಬೆಳಗಾವಿ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಎಂಇಎಸ್ ಮುಖಂಡ ಮಹಾದೇವ ಪಾಟೀಲ ಸ್ಪರ್ಧಿಸುವರು.

ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಆಸಕ್ತರಿಂದ ಎಂಇಎಸ್ ಅರ್ಜಿ ಆಹ್ವಾನಿಸಿತ್ತು. ಹಲವರು ಒಲವು ತೋರಿದ್ದರು. ಕೊನೆಗೆ ಸಂಘಟನೆಯ ಕಾರ್ಯಕರ್ತ ಮಹಾದೇವ ಪಾಟೀಲ ಅವರನ್ನು ಕಣಕ್ಕೆ ಇಳಿಸುವ ಕುರಿತು ಎಂಇಎಸ್ ತೀರ್ಮಾನಿಸಿದೆ.

ಸಿ.ಎಂ. ಕುರಿತ ಸುಳ್ಳು ಸುದ್ದಿ: ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಸುಳ್ಳು ಸುದ್ದಿ ಪ್ರಕಟಿಸಲಾಗಿದೆ' ಎಂದು ಆರೋಪಿಸಿ, ಕಾಂಗ್ರೆಸ್ ನೀಡಿದ ದೂರು ಆಧರಿಸಿ, ನಗರದ ಪಶ್ಚಿಮ ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಬೆಂಗಳೂರಿನ ಪ್ರಭಾಕರ್, ವಸಂತ್ ಗಿಳಿಯಾರ್, ವಿಜಯ್ ಹೆರಗು, ಪಾಂಡು ಮೋದಿಕ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅಲ್ಲದೇ ಬಿಎಸ್‌ವೈ ಬೆಂಬಲಿಗರು, ದಾವಣಗೆರೆ ಬಿಜೆಪಿ ಹಾಗೂ ದಾತ್ರಿ ಗೋಶಾಲೆ ಗೋಳೂರು ಎಂಬ ಫೇಸ್‌ಬುಕ್ ಪುಟಗಳ ಹೆಸರನ್ನೂ ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

'ಹಿಂದೂಗಳ ಅಗತ್ಯ ನಮಗೆ ಬೇಡ. ಮುಸ್ಲಿಮರ ಓಟು ಸಾಕು. ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಹುಟ್ಟಲು ಬಯಸುತ್ತೇನೆ. ಮುಸ್ಲಿಮರ ಓಲೈಕೆ ಕುರಿತು ಬಿಜೆಪಿಗರ ಟೀಕೆ ಬಗ್ಗೆ ತಲೆಕೆಡಿಸಿಕೊಳ್ಳಬೇಡಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ ಎಂಬ ರೀತಿಯಲ್ಲಿ ಸುಳ್ಳು ಸುದ್ದಿಯನ್ನು ಸೃಷ್ಟಿಸಿ, ದಿನಪತ್ರಿಕೆಯಲ್ಲಿ ಪ್ರಕಟವಾದಂತೆ ಪೋಸ್ಟ್ ಮಾಡಲಾಗಿದೆ' ಎಂದು ಆರೋಪಿಸಿ ಹರೀಶ್ ನಾಗರಾಜ ಎಂಬವರು ದೂರು ನೀಡಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೂ ಈ ಬಗ್ಗೆ ದೂರು ನೀಡಿದ್ದಾರೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ ಮತ್ತು ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಆರೋಪಿಗಳ ಪತ್ತೆಗೆ ಕ್ರಮ ಕೈಗೊಳ್ಳಲಾಗಿದೆ. ಸಾಮಾಜಿಕ ಜಾಲತಾಣದಲ್ಲಿ ಯಾರು ಪೋಸ್ಟ್ ಮಾಡಿದ್ದಾರೆ ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಸುಳ್ಳುಸುದ್ದಿ ಮೊರೆಹೋದ ಬಿಜೆಪಿ–ಜೆಡಿಎಸ್: ಸಿದ್ದರಾಮಯ್ಯ

'ರಾಜಕೀಯ ಪ್ರತಿಸ್ಪರ್ಧಿಗಳನ್ನು ಎದುರಿಸಲಾಗದೆ ಇಂತಹ ಅಡ್ಡದಾರಿ ಮೂಲಕ ಚುನಾವಣೆ ಗೆಲ್ಲಲು ಹೊರಟಿರುವುದು ಬಿಜೆಪಿ ಮತ್ತು ಜೆಡಿಎಸ್‌ನ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ. ಹತ್ತು ವರ್ಷ ಆಡಳಿತ ನಡೆಸಿದ ಪಕ್ಷವೊಂದು ಚುನಾವಣೆ ಗೆಲ್ಲಲು ಸುಳ್ಳು ಸುದ್ದಿಯ ಮೊರೆ ಹೋಗುವಂತಹ ಹೀನಾಯ ಸ್ಥಿತಿಗೆ ತಲುಪಬಾರದಿತ್ತು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು 'ಎಕ್ಸ್' ಮಾಡಿರುವ ಅವರು, 'ಬಿಜೆಪಿ – ಜೆಡಿಎಸ್ ಮಿತ್ರಮಂಡಳಿ ಕೃಪಾಪೋಷಿತ ಕಿಡಿಗೇಡಿಗಳು ವಾರ್ತಾಪತ್ರಿಕೆಯನ್ನು ಹೋಲುವ ಸುಳ್ಳು ಸುದ್ದಿಯ ತುಣುಕೊಂದನ್ನು ಸೃಷ್ಟಿಸಿ, ಅದರಲ್ಲಿ ಜನರ ಕೋಮುಭಾವನೆ ಕೆರಳಿಸುವ ಸುದ್ದಿಯನ್ನು ತುಂಬಿ ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟಿದ್ದಾರೆ. ಇದರ ಹಿಂದಿರುವ ದುಷ್ಟ ಶಕ್ತಿ ಯಾರು ಎಂಬ ಬಗ್ಗೆ ನಮಗೆ ಮಾಹಿತಿ ಇದ್ದು, ಆದಷ್ಟು ಬೇಗನೆ ಅವರನ್ನು ನ್ಯಾಯದ ಕೈಗಳಿಗೆ ಒಪ್ಪಿಸಲಾಗುವುದು' ಎಂದಿದ್ದಾರೆ. 'ಸುಳ್ಳು ಸುದ್ದಿಗಳನ್ನು ನಂಬಿ ಶೇರ್ ಮಾಡುವ ಮುನ್ನ ಎಚ್ಚರಿಕೆ ವಹಿಸಿ. ಸುಳ್ಳು ಸುದ್ದಿಯ ಸೃಷ್ಟಿಕರ್ತರು, ಅವರ ಬೆನ್ನ ಹಿಂದೆ ನಿಂತಿರುವವರನ್ನು ಹಿಡಿದು, ಫೇಕ್ ಫ್ಯಾಕ್ಟರಿಯನ್ನು ಕಾನೂನಿನ ಮೂಲಕ ಬೇರು ಸಹಿತ ಕಿತ್ತೆಸೆಯುತ್ತೇವೆ' ಎಂದು ಹೇಳಿದ್ದಾರೆ.



ಆಶೀರ್ವಚನ ಸ್ವೀಕಾರ

ಜೆಡಿಎಸ್ ಅಧ್ಯಕ್ಷ ಹಾಗೂ ಮಂಡ್ಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಎಚ್.ಡಿ.ಕುಮಾರಸ್ವಾಮಿ ಮತ್ತು ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರ ಜತೆ ಎನ್‌ಡಿಎ ಅಭ್ಯರ್ಥಿಗಳು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿಯವರನ್ನು ಬುಧವಾರ ವಿಜಯನಗರದ ಶಾಖಾಮಠದಲ್ಲಿ ಭೇಟಿ ಮಾಡಿ ಆಶೀರ್ವಾದ ಪಡೆದರು.

'ಈ ಭಾನುವಾರ ಮೋದಿಗಾಗಿ' ಕಾರ್ಯಕ್ರಮ

ಬೆಂಗಳೂರು: ಬಿಜೆಪಿ ಕಾರ್ಯಕರ್ತರಲ್ಲದವರು ಮತ್ತು ಪ್ರಧಾನಿ ನರೇಂದ್ರ ಮೋದಿಯವರ ಕಟ್ಟಾ ಅಭಿಮಾನಿಗಳು, ಬೆಂಬಲಿಗರನ್ನು ದೊಡ್ಡ ಪ್ರಮಾಣದಲ್ಲಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿಸಲು ಬಿಜೆಪಿ ಮುಂದಾಗಿದೆ.

ಮುಂಬರುವ ಎರಡು ಭಾನುವಾರಗಳಂದು (ಏ.14 ಮತ್ತು 21) 'ಈ ಭಾನುವಾರ ಮೋದಿ' ಗಾಗಿ ಹೆಸರಿನಲ್ಲಿ ರಾಜ್ಯದ ಎಲ್ಲ ಭಾಗಗಳಲ್ಲೂ ಈ ಕಾರ್ಯಕ್ರಮ ನಡೆಯಲಿದೆ.

ವಿವಿಧ ವೃತ್ತಿಗಳಲ್ಲಿರುವ ಮೋದಿ ಅವರ ಅಭಿಮಾನಿಗಳು ಪ್ರಚಾರದಲ್ಲಿ ತೊಡಗಿಸಿಕೊಳ್ಳಬಹುದು. ಆನ್‌ಲೈನ್ ಮೂಲಕ ಹೆಸರು ನೋಂದಾಯಿಸಿಕೊಳ್ಳಬಹುದು. ನೋಂದಾಯಿಸದೆಯೂ ಭಾಗವಹಿಸಬಹುದಾಗಿದೆ ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಂಚಾಲಕ ವಿ.ಸುನಿಲ್‌ಕುಮಾರ್ ತಿಳಿಸಿದರು.

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸ್ವಾರಸ್ಯ

ಪ್ರಚಾರಕ್ಕೆ ಜೆಡಿಎಸ್ ನಾಯಕರೇ ಗೈರು

• ಎಂ. ಮಹೇಶ

ಮೈಸೂರು: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಮೈತ್ರಿಯ ಸಮನ್ವಯಕ್ಕೆ ಸಭೆ ನಡೆಸಿದ್ದರೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರವಾಗಿ ಪ್ರಚಾರದಲ್ಲಿ ಜೆಡಿಎಸ್ ನಾಯಕರ ಗೈರು ಎದ್ದು ಕಾಣುತ್ತಿದೆ.

ಯದುವೀರ್ ನಡೆಸುತ್ತಿರುವ ರೋಡ್ ಶೋ, ಕಾರ್ನರ್ ಸಭೆ, ಸಂವಾದ ಹಾಗೂ ಸಭೆಗಳಲ್ಲಿ ಜೆಡಿಎಸ್‌ನ ಸ್ಥಳೀಯ ಮುಖಂಡರು ಮತ್ತು ಕಾರ್ಯಕರ್ತರಷ್ಟೇ ಪಾಲ್ಗೊಳ್ಳುತ್ತಿದ್ದು, ನಾಯಕರು ಬಾರದಿರುವುದು ಬಿಜೆಪಿ ಮುಖಂಡರ ಅಸಮಾಧಾನಕ್ಕೆ ಕಾರಣವಾಗಿದೆ. 'ಜೆಡಿಎಸ್‌ನವರಿಂದ ಅಷ್ಟೇನೂ ಸಹಕಾರ ದೊರೆಯುತ್ತಿಲ್ಲ' ಎಂಬ ಆರೋಪ ವ್ಯಾಪಕವಾಗಿದ್ದು, 'ಜೆಡಿಎಸ್ ಮೈತ್ರಿ ಧರ್ಮ ಪಾಲಿಸುತ್ತಿದ್ದೆಯೇ? ಎಂಬ ಚರ್ಚೆಯನ್ನು ಹುಟ್ಟು ಹಾಕಿದೆ!

ಸಮನ್ವಯ ಸಭೆನಂತರವೂ: ಮಾರ್ಚ್ 27ರಂದು ನಗರದಲ್ಲಿ ನಡೆದಿದ್ದ ಬಿಜೆಪಿ–ಜೆಡಿಎಸ್ ಸಮನ್ವಯ ಸಭೆಯಲ್ಲಿ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಈ ಭಾಗದ ಜೆಡಿಎಸ್ ನಾಯಕರು ಬಿಜೆಪಿ ನಾಯರೊಂದಿಗೆ ವೇದಿಕೆ ಹಂಚಿಕೊಂಡಿದ್ದರು. ಅದಕ್ಕೂ ಮುನ್ನ, ಜೆಡಿಎಸ್ ನಾಯಕರಾದ ಶಾಸಕ ಜಿ.ಟಿ.ದೇವೇಗೌಡ ಹಾಗೂ ಮಾಜಿ ಸಚಿವ ಸಾ.ರಾ. ಮಹೇಶ್ ಅವರನ್ನು ಅವರ ಕಚೇರಿಯಲ್ಲೇ ಯದುವೀರ್ ಭೇಟಿಯಾಗಿ ಬೆಂಬಲ ಕೋರಿದ್ದರು.

ಜಿ.ಟಿ.ದೇವೇಗೌಡರು ಒಮ್ಮೆಯಷ್ಟೆ ಪ್ರಚಾರ ಮಾಡಿದ್ದಾರೆ. ಸಾ.ರಾ. ಮಹೇಶ್ ಸಮನ್ವಯ ಸಭೆಯಲ್ಲಿ ಕಾಣಿಸಿಕೊಂಡಿದ್ದರು. ನಂತರ, ಈ ಯಾರೂ ಪ್ರಚಾರದಲ್ಲಿ ಕಾಣಿಸಿಕೊಳ್ಳುತ್ತಿಲ್ಲ.

ಮಾರ್ಚ್ 29ರಂದು ಬಿಜೆಪಿ ನಗರ ಯುವ ಮೋರ್ಚಾದಿಂದ ಇಲ್ಲಿನ ಕುವೆಂಪುನಗರದ ಬಂದಂತಮ್ಮ ಕಾಳಮ್ಮ ಸಮುದಾಯ ಭವನ ಆವರಣದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಮಾಜಿ ಮೇಯರ್ ಆರ್.ಲಿಂಗಪ್ಪ ಪಾಲ್ಗೊಂಡಿದ್ದರು. ಕೆ.ಜಿ. ಕೊಪ್ಪಲು ಭಾಗದಲ್ಲಿ ನಡೆದ ಪ್ರಚಾರದಲ್ಲಿ ಮಾತ್ರ ಜೆಡಿಎಸ್‌ನ ಕೆಲವು ಸ್ಥಳೀಯ ನಾಯಕರು ಭಾಗವಹಿಸಿದ್ದರು. ಕಾರ್ಯಕರ್ತರೂ ಕಡಿಮೆ ಸಂಖ್ಯೆಯಲ್ಲಿದ್ದರು.

'ಪ್ರಚಾರದ ಕಾವು ದಿನೇ ದಿನೇ ಏರುತ್ತಿದ್ದರೂ, ಚುನಾವಣೆಗೆ (ಏ.26) ಕೆಲವೇ ದಿನಗಳು ಉಳಿದಿದ್ದರೂ ಎರಡೂ ಪಕ್ಷಗಳ ನಡುವೆ ಇನ್ನೂ ಸಮನ್ವಯ ಮೂಡಿಲ್ಲವೇ' ಎಂಬ ಅನುಮಾನಕ್ಕೂ ಈ ಬೆಳವಣಿಗೆಗಳು ಕಾರಣವಾಗಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ತವರಿನಲ್ಲೇ ನಡೆಯುತ್ತಿರುವ ಈ ಬೆಳವಣಿಗೆಯು ಬಿಜೆಪಿಯವರಲ್ಲಿ ಬೇಸರವನ್ನುಂಟು ಮಾಡಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

ಚರ್ಚೆಯಾಗಿದೆ: 'ಜೆಡಿಎಸ್ ನಾಯಕರು ಹಾಗೂ ಕಾರ್ಯಕರ್ತರಿಂದ ಅಷ್ಟೇನೂ ಸಹಕಾರ ದೊರೆಯದಿರುವುದು ಪಕ್ಷದ ಸಭೆಯಲ್ಲಿ ಚರ್ಚೆಯಾಗಿದೆ. ವರಿಷ್ಠರ ಗಮನಕ್ಕೂ ತರಲಾಗಿದೆ. ನಮ್ಮ ಅಭ್ಯರ್ಥಿ ಗೆಲ್ಲಿಸಿಕೊಳ್ಳಲು ನಾವಂತೂ ವ್ಯಾಪಕವಾಗಿ ಪ್ರಚಾರ ನಡೆಸುತ್ತಿದ್ದೇವೆ' ಎಂದು ಬಿಜೆಪಿ ಮುಖಂಡರೊಬ್ಬರು ಹೇಳಿದರು.

'ಒಕ್ಕಲಿಗರ ಮತ ನಿರ್ಣಾಯಕವಾಗಿರುವುದರಿಂದ, ಜೆಡಿಎಸ್ ಜೊತೆಗಿನ ಸಖ್ಯದಿಂದ ಅನುಕೂಲವಾಗಲಿದೆ ಎಂದು ನಿರೀಕ್ಷಿಸಿದ್ದೇವೆ. ಜೆಡಿಎಸ್‌ನವರು ತುಂಬು ಮನಸ್ಸಿನಿಂದ ಪ್ರಚಾರ ಮಾಡಿದರಷ್ಟೆ ಅದು ಸಾಧ್ಯವಾಗುತ್ತದೆ. ಇನ್ನೂ ಸಮಯವಿದೆ, ನೋಡೋಣ' ಎಂದರು.

'ಸಮನ್ವಯದಲ್ಲಿ ಲೋಪವೇನಿಲ್ಲ. ಎಲ್ಲರೂ ಒಟ್ಟಾಗಿ ಹೋಗುತ್ತೇವೆ. ನಮ್ಮೆಲ್ಲ ಮುಖಂಡರು ಹಾಗೂ ಕಾರ್ಯಕರ್ತರೂ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ' ಎಂದು ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಪ್ರತಿಕ್ರಿಯಿಸಿದರು.

ವಾಟ್ಸ್‌ಆ್ಯಪ್‌ನಲ್ಲಿ ಪ್ರಚಾರದ ಸಂದೇಶ: ಎಫ್‌ಡಿಎ ಅಮಾನತು

ಹಾಸನ: ಬಿಜೆಪಿ ಪರ ಸಂದೇಶ ಹೊಂದಿದ ಮೆಸೇಜ್ ಹಂಚಿಕೊಂಡ ಆರೋಪದ ಮೇಲೆ ಇಲ್ಲಿನ ಡಿಡಿಪಿಐ ಕಚೇರಿಯ ಪ್ರಥಮ ದರ್ಜೆ ಸಹಾಯಕ ಬಿ.ಎಚ್. ಮಂಜುನಾಥ್ ಅವರನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಸಿ.ಸತ್ಯಭಾಮಾ ಆದೇಶ ಹೊರಡಿಸಿದ್ದಾರೆ.


'ಪ್ರೀತಂ ಜೆ. ಗೌಡ ಹಾಸನ ಎಂಎಲ್‌ಎ' ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಚುನಾವಣೆ ಪ್ರಚಾರದ ಸಂದೇಶ ಕಳುಹಿಸಿದ್ದ ಬಗ್ಗೆ, ಮಂಜುನಾಥ ಅವರ ವಿರುದ್ಧ ನಾಗೇಂದ್ರ ರಾಮ ಎಂಬುವವರು ದೂರು ಸಲ್ಲಿಸಿದ್ದರು.

ಈ ಸಂಬಂಧ ಪರಿಶೀಲಿಸಿ 24 ಗಂಟೆಯೊಳಗೆ ಮಾಹಿತಿ ನೀಡುವಂತೆ ಹೆಚ್ಚುವರಿ ಜಿಲ್ಲಾಧಿಕಾರಿ ಕೆ.ಟಿ. ಶಾಂತಲಾ ಡಿಡಿಪಿಐಗೆ ನೋಟಿಸ್ ನೀಡಿದ್ದರು.

ಅದರಂತೆ ಡಿಡಿಪಿಐ ಅವರು, ಮಂಜುನಾಥ್ ಅವರ ವಿವರಣೆ ಕೇಳಿದ್ದರು. ಮಂಜುನಾಥ ಪ್ರತಿಕ್ರಿಯೆ ಜೊತೆಗೆ, ಸಹಾಯಕ ಚುನಾವಣಾಧಿಕಾರಿಗೆ ಡಿಡಿಪಿಐ ವರದಿ ಸಲ್ಲಿಸಿದ್ದರು.

ಪ್ರಕರಣದ ಬಗ್ಗೆ ಮಂಜುನಾಥ್ ನೀಡಿದ ವಿವರಣೆ ಹಾಗೂ ಡಿಡಿಪಿಐ ವರದಿ ಆಧರಿಸಿ, ಇಲಾಖಾ ವಿಚಾರಣೆ ಕಾಯ್ದಿರಿಸಿ ಬಿ.ಎಚ್. ಮಂಜುನಾಥ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ.

ಹೆಬ್ಬಾಳಕರ ನಮ್ಮವರೇ: ಕೂಡಲಸಂಗಮ ಶ್ರೀ



ಬೆಳಗಾವಿ: 'ಲಿಂಗಾಯತ ಪಂಚಮಸಾಲಿ ಮೀಸಲಾತಿ ಹೋರಾಟದಲ್ಲಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಇದ್ದಾರೆ. ಅವರು ನಮ್ಮವರೇ' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ಲಕ್ಷ್ಮಿ ಹೆಬ್ಬಾಳಕರ್ ಲಿಂಗಾಯತ ಪಂಚಮಸಾಲಿ ಸಮುದಾಯದವರಲ್ಲ' ಎಂಬ ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮುರುಗೇಶ ನಿರಾಣಿ ಅವರ ಹೇಳಿಕೆಗೆ ಬುಧವಾರ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಮೀಸಲಾತಿ ಹೋರಾಟದಲ್ಲಿ ತಮ್ಮನ್ನು ತೊಡಗಿಸಿಕೊಂಡ ಕಾರಣ ಅವರು ನಮ್ಮವರೇ' ಎಂದರು.

'ಯಾರೋ ಒಬ್ಬರು ಏನನ್ನೋ ಹೇಳುವರೆಂದು ನಾನು ಪ್ರತಿಕ್ರಿಯೆ ನೀಡುವುದಿಲ್ಲ. ಇದರ ಬಗ್ಗೆ ಸಮಾಜದ ಜಿಲ್ಲಾ ಮುಖಂಡರೇ ಸ್ಪಷ್ಟನೆ ಕೊಡುವರು. ಯಾರ ಮನಸ್ಸಿಗೂ ನೋವಾಗುವಂತೆ ಯಾರೂ ಹೇಳಿಕೆ ಕೊಡಬಾರದು. ಲಕ್ಷ್ಮಿ ಹೆಬ್ಬಾಳಕರ ಅವರ ಜಾತಿ ಮತ್ತು ಮೂಲ ಕೆದಕುವುದು ಸರಿಯಲ್ಲ' ಎಂದರು.

'ಮೀಸಲಾತಿಗೆ ಯಾರು ಅಸಹಕಾರ ಕೊಟ್ಟಿದ್ದಾರೋ ಅವರ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಎಲ್ಲರೂ ನಮ್ಮವರೇ. ಚುನಾವಣೆ ವೇಳೆ, ಈ ರೀತಿ ಮಾತಾನಾಡುವುದು ಬೇಡ. ಹಿಂದಿನ ಬಿಜೆಪಿ ಮತ್ತು ಈಗಿನ ಕಾಂಗ್ರೆಸ್ ಸರ್ಕಾರದ ವಿರುದ್ಧ ನೋವು ಇದೆ. ಕಾಂಗ್ರೆಸ್ ಸರ್ಕಾರ ಈವರೆಗೆ ಒಂದು ಸಭೆ ಮಾಡಿಲ್ಲ' ಎಂದರು.

ಸಂಕ್ಷಿಪ್ತ ಸುದ್ದಿ

14ರ ಮೋದಿ ಕಾರ್ಯಕ್ರಮದಲ್ಲಿ ಬದಲಾವಣೆ

ಬೆಂಗಳೂರು/ಮಂಗಳೂರು: ಇದೇ 14ರಂದು ಪ್ರಧಾನಿ ನರೇಂದ್ರ ಮೋದಿಯವರ ರಾಜ್ಯ ಭೇಟಿ ಕಾರ್ಯಕ್ರಮದಲ್ಲಿ ಸ್ವಲ್ಪ ಬದಲಾವಣೆ ಆಗಿದ್ದು, ಅಂದು ಅವರು ಮೈಸೂರು ಮತ್ತು ಮಂಗಳೂರಿಗೆ ಮಾತ್ರ ಭೇಟಿ ನೀಡಲಿದ್ದಾರೆ. ಬೆಂಗಳೂರು ಮತ್ತು ಚಿಕ್ಕಬಳ್ಳಾಪುರ ಕಾರ್ಯಕ್ರಮವನ್ನು ಮುಂದೂಡಲಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಸುನಿಲ್‌ಕುಮಾರ್ ತಿಳಿಸಿದರು.

ಸುದ್ದಿಗಾರರ ಜತೆ ಮಾತನಾಡಿ ಈ ವಿಷಯ ತಿಳಿಸಿದ ಅವರು, ಮೈಸೂರಿನಲ್ಲಿ ಅಂದು ಬೃಹತ್ ಸಾರ್ವಜನಿಕ ಸಭೆ ನಡೆಯಲಿದ್ದು, ಇದರಲ್ಲಿ ಮೈಸೂರು–ಕೊಡಗು, ಮಂಡ್ಯ, ಹಾಸನ ಮತ್ತು ಚಾಮರಾಜನಗರ ಕ್ಷೇತ್ರಗಳ ಅಭ್ಯರ್ಥಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಮಂಗಳೂರಿನಲ್ಲಿ ಸಮಾವೇಶದ ಬದಲು ರೋಡ್ ಶೋ ಮಾತ್ರ ನಡೆಯಲಿದೆ.

ಸಿ.ಎಂ ಮತ್ತೆ ಪ್ರಚಾರ

ಬೆಂಗಳೂರು: ಮೈಸೂರು– ಕೊಡಗು ಮತ್ತು ಚಾಮರಾಜನಗರ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳು ಗೆಲ್ಲಲೇಬೇಕೆಂದು ಹಟಕ್ಕೆ ಬಿದ್ದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಇದೇ 12ರಿಂದ ಎರಡು ದಿನ ಮತ್ತೆ ಈ ಎರಡು ಕ್ಷೇತ್ರಗಳ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರ ಕೈಗೊಳ್ಳಲಿದ್ದಾರೆ.

12ರಂದು ಚಾಮರಾಜನಗರ ಕ್ಷೇತ್ರ ವ್ಯಾಪ್ತಿಯಲ್ಲಿ 'ಪ್ರಜಾಧ್ವನಿ– 2' ಸಮಾವೇಶಗಳಲ್ಲಿ ಭಾಗವಹಿಸಲಿರುವ ಮುಖ್ಯಮಂತ್ರಿ, 13ರಂದು ಮೈಸೂರು ನಗರ, ಹುಣಸೂರು, ಪಿರಿಯಾಪಟ್ಟಣದಲ್ಲಿ ನಡೆಯಲಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸಲಿದ್ದಾರೆ.

'ದಿಂಗಾಲೇಶ್ವರ ಜೊತೆ ಮಾತನಾಡುವೆ'

ಹಾವೇರಿ: 'ಧಾರವಾಡ ಲೋಕಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವುದಾಗಿ ಘೋಷಿಸಿರುವ ಶಿರಹಟ್ಟಿ ಭಾವೈಕ್ಯ ಪೀಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಅವರ ಮನವೊಲಿಸುವ ಪ್ರಕ್ರಿಯೆ ನಡೆದಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

'ದಿಂಗಾಲೇಶ್ವರ ಸ್ವಾಮೀಜಿ ಜೊತೆ ಬಿ.ಎಸ್.ಯಡಿಯೂರಪ್ಪ ಮಾತನಾಡಿದ್ದಾರೆ. ನಾನೂ ಮಾತನಾಡುವೆ. ಮಾತುಕತೆಗೆ ಇನ್ನೂ ಸಮಯವಿದೆ' ಎಂದು ಅವರು ಬುಧವಾರ ಸುದ್ದಿಗಾರರಿಗೆ ತಿಳಿಸಿದರು.

'ಲೋಕಸಭಾ ಚುನಾವಣೆ ಬಳಿಕ ರಾಜ್ಯದಲ್ಲಿ ವಿಧಾನಸಭಾ ಚುನಾವಣೆ ನಡೆಯಲಿದೆಯೆಂದು ಭವಿಷ್ಯ ನುಡಿಯಲ್ಲ. ಆದರೆ, ಸಿದ್ದರಾಮಯ್ಯ ಅವರೇ ಮುಖ್ಯಮಂತ್ರಿ ಆಗಿರುವುದನ್ನು ನೋಡುತ್ತ ಡಿ.ಕೆ.ಶಿವಕುಮಾರ್ ಕೂತಿರಲ್ಲ' ಎಂದರು.

'ಗ್ಯಾರಂಟಿ ಯೋಜನೆಯನ್ನು ರಾಜ್ಯ ಸರ್ಕಾರವು ಒಂದು ಕೈಯಲ್ಲಿ ಕೊಟ್ಟು, ಇನ್ನೊಂದು ಕೈಯಿಂದ ಕಸಿದುಕೊಳ್ಳುತ್ತಿದೆ. ಮೋದಿ ಗ್ಯಾರಂಟಿ ಬಗ್ಗೆ ಜನರಿಗೆ ವಿಶ್ವಾಸವಿದೆಯೇ ಹೊರತು ರಾಜ್ಯ ಸರ್ಕಾರದ ತಾತ್ಕಾಲಿಕ ಗ್ಯಾರಂಟಿ ಬಗ್ಗೆ ಅಲ್ಲ' ಎಂದರು.

ಬಿಎಸ್‌ಪಿಯಿಂದ ಚಿಕ್ಕಹಾಗಡೆ ಉಚ್ಚಾಟನೆ

ಕನಕಪುರ: ನಾಮಪತ್ರ ವಾಪಸ್ ಪಡೆದ ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಎಸ್‌ಪಿ ಅಭ್ಯರ್ಥಿ ಚಿನ್ನಪ್ಪ ವೈ.ಚಿಕ್ಕಹಾಗಡೆ ಅವರನ್ನು ಪಕ್ಷದಿಂದ ಉಚ್ಚಾಟಿಸಲಾಗಿದೆ.

ಪಕ್ಷ ಅವರನ್ನು ಗುರುತಿಸಿ ಅಭ್ಯರ್ಥಿಯನ್ನಾಗಿ ಮಾಡಿತ್ತು. ಆದರೆ, ಅವರು ಕಾಂಗ್ರೆಸ್ ಆಮಿಷಕ್ಕೆ ಒಳಗಾಗಿ ನಾಮಪತ್ರ ವಾಪಸ್ ಪಡೆದಿದ್ದಾರೆ. ನಂಬಿಕೆಗೆ ದ್ರೋಹವೆಸಗಿದ ಅವರನ್ನು ಪಕ್ಷದಿಂದ ಉಚ್ಚಾಟನೆ ಮಾಡಲಾಗಿದೆ ಎಂದು ಬಿಎಸ್‌ಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ. ಅನ್ನದಾನಪ್ಪ ತಿಳಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ಬಿಎಸ್‌ಪಿ ಅಭ್ಯರ್ಥಿ ಇಲ್ಲ. ಪಕ್ಷವು ಇಲ್ಲಿ ಕಾಂಗ್ರೆಸ್, ಬಿಜೆಪಿ ಸೇರಿದಂತೆ ಯಾವ ಪಕ್ಷಕ್ಕೂ ಬೆಂಬಲ ನೀಡುತ್ತಿಲ್ಲ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗುರುವಾರ, ಏಪ್ರಿಲ್ 11, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 101 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ವಿದೇಶಾಂಗ ನೀತಿಯಲ್ಲೂ ಭಾರತದೊಂದಿಗೆ ಚೀನಾ ಪ್ರತಿಸ್ಪರ್ಧೆ!



ಆಳ–ಅಗಲ ಆರ್‌ಬಿಐ @90
ಉಗ್ರ ತಳಿ ನಾಯಿ ಸಾಕುವುದಕ್ಕೆ ನಿಷೇಧ: ರದ್ದು 5

ಈದ್ ಉಲ್ ಫಿತ್ರ್ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
75,038	22,753	₹74,060 (ಬೆಂಗಳೂರು)	₹84,600 (ಬೆಂಗಳೂರು)	83.31



5.52ಲಕ್ಷ ವಿದ್ಯಾರ್ಥಿಗಳು ತೇರ್ಗಡೆ ● ಬಾಲಕಿಯರದ್ದೇ ಮೇಲುಗೈ ● ವಿಜ್ಞಾನದಲ್ಲೇ ಹೆಚ್ಚು ಪಾಸ್

ಪಿಯು ಫಲಿತ: ದಾಖಲೆ ಜಿಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿಪೂರ್ವ ಶಿಕ್ಷಣದ ಇತಿಹಾಸದಲ್ಲಿಯೇ ಈ ಬಾರಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ ದಾಖಲೆಯ ಫಲಿತಾಂಶ ಬಂದಿದೆ. ದ್ವಿತೀಯ ಪಿಯು ಪರೀಕ್ಷೆಯಲ್ಲಿ 2023ರಲ್ಲಿ ಬದಲಾವಣೆ (ಬಹು ಆಯ್ಕೆ ಪ್ರಶ್ನೆಗಳು) ತಂದಿದ್ದು ಹಾಗೂ ಇದೇ ಮೊದಲ ಬಾರಿ ಎಲ್ಲ ವಿಷಯಗಳಿಗೂ ಆಂತರಿಕ ಮೌಲ್ಯಮಾಪನ ಪರಿಚಯಿಸಿದ್ದು ಈ ದಾಖಲೆ ಫಲಿತಾಂಶಕ್ಕೆ ಕಾರಣ.

2023-24ನೇ ಸಾಲಿನ ಫಲಿತಾಂಶವನ್ನು ಬುಧವಾರ ಪ್ರಕಟಿಸಲಾಗಿದ್ದು, 5.52 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗುವ ಮೂಲಕ ಹೊಸ ಇತಿಹಾಸ ಸೃಷ್ಟಿಸಿದ್ದಾರೆ. ಶೇಕಡ 81.15ರಷ್ಟು ಫಲಿತಾಂಶ ದೊರೆತಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ ಶೇ 6.48ರಷ್ಟು ಹೆಚ್ಚಳವಾಗಿದೆ.

ಬಾಲಕಿಯರು ಮತ್ತೆ ಫಲಿತಾಂಶದಲ್ಲಿ ಮುನ್ನಡೆ ಸಾಧಿಸುವ ತಮ್ಮ ಹೆಗ್ಗಳಿಕೆಯನ್ನು ಉಳಿಸಿಕೊಂಡಿದ್ದಾರೆ. ಪರೀಕ್ಷೆ ಬರೆದಿದ್ದ 3.59 ಲಕ್ಷ ವಿದ್ಯಾರ್ಥಿನಿಯರಲ್ಲಿ 3.05 ಲಕ್ಷ (ಶೇ 84.87) ವಿದ್ಯಾರ್ಥಿನಿಯರು ತೇರ್ಗಡೆಯಾಗಿದ್ದಾರೆ.

5ನೇ ಪುಟ ನೋಡಿ

ವಿಜ್ಞಾನ ವಿಭಾಗ



598 — ಎ. ವಿದ್ಯಾಲಕ್ಷ್ಮಿ, ವಿದ್ಯಾನಿಕೇತನ ಕಾಲೇಜು, ಹುಬ್ಬಳ್ಳಿ
ರಾಜ್ಯಕ್ಕೆ ಮೊದಲ ರ‍್ಯಾಂಕ್ ಬರುವ ಬಗ್ಗೆ ನಿರೀಕ್ಷೆ ಇರಲಿಲ್ಲ. ಫಲಿತಾಂಶ ಖುಷಿ ತಂದಿದೆ. ಪಾಲಕರು ಹಾಗೂ ಬೋಧಕರ ಬೆಂಬಲದಿಂದ ಇದು ಸಾಧ್ಯವಾಗಿದೆ. ವೈದ್ಯೆ ಆಗುವ ಆಸೆಯಿದೆ. ನೀಟ್ ಪರೀಕ್ಷೆಗೆ ಸಿದ್ಧತೆ ನಡೆಸಿರುವೆ

ವಾಣಿಜ್ಯ ವಿಭಾಗ



597 — ಎಂ. ಜ್ಞಾನವಿ, ವಿದ್ಯಾನಿಧಿ ಕಾಲೇಜು, ತುಮಕೂರು
ಹಾಸ್ಟೆಲ್‌ನಲ್ಲಿ ಇದ್ದು ಅಭ್ಯಾಸ ಮಾಡಿದ್ದು ನೆರವಾಯಿತು. ಯಾವುದೇ ಒಂದು ವಿಷಯ ಓದಲು ಕುಳಿತರೆ ಅದು ಪೂರ್ತಿಯಾಗುವ ತನಕ ಬಿಡುತ್ತಿರಲಿಲ್ಲ. ಚಾರ್ಟೆಡ್ ಅಕೌಂಟೆಂಟ್ ಕೋರ್ಸ್‌ಗೆ ಸೇರುವೆ

ಕಲಾ ವಿಭಾಗ



596 — ಡಿ.ಮೇಧಾ, ಎನ್‌ಎಂಕೆಆರ್‌ವಿ ಕಾಲೇಜು, ಬೆಂಗಳೂರು
ಓದಿನ ನಡುವೆ ಬಿಡುವು ಮಾಡಿಕೊಂಡು ಪಠ್ಯೇತರ ಚಟುವಟಿಕೆಗಳಿಗೆ ಗಮನ ನೀಡುತ್ತಿದ್ದೆ. ಇದರಿಂದ ಆಳ ಓದಿಗೆ ಸಹಾಯವಾಗುತ್ತಿತ್ತು. ಮುಂದೆ ಮನೋವಿಜ್ಞಾನದಲ್ಲಿ ಉನ್ನತ ಶಿಕ್ಷಣ ಪಡೆಯುವ ಕನಸಿದೆ



596 — ವೇದಾಂತ್ ಜ್ಞಾನುಬಾ ನವಿ, ಎಸ್‌ಎಸ್ ಕಾಲೇಜು, ವಿಜಯಪುರ
ತಂದೆ ಕೋವಿಡ್ ವೇಳೆ ತೀರಿಕೊಂಡರು. ತುಂಬಾ ಸಮಸ್ಯೆಯಾಗಿತ್ತು. ರಾಜ್ಯ ಸರ್ಕಾರದ ನೆರವಿನ ಹಸ್ತದಿಂದ ನನ್ನ ತಾಯಿ ನನ್ನನ್ನು ಓದಿಸಿದರು. ಉಪನ್ಯಾಸಕರ ಮಾರ್ಗದರ್ಶನವು ನೆರವಾಯಿತು



596 — ಬಿ.ವಿ. ಕವಿತಾ, ಇಂದು ಕಾಲೇಜು, ಕೊಟ್ಟೂರು, ಬಳ್ಳಾರಿ
ಅಪ್ಪ, ಅಮ್ಮ ನನ್ನನ್ನು ಕಷ್ಟಪಟ್ಟು ಓದಿಸಿದ್ದಾರೆ. ಅವರ ನೋವು ಅರ್ಥೈಸಿಕೊಂಡು, ಶ್ರಮ ವಹಿಸಿ ಓದಿದ್ದೆ. ಐಎಎಸ್ ಅಧಿಕಾರಿ ಆಗುವ ಗುರಿಯಿದೆ. ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂಬ ಆಸೆ ಇದೆ

	ಸಾಧನೆ	ಪರೀಕ್ಷೆ ಬರೆದವರು	ಉತ್ತೀರ್ಣ
(ಬಾಲಕಿಯರು)	84.87%	3,59,612	3,05,212
(ಬಾಲಕರು)	76.98%	3,21,467	2,47,478

ತೇರ್ಗಡೆ	
ಗ್ರಾಮೀಣ ಮಕ್ಕಳು	81.31%
ನಗರ ಮಕ್ಕಳು	81.10%

ಯಾವ ಕಾಲೇಜು ಎಷ್ಟು ಸಾಧನೆ (ಶೇಕಡವಾರು)

ಖಾಸಗಿ	90.46
ಅನುದಾನಿತ	79.82
ಸರ್ಕಾರಿ	75.29

100ಕ್ಕೆ 100 ಅಂಕ ಪಡೆದವರು ಎಷ್ಟು?

ಗಣಿತ	ಜೀವವಿಜ್ಞಾನ	ಕನ್ನಡ	ರಸಾಯನ ವಿಜ್ಞಾನ	ಸಂಸ್ಕೃತ	ಲೆಕ್ಕಶಾಸ್ತ್ರ	ಅರ್ಥಶಾಸ್ತ್ರ
6,960	5,925	2,570	1,969	1,499	1,788	1,403



ಭಕ್ತಿಯ ಪರಿ... ಒಡಿಶಾದ ಭುವನೇಶ್ವರದಲ್ಲಿ ಬುಧವಾರ ನಡೆದ ವಾರ್ಷಿಕ 'ದಂಡ ಯಾತ್ರೆ'ಯ (ಸ್ವಯಂ ಶಿಕ್ಷೆ) ಭಾಗವಾಗಿ ಭಕ್ತರು ದೇಹ ದಂಡಿಸಿದ ಕ್ಷಣ –ಪಿಟಿಐ ಚಿತ್ರ

ಯೋಗ ಗುರು ರಾಮದೇವ, ಬಾಲಕೃಷ್ಣಗೆ ತರಾಟೆ

ಕ್ಷಮೆ ಒಪ್ಪುವಷ್ಟು ಉದಾರಿ ಆಗುವುದಿಲ್ಲ: 'ಸುಪ್ರೀಂ'

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: 'ದಾರಿ ತಪ್ಪಿಸುವಂತಹ' ಜಾಹೀರಾತುಗಳನ್ನು ಪ್ರಕಟಿಸಿದ್ದಕ್ಕೆ ಸಂಬಂಧಿಸಿ, ಯೋಗ ಗುರು ರಾಮದೇವ ಹಾಗೂ ಪತಂಜಲಿ ಆಯುರ್ವೇದದ ವ್ಯವಸ್ಥಾಪಕ ನಿರ್ದೇಶಕ ಆಚಾರ್ಯ ಬಾಲಕೃಷ್ಣ ಅವರು ಬೇಷರತ್ತಾಗಿ ಕ್ಷಮೆ ಕೋರಿ ಸಲ್ಲಿಸಿದ ಪ್ರಮಾಣಪತ್ರಗಳನ್ನು ಒಪ್ಪಿಕೊಳ್ಳಲು ಸುಪ್ರೀಂ ಕೋರ್ಟ್ ಬುಧವಾರ ನಿರಾಕರಿಸಿತು.

ಇಬ್ಬರನ್ನೂ ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್, 'ನೀವು ತಪ್ಪು ಮಾಡಿ ಸಿಕ್ಕಿ ಹಾಕಿಕೊಂಡಿದ್ದೀರಿ. ದಾರಿ ಕಾಣದೇ ಈಗ ಕ್ಷಮೆ ಕೇಳುತ್ತಿದ್ದೀರಿ. ಆದರೆ, ಈ ವಿಚಾರವಾಗಿ ನ್ಯಾಯಾಲಯ ಬಹಳ ಉದಾರಿಯಾಗಲು ಇಚ್ಛಿಸುವುದಿಲ್ಲ' ಎಂದು ನ್ಯಾಯಮೂರ್ತಿಗಳಾದ ಹಿಮಾ ಕೊಹ್ಲಿ, ಅಹ್ಸಾನುದ್ದೀನ್ ಅಮಾನುಲ್ಲಾ ಅವರಿದ್ದ ನ್ಯಾಯಪೀಠ ಹೇಳಿತು.



'ಜನರ ದಾರಿ ತಪ್ಪಿಸುವ ಜಾಹೀರಾತುಗಳಿಗೆ ಸಂಬಂಧಿಸಿ ನ್ಯಾಯಾಲಯಕ್ಕೆ ನೀಡಿದ್ದ ಮುಚ್ಚಳಿಕೆಯನ್ನು ಉದ್ದೇಶಪೂರ್ವಕವಾಗಿ ಪಾಲನೆ ಮಾಡದಿರುವ ಹಾಗೂ ಮೊಂಡುತನದ ಧೋರಣೆ ತೋರಿದ್ದಕ್ಕಾಗಿ ಈ ಕ್ಷಮಾಪಣೆ ಒಪ್ಪಿಕೊಳ್ಳುವುದಿಲ್ಲ. ಈ ಕುರಿತು ಸಮಾಜಕ್ಕೆ ಸ್ಪಷ್ಟ ಸಂದೇಶವೊಂದು ರವಾನೆಯಾಗಬೇಕಿದೆ' ಎಂದೂ ನ್ಯಾಯಪೀಠ ಹೇಳಿತು.

'ಹಲವು ಕಾಯಿಲೆಗಳನ್ನು ಗುಣಪಡಿಸಲಾಗುವುದು ಎಂದು ಹೇಳಿ ಕೊಂಡು ಜನರನ್ನು ವಂಚಿಸುವ ಎಲ್ಲ ಎಫ್‌ಎಂಸಿಜಿಗಳ (ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಉತ್ಪನ್ನಗಳು) ಬಗ್ಗೆಯೂ ನ್ಯಾಯಾಲಯ ಕಳವಳ ವ್ಯಕ್ತಪಡಿಸುತ್ತದೆ' ಎಂದು ಹೇಳಿತು.

ಪತಂಜಲಿ ಆಯುರ್ವೇದ ಕಂಪನಿಯು ಜನರ ದಾರಿ ತಪ್ಪಿಸುವಂತಹ ಜಾಹೀರಾತುಗಳನ್ನು ನೀಡುತ್ತಿದೆ ಎಂದು ದೂರಿ ಭಾರತೀಯ ವೈದ್ಯಕೀಯ ಸಂಸ್ಥೆ (ಐಎಂಎ) ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಪೀಠ ಈ ಮಾತು ಹೇಳಿದೆ.

7ನೇ ಪುಟ ನೋಡಿ

ಎಎಪಿಗೆ ಸಚಿವ ರಾಜಕುಮಾರ್ ರಾಜೀನಾಮೆ

ನವದೆಹಲಿ: ದೆಹಲಿ ಸಚಿವ ರಾಜಕುಮಾರ್ ಆನಂದ್ ಅವರು ತಮ್ಮ ಹುದ್ದೆಗೆ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ಘೋಷಿಸಿದ್ದಾರೆ. 7

ಒಳ ಪುಟಗಳು

ಪೇಟಿಎಂ ಬ್ಯಾಂಕ್ ಸಿಇಒ ರಾಜೀನಾಮೆ 12

ಚಿನಕುರಳಿ

ಪ್ರಕಾಶ್ ಶೆಟ್ಟಿ



ಒಕ್ಕಲಿಗ ಮಠ: ಡಿಕೆ–ಎಚ್‌ಡಿಕೆ ಕಿತ್ತಾಟ

ಬೆಂಗಳೂರು: ಬಿಜೆಪಿ ಮತ್ತು ಜೆಡಿಎಸ್ ಮೈತ್ರಿಕೂಟದ ಲೋಕಸಭಾ ಕ್ಷೇತ್ರದ ಅಭ್ಯರ್ಥಿಗಳು ಬುಧವಾರ ಆದಿಚುಂಚನಗಿರಿಯ ಶಾಖಾ ಮಠಕ್ಕೆ ಭೇಟಿ ನೀಡಿದ ಬೆನ್ನಲ್ಲೇ ಮೂರೂ ಪಕ್ಷಗಳ ನಾಯಕರ ಮಧ್ಯೆ ವಾಕ್ಸಮರ ಆರಂಭವಾಗಿದೆ. ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ.ಕುಮಾರಸ್ವಾಮಿ, 'ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ನಾಯಕರು ಸ್ವಾಮೀಜಿಯವರನ್ನು ಬಳಸಿಕೊಳ್ಳುವ ಯತ್ನ ಮಾಡುತ್ತಿದ್ದಾರೆ. ಅವರನ್ನು ರಾಜಕೀಯಕ್ಕೆ ಎಳೆದು ತರಬಾರದು' ಎಂದಿದ್ದಾರೆ. ಈ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಒಕ್ಕಲಿಗ ಮುಖ್ಯಮಂತ್ರಿಯನ್ನು ಕುರ್ಚಿಯಿಂದ ಇಳಿಸಿದ್ದ ಬಿಜೆಪಿಯವರು ಈಗ ಅವರನ್ನೇ ಕರೆದುಕೊಂಡು ಸ್ವಾಮೀಜಿ ಭೇಟಿಗೆ ಹೋಗಿದ್ದಾರೆ ಎಂದು ಕೆಣಕಿದ್ದಾರೆ.

ಸ್ವಾಮೀಜಿಯನ್ನು ರಾಜಕೀಯಕ್ಕೆ ಬಳಸಿಕೊಳ್ಳಬೇಡಿ: ಎಚ್‌ಡಿಕೆ



- ಹಳೇ ಮೈಸೂರು ಭಾಗದಲ್ಲಿ ಒಕ್ಕಲಿಗರ ಮತಗಳನ್ನು ಸೆಳೆಯಲು ಮುಂದಾಗಿರುವ ಸಿದ್ದರಾಮಯ್ಯ ಅವರಿಗೆ ಚುನಾವಣೆ ಸಂದರ್ಭದಲ್ಲಿ ಒಕ್ಕಲಿಗರ ಮೇಲೆ ಅಭಿಮಾನ ಬಂದಿದೆ. ನನ್ನನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಲು ಏನೆಲ್ಲಾ ಮಾಡಿದ್ದಾರೆ ಎಂಬುದು ಗೊತ್ತಿದೆ
- ಸ್ವಾಮೀಜಿಯವರನ್ನು ಭೇಟಿ ಮಾಡಿ ಅವರನ್ನು ಬಳಸಿಕೊಳ್ಳುವ ಪ್ರಯತ್ನವನ್ನು ಕಾಂಗ್ರೆಸ್ ಮಾಡಿದೆ. ರಾಜಕೀಯಕ್ಕೂ ಧರ್ಮಕ್ಕೂ ಏನು ಸಂಬಂಧ? ಧಾರ್ಮಿಕವಾಗಿ ನಾಡಿಗೆ ಮಾರ್ಗದರ್ಶನ ಮಾಡುತ್ತಿರುವ ಸ್ವಾಮೀಜಿಯವರನ್ನು ರಾಜಕೀಯಕ್ಕೆ ಎಳೆದು ತರಬಾರದು
- ನಾನು ಅಧಿಕಾರದಲ್ಲಿ ಇದ್ದಾಗ ಎಂದೂ ನಮ್ಮ ಸಮುದಾಯದ ಸ್ವಾಮೀಜಿಯವರನ್ನು ದುರುಪಯೋಗಪಡಿಸಿಕೊಳ್ಳುವ ಕೆಲಸ ಮಾಡಿಲ್ಲ. ಅಧಿಕಾರ ದುರ್ಬಳಕೆಯನ್ನೂ ಮಾಡಿಕೊಂಡಿಲ್ಲ. ಜಾತ್ಯತೀತ ಎಂದು ಹೇಳಿಕೊಳ್ಳೋರು ಪ್ರತಿ ದಿನ ಜಾತಿ ಬಗ್ಗೆ ಮಾತನಾಡುತ್ತಾರೆ. ನಮ್ಮ ಸಮಾಜದ ಜನ ದಡ್ಡರಲ್ಲ. ಇವರು ನಡೆಸುತ್ತಿರುವ ರಾಜಕೀಯ ಎಲ್ಲರಿಗೂ ಅರ್ಥ ಆಗುತ್ತದೆ
- ನನ್ನ ನೇತೃತ್ವದ ಮೈತ್ರಿ ಸರ್ಕಾರದ ಪತನಕ್ಕೆ ಕಾಂಗ್ರೆಸ್ ನಾಯಕರು ಏನೆಲ್ಲಾ ಮಾಡಿದರು ಎನ್ನುವುದು ಗೊತ್ತಿದೆ. ಆಗ ಕಾಂಗ್ರೆಸ್ ನಾಯಕರಲ್ಲಿಯೇ ಯಾಕೆ ಸಂಘರ್ಷ ನಡೆಯಿತು ಎನ್ನುವುದೂ ತಿಳಿದಿದೆ. ಧರ್ಮಸ್ಥಳದ ಸಿದ್ಧವನದಲ್ಲಿ ಸರ್ಕಾರದ ಪತನಕ್ಕೆ ಸಿದ್ಧೌಷಧ ಅರೆದದ್ದು ಯಾರು ಎಂಬುದು ಜನರಿಗೆ ಗೊತ್ತು

ಒಕ್ಕಲಿಗ ಸಿ.ಎಂ ಇಳಿಸಿದ್ದನ್ನು ಸ್ವಾಮೀಜಿ ಪ್ರಶ್ನಿಸಿಲ್ಲವೇ: ಡಿಕೆಶಿ



- ಮೈತ್ರಿ ಸರ್ಕಾರ ಪತನವಾದ ಬಳಿಕ ನಮ್ಮ ಸಮಾಜದ (ಒಕ್ಕಲಿಗ) ಸಿ.ಎಂ ಅವರನ್ನು ಇಳಿಸಿ ಬಿಟ್ಟಿರಲ್ಲ ಎಂದು ಬಿಜೆಪಿಯವರನ್ನು ಸ್ವಾಮೀಜಿ ಪ್ರಶ್ನಿಸಬಹುದಿತ್ತಲ್ಲವೇ? ಇದನ್ನು ಕೇಳುವ ಶಕ್ತಿ ಸ್ವಾಮೀಜಿಯವರಿಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ಒಕ್ಕಲಿಗ ಮುಖ್ಯಮಂತ್ರಿಯನ್ನು ಕೆಳಗಿಳಿಸಿದವರನ್ನೇ ಇಂದು ಸ್ವಾಮೀಜಿಯವರ ಬಳಿ ಕರೆದುಕೊಂಡು ಹೋಗಿ ಆಶೀರ್ವಾದ ಪಡೆಯುತ್ತಿದ್ದಾರಲ್ಲವೇ?
- ಒಕ್ಕಲಿಗರು ಮತ್ತು ಸ್ವಾಮೀಜಿಗಳು ದಡ್ಡರಲ್ಲ. ಸ್ವಾಮೀಜಿ ಬಳಿ ಬರುವವರಿಗೆ ವಿಭೂತಿ, ಹೂವಿನ ಹಾರ ಹಾಕಿ ಕಳಿಸುತ್ತಾರೆ. ಅವರು ನಮ್ಮ ಪರವೂ ಮಾಡುವುದಿಲ್ಲ, ಅವರ ಪರವೂ ಮಾಡುವುದಿಲ್ಲ
- ಮಠದ ಸ್ವಾಮೀಜಿಗಳನ್ನೂ ಬಿಟ್ಟಿಲ್ಲ. ಪರ್ಯಾಯ ಒಕ್ಕಲಿಗ ಮಠ ಸೃಷ್ಟಿಸಿದ ಕುಮಾರಸ್ವಾಮಿ, ತಮ್ಮ ಮಾತಿಗೆ ಎಂದಿಗೂ ಬದ್ಧರಾಗಿರುವುದಿಲ್ಲ. ಅವರ ಮಾತಿಗೆ ತಲೆಕೆಡಿಸಿಕೊಳ್ಳುವುದಿಲ್ಲ. ಈಗ ದಿನವೂ ಮಠಕ್ಕೆ ಹೋಗುತ್ತಾರೆ
- ನಾವು (ಕಾಂಗ್ರೆಸ್) ಎಂಟು ಮಂದಿ ಒಕ್ಕಲಿಗರಿಗೆ ಲೋಕಸಭಾ ಟಿಕೆಟ್ ನೀಡಿದ್ದೇವೆ. ನಾನು ಡಿಸಿಎಂ ಮತ್ತು ಪಕ್ಷದ ಅಧ್ಯಕ್ಷನಾಗಿದ್ದೇನೆ. ನಾವೆಲ್ಲಾ ಸಮಾಜದ ಮತ್ತು ರಾಜ್ಯದ ಅಭಿವೃದ್ಧಿಗೆ ಕೆಲಸ ಮಾಡಲು ತಯಾರಿದ್ದೇವೆ. ಭವಿಷ್ಯದ ಬಗೆಗಿನ ಮಾತುಗಳು ನಮಗೆ ಏಕೆ? ನಮ್ಮ ಸಮಾಜದವರು ದಡ್ಡರಲ್ಲ

ಶ್ರೀಸಾಮಾನ್ಯರ ಹೊರಗಿಡುವ ಯೋಜನೆಗಳಿಗೆ ಆದ್ಯತೆ

ಆಳುವವರಿಗೆ ಬೇಡವೇ ಬಡವರ ಬೋಗಿ?



ರೈಲಿನ ಸ್ಲೀಪರ್ ಬೋಗಿಯೇ ಜನರಲ್ ಬೋಗಿಯಂತೆ ಆಗುವುದು ಸಾಮಾನ್ಯ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕಡಿಮೆ ದರದಲ್ಲಿ ಪ್ರಯಾಣಿಸುತ್ತಿದ್ದ ಬಡವರು, ಕಾರ್ಮಿಕರಿಗೆ ಅನುಕೂಲವಾಗಿದ್ದ ರೈಲುಗಳು ಈಗ ಬಡವರಿಂದ ದೂರವಾಗುತ್ತಿವೆ. ಇರುವ ರೈಲುಗಳಿಗೆ ಹೆಚ್ಚುವರಿ ಬೋಗಿಗಳನ್ನು ಜೋಡಿಸಿದರೂ, ಹೊಸ ರೈಲುಗಳನ್ನು ಹಳಿಗಿಳಿಸಿದರೂ, 'ಸಾಮಾನ್ಯ'ರು ಪ್ರಯಾಣಿಸುವ ಬೋಗಿಗಳ ಸಂಖ್ಯೆ ಮಾತ್ರ ಹೆಚ್ಚುತ್ತಿಲ್ಲ. ಹೆಚ್ಚುವುದು ಹೋಗಲಿ, ಇರುವ ಇಂತಹ ಬೋಗಿಗಳ ಸಂಖ್ಯೆಯೂ ಕಡಿಮೆಯಾಗುತ್ತಿದೆ.

'ಮಾತಿನಲ್ಲಿ ನಮ್ಮ ಬಗ್ಗೆ ಅನುಕಂಪ ತೋರಿಸಿ, ಕಣ್ಣೀರು ಸುರಿಸಿ ಮತ ಪಡೆದು ಅಧಿಕಾರಕ್ಕೆ ಬರುವವರು, ಜನಸಾಮಾನ್ಯರ ಪ್ರಯಾಣ ಸೌಲಭ್ಯಕ್ಕಿಂತ ಸಿರಿವಂತರ ಯಾನಕ್ಕೆ ಬೇಕಾದ ಸೌಲಭ್ಯ ಕಲ್ಪಿಸುವುದರತ್ತಲೇ ತಲೆ ಕೆಡಿಸಿಕೊಳ್ಳುತ್ತಿರುವುದು ಇದಕ್ಕೆ ಕಾರಣ' ಎಂದು ಸಾಮಾನ್ಯ ಬೋಗಿಗಳ ಪ್ರಯಾಣಿಕರು ದೂರುತ್ತಾರೆ.

ಅಂಕಿ ಅಂಶಗಳು

ಸಂಖ್ಯೆ	ವಿವರ
22,593	ದೇಶದಲ್ಲಿರುವ ಒಟ್ಟು ರೈಲುಗಳು
13,169	ನಿತ್ಯ ಸಂಚರಿಸುವ ರೈಲುಗಳ ಸಂಖ್ಯೆ
2.4 ಕೋಟಿ	ನಿತ್ಯ ಸಂಚರಿಸುವ ಪ್ರಯಾಣಿಕರ ಸಂಖ್ಯೆ
7,325	ದೇಶದಲ್ಲಿರುವ ರೈಲು ನಿಲ್ದಾಣಗಳ ಸಂಖ್ಯೆ
411	ಕರ್ನಾಟಕದಲ್ಲಿರುವ ರೈಲು ನಿಲ್ದಾಣಗಳ ಸಂಖ್ಯೆ

ಇತ್ತೀಚೆಗೆ ಪರಿಚಯಿಸಲಾದ 'ವಂದೇ ಭಾರತ್' ಎಕ್ಸ್‌ಪ್ರೆಸ್ ರೈಲುಗಳ ಬಗ್ಗೆಯೇ ಹೆಚ್ಚು ಚರ್ಚೆಗಳು ನಡೆಯುತ್ತಿವೆ. ರಾಜ್ಯದಲ್ಲಿ ಆರು 'ವಂದೇ ಭಾರತ್' ರೈಲುಗಳು ಸಂಚರಿಸುತ್ತಿವೆ. ಮಧ್ಯಮ ವರ್ಗ ಮತ್ತು ಶ್ರೀಮಂತರಿಗೆ ಈ ರೈಲು ಅಚ್ಚುಮೆಚ್ಚಿನದ್ದಾಗಿದೆ. ಎಂಟು ಕೋಚ್‌ಗಳ ಈ ರೈಲಿನಲ್ಲಿ 52 ಸೀಟುಗಳು ಎಕ್ಸಿಕ್ಯುಟಿವ್ ಮತ್ತು 478 ಸೀಟುಗಳು ಎ.ಸಿ ಚೇರ್ ಕಾರ್ ಆಗಿವೆ. ಇದರಲ್ಲಿ 'ಸಾಮಾನ್ಯ ಬೋಗಿ' ಎಂಬುದು ಇಲ್ಲ. 'ವಂದೇ ಭಾರತ್'ನಲ್ಲಿ ಧಾರವಾಡದಿಂದ ಬೆಂಗಳೂರಿಗೆ ಎ.ಸಿ ಚೇರ್ ಕಾರ್ ಟಿಕೆಟ್ ದರ ₹1,350, ಎಕ್ಸಿಕ್ಯುಟಿವ್ ಕ್ಲಾಸ್ ದರ ₹2,460. ಬೇರೆ ರೈಲುಗಳಿಗಿಂತ ಅಧಿಕ ದರ ಹೊಂದಿರುವ ಈ ರೈಲಿನಲ್ಲಿ ಸಾಮಾನ್ಯರು ಪ್ರಯಾಣಿಸಲು ಸಾಧ್ಯವೇ ಎಂದು ಜನರು ಪ್ರಶ್ನಿಸುತ್ತಾರೆ.

'ವಂದೇ ಭಾರತ್' ಸದ್ಯ ಹಗಲಿನಲ್ಲಿ ಮಾತ್ರ ಸಂಚರಿಸುತ್ತಿದೆ. ಹಗಲಿನ 12 ಗಂಟೆ ಅವಧಿಯಲ್ಲಿ ಸಂಪರ್ಕಿಸಬಹುದಾದ ದೂರದ ನಗರಗಳಿಗೆ ಮಾತ್ರ ಈ ರೈಲು ಸಂಚರಿಸುತ್ತದೆ. ರಾತ್ರಿ ಸಂಚಾರ, ದೂರದ ಸ್ಥಳಗಳ ಸಂಚಾರಕ್ಕೆ ಅನುವಾಗುವಂತಹ 'ವಂದೇ ಭಾರತ್' ರೈಲುಗಳು ತಯಾರಾಗುತ್ತಿವೆ. ಆರು ತಿಂಗಳಲ್ಲಿ ಅವು ಕಾರ್ಯಾಚರಣೆ ಆರಂಭಿಸಲಿವೆ.

ಬೇರೆ ಎಕ್ಸ್‌ಪ್ರೆಸ್ ರೈಲುಗಳಲ್ಲಿ ಸಾಮಾನ್ಯ ಬೋಗಿಗಳನ್ನು ಕಡಿತಗೊಳಿಸಲಾಗಿದೆ. ಬೆಂಗಳೂರು ಮೂಲಕ ಸಾಗುವ ಕೊಯಮತ್ತೂರು–ದೆಹಲಿ ಎಕ್ಸ್‌ಪ್ರೆಸ್‌ನಲ್ಲಿ ಹಿಂದೆ ಹವಾನಿಯಂತ್ರಣ ರಹಿತ 11 ಸ್ಲೀಪರ್ ಕೋಚ್ ಮತ್ತು ಜನರಲ್ ಬೋಗಿಗಳಿದ್ದವು. ಈಗ ಮೂರಕ್ಕೆ ಇಳಿಸಲಾಗಿದೆ.

7ನೇ ಪುಟ ನೋಡಿ



ರಾಮಚಂದ್ರಪುರ: ಮದ್ಯಸೇವನೆ ವಿಚಾರಕ್ಕೆ ಬುದ್ಧಿಮಾತು ಹೇಳಿದ್ದಕ್ಕೆ ವ್ಯಕ್ತಿ ಕೊಲೆ

ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುಗಾದಿ ಹಬ್ಬದ ದಿನ ನಗರದಲ್ಲಿ ನಡೆದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರನ್ನು ಕೊಲೆ ಮಾಡಲಾಗಿದೆ.

ಮದ್ಯಪಾನ ಮಾಡಬೇಡಿ ಎಂದು ಬುದ್ಧಿಮಾತು ಹೇಳಿದ್ದಕ್ಕೆ ವ್ಯಕ್ತಿಯೊಬ್ಬರನ್ನು ಯುವಕರಿಬ್ಬರು ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾರೆ. ರಾಮಚಂದ್ರಪುರದ ನಿವಾಸಿ ವೆಂಕಟೇಶ್ (45) ಕೊಲೆಯಾದವರು.

‘ಆರೋಪಿಗಳಾದ ರಾಮಚಂದ್ರಪುರದ ಪವನ್ ಕುಮಾರ್ (24) ಹಾಗೂ ನಂದ (21) ಅವರನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಂಗಳವಾರ ರಾತ್ರಿ 10.30ರ ಸುಮಾರಿಗೆ ರಾಮಚಂದ್ರಪುರ ಆಟದ ಮೈದಾನದಲ್ಲಿ ವೆಂಕಟೇಶ್ ಅವರು ವಾಕಿಂಗ್ ಮಾಡುತ್ತಿದ್ದರು. ಅದೇ ಸಮಯದಲ್ಲಿ ಇಬ್ಬರು ಆರೋಪಿಗಳು ಬಿಯರ್ ಬಾಟಲಿ ಹಿಡಿದು ಮದ್ಯ ಸೇವಿಸುತ್ತಿದ್ದರು. ಇದನ್ನು ಕಂಡ ವೆಂಕಟೇಶ್, ‘ಇನ್ನೂ ನಿಮಗೆ ಚಿಕ್ಕ ವಯಸ್ಸು. ಮದ್ಯಪಾನ ಮಾಡುವುದು


ಪವನ್ ಕುಮಾರ್


ನಂದ

ಆರೋಗ್ಯಕ್ಕೆ ಒಳ್ಳೆಯದಲ್ಲ’ ಎಂದು ಬುದ್ಧಿಮಾತು ಹೇಳಿದ್ದರು. ಈ ಮಾತು ಹೇಳಿದ್ದಕ್ಕೆ ಕುಪಿತರಾದ ಆರೋಪಿಗಳಿಬ್ಬರು, ವೆಂಕಟೇಶ್ ಜೊತೆಗೆ ಗಲಾಟೆ ಮಾಡಿದರು. ಅದಾದ ಮೇಲೆ ಚಾಕುವಿನಿಂದ ಹೊಟ್ಟೆಭಾಗಕ್ಕೆ ಇರಿದು ಕೊಲೆ ಮಾಡಿ ಪರಾರಿ ಆಗಿದ್ದರು. ವಿಶೇಷ ತಂಡ ರಚಿಸಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

ವಿದ್ಯಾರಣ್ಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕೌಟುಂಬಿಕ ಕಲಹ – ಕೊಲೆ: ವೆಂಕಟೇಶ್ವರಪುರದಲ್ಲಿ ಮಂಗಳವಾರ ಭಾವಮೈದುನನ್ನು ಭಾವ ಚಾಕುವಿನಿಂದ ಇರಿದು ಕೊಲೆ ಮಾಡಿದ್ದಾನೆ.

ಕಿರಣ್ ಕುಮಾರ್ ಕೊಲೆಯಾದ ವ್ಯಕ್ತಿ. ಆರೋಪಿಯನ್ನು ಲಕ್ಷ್ಮಣ್ ಎಂದು ಗುರುತಿಸಲಾಗಿದೆ.

‘ಆರೋಪಿ ಲಕ್ಷ್ಮಣ್ ಮತ್ತು ಆತನ ಪತ್ನಿ ನಡುವೆ ಆಗಾಗ್ಗೆ ಜಗಳ ನಡೆಯುತ್ತಿತ್ತು. ಇದೇ ವಿಚಾರಕ್ಕೆ ಭಾವ, ಭಾವಮೈದುನರ ನಡುವೆ ಮಂಗಳವಾರ ಸಹ ಗಲಾಟೆ ಆಗಿತ್ತು. ಹಬ್ಬದ ಪ್ರಯುಕ್ತ ವೆಂಕಟೇಶ್ವರಪುರದ ಗಲ್ಲಿಯಲ್ಲಿ ಇಸ್ಪೀಟ್ ಆಡುತ್ತಿದ್ದ ವೇಳೆ ಆರೋಪಿ, ಕಿರಣ್ ಕುಮಾರ್‌ಗೆ ಚಾಕುವಿನಿಂದ ಇರಿದು ಕೊಲೆ ಮಾಡಿ ಪರಾರಿಯಾಗಿದ್ದಾನೆ’ ಎಂದು ಪೊಲೀಸರು ಹೇಳಿದರು.

‘ಇಸ್ಪೀಟ್ ಎಲೆಗಳ ಮೇಲಿದ್ದ ಹಣವನ್ನು ತೆಗೆದುಕೊಳ್ಳುವ ಸಂದರ್ಭದಲ್ಲಿ ಕಿರಣ್ ಕುಮಾರ್ ಬೆನ್ನಿಗೆ ಆರೋಪಿ ಇರಿದಿದ್ದಾನೆ. ಸ್ಥಳದಲ್ಲಿದ್ದ ಕೆಲವರು ಆತನನ್ನು ಆಸ್ಪತ್ರೆಗೆ ಕರೆದೊಯ್ದಿದ್ದರು. ಅಲ್ಲಿ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

ಘಟನೆ ಕುರಿತು ಕೆ.ಜಿ.ಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದರು.

ಐಪಿಎಲ್ ಬೆಟ್ಟಿಂಗ್: ಇಬ್ಬರು ಬುಕ್ಕಿಗಳ ಸೆರೆ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಪಂದ್ಯ ನಡೆಯುತ್ತಿದ್ದ ವೇಳೆ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದ ಇಬ್ಬರು ಬುಕ್ಕಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಸಂಜೀವ್ ಕುಮಾರ್ ಬೆಹರಾ ಹಾಗೂ ಪವನ್ ಬಂಧಿತ ಬುಕ್ಕಿಗಳು. ಮತ್ತಿಬ್ಬರು ಬುಕ್ಕಿಗಳು ತಲೆಮರೆಸಿಕೊಂಡಿದ್ದಾರೆ. ಬಂಧಿತರಿಂದ ₹1.17 ಲಕ್ಷ ನಗದು ಹಾಗೂ ಎರಡು ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಐಪಿಎಲ್ ಟೂರ್ನಿ ಸಂಬಂಧ ಲಕ್ಷಾಂತರ ರೂಪಾಯಿ ಬೆಟ್ಟಿಂಗ್ ನಡೆಯುತ್ತಿರುವ ಬಗ್ಗೆ ಮಾಹಿತಿ ಸಿಕ್ಕಿತ್ತು. ಖಚಿತ ಮಾಹಿತಿ ಆಧರಿಸಿ, ಕಾರ್ಯಾಚರಣೆ ನಡೆಸಲಾಯಿತು. ಬಂಧಿತ ಆರೋಪಿಗಳ ಪೈಕಿ ಒಬ್ಬ ಆರ್‌ಸಿಬಿ ತಂಡದ ಜರ್ಸಿಯಲ್ಲೇ ಕ್ರೀಡಾಂಗಣಕ್ಕೆ ಬಂದಿದ್ದ. ಮತ್ತೊಬ್ಬ ಸಾಮಾನ್ಯ ಉಡುಪಿನಲ್ಲಿದ್ದ’ ಎಂದು ಮೂಲಗಳು ತಿಳಿಸಿವೆ.

‘ಬಂಧಿತ ಆರೋಪಿಗಳು, ಕೆಲವು ಆ್ಯಪ್‌ಗಳು ಹಾಗೂ ಫೋನ್ ಕರೆ ಮೂಲಕ ಲಕ್ಷಾಂತರ ರೂಪಾಯಿ ಬೆಟ್ಟಿಂಗ್ ನಡೆಸುತ್ತಿದ್ದರು. ಕ್ರೀಡಾಂಗಣದಲ್ಲಿ ಕುಳಿತು ಕ್ರಿಕೆಟ್ ಪಂದ್ಯ ನೋಡುವುದಕ್ಕೂ ಹಾಗೂ ಟಿ.ವಿಯಲ್ಲಿ ನೋಡುವುದಕ್ಕೂ ಕೆಲವು ಸೆಕೆಂಡ್‌ಗಳ ಅಂತರ ಇರುತ್ತದೆ. ಹೀಗಾಗಿ ಇಬ್ಬರು ಆರೋಪಿಗಳು ಕ್ರೀಡಾಂಗಣಕ್ಕೇ ಬಂದು ಮೊಬೈಲ್ ಮೂಲಕ ದಂಧೆ ನಡೆಸುತ್ತಿದ್ದರು. ಹೊರಗಿದ್ದ ಬುಕ್ಕಿಗಳಿಗೂ ವ್ಯಾಟ್ಸ್‌ಆ್ಯಪ್ ಮೂಲಕ ಇವರು ಮಾಹಿತಿ ರವಾನೆ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

₹22 ಲಕ್ಷದ 29 ಬೈಕ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೃತಹಳ್ಳಿ ಹಾಗೂ ವಿದ್ಯಾರಣ್ಯಪುರ ಪೊಲೀಸ್ ಠಾಣಾ ವ್ಯಾಪ್ತಿಯ ರಸ್ತೆಗಳ ಬದಿ ಹಾಗೂ ಮನೆಗಳ ಎದುರು ನಿಲ್ಲಿಸಿದ್ದ ಬೈಕ್‌ಗಳನ್ನು ಕಳವು ಮಾಡುತ್ತಿದ್ದ ನಾಲ್ವರು ಬಾಲಕರು ಸೇರಿದಂತೆ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹22 ಲಕ್ಷ ಮೌಲ್ಯದ 29 ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ.ಮದನ್ ಸೇರಿದಂತೆ ಇಬ್ಬರು ಬಾಲಕರನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದು, 15 ಪ್ರಕರಣಗಳನ್ನು ಪತ್ತೆಹಚ್ಚಿದ್ದಾರೆ.

‘ಬೈಕ್‌ಗಳ ಕಳವು ಪ್ರಕರಣದ ಆರೋಪಿಗಳ ಪತ್ತೆಗೆ ವಿಶೇಷ ತಂಡ ರಚಿಸಲಾಗಿತ್ತು. ಮೂರು ಆರೋಪಿಗಳ ಬಂಧನದಿಂದ ವಿದ್ಯಾರಣ್ಯಪುರ 1, ಕೊಡಿಗೇಹಳ್ಳಿ 2, ಯಲಹಂಕ ನ್ಯೂಟೌನ್, ವಿಜಯನಗರ, ಯಶವಂತಪುರ, ಬಸವೇಶ್ವರನಗರ, ಚಂದ್ರಾಲೇಔಟ್ ಪೊಲೀಸ್ ಠಾಣೆಗಳಲ್ಲಿ ತಲಾಒಂದು, ಬಾಗಲಗುಂಟೆ 4, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅವಲಹಳ್ಳಿ, ನೆಲಮಂಗಲ ಗ್ರಾಮಾಂತರ, ದೊಡ್ಡಬಳ್ಳಾಪುರ ಪೊಲೀಸ್ ಠಾಣೆಯಲ್ಲಿ ತಲಾ ಒಂದು ಸೇರಿದಂತೆ ಒಟ್ಟು 15 ಪ್ರಕರಣ ಪತ್ತೆಯಾಗಿವೆ. ಸುಮಾರು ₹12 ಲಕ್ಷ ಮೌಲ್ಯದ 15 ಬೈಕ್‌ಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ಅಮೃತಹಳ್ಳಿ ಪೊಲೀಸರ ತಂಡ, ಎರಡು ಪ್ರಕರಣಗಳಲ್ಲಿ ಇಬ್ಬರು ಬಾಲಕರನ್ನು ಬಂಧಿಸಿದೆ. ಪೀಣ್ಯ, ಕೂಡಿಗೆಹಳ್ಳಿ, ಅಮೃತಹಳ್ಳಿ ವ್ಯಾಪ್ತಿಯಲ್ಲಿ ಕಳವು ನಡೆಸಿದ್ದ ₹10 ಲಕ್ಷ ಮೌಲ್ಯದ 14 ಬೈಕ್ ಜಪ್ತಿ ಮಾಡಲಾಗಿದೆ ಎಂದರು.

ನಗರದಲ್ಲಿ ಇಂದು

ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನದ ವಸಂತ ನವರಾತ್ರಿ ಬ್ರಹ್ಮೋತ್ಸವ: ಇಂದ್ರ ವಿಮಾನ ಉತ್ಸವ, ಭೂತಕಿ ವಾಹನ ಉತ್ಸವ, ಆಯೋಜನೆ ಮತ್ತು ಸ್ಥಳ: ಜ್ಞಾನಾಕ್ಷೀ ರಾಜರಾಜೇಶ್ವರಿ ದೇವಸ್ಥಾನ, ರಾಜರಾಜೇಶ್ವರಿನಗರ, ಬೆಳಿಗ್ಗೆ 9.30

ಪರಕಾಲ ಪ್ರಭಾಕರ್ ಅವರ ‘ಹೆಣವಾಗುತ್ತಿರುವ ಗಣರಾಜ್ಯ’ ಪುಸ್ತಕ ಬಿಡುಗಡೆ: ಸಿದ್ದರಾಮಯ್ಯ, ಅಧ್ಯಕ್ಷತೆ: ಬಿ.ಆರ್. ಪಾಟೀಲ, ಪುಸ್ತಕದ ಬಗ್ಗೆ ಮಾತು: ರಾಜಪ್ಪ ದಳವಾಯಿ, ವಿಶೇಷ ಉಪನ್ಯಾಸ: ಪರಕಾಲ ಪ್ರಭಾಕರ್, ಸುಧೀಂದ್ರ ಕುಲಕರ್ಣಿ, ಉಪಸ್ಥಿತಿ: ರಾಹು (ಆರ್.ಕೆ.ಹುಡುಗಿ), ಸೃಷ್ಟಿ ನಾಗೇಶ್, ಆಯೋಜನೆ: ಸಮಾಜವಾದಿ ಸ್ನೇಹಿತರ ಬಳಗ, ಸೃಷ್ಟಿ ಪಬ್ಲಿಕೇಶನ್ಸ್, ಸ್ಥಳ: ಗಾಂಧಿ ಭವನ, ಶಿವಾನಂದ ವೃತ್ತ, ಸಂಜೆ 5

‘ವಿಷನರಿ ಸ್ಟೇಟ್ಸ್‌ಮನ್ ಎಸ್. ನಿಜಲಿಂಗಪ್ಪ’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮಾರಂಭ ಉದ್ಘಾಟನೆ: ಲೀಲಾದೇವಿ ಆರ್. ಪ್ರಸಾದ್, ಪುಸ್ತಕ ಬಿಡುಗಡೆ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಸಿ.ಸೋಮಶೇಖರ್, ಮುಖ್ಯ ಅತಿಥಿ: ಪಿ.ವಿಜಯಕುಮಾರ್, ಆಯೋಜನೆ: ನಿರಂತರ ಸಾಯಿ ಕಮ್ಯೂನಿಕೇಷನ್, ಸ್ಥಳ: ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ 8ನೇ ಬ್ಲಾಕ್, ಸಂಜೆ 5.30

ಶ್ರೀರಾಮನವಮಿ ಉತ್ಸವ: ದಾಸರ ಪದಗಳ ಗಾಯನ: ವಿದ್ಯಾ ಕೃಷ್ಣಮೂರ್ತಿ ಮತ್ತು ಸಂಗಡಿಗರು, ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

ರಾಮನವಮಿ ಸಂಗೀತೋತ್ಸವ–2024: ಸಂಜೆ 5ರಿಂದ 6 ರಾಮನಾಥ್ ವೆಂಕಟ್ ಭಾಗವತ್ ಮತ್ತು ತಂಡದಿಂದ ಸಂಗೀತ ಕಛೇರಿ, ವಿಶೇಷ ಕರ್ನಾಟಕ ಸಂಗೀತ ಕಛೇರಿ: ಅಭಿಷೇಕ್ ರಘುರಾಂ, ಮೈಸೂರು ಶ್ರೀಕಾಂತ್, ಅರ್ಜುನ್ ಕುಮಾರ್, ಬಿ. ರಾಜಶೇಖರ್, ಆಯೋಜನೆ: ಶ್ರೀರಾಮ ಸೇವಾ ಮಂಡಲಿ, ರಾಮನವಮಿ ಸೆಲೆಬ್ರೆಷನ್ ಟ್ರಸ್ಟ್, ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 6.30ರಿಂದ


ಅಭಿಷೇಕ್ ರಘುರಾಂ

‘ಇಂದಿನ ಜಾಗತೀಕರಣದ ಯುಗದಲ್ಲಿ ಕನ್ನಡದ ಅಸ್ಮಿತೆ’ ವಿಷಯದ ಬಗ್ಗೆ ಉಪನ್ಯಾಸ: ಶಿವಕುಮಾರ ಪಾವಟೆ, ಮುಖ್ಯ ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಹಾಗೂ ಸ್ಥಳ: ಕನ್ನಡ ಯುವಜನ ಸಂಘ, ಎಚ್.ಸಿದ್ದಯ್ಯ ರಸ್ತೆ, ಹೊಂಬೇಗೌಡ ನಗರ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ನಂದಿತಾ ಉಪಾಧ್ಯಾಯ, ಹಾರ್ಮೋನಿಯಂ: ಸೃಷ್ಟಿ ದೇಸಾಯಿ, ತಬಲಾ: ಋತುಪರ್ಣ ದೇಸಾಯಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, ಜಯನಗರ ಐದನೆ ಬಡಾವಣೆ, ಸಂಜೆ 7.30

‘ಲೋಕದ ಒಳಹೊರಗೆ’ ನಾಟಕ ಪ್ರದರ್ಶನ: ನಿರ್ದೇಶನ: ಬಿ. ಸುರೇಶ್, ಆಯೋಜನೆ: ರಂಗಸಂಪದ, ಸ್ಥಳ: ರಂಗ ಶಂಕರ, ಜೆ.ಪಿ.ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಸಿನಿಮಾ ಬಿಡುಗಡೆ, ವಿತರಣೆ, ಮಾರುಕಟ್ಟೆ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರ ‘ಟೆಂಟ್ ಸಿನಿಮಾ’ದಲ್ಲಿ ಚಲನಚಿತ್ರಗಳ ಬಿಡುಗಡೆ, ವಿತರಣೆ ಮತ್ತು ಮಾರುಕಟ್ಟೆ ಕುರಿತು ಏ.12ರಿಂದ ಮೂರು ದಿನಗಳ ಕಾರ್ಯಾಗಾರ ನಡೆಯಲಿದೆ.

ಕಾರ್ಯಾಗಾರದಲ್ಲಿ ನಾಗತಿಹಳ್ಳಿ ಚಂದ್ರಶೇಖರ್, ವೀರೇಶ್ ಸಿನಿಮಾಸ್‌ನ ಮಾಲೀಕ ಕೆ.ವಿ.ಚಂದ್ರಶೇಖರ್, ಜಿಯೋ ಸ್ಟುಡಿಯೋಸ್ ಮುಖ್ಯಸ್ಥ ಪರಮೇಶ್ವರ್ ಗುಂಡ್ಕಲ್, ಸಿನಿಮಾಗಳ ಸಾರ್ವಜನಿಕ ಸಂಪರ್ಕಾಧಿಕಾರಿ ಸುಧೀಂದ್ರ ವೆಂಕಟೇಶ್ ಸೇರಿದಂತೆ ಜಾಹೀರಾತು, ಮಾರುಕಟ್ಟೆ ಕ್ಷೇತ್ರದ ತಜ್ಞರು ಭಾಗವಹಿಸಲಿದ್ದಾರೆ.

ಚಿತ್ರಮಂದಿರಗಳು ಹಾಗೂ ಮಲ್ಟಿಪ್ಲೆಕ್ಸ್‌ಗಳಿಗೆ ಸಿನಿಮಾಗಳ ವಿತರಣೆ, ಡಬ್ಬಿಂಗ್ ಮತ್ತು ರಿಮೇಕ್ ಹಕ್ಕುಗಳು, ಸ್ಯಾಟಲೈಟ್ ವಿತರಣೆ, ಚಲನಚಿತ್ರೋತ್ಸವಗಳು, ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಿನಿಮಾಗಳಿಗೆ ನೀಡುತ್ತಿರುವ ಸೌಲಭ್ಯಗಳು ಮತ್ತು ಒಟಿಟಿ ಡಿಜಿಟಲ್ ಹಕ್ಕುಗಳ ಬಗ್ಗೆ ಕಾರ್ಯಾಗಾರದಲ್ಲಿ ಭಾಗವಹಿಸಿ ಕಲಿತುಕೊಳ್ಳಬಹುದು ಎಂದು ಟೆಂಟ್ ಸಿನಿಮಾ ತಿಳಿಸಿದೆ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9900555255 ಅಥವಾ www.tentcinema.com ಗೆ ಭೇಟಿ ನೀಡಿ.

‘ಕಾವ್ಯಾನಂದ ಪುರಸ್ಕಾರ’ಕ್ಕೆ ಮಕ್ಕಳ ಸಾಹಿತ್ಯ ಕೃತಿಗಳ ಆಹ್ವಾನ

ಬೆಂಗಳೂರು: ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್ ಕೊಡಮಾಡುವ ‘ಕಾವ್ಯಾನಂದ ಪುರಸ್ಕಾರ 2023’ಕ್ಕಾಗಿ ಮಕ್ಕಳ ಸಾಹಿತ್ಯ ಕೃತಿಗಳನ್ನು ಆಹ್ವಾನಿಸಿದೆ.

ಪುರಸ್ಕಾರವು ₹50 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ.

ಜನವರಿ 2023ರಿಂದ ಡಿಸೆಂಬರ್ 2023ರವರೆಗೆ ಪ್ರಕಟವಾಗಿರುವ ಮಕ್ಕಳ ಸಾಹಿತ್ಯ ಕೃತಿಯ ಮೂರು ಪ್ರತಿಗಳನ್ನು ಕನ್ನಡ ಸಾಹಿತ್ಯ ಸಂವರ್ಧಕ ಟ್ರಸ್ಟ್, ಶ್ರೀಗಿರಿ, 4/5ಎ (ಹೊಸ ನಂ.8), ಅಲಿ ಅಸ್ಕರ್ ರಸ್ತೆ, ಬೆಂಗಳೂರು – 560052 ಈ ವಿಳಾಸಕ್ಕೆ ಕಳುಹಿಸಿಕೊಡಬೇಕು ಎಂದು ಟ್ರಸ್ಟ್ ಅಧ್ಯಕ್ಷೆ ವಿಜಯಾ ನಂದೀಶ್ವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ದೂರವಾಣಿ 080-22264361 ಸಂಪರ್ಕಿಸಬಹುದು.

ಪಿಯುಸಿ: ಭೈರವೇಶ್ವರನಗರ ಕಾಲೇಜಿಗೆ ಅಗ್ರಸ್ಥಾನ

ಬಿಬಿಎಂಪಿ ಕಾಲೇಜುಗಳಿಗೆ ಶೇ 78ರಷ್ಟು ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 18 ಪದವಿಪೂರ್ವ ಕಾಲೇಜುಗಳ ದ್ವಿತೀಯ ಪಿಯು ಪರೀಕ್ಷೆಯಲ್ಲಿ 1,889 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು, ಶೇ 78ರಷ್ಟು ಫಲಿತಾಂಶ ದಾಖಲಾಗಿದೆ. 227 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿ ಪಡೆದಿದ್ದಾರೆ.

2023–24ನೇ ಸಾಲಿನಲ್ಲಿ 2,427 ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆ ಬರೆದಿದ್ದರು. ಭೈರವೇಶ್ವರ ನಗರ ಪದವಿ ಪೂರ್ವ ಕಾಲೇಜು ಶೇ 94.96 ಫಲಿತಾಂಶ ಗಳಿಸಿ ಅಗ್ರಸ್ಥಾನ ಪಡೆದಿದೆ. ಕಸ್ತೂರಬಾ ನಗರದ ಪದವಿ ಪೂರ್ವ ಕಾಲೇಜು ಶೇ 88.10, ಕಾವೇರಿಪುರದ ಪದವಿ ಪೂರ್ವ ಕಾಲೇಜು ಶೇ 87.69ರಷ್ಟು ಫಲಿತಾಂಶ ದಾಖಲಿಸಿ, ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನ ಗಳಿಸಿವೆ.

2022–23ನೇ ಸಾಲಿನಲ್ಲಿ ಶೇ 63.18ರಷ್ಟು ಫಲಿತಾಂಶ ಬಂದಿದ್ದು, ಈ ವರ್ಷ ಅದಕ್ಕಿಂತ ಶೇ 15ರಷ್ಟು ಹೆಚ್ಚು ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. 2023-24ನೇ ಸಾಲಿನಲ್ಲಿ ಪಾಲಿಕೆಯ ಪದವಿ ಪೂರ್ವ ಕಾಲೇಜುಗಳಲ್ಲಿ ಕ್ಲೀವ್‌ಲ್ಯಾಂಡ್ ಟೌನ್ ಕಾಲೇಜಿನ 62, ಕಸ್ತೂರಬಾ ನಗರ ಕಾಲೇಜಿನ 36, ಭೈರವೇಶ್ವರ ನಗರ ಕಾಲೇಜಿನ 28, ಶ್ರೀರಾಂಪುರ ಕಾಲೇಜಿನ 25, ಉತ್ತರಹಳ್ಳಿ ಕಾಲೇಜಿನ 13, ಪಿಳ್ಳಣ್ಣ ಗಾರ್ಡನ್‌ನ 10 ವಿದ್ಯಾರ್ಥಿಗಳು ಶೇ 85ಕ್ಕಿಂತ ಹೆಚ್ಚು ಅಂಕ ಪಡೆದು ಅತ್ಯುನ್ನತ ಶ್ರೇಣಿ ಗಳಿಸಿದ್ದಾರೆ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ವಿಶೇಷ ಆಯುಕ್ತೆ ಪ್ರೀತಿ ಗೆಹಲೋತ್ ತಿಳಿಸಿದ್ದಾರೆ.

ಆಸ್ಟಿನ್ ಟೌನ್ ಕಾಲೇಜು ಶೇ 47.22ರಷ್ಟು ಫಲಿತಾಂಶ ದಾಖಲಿಸಿದ್ದು, ಪಾಲಿಕೆ ಕಾಲೇಜುಗಳಲ್ಲಿ ಇದು ಕನಿಷ್ಠವಾಗಿದೆ. 36 ವಿದ್ಯಾರ್ಥಿಗಳಲ್ಲಿ 17 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಥಣಿಸಂದ್ರ ಕಾಲೇಜು ಶೇ 51.85ರಷ್ಟು ಫಲಿತಾಂಶ ಗಳಿಸಿದ್ದು, 27 ವಿದ್ಯಾರ್ಥಿಗಳಲ್ಲಿ 14 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಈ ಎರಡೂ ಶಾಲೆಗಳಲ್ಲಿ ಯಾರೂ ಅತ್ಯುನ್ನತ ಶ್ರೇಣಿ ಗಳಿಸಿಲ್ಲ.

ಅಸೆಂಟ್ ಪಿಯು ಕಾಲೇಜಿಗೆ ಶೇ 98 ಫಲಿತಾಂಶ

ಪೀಣ್ಯ ದಾಸರಹಳ್ಳಿ: ಹೆಸರಘಟ್ಟ ಮುಖ್ಯ ರಸ್ತೆಯ ಅಸೆಂಟ್ ಪಿಯು ಕಾಲೇಜು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ 98 ಫಲಿತಾಂಶ ಪಡೆದಿದೆ.

ದ್ವಿತೀಯ ಪಿಯುಸಿಯಲ್ಲಿ ವಿದ್ಯಾರ್ಥಿನಿ ಇಂಪನಾ ಎಲ್. 592 (ಶೇ 98.67), ವಿನೋದ್ ಕುಮಾರ್ ಜಿ. 586 (ಶೇ 97.67), ಹನ್ಸಿಕ ತಿವಾರಿ 580 (ಶೇ 96.60), ದಿನೇಶ್ ಎಸ್. 577(ಶೇ 96.17), ಸ್ವಾತಿ ಆರ್. 577 (ಶೇ 96.17), ದೀಕ್ಷಿತ್ ಸಿ.ಆರ್. 576 (ಶೇ 96) ಅಂಕಗಳನ್ನು ಪಡೆದಿದ್ದಾರೆ.

74 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, 142 ವಿದ್ಯಾರ್ಥಿಗಳು ಪ್ರಥಮ ಶ್ರೇಣಿ ಪಡೆದಿದ್ದಾರೆ ಎಂದು ಪ್ರಾಂಶುಪಾಲ ಬಿ.ಎಂ. ವೆಂಕಟೇಶ್ ತಿಳಿಸಿದರು.


ಇಂಪನಾ ಎಲ್.

ಕೊಲೆ ಬಳಿಕ ಪೊಲೀಸರಿಗೆ ಕರೆ ಮಾಡಿ ಶರಣಾದ ಮಹಿಳೆ

ಇಬ್ಬರು ಮಕ್ಕಳ ಕೊಂದ ತಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಾಲಹಳ್ಳಿಯಲ್ಲಿ ಬುಧವಾರ ಮುಂಜಾನೆ ಇಬ್ಬರು ಮಕ್ಕಳನ್ನು ತಲೆದಿಂಬಿನಿಂದ ಉಸಿರುಗಟ್ಟಿಸಿ ಕೊಲೆ ಮಾಡಿದ ತಾಯಿ, ಬಳಿಕ ಪೊಲೀಸರಿಗೆ ಕರೆ ಶರಣಾಗಿದ್ದಾಳೆ.

ಭೋವಿ ಕಾಲೊನಿ ನಿವಾಸಿ ಗಂಗಾದೇವಿ(30) ಪೊಲೀಸ್ ಠಾಣೆಗೆ ಶರಣಾದ ಮಹಿಳೆ.

ಆರೋಪಿ ಮಹಿಳೆ ತನ್ನ ಮಕ್ಕಳಾದ ಲಕ್ಷ್ಮಿ(7) ಹಾಗೂ ಗೌತಮ್(9)ನನ್ನು ಕೊಲೆ ಮಾಡಿದ್ದಾಳೆ.

‘ಕೌಟುಂಬಿಕ ಕಲಹದಿಂದ ಮಕ್ಕಳನ್ನು ಕೊಲೆ ಮಾಡಿರುವುದಾಗಿ ವಿಚಾರಣೆ ವೇಳೆ ಆರೋಪಿ ಮಹಿಳೆ ಹೇಳಿದ್ದಾಳೆ’ ಎಂದು ಪೊಲೀಸರು ಹೇಳಿದರು.

ಆಂಧ್ರಪ್ರದೇಶದ ಗಂಗಾದೇವಿ 10 ವರ್ಷಗಳ ಹಿಂದೆ ನರೇಶ್ ಅವರನ್ನು ಮದುವೆ ಆಗಿದ್ದಳು. ದಂಪತಿಗೆ ಇಬ್ಬರು ಮಕ್ಕಳಿದ್ದರು. ನರೇಶ್ ಈ ಹಿಂದೆ ಬಿಬಿಎಂಪಿಯಲ್ಲಿ ಪೌರಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ. ನಂತರ ಕೆಲಸ ಬಿಟ್ಟಿದ್ದ. ಈಕೆ ಖಾಸಗಿ ಕಂಪನಿಯೊಂದರ ಮಾರುಕಟ್ಟೆ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಳು.

‘ಪುತ್ರಿಯ ಜೊತೆಗೆ ನರೇಶ್ ಅಸಭ್ಯವಾಗಿ ವರ್ತಿಸುತ್ತಿರುವುದಾಗಿ ಆರೋಪಿಸಿ, 2022ರ ಮಾರ್ಚ್‌ನಲ್ಲಿ ಗಂಗಾದೇವಿ ದೂರು ನೀಡಿದ್ದಳು. ಆತನ ವಿರುದ್ಧ ಪೋಕ್ಸೊ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಆರೋಪಿಯನ್ನು ಬಂಧಿಸಿದ್ದರು. ಸದ್ಯ ನರೇಶ್ ಜೈಲಿನಲ್ಲಿದ್ದಾನೆ.’

ಜೈಲು ಸೇರಿದ್ದ ಪತಿ: ಪತಿ ಜೈಲು ಸೇರಿದ ಮೇಲೆ ಇಬ್ಬರು ಮಕ್ಕಳ ವಿದ್ಯಾಭ್ಯಾಸ, ಕೌಟುಂಬಿಕ ನಿರ್ವಹಣೆಯನ್ನು ಮಹಿಳೆಯೇ ಮಾಡುತ್ತಿದ್ದಳು. ಮನೆಯಲ್ಲಿ ವೃದ್ಧೆ ತಾಯಿ ಸಹ ಇದ್ದರು. ಜೀವನ ನಿರ್ವಹಣೆ ಕಷ್ಟವಾಗುತ್ತಿದೆ ಎಂದು ಅಕ್ಕಪಕ್ಕದ ಮನೆಯವರ ಬಳಿ ಆಕೆ ಹೇಳಿಕೊಂಡಿದ್ದಳು ಎನ್ನಲಾಗಿದೆ. ಮಂಗಳವಾರ ಯುಗಾದಿ ಹಬ್ಬದ ಪ್ರಯುಕ್ತ ಮನೆಯಲ್ಲಿ ಹಬ್ಬ ಆಚರಿಸಿ, ಮಕ್ಕಳ ಜತೆ ಊಟ ಮಾಡಿದ್ದಾಳೆ. ಮಕ್ಕಳು ನಿದ್ರೆ ಮಾಡಿದ ಮೇಲೆ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾಳೆ ಎಂದು ಪೊಲೀಸರು ಹೇಳಿದರು.

ಬುಧವಾರ ಮುಂಜಾನೆ 4.30ರ ಸುಮಾರಿಗೆ ಪೊಲೀಸ್ ಸಹಾಯವಾಣಿಗೆ ಕರೆ ಮಾಡಿದ ಗಂಗಾದೇವಿ, ಕೃತ್ಯದ ಬಗ್ಗೆ ಮಾಹಿತಿ ನೀಡಿ ತಾನೂ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದಳು. ತಕ್ಷಣವೇ ಸ್ಥಳಕ್ಕೆ ತೆರಳಿ ಪರಿಶೀಲಿಸಿದಾಗ ಇಬ್ಬರೂ ಮಕ್ಕಳನ್ನು ಕೊಲೆ ಮಾಡಲಾಗಿತ್ತು. ಆರೋಪಿಯನ್ನು ಬಂಧಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಮೂರನೇ ಸ್ಥಾನ ಪಡೆದವರು

ವಾಣಿಜ್ಯ


ಜಿ.ಕೆ.ದಿವ್ಯಾ, ಬಣಜವಾಡ ವಸತಿ ಅಥಣಿ, ಬೆಳಗಾವಿ


ಬಿ. ಆಶ್ರಿತಾ, ಬಿಜಿಎಸ್ ಕಾಲೇಜು, ಚಿಕ್ಕಬಳ್ಳಾಪುರ


ಸಾನ್ವಿ ರಾವ್, ಕ್ರಿಯೇಟಿವ್ ಕಾಲೇಜು, ಕಾರ್ಕಳ


ಮುಕ್ತಾ ಜಯಕಾಂತ್, ಜ್ಞಾನಜ್ಯೋತಿ ಕಾಲೇಜು, ಬೆಂಗಳೂರು


ಬಿ. ಜಯಶ್ರೀ, ವಿದ್ಯಾಮಂದಿರ ಕಾಲೇಜು, ಬೆಂಗಳೂರು.


ಸಿ.ಬಿ. ಶ್ರೇಯಾ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು


ಎಸ್. ಧೀರಜ್, ಪಿಇಎಸ್ ಕಾಲೇಜು, ಬೆಂಗಳೂರು


ಅನುಪಮಾ, ವಿದ್ಯಾಮಂದಿರ ಕಾಲೇಜು, ಬೆಂಗಳೂರು


ಪಿ.ಎಂ. ವೈಷ್ಣವಿ, ಮಹಾವೀರ್ ಜೈನ್ ಕಾಲೇಜು, ಬೆಂಗಳೂರು


ಪೂರ್ವಿ ಸದಾನಂದ್, ನ್ಯೂ ಹಾರಿಜನ್ ಕಾಲೇಜು, ಬೆಂಗಳೂರು


ಧ್ಯಾನ್ ಭಟ್ಟ, ನೆಲ್ಲಿಕೇರಿ ಸರ್ಕಾರಿ ಕಾಲೇಜು, ಕುಮಟಾ

ವಿಜ್ಞಾನ


ಫಾತಿಮಾ ಇಮ್ರಾನ್, ಆರ್.ವಿ ಕಾಲೇಜ್, ಬೆಂಗಳೂರು


ಎಂ.ಎಸ್. ಅಭಿಜಯ್, ಆರ್.ವಿ ಕಾಲೇಜ್, ಬೆಂಗಳೂರು.


ವಿ.ಎಸ್. ಶ್ರೀಮನ್ ನಾರಾಯಣ್, ಎಂಇಎಸ್ ಕಾಲೇಜು, ಬೆಂಗಳೂರು.


ಗೌರಿ ಸಂಜೀವ ಸೂರ್ಯವಂಶಿ, ಬಣಜವಾಡ ವಸತಿ ಕಾಲೇಜು, ಅಥಣಿ, ಬೆಳಗಾವಿ


ಹರಿಪ್ರಿಯಾ ಆರ್., ಬಿಜಿಎಸ್ ಪಿಯು ವಿಜ್ಞಾನ ಕಾಲೇಜು, ಚಿಕ್ಕಬಳ್ಳಾಪುರ

ಕಲಾ


ಅನುಶ್ರೀ, ಮ.ಮ. ಪಾಟೀಲ ಕಾಲೇಜು, ಹೂವಿನಹಡಗಲಿ


ಶಶಿಧರ ಡಿ, ಇಂದು ಪಿಯು ಕಾಲೇಜು, ಕೊಟ್ಟೂರು, ವಿಜಯನಗರ

ನಗರದಲ್ಲಿರುವ ಜಲಮೂಲಗಳ ಪುನಶ್ಚೇತನಕ್ಕೆ ಕೈಜೋಡಿಸಲು ಜಲಮಂಡಳಿಯಿಂದ ನಾಗರಿಕರಿಗೆ ಮನವಿ

‘ತ್ರಿಬಲ್ ಆರ್’ ಜನಾಂದೋಲನಕ್ಕೆ ಸಜ್ಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರಲ್ಲಿರುವ ಜಲಮೂಲಗಳ ಪುನಶ್ಚೇತನಕ್ಕೆ ‘ತ್ರಿಬಲ್ ಆರ್’ ಜನಾಂದೋಲನ ನಡೆಸಲು ಜಲಮಂಡಳಿ ಸಿಜ್ಜಾಗಿದ್ದು, ನಾಗರಿಕರು ಕೈಜೋಡಿಸಬೇಕು ಎಂದು ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ನಗರದಲ್ಲಿರುವ ಅರ್ಕಾವತಿ ನದಿ ಮತ್ತು ವೃಷಭಾವತಿ ನದಿ ಪಾತ್ರದ ಪರಿಶೀಲನೆ ನಡೆಸಿದ ನಂತರ ಅಧಿಕಾರಿಗಳೊಂದಿಗೆ ಸಭೆಯಲ್ಲಿ ಬುಧವಾರ ಮಾತನಾಡಿದರು.

‘ತ್ರಿಬಲ್ ಆರ್’ ಎಂದರೆ, ‘ರಿವೈವಲ್ ಆಫ್ ಅರ್ಕಾವತಿ ಮತ್ತು ವೃಷಭಾವತಿ (ಅರ್ಕಾವತಿ ಮತ್ತು ವೃಷಭಾವತಿ ಪುನಶ್ಚೇತನ), ರಿಚಾರ್ಜಿಂಗ್ ಆಫ್ ರೈನ್ ವಾಟರ್ (ಮಳೆನೀರು ಮರುಪೂರಣ) ಮತ್ತು ರಿಜ್ಯೂವಿನೇಷನ್ ಆಫ್ 185 ಲೇಕ್ಸ್ (185 ಕೆರೆಗಳ ಪುನರುಜ್ಜೀವನ)’ ಎಂದು ಅವರು ವಿವರಿಸಿದರು.

ನದಿ ಪುನಶ್ಚೇತನ: ‘ಅರ್ಕಾವತಿ ನದಿ ಮತ್ತು ವೃಷಭಾವತಿ ನದಿಗಳ ಪಾತ್ರದಲ್ಲಿ ಬಹಳಷ್ಟು ಒತ್ತುವರಿಯಾಗಿದ್ದು, ನೀರಿನ ಸಮರ್ಪಕ ಹರಿವಿಗೆ ತೊಂದರೆಯಾಗಿದೆ.



ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಅವರು ಹೆಸರಘಟ್ಟ ಕೆರೆಗೆ ಬುಧವಾರ ಭೇಟಿ ನೀಡಿದ್ದರು

ಈ ಒತ್ತುವರಿಯನ್ನು ತೆರವುಗೊಳಿಸುವ ಮೂಲಕ ನೀರಿನ ಸರಾಗ ಹರಿವಿಗೆ ಅನುವು ಮಾಡಿಕೊಡುವುದು ನಮ್ಮ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಬೆಂಗಳೂರು ನಾಗರಿಕರ ಪಾತ್ರವೂ ಬಹಳ ಮುಖ್ಯವಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪುನರುಜ್ಜೀವನ ಕಾರ್ಯದಲ್ಲಿ ಕೈಜೋಡಿಸಬೇಕು’ ಎಂದು ರಾಮ್‌ಪ್ರಸಾತ್ ಹೇಳಿದರು.

185 ಕೆರೆಗಳ ಪುನಶ್ಚೇತನ: ನಗರದಲ್ಲಿರುವಂತಹ ಕೆರೆಗಳನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. 15ಕ್ಕೂ ಹೆಚ್ಚು ಕೆರೆಗಳಿಗೆ ಸಂಸ್ಕರಿಸಿದ ನೀರು ತುಂಬಲಾಗುತ್ತಿದೆ. ಮುಂದಿನ ದಿನಗಳಲ್ಲಿ ನಗರದ ವ್ಯಾಪ್ತಿಯಲ್ಲಿರುವಂತಹ 185 ಕೆರೆಗಳನ್ನೂ ಪುನಃಶ್ಚೇತನಗೊಳಿಸುವುದು ಜಲ ಮಂಡಳಿಯ ಗುರಿಯಾಗಿದೆ. ಅವುಗಳಲ್ಲಿನ ಹೂಳು ತೆಗೆಯುವುದು, ಗುಣಮಟ್ಟದ ನೀರು ತುಂಬಿಸಿ ಅಂತರ್ಜಲ ಮಟ್ಟ ಹೆಚ್ಚಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ ಎಂದು ತಿಳಿಸಿದರು.

ಹೆಸರಘಟ್ಟ ಕೆರೆಗೆ ಭೇಟಿ: ನಗರಕ್ಕೆ ಮೊದಲ ಬಾರಿಗೆ ಪೈಪ್‌ಲೈನ್ ಮೂಲಕ ಕುಡಿಯುವ ನೀರು ಒದಗಿಸಿದ್ದ ಹೆಸರಘಟ್ಟ ಕೆರೆಗೆ ಭೇಟಿ ನೀಡಿದ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು, ನೀರಿನ ಲಭ್ಯತೆ, ಪೂರೈಕೆ ವ್ಯವಸ್ಥೆ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದುಕೊಂಡರು.

ಹೆಸರಘಟ್ಟ ಕೆರೆಯಲ್ಲಿ 0.3 ಟಿಎಂಸಿ ಅಡಿಗಳಷ್ಟು ನೀರಿದೆ. ಈ ಪ್ರದೇಶದ ಸುತ್ತಮುತ್ತಲಿನ ಕೊಳವೆ ಬಾವಿಗಳಲ್ಲೂ ಉತ್ತಮ ನೀರಿದೆ. ಜಲಮಂಡಳಿಯು ಹೆಸರಘಟ್ಟ ನೀರು ಸರಬರಾಜು ಕೇಂದ್ರದ ಮೂಲಕ ನಗರಕ್ಕೆ ಪ್ರತಿ ದಿನ 10 ಎಂಎಲ್‌ಡಿ ನೀರು ಸರಬರಾಜು ಮಾಡಬಹುದಾಗಿದೆ. ಮೇ ತಿಂಗಳಲ್ಲಿ ನೀರಿನ ಕೊರತೆ ಕಂಡು ಬಂದಲ್ಲಿ ಜಲಮಂಡಳಿಯ ನೀರು ಸರಬರಾಜು ವ್ಯವಸ್ಥೆಯನ್ನು ಬಳಸಿಕೊಳ್ಳಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲು ಸೂಚಿಸಿದರು.

ನೀರು ಶುದ್ಧೀಕರಿಸಲು ಹೆಸರಘಟ್ಟ ಜಲಮಂಡಳಿ ನೀರು ಸರಬರಾಜು ಕೇಂದ್ರವನ್ನು ಸಜ್ಜುಗೊಳಿಸಬೇಕು. ಇಲ್ಲಿಂದ ಎಲ್ಲಿಯವರೆಗೆ ಪೈಪ್‌ಲೈನ್ ಇದೆಯೋ ಅಲ್ಲಿಯವರೆಗೆ ನೀರು ಕೊಂಡೊಯ್ಯಲು ಮಾರ್ಗ ಸಿದ್ಧಪಡಿಸಬೇಕು. ಉಳಿದ ಪ್ರದೇಶಗಳಿಗೆ ಟ್ಯಾಂಕರ್ ಮೂಲಕ ಹೆಸರಘಟ್ಟ ಕೆರೆಯ ನೀರು ಸರಬರಾಜು ಮಾಡಬೇಕು ಎಂದು ಹೇಳಿದರು.

ಮೇ ತಿಂಗಳಿನಲ್ಲಿ ಅಂತರ್ಜಲ ಮಟ್ಟ ಮತ್ತಷ್ಟು ಕುಸಿದರೆ ಅದಕ್ಕೆ ಸಿದ್ಧವಾಗಿ, ಹೆಸರಘಟ್ಟ ಸೇರಿದಂತೆ ವಿವಿಧ ಕೆರೆಗಳಿಂದ ನೀರು ಪೂರೈಸಲು ಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಲಮಂಡಳಿಯ ಮುಖ್ಯ ಎಂಜಿನಿಯರ್ (ಕಾವೇರಿ ಕಾರ್ಯಾಚರಣೆ ರಾಜಶೇಖರ್), ಮುಖ್ಯ ಎಂಜಿನಿಯರ್‌ಗಳಾದ ಗಂಗಾಧರ್ ಮತ್ತು ದೇವರಾಜ್, ಅಧೀಕ್ಷಕ ಎಂಜಿನಿಯರ್‌ಗಳಾದ ನಾರಾಯಣಸ್ವಾಮಿ, ಬಿಂದು ಉಪಸ್ಥಿತರಿದ್ದರು.

‘ಹೆಮ್ಮೆಯ ಬೆಂಗಳೂರು ನಾಗರಿಕ’

ಮಳೆ ನೀರು ಸಂಗ್ರಹ ಹಾಗೂ ಅದರ ಮರುಪೂರಣವನ್ನು ಕಡ್ಡಾಯಗೊಳಿಸಲಾಗಿದೆ. ಆದರೆ, ಬಹುಪಾಲು ಜನರು ತಮ್ಮ ಕಟ್ಟಡಗಳಲ್ಲಿ ಮಳೆನೀರನ್ನು ಸಂಗ್ರಹಿಸುವ ವ್ಯವಸ್ಥೆ ಹೊಂದಿದ್ದರೂ, ಅದನ್ನು ಮರುಪೂರಣ ಮಾಡುವ ವ್ಯವಸ್ಥೆ ಕಲ್ಪಿಸಿರುವುದಿಲ್ಲ. ಇಂತಹ ವ್ಯವಸ್ಥೆ ಇಲ್ಲದ ಜನರಿಗೆ ಜಲಮಂಡಳಿ ಪ್ರೋತ್ಸಾಹ ನೀಡಲಿದೆ. ಇದಕ್ಕಾಗಿ ‘ಹೆಮ್ಮೆಯ ಬೆಂಗಳೂರು ನಾಗರಿಕ’ ಅಭಿಯಾನ ನಡೆಸಲಾಗುವುದು ಎಂದು ರಾಮ್‌ಪ್ರಸಾತ್ ಮನೋಹರ್ ಹೇಳಿದರು.

ಈ ಅಭಿಯಾನದ ಮೂಲಕ ಸಮರ್ಪಕವಾಗಿ ಮಳೆ ನೀರು ಮರುಪೂರಣ ವ್ಯವಸ್ಥೆ ಅಳವಡಿಸಿಕೊಂಡಿರುವ ಕಟ್ಟಡಗಳ ಮೇಲೆ ಜಲಮಂಡಳಿಯ ವತಿಯಿಂದ ‘ನಮ್ಮ ಹೆಮ್ಮೆಯ ಬೆಂಗಳೂರು ನಾಗರಿಕ’ ಎಂಬ ಭಿತ್ತಿಪತ್ರ ಅಂಟಿಸಲಾಗುವುದು. ನೀರಿನ ಬಿಲ್‌ನಲ್ಲೂ ಇದನ್ನು ನಮೂದಿಸಲಾಗುವುದು ಎಂದು ತಿಳಿಸಿದರು.

ಸುದ್ದಿ 2 ನಿಮಿಷ

‘ಸೌಜನ್ಯಾ ಪ್ರಕರಣದ ಮರು ತನಿಖೆ ಮೋದಿ ಘೋಷಿಸಲಿ’

ಮಂಗಳೂರು: ಬೆಳ್ತಂಗಡಿ ತಾಲ್ಲೂಕಿನ ಯುವತಿ ಸೌಜನ್ಯಾ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಸಿಬಿಐನಿಂದ ನ್ಯಾಯಾಲಯದ ಉಸ್ತುವಾರಿಯಲ್ಲಿ ಮರುತನಿಖೆ ನಡೆಸುವ ಬಗ್ಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹೈಕೋರ್ಟ್‌ಗೆ ಲಿಖಿತ ಅಭಿಪ್ರಾಯ ನೀಡಬೇಕು. ಏ.14ರಂದು ಮಂಗಳೂರಿಗೆ ಭೇಟಿ ನೀಡಲಿರುವ ಪ್ರಧಾನಿ ನರೇಂದ್ರ ಮೋದಿ ಈ ಕುರಿತು ಘೋಷಣೆ ಮಾಡಬೇಕು ಎಂದು ಸೌಜನ್ಯಾ ಪರ ಹೋರಾಟ ಸಮಿತಿ ಪ್ರಮುಖ ಮಹೇಶ್ ಶೆಟ್ಟಿ ತಿಮರೋಡಿ ಆಗ್ರಹಿಸಿದರು.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಪ್ರಕರಣ ಮರುತನಿಖೆ ನಡೆಸುವ ಸಂಬಂಧ ಹೈಕೋರ್ಟ್ ಸಿಬಿಐನಿಂದ ಅಭಿಪ್ರಾಯ ಕೇಳಿದೆ. ಸಿಬಿಐ ನೇರವಾಗಿ ಗೃಹ ಸಚಿವಾಲಯ ಮತ್ತು ಪ್ರಧಾನಿ ಕಚೇರಿ ಅಡಿಯಲ್ಲಿ ಬರುತ್ತದೆ. ಹೀಗಾಗಿ, ಮಂಗಳೂರಿಗೆ ಭೇಟಿ ನೀಡಲಿರುವ ಪ್ರಧಾನಿಗೆ ಬಿಜೆಪಿ ನಾಯಕರು ವಿಷಯ ಮನವರಿಕೆ ಮಾಡಿಕೊಟ್ಟು, ಅವರು ಇಲ್ಲಿ ಘೋಷಣೆ ಮಾಡುವಂತೆ ಆಗಬೇಕು. ಇಲ್ಲವಾದಲ್ಲಿ ಈ ಹಿಂದೆ ತಿಳಿಸಿದಂತೆ ಚುನಾವಣೆಯ ನೋಟಾ ಅಭಿಯಾನವನ್ನು ತೀವ್ರಗೊಳಿಸಲಾಗುವುದು’ ಎಂದರು.

ಸೌಜನ್ಯಾ ಪ್ರಕರಣದ ಮರು ತನಿಖೆಯ ಅಭಿಪ್ರಾಯವನ್ನು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಆದಷ್ಟು ಶೀಘ್ರ ಹೈಕೋರ್ಟ್‌ಗೆ ನೀಡಬೇಕು, ವಂಚನೆಯಿಂದ ವಶಪಡಿಸಿಕೊಂಡ ಸಾವಿರಾರು ಎಕರೆ ಭೂಮಿಯನ್ನು ಧರ್ಮೋದ್ಯಮಿಗಳಿಂದ ವಾಪಸ್ ಪಡೆಯಬೇಕು. ರಾಜ್ಯ ಸರ್ಕಾರ ಈ ಬೇಡಿಕೆಗಳಿಗೆ ಸ್ಪಂದಿಸದಿದ್ದರೆ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧವೂ ನೋಟಾ ಅಭಿಯಾನ ತೀವ್ರಗೊಳಿಸಲಾಗುವುದು. ಹೀಗಾದರೆ ಕ್ಷೇತ್ರದಲ್ಲಿ 2.5 ಲಕ್ಷ ಮತಗಳು ನೋಟಾಕ್ಕೆ ಬೀಳಲಿವೆ ಎಂದರು.

ಚಿಕ್ಕಬೆಟ್ಟಗೇರಿ: ಕೆಸರು ಹೊಂಡದಲ್ಲಿ ಸಿಲುಕಿದ್ದ ಕಾಡಾನೆ ರಕ್ಷಣೆ



ಕುಶಾಲನಗರ (ಕೊಡಗು): ಸಮೀಪದ ಚಿಕ್ಕಬೆಟ್ಟಗೇರಿ ಗ್ರಾಮದಲ್ಲಿ ಆಹಾರ ಅರಸಿ ಕೃಷಿಕರ ಜಮೀನಿಗೆ ಲಗ್ಗೆಯಿಟ್ಟು, ಮೋಟರ್ ಬಾವಿಯ ಕೆಸರು ಹೊಂಡಕ್ಕೆ ಬಿದ್ದು ಜೀವನ್ಮರಣ ಹೋರಾಟ ನಡೆಸುತ್ತಿದ್ದ ಕಾಡಾನೆಯನ್ನು ಅರಣ್ಯ ಇಲಾಖೆ ಸಿಬ್ಬಂದಿ ಬುಧವಾರ ರಕ್ಷಿಸಿದರು.

ಮಂಗಳವಾರ ಸಂಜೆ, ಕೆಸರುಹೊಂಡದಲ್ಲಿ 16 ವರ್ಷದ ಆನೆಯನ್ನು ಕಂಡ ಚಿಕ್ಕಬೆಟಗೇರಿಯ ಕೆರೆಮೂಲೆ ಗ್ರಾಮದ ಹರೀಶ್ ಮತ್ತು ಅಶೋಕ್ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದರು. ಸಿಬ್ಬಂದಿಯು ಸ್ಥಳೀಯರ ನೆರವಿನಿಂದ ಜೆಸಿಬಿ ಬಳಸಿ ಆನೆಯನ್ನು ಮೇಲೆತ್ತಲು ಪ್ರಯತ್ನಿಸಿದರೂ ಆಗಲಿಲ್ಲ. ಸತತ ಮೂರು ಗಂಟೆ ಕಾರ್ಯಾಚರಣೆ ಬಳಿಕ, ತಾನಾಗಿಯೇ ಸಾವರಿಸಿಕೊಂಡ ಆನೆ ಹೊಂಡದಿಂದ ಮುಂದೆ ಸಾಗಿ ಸಮೀಪದ ತೋಟದೊಳಗೆ ಸೇರಿಕೊಂಡಿತು.

ವಲಯ ಅರಣ್ಯಾಧಿಕಾರಿ ರತನ್ ಕುಮಾರ್, ಉಪ ವಲಯ ಅರಣ್ಯಾಧಿಕಾರಿಗಳಾದ ರಂಜನ್, ಅನಿಲ್ ಡಿಸೋಜ, ದೇವಯ್ಯ ಮತ್ತು ಅರಣ್ಯ ರಕ್ಷಕರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಸಾಮೂಹಿಕ ಪ್ರಾರ್ಥನೆ: ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈದ್‌ಉಲ್ -ಫಿತ್ರ್ ಅಂಗವಾಗಿ ಸಾಮೂಹಿಕ ಪ್ರಾರ್ಥನೆ ನಡೆಯುವ ಸ್ಥಳಗಳ ಸುತ್ತಮುತ್ತ ಗುರುವಾರ ಬೆಳಿಗ್ಗೆ 7ರಿಂದ ಮಧ್ಯಾಹ್ನ 12ರ ತನಕ ವಾಹನ ಸಂಚಾರದ ಮಾರ್ಗ ಬದಲಾವಣೆ ಮಾಡಲಾಗಿದೆ.

ನಗರದ ಮೈಸೂರು ರಸ್ತೆಯ ಬಿಬಿ ಜಂಕ್ಷನ್ ಮಸೀದಿ ಬಳಿ ಹಾಗೂ ಚಾಮರಾಜಪೇಟೆ 1ನೇ ಮುಖ್ಯರಸ್ತೆಯ 7ನೇ ಅಡ್ಡರಸ್ತೆಯ ಬಿಬಿಎಂಪಿ ಆಟದ ಮೈದಾನದಲ್ಲಿ 25 ಸಾವಿರಕ್ಕೂ ಹೆಚ್ಚು ಮಂದಿ ಸಾಮೂಹಿಕ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆಯಿದೆ. ಹೀಗಾಗಿ ವಾಹನ ಸಂಚಾರ ಬದಲಾವಣೆ ಮಾಡಲಾಗಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ಸಿಟಿ ಮಾರುಕಟ್ಟೆ ಮೇಲ್ಸೇತುವೆಯಿಂದ (ಬಿಜಿಎಸ್ ಮೇಲ್ಸೇತುವೆ) ಟೋಲ್ ಗೇಟ್ ಜಂಕ್ಷನ್‌ವರೆಗೆ ರಸ್ತೆಯ ಎರಡು ಬದಿಯಲ್ಲಿ ಎಲ್ಲ ಮಾದರಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಶಸ್ತ್ರಾಸ್ತ್ರ ಒಪ್ಪಿಸುವ ಆದೇಶ ರದ್ದು ಕೋರಿ ಸಲ್ಲಿಸಲಾಗಿದ್ದ ಅರ್ಜಿ ವಿಚಾರಣೆ

ವಿನಾಯಿತಿ ಮನವಿ ಪರಿಶೀಲಿಸಿ ಕ್ರಮ: ಸರ್ಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕಸಭೆಯ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಮಾದರಿ ನೀತಿ ಸಂಹಿತೆಯ ಪಾಲನೆಗೆ ಅನುಗುಣವಾಗಿ ಸರ್ಕಾರದ ಸುಪರ್ದಿಗೆ ಒಪ್ಪಿಸಲಾಗಿರುವ ಬಂದೂಕು ಹಿಂದಿರುಗಿಸುವಂತೆ ಕೋರಿ ಅಧಿಕೃತ ಪರವಾನಗಿದಾರರು ಮನವಿ ಸಲ್ಲಿಸಿದರೆ, ಅಂತಹ ಮನವಿಗಳನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು’ ಎಂದು ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಅರುಹಿದ್ದಾರೆ.

ಈ ಸಂಬಂಧ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಐವರನಾಡು ಗ್ರಾಮದ ಕೃಷಿಕ ಕೆ.ವಿ.ಪ್ರಸಾದ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅರ್ಜಿದಾರರ ಮನವಿಗೆ ಸಂಬಂಧಿಸಿದಂತೆ ಉತ್ತರಿಸಿ, ‘ಚುನಾವಣೆ ಹಿನ್ನೆಲೆಯಲ್ಲಿ ಕೇಂದ್ರ ಚುನಾವಣಾ ಆಯೋಗ ಮಾರ್ಗದರ್ಶಿ ಸೂತ್ರಗಳನ್ನು ಹೊರಡಿಸಿದೆ. ಇದರ ಅನುಸಾರ ಪರವಾನಗಿ ಹೊಂದಿದ ಆಯುಧಗಳನ್ನು ಠೇವಣಿ ಇರಿಸುವಂತೆ ಸ್ಥಳೀಯವಾಗಿ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸಿದ್ದಾರೆ. ಅಗತ್ಯ ಇರುವವರಿಗೆ ಇದರಿಂದ ವಿನಾಯಿತಿ ನೀಡಬಹುದಾಗಿದೆ. ಆದರೆ, ಇದನ್ನು ಆಯಾ ಜಿಲ್ಲಾಧಿಕಾರಿಗಳೇ ನಿರ್ಧರಿಸಲಿದ್ದಾರೆ’ ಎಂದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ, ‘ಅರ್ಜಿದಾರರು ಮನವಿ ಸಲ್ಲಿಸಿದರೆ, ಎರಡು ದಿನಗಳಲ್ಲಿ ಸೂಕ್ತ ಆದೇಶ ಹೊರಡಿಸಿ’ ಎಂದು ಸೂಚಿಸಿತು. ಪ್ರಕರಣದ ಪ್ರತಿವಾದಿಗಳಾದ ಗೃಹ ಇಲಾಖೆ ಪ್ರಧಾನ ಕಾರ್ಯದರ್ಶಿ, ದಕ್ಷಿಣ ಕನ್ನಡ ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಸುಳ್ಯ ತಾಲ್ಲೂಕು ತಹಶೀಲ್ದಾರ್, ಬೆಳ್ಳಾರೆ ಪೊಲೀಸ್ ಠಾಣೆಯ ಠಾಣಾಧಿಕಾರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಮನವಿ ಏನು?: ‘ನಾನೊಬ್ಬ ಕೃಷಿಕ. ನಾನು ಜನವಿರಳವಾದ ಬೆಳ್ಳಾರೆ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ. ಹೀಗಾಗಿ, ನನ್ನ ಜೀವ ರಕ್ಷಣೆ ಮತ್ತು ಕೃಷಿ ಚಟುವಟಿಕೆ ವೇಳೆ ವನ್ಯಪ್ರಾಣಿಗಳಿಂದ ಆತ್ಮರಕ್ಷಣೆ ಮಾಡಿಕೊಳ್ಳಲು ನನಗೆ ಬಂದೂಕಿನ ಅಗತ್ಯವಿದೆ. ಲೋಕಸಭೆ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ನನ್ನ ಬಂದೂಕನ್ನು ತನ್ನ ಸುಪರ್ದಿಗೆ ಪಡೆದಿದೆ. ಆಯುಧ ಸುಪರ್ದಿಗೆ ಪಡೆಯುವ ಆದೇಶದಿಂದ ನನಗೆ ವಿನಾಯಿತಿ ನೀಡುವಂತೆ ಕೋರಲಾದ ಮನವಿಯನ್ನು ತಿರಸ್ಕರಿಸಲಾಗಿದೆ. ಇದು ಸಹಜ ನ್ಯಾಯತತ್ವ ಹಾಗೂ ಸಂವಿಧಾನದ 14, 16 ಮತ್ತು 21ನೇ ವಿಧಿಗಳಿಗೆ ವಿರುದ್ಧವಾಗಿದೆ. ಆದ್ದರಿಂದ, ಸರ್ಕಾರ ಈ ಸಂಬಂಧ 2024ರ ಮಾರ್ಚ್ 26ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ. ಅರ್ಜಿದಾರರ ಪರ ಕೆ.ರವಿಶಂಕರ್ ವಾದ ಮಂಡಿಸಿದರು.

ಕಟಾರಿಯಾಗೆ ಹೈಕೋರ್ಟ್ ನೋಟಿಸ್

‘ಅನಧಿಕೃತವಾಗಿ ಉಳುಮೆ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಲು ಕೋರಲಾಗುವ ಅರ್ಜಿಗಳನ್ನು ಪರಿಶೀಲನೆ ನಡೆಸಿ ಸೂಕ್ತ ಆದೇಶ ಹೊರಡಿಸುವ ಸಮಿತಿಯೊಂದನ್ನು ರಚಿಸಿ ಎಂದು ಹೈಕೋರ್ಟ್ ನೀಡಿದ್ದ ಆದೇಶವನ್ನು ಪಾಲನೆ ಮಾಡಿಲ್ಲ’ ಎಂಬ ಆಕ್ಷೇಪಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನ್ಯಾಯಾಂಗ ನಿಂದನೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ಮಂಗಳೂರು ತಾಲ್ಲೂಕಿನ ಹರೇಕಳ ಗ್ರಾಮದ ಜೆರೋಮ್ ಡಿಸೋಜ ಸಲ್ಲಿಸಿರುವ ನ್ಯಾಯಾಂಗ ನಿಂದನೆ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಪ್ರತಿವಾದಿಯಾದ ರಾಜ್ಯ ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದೆ.

ಪ್ರಕರಣವೇನು?: ‘ರಾಜ್ಯದಲ್ಲಿ ಅನಧಿಕೃತವಾಗಿ ಉಳುಮೆ ಮಾಡುತ್ತಿರುವ ಜಮೀನನ್ನು ಸಕ್ರಮಗೊಳಿಸಲು ಮತ್ತು ಆ ಜಮೀನಿನಲ್ಲಿ ಉಳುಮೆ ಮುಂದುವರಿಸಲು ಅನುಮತಿ ನೀಡುವಂತೆ ಕೋರಿ ಹಲವು ಮಂದಿ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ. ಇಂತಹ ಮನವಿಗಳನ್ನು ಸಕ್ಷಮ ಸಮಿತಿಯೊಂದು ಪರಿಶೀಲನೆ ನಡೆಸುವ ಅಗತ್ಯವಿದೆ. ಹೀಗಾಗಿ, ಸಮಿತಿ ರಚಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿ ಬಂಗಾರಪೇಟೆ ತಾಲ್ಲೂಕಿನ ಬಾವರಹಳ್ಳಿಯ ಮಂಜುನಾಥ ಸೇರಿದಂತೆ ರಾಜ್ಯದ ವಿವಿಧೆಡೆಯ 20ಕ್ಕೂ ಹೆಚ್ಚು ಜನ 2019ರಲ್ಲಿ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಗಳ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ‘ರಾಜ್ಯ ಸರ್ಕಾರ ಅರ್ಜಿದಾರರ ಮನವಿಗೆ ಸಂಬಂಧಿಸಿದಂತೆ 2023ರ ಡಿಸೆಂಬರ್ 15ರೊಳಗೆ ಸಮಿತಿ ರಚನೆ ಮಾಡಬೇಕು’ ಎಂದು ನಿರ್ದೇಶಿಸಿ ಎಲ್ಲ ಅರ್ಜಿಗಳನ್ನು ವಿಲೇವಾರಿ ಮಾಡಿತ್ತು.

‘ಏಕಸದಸ್ಯ ನ್ಯಾಯಪೀಠ ಆದೇಶ ಹೊರಡಿಸಿ ಮೂರು ತಿಂಗಳಾದರೂ ರಾಜ್ಯ ಸರ್ಕಾರ ಸಮಿತಿ ರಚನೆ ಮಾಡಿಲ್ಲ. ಆದ್ದರಿಂದ, ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕ್ರಿಯೆ ಕೈಗೆತ್ತಿಕೊಳ್ಳಬೇಕು’ ಎಂದು ಕೋರಿ ಜೆರೋಮ್ ಡಿಸೋಜ ಈ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದಾರೆ.

ಪಿಇಎಸ್ ಕಾಲೇಜಿಗೆ ಶೇ 98.86 ಫಲಿತಾಂಶ

ಬೆಂಗಳೂರು: ಹನುಮಂತನಗರದ ಪಿಇಎಸ್ ಪಿಯು ಕಾಲೇಜು ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಶೇ 98.86 ಫಲಿತಾಂಶ ಪಡೆದಿದೆ. ವಾಣಿಜ್ಯ ವಿಭಾಗದಲ್ಲಿ 16 ಮತ್ತು ವಿಜ್ಞಾನ ವಿಭಾಗದಲ್ಲಿ 17 ವಿದ್ಯಾರ್ಥಿಗಳು ಶೇ 95ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಪರೀಕ್ಷೆ ಬರೆದ 243 ವಿದ್ಯಾರ್ಥಿಗಳಲ್ಲಿ 241 ಮಂದಿ (ಶೇ 99.22) ಉತ್ತೀರ್ಣರಾಗಿದ್ದಾರೆ. 24 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಶೇ 100 ಅಂಕ ಪಡೆದಿದ್ದಾರೆ. ಧೀರಜ್ ಎಸ್. 595 (ಶೇ 99.2) ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಪರೀಕ್ಷೆ 392 ವಿದ್ಯಾರ್ಥಿಗಳಲ್ಲಿ 386 ಮಂದಿ (ಶೇ 98.5) ಉತ್ತೀರ್ಣರಾಗಿದ್ದಾರೆ. 20 ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಶೇ 100 ಅಂಕ ಗಳಿಸಿದ್ದಾರೆ. ಅಪೂರ್ವ ಎನ್. 595 (99.2) ಅಂಕ ಗಳಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ ಎಂದು ಪಿಇಎಸ್ ಸಂಸ್ಥಾಪಕಾಧ್ಯಕ್ಷ ಎಂ.ಆರ್. ದೊರೆಸ್ವಾಮಿ ತಿಳಿಸಿದ್ದಾರೆ.



ಧೀರಜ್ ಎಸ್.



ಪವಿತ್ರಾ ಪಿ.



ಸಂಜಯ್‌ಪ್ರಸನ್ನ ಸಿಂಹ



ಸುಕೃತಿ ಆರ್. ಭಟ್




ಲಾವಣ್ಯ ಡಿ.

ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಶೇ 95ಕ್ಕಿಂತ ಅಧಿಕ ಅಂಕಗಳಿಸಿದವರ ವಿವರ ಇಲ್ಲಿದೆ;

ವಾಣಿಜ್ಯ ವಿಭಾಗ: ಧೀರಜ್ ಎಸ್. (ಶೇ 99.2), ಪವಿತ್ರಾ ಪಿ. (ಶೇ 98.7), ಲಾವಣ್ಯ ಡಿ. (ಶೇ 98), ವಿ. ಸಂಜಯ್‌ಪ್ರಸನ್ನ ಸಿಂಹ (ಶೇ 97.8), ಸುಕೃತಿ ಆರ್. ಭಟ್ (ಶೇ 97.7), ಸ್ಕಂದ ಪ್ರಣವ್ ಎಸ್. (ಶೇ 97.3), ಅಪೂರ್ವ 583 (ಶೇ 97.2), ಸಿಂಚನಾ ಜೆ. ರಾಮ್ (ಶೇ 96.7), ಎಂ. ಅಮೃತಾ (ಶೇ 96.7), ನಿಖಿತಾ ಎಸ್. (ಶೇ 96.7), ಧನುಶ್ರೀ ಕೆ.ಕೆ. (ಶೇ 96.5), ಕಾವ್ಯ ಎಂ. (ಶೇ 96.5), ಭಾನುಶ್ರೀ (ಶೇ 96.3), ರಚನಾ ಬಿ.ಸಿ. (ಶೇ 96.3).

ವಿಜ್ಞಾನ ವಿಭಾಗ: ಅಪೂರ್ವ ಎನ್. (ಶೇ 99.2), ಕುಶಾಲ್ ಎಂ. (ಶೇ 98), ಭವನ್ ಪಿ. (ಶೇ 97.7), ಮಣಿಕಾಂತ ಎಂ. ಗೌಡ (ಶೇ 97.2), ಮಾನಸ ಜೆ.ಎ. (ಶೇ 97) ನಿಷ್ಕಾ ವಿ. (ಶೇ 96.8), ಶ್ರಾವ್ಯ ಬಿ.ಎಲ್. (ಶೇ 96.8), ವಿ. ಹಾರ್ದಿಕ್ ನಾಯ್ಡು (ಶೇ 96.8), ಮೃದುಲಾ ಡಿ. (ಶೇ 96.7), ಉತ್ತಮ್ ಪಿ. (ಶೇ 96), ಸಮೀಕ್ಷಾ ಎಂ.ಎಸ್. (ಶೇ 96), ಶಾಂಭವಿ ಕೆ. ಚೈತನ್ಯ (ಶೇ 96), ಶ್ರೇಯಾ ಬಿ.ಎಸ್. ಗೌಡ (ಶೇ 96), ಸನ್ನಿಧಿ ಎ. ಶೆಟ್ಟಿ (ಶೇ 95.8), ಪ್ರಿಯಾಂಕ ಗುರ್ಜರ್ (ಶೇ 95.8), ಪ್ರಿಯಾಂಕ ಎಸ್. (ಶೇ 95.8), ಸಂಜನಾ ಎಸ್. (ಶೇ 95.7).



ಗರಿ ಬಿಚ್ಚಿದ ನವಿಲು...

ನವಿಲೊಂದು ಗರಿ ಬಿಚ್ಚಿ ನೃತ್ಯ ಮಾಡುತ್ತಿದ್ದ ದೃಶ್ಯ ನಗರದ ಉಲ್ಲಾಳು ಕೆರೆಯಲ್ಲಿ ಕ್ಯಾಮೆರಾ ಕಣ್ಣಲ್ಲಿ ಸೆರೆಯಾಯಿತು. – ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ದಾರಕೇಶ್ವರಯ್ಯ ಜಾತಿ ಪ್ರಮಾಣಪತ್ರ ನಿರ್ಬಂಧದ ಆದೇಶ ವಿಸ್ತರಣೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಅವರ ಅಣ್ಣ ಎಂ.ಪಿ. ದಾರಕೇಶ್ವರಯ್ಯ ಊಸರವಳ್ಳಿ ತರಹ ಬಣ್ಣ ಬದಲಾಯಿಸುವ ಮೂಲಕ ಬೇಡ ಜಂಗಮ ಜಾತಿಯ ಪ್ರಮಾಣಪತ್ರದ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ಸರ್ಕಾರದ ಪರ ವಿಶೇಷ ವಕೀಲರು ಹೈಕೋರ್ಟ್‌ಗೆ ಅರುಹಿದರು.

‘ಪರಿಶಿಷ್ಟ ಜಾತಿಗೆ ಮೀಸಲಾದ ಚಿತ್ರದುರ್ಗ ಲೋಕಸಭಾ ಕ್ಷೇತ್ರದಲ್ಲಿ ಬೇಡ ಜಂಗಮ ಜಾತಿಯ ಪ್ರಮಾಣಪತ್ರ ಪಡೆದಿರುವ ಎಂ.ಪಿ.ದಾರಕೇಶ್ವರಯ್ಯ ಚುನಾವಣೆಗೆ ಸ್ಪರ್ಧಿಸಲು ಮುಂದಾಗಿದ್ದಾರೆ’ ಎಂದು ಆಕ್ಷೇಪಿಸಿ ದಾಸರಹಳ್ಳಿಯ ಎಂ.ಚಂದ್ರ ಬಿನ್ ಮುನಿಯಪ್ಪ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಾಗಿದ್ದ ವಿಶೇಷ ವಕೀಲ ಸಿ.ಜಗದೀಶ್, ‘ದಾರಕೇಶ್ವರಯ್ಯ ಈ ಮೊದಲು ಬೆಂಗಳೂರು ಉತ್ತರ ತಹಶೀಲ್ದಾರ್ ಅವರಿಂದ ಪಡೆದಿದ್ದ ಬೇಡ ಜಂಗಮ ಜಾತಿ ಪ್ರಮಾಣಪತ್ರ ರದ್ದಾಗಿತ್ತು. ಈಗ ಬೆಂಗಳೂರು ದಕ್ಷಿಣ ತಹಶೀಲ್ದಾರ್ ಅವರಿಂದ ಇದೇ ರೀತಿಯ ಜಾತಿ ಪ್ರಮಾಣಪತ್ರವನ್ನು ಪಡೆದಿದ್ದಾರೆ. ಎರಡೆರಡು ಬಾರಿ ಇಂತಹ ಪ್ರಮಾಣಪತ್ರ ಪಡೆದು ಬಣ್ಣ ಬದಲಾಯಿಸುವ ಮೂಲಕ ಕಾನೂನಿನ ಕಣ್ಣಿಗೆ ಮಣ್ಣೆರಚುತ್ತಿದ್ದಾರೆ’ ಎಂದು ದೂರಿದರು.

ಇದನ್ನು ಅಲ್ಲಗಳೆದ ದಾರಕೇಶ್ವರಯ್ಯ ಪರ ವಕೀಲರು ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ಸಮಯ ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಿತು. ಅಲ್ಲಿಯವರೆವಿಗೂ ಈ ಮೊದಲು ನೀಡಿದ್ದ ಆದೇಶದ ಅನುಸಾರ ದಾರಕೇಶ್ವರಯ್ಯ ಬೇಡ ಜಂಗಮ ಜಾತಿ ಪ್ರಮಾಣಪತ್ರ ಬಳಕೆ ಮಾಡದಂತೆ ವಿಧಿಸಿದ್ದ ನಿರ್ಬಂಧವನ್ನು ವಿಸ್ತರಿಸಿತು. ಅರ್ಜಿದಾರ ಚಂದ್ರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಹಾಜರಾಗಿದ್ದರು. ವಕೀಲೆ ಜಿ.ಎಸ್. ಕಾವ್ಯಶ್ರೀ ವಕಾಲತ್ತು ವಹಿಸಿದ್ದಾರೆ.

ರಾಮ್ ಚರಣ್ ಭೀಮಾ ಜ್ಯುವೆಲ್ಸ್ ಬ್ರ್ಯಾಂಡ್ ರಾಯಭಾರಿ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಭೀಮಾ ಜ್ಯುವೆಲ್ಸ್‌ನ ಬ್ರ್ಯಾಂಡ್ ರಾಯಭಾರಿಯಾಗಿ ನಟ ರಾಮ್ ಚರಣ್ ನೇಮಕವಾಗಿದ್ದಾರೆ.

‘ರಾಮ್ ಚರಣ್ ಅವರಂತಹ ಕ್ರಿಯಾತ್ಮಕ ನಟರೊಂದಿಗೆ ಕೈಜೋಡಿದ್ದೇವೆ. ಈ ಪಾಲುದಾರಿಕೆಯು ಗುಣಮಟ್ಟ ಮತ್ತು ಶ್ರೇಷ್ಠತೆಗೆ ಬಗೆಗಿನ ನಮ್ಮ ಬದ್ಧತೆ ಕುರಿತು ಹೇಳುತ್ತದೆ’ ಎಂದು ಭೀಮಾ ಜ್ಯುವೆಲ್ಸ್ ಅಧ್ಯಕ್ಷರಾದ ಬಿ. ಬಿಂದುಮಾಧವ್ ಅವರು ಹೇಳಿದ್ದಾರೆ.



ಭೀಮಾ ಜ್ಯುವೆಲ್ಸ್ ಬ್ರ್ಯಾಂಡ್ ರಾಯಭಾರಿಯಾಗಿ ನಟ ರಾಮ್ ಚರಣ್ ನೇಮಕಗೊಂಡ ಸಂದರ್ಭ

‘ಸಂಪ್ರದಾಯ ಮತ್ತು ಕರಕುಶಲತೆಗೆ ಸಮಾನಾರ್ಥಕವಾದ ಭೀಮಾ ಜ್ಯುವೆಲ್ಸ್ ರಾಯಭಾರಿಯಾಗಿರುವುದು ನನಗೆ ಖುಷಿಯಾಗುತ್ತಿದೆ’ ಎಂದು ನಟ ರಾಮ್ ಚರಣ್ ಅವರು ತಿಳಿಸಿದ್ದಾರೆ.



‘ಜತೆಗಿರುವನು ಚಂದಿರ’ ನಾಟಕದ ದೃಶ್ಯ

13ಕ್ಕೆ ‘ಜತೆಗಿರುವನು ಚಂದಿರ’ ನಾಟಕ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಕಲ್ಪ ಮೈಸೂರು ತಂಡವು ಇದೇ 13ರಂದು ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ಜೆ.ಪಿ.ನಗರದ ರಂಗ ಶಂಕರದಲ್ಲಿ ‘ಜತೆಗಿರುವನು ಚಂದಿರ’ ನಾಟಕ ಪ್ರದರ್ಶನ ಹಮ್ಮಿಕೊಂಡಿದೆ.

ಈ ನಾಟಕವನ್ನು ಹುಲುಗಪ್ಪ ಕಟ್ಟೀಮನಿ ನಿರ್ದೇಶಿಸಿದ್ದಾರೆ. ಶ್ರೀನಿವಾಸ ಭಟ್ ಅವರು ಸಂಗೀತ ನೀಡಿದ್ದಾರೆ. ಶೊಲೋಮ್ ಅಲೈಖೆಮ್‌ನ ರಷ್ಯನ್ ಕಥೆಗಳನ್ನಾಧರಿಸಿ, ಜೋಸೆಫ್ ಸ್ಟೀನ್ ರಚಿಸಿರುವ ‘ಫಿಡ್ಲರ್ ಆನ್ ದಿ ರೂಫ್’ ಸಂಗೀತ ನಾಟಕವನ್ನು ಜಯಂತ ಕಾಯ್ಕಿಣಿ ಅವರು ಕನ್ನಡಕ್ಕೆ ರೂಪಾಂತರಿಸಿದ್ದಾರೆ. ಎರಡು ಪ್ರದರ್ಶನಗಳ ಟಿಕೆಟ್‌ಗಳು ಬುಕ್‌ಮೈ ಶೋದಲ್ಲಿ ಲಭ್ಯ ಇವೆ ಎಂದು ಪ್ರಕಟಣೆ ತಿಳಿಸಿದೆ.

ಅಪಘಾತ: ಇಬ್ಬರು ಯುವಕರ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಣ್ಯ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಅಂದ್ರಹಳ್ಳಿ ರಸ್ತೆಯಲ್ಲಿ ಮಂಗಳವಾರ ರಾತ್ರಿ ಸರಕು ಸಾಗಣೆ ಆಟೊ ಹಾಗೂ ಬೈಕ್ ನಡುವೆ ಅಪಘಾತ ಸಂಭವಿಸಿ ಇಬ್ಬರು ಯುವಕರು ಮೃತಪಟ್ಟಿದ್ದಾರೆ.

ಅಂದ್ರಹಳ್ಳಿ ನಿವಾಸಿಗಳಾದ ಫಾರೂಕ್ (18) ಮತ್ತು ಅಬ್ರಾರ್ ಅಹ್ಮದ್(18) ಮೃತಪಟ್ಟವರು. ಘಟನೆಯಲ್ಲಿ ಮತ್ತೊಬ್ಬ ಮೊಹಮ್ಮದ್ ಸಿದ್ದಿಕ್ ಎಂಬಾತ ಗಂಭೀರವಾಗಿ ಗಾಯಗೊಂಡಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ಹೇಳಿದರು.

ಒಂದೇ ಬೈಕ್‌ನಲ್ಲಿ ಮೂವರು ಪ್ರಯಾಣಿಸುತ್ತಿದ್ದರು. ಅಂದ್ರಹಳ್ಳಿ ಮುಖ್ಯರಸ್ತೆಯಲ್ಲಿ ರಾತ್ರಿ 11.30ರ ಸುಮಾರಿಗೆ ಎದುರಿನಿಂದ ಇಳಿಜಾರು ರಸ್ತೆಯಲ್ಲಿ ಸರಕು ಸಾಗಣೆ ಆಟೊ ಬರುತ್ತಿತ್ತು. ಆಗ ನಿಯಂತ್ರಣ ಕಳೆದುಕೊಂಡು ಬೈಕ್‌ಗೆ ಆಟೊ ಡಿಕ್ಕಿಯಾಗಿದೆ. ಕೂಡಲೇ ಆ ಮೂವರನ್ನು ಸ್ಥಳೀಯರು ಸಮೀಪದ ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಇಬ್ಬರು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಗೂಡ್ಸ್ ಆಟೊದ ಚಾಲಕ ಉಮೇಶ್ ವಾಹನ ಬಿಟ್ಟು ಪರಾರಿಯಾಗಿದ್ದಾನೆ. ಆತನ ಪತ್ತೆ ಕಾರ್ಯ ನಡೆಯುತ್ತಿದೆ ಎಂದು ಪೊಲೀಸರು ಮಾಹಿತಿ ನೀಡಿದರು.



ಅಪಘಾತದಲ್ಲಿ ಮೃತಪಟ್ಟ ಯುವಕರು.

₹80 ಲಕ್ಷ ವಂಚನೆ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನಗಳ ದಾಖಲಾತಿ ಸೃಷ್ಟಿಸಿಕೊಂಡು ಸಾರ್ವಜನಿಕರ ಹೆಸರಿನಲ್ಲಿ ಫೈನಾನ್ಸ್‌ಗಳಲ್ಲಿ ಸಾಲ ಪಡೆದು ವಂಚಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಮಾಗಡಿ ರಸ್ತೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಹೆಬ್ಬಾಳ ಸಮೀಪದ ಲಕ್ಷ್ಮೀಕಾಂತನಗರದ ನಿಯೊ ಜನನಿ ಅಪಾರ್ಟ್‌ಮೆಂಟ್‌ನಲ್ಲಿ ನೆಲೆಸಿದ್ದ ನಂದಿನಿ (42) ಹಾಗೂ ಬೆಂಗಳೂರಿನ ಗಿಡ್ಡದ-ಕೊಣೆಹಳ್ಳಿಯ ವಿಶ್ವೇಶ್ವರಯ್ಯ ಲೇಔಟ್‌ನ ನಿವಾಸಿ ಮಂಜುನಾಥ್ (35) ಬಂಧಿತ ಆರೋಪಿಗಳು. ‘ಬಂಧಿತರಿಂದ ₹4 ಲಕ್ಷ ಮೌಲ್ಯದ ಕಾರು, ಸಾಲ ಪಡೆದ ಹಣದಿಂದ ಖರೀದಿಸಿದ್ದ ನಿವೇಶನದ ದಾಖಲಾತಿ ಜಪ್ತಿ ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸರು ತಿಳಿಸಿದರು.



ನಂದಿನಿ



ಮಂಜುನಾಥ್

‘ಕೆ.ಪಿ. ಅಗ್ರಹಾರದ ನಿವಾಸಿ ಆರ್. ಕೆ.ಶೈಲಜಾ ದೂರು ನೀಡಿದ್ದರು. ಅವರ ದೂರು ಆಧರಿಸಿ, ಆರೋಪಿಗಳನ್ನು ಬಂಧಿಸಲಾಗಿದೆ. ಉಳಿದವರು ನ್ಯಾಯಾಲಯದಿಂದ ಜಾಮೀನು ಪಡೆದರು ಪೊಲೀಸರು ಹೇಳಿದರು.

‘ಬ್ಯಾಂಕ್ ಅಧಿಕಾರಿಗಳು ಸೇರಿದಂತೆ ಹಲವರು ಹಿಂದೂಜಾ ಹೌಸಿಂಗ್ ಫೈನಾನ್ಸ್‌ನಲ್ಲಿ ₹45 ಲಕ್ಷ, ಪಿರಮಲ್ ಹೌಸಿಂಗ್ ಫೈನಾನ್ಸ್‌ನಲ್ಲಿ ₹56 ಲಕ್ಷ, ಈಕ್ವಿಟಾಸ್ ಸ್ಮಾಲ್ ಫೈನಾನ್ಸ್‌ನಲ್ಲಿ ₹25 ಲಕ್ಷ ಸಾಲ ಪಡೆಯಲು ಯೋಜನೆ ರೂಪಿಸಿದ್ದರು. ಆದರಲ್ಲಿ ಫೈನಾನ್ಸ್ ಕಂಪನಿ ಹಾಗೂ ವೈಯಕ್ತಿಕವಾಗಿ ₹80 ಲಕ್ಷ ಸಾಲ ಪಡೆದುಕೊಂಡಿದ್ದರು. ವೈಯಕ್ತಿಕವಾಗಿ ಪಡೆದ ಹಣ ಹಾಗೂ ಫೈನಾನ್ಸ್‌ಗಳಿಂದ ಸಾಲವನ್ನು ವಾಪಸ್ ನೀಡಿರಲಿಲ್ಲವೆಂದು ದೂರು ನೀಡಿದ್ದರು. ದೂರು ಆಧರಿಸಿ ಕಾರ್ಯಾಚರಣೆ ನಡೆಸಲಾಯಿತು’ ಎಂದು ಪೊಲೀಸರು ಹೇಳಿದರು.

ಮೂವರು ಆರೋಪಿಗಳನ್ನು ಬಂಧಿಸಿದ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು

ಸಹೋದ್ಯೋಗಿ ಕೊಲೆಗೆ ₹1 ಲಕ್ಷಕ್ಕೆ ಸುಪಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಹೋದ್ಯೋಗಿಯ ಕೊಲೆಗೆ ಸುಪಾರಿ ಪಡೆದು ಕೊಲೆಗೆ ಯತ್ನಿಸಿದ ಕಿದ್ವಾಯಿ ಆಸ್ಪತ್ರೆಯ ಪ್ರಯೋಗಾಲಯದ ಮುಖ್ಯಸ್ಥ ಸೇರಿದಂತೆ ಆರೋಪಿಗಳನ್ನು ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೆ.ಆರ್. ಪುರಂ ಮೆಡಹಳ್ಳಿ ವಿನಾಯನಗರದ ನಿವಾಸಿ, ಆಸ್ಪತ್ರೆ ಪ್ರಯೋಗಾಲಯದ ಮುಖ್ಯಸ್ಥ ಶ್ರೀಧರ್, ಚಿತ್ರದುರ್ಗದ ಹಿರಿಯೂರು ತಾಲ್ಲೂಕಿನ ಧರ್ಮಪುರದ ಕಂಬತ್ತನಹಳ್ಳಿಯ ಸಿದ್ದೇಶ್ ಹಾಗೂ ಶಿವಮೊಗ್ಗದ ಅಶೋನಗರದ ಜನತಾ ಕಾಲೊನಿ ನಿವಾಸಿ ನಿತೇಶ್ ಬಂಧಿತ ಆರೋಪಿಗಳು.



ನಿತೇಶ್



ಸಿದ್ದೇಶ್



ಶ್ರೀಧರ್

‘ಏಪ್ರಿಲ್ 3ರಂದು ಸುಂಕದಕಟ್ಟೆ ಹೊಯ್ಸಳ ನಗರದ ನಿವಾಸಿ, ಕಿದ್ವಾಯಿ ಆಸ್ಪತ್ರೆಯ ಪ್ರಯೋಗಾಲಯ ತಂತ್ರಜ್ಞ ಚಂದ್ರಕಾಂತ್ (30) ಅವರು ಕೆಲಸಕ್ಕೆಂದು ಸುಂಕದಕಟ್ಟೆಯ ವಿನೋದಪ್ಪ ಬೇಕರಿ ರಸ್ತೆಯಲ್ಲಿ ನಡೆದು ತೆರಳುತ್ತಿದ್ದರು. ಆಗ, ಏಕಾಏಕಿ ಎದುರು ಬಂದ ಆರೋಪಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಕೊಲೆಗೆ ಯತ್ನಿಸಿದ್ದರು. ಆರೋಪಿಗಳಿಂದ ತಪ್ಪಿಸಿಕೊಂಡು ಚಂದ್ರಕಾಂತ್ ಅಪಾಯದಿಂದ ಪಾರಾಗಿದ್ದರು’ ಎಂದು ಪೊಲೀಸರು ಹೇಳಿದರು.

‘ಶ್ರೀಧರ್ ಹಾಗೂ ಚಂದಕಾಂತ್ ಅವರು ಕಿದ್ವಾಯಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಆರೋಪಿ ಶ್ರೀಧರ್, ಕಿದ್ವಾಯಿ ಆಸ್ಪತ್ರೆಯಲ್ಲಿ ಯುವತಿಯೊಬ್ಬಳನ್ನು ಪ್ರೀತಿಸುತ್ತಿದ್ದ. ಆ ಯುವತಿ ಜತೆ ಚಂದ್ರಕಾಂತ್ ಹೆಚ್ಚು ಮಾತನಾಡಿದ್ದರು. ಈ ಸಂಬಂಧ ಹಿಂದೆ ಒಂದೆರಡು ಬಾರಿ ಚಂದ್ರಕಾಂತ್‌ಗೆ ಶ್ರೀಧರ್ ಎಚ್ಚರಿಕೆ ನೀಡಿದ್ದ. ಆದರೆ, ಚಂದ್ರಕಾಂತ್, ಸಹೋದ್ಯೋಗಿ ಮಾತಾಡಿಸುವುದರಲ್ಲಿ ತಪ್ಪೇನಿದೆ ಎಂದು ಹೇಳಿದ್ದ. ಅಂದಿನಿಂದ ಶ್ರೀಧರ್ ಹಾಗೂ ಚಂದ್ರಕಾಂತ್ ನಡುವೆ ವೈಮನಸ್ಸು ಆರಂಭವಾಗಿತ್ತು. ಕೊಲೆಗೆ ಸಂಚು ರೂಪಿಸಿದ್ದ. ಈ ಮಧ್ಯೆ ಪರಿಚಯಸ್ಥ ಸಿದ್ದೇಶ್‌ಗೆ ಘಟನೆ ಕುರಿತು ವಿವರಿಸಿದ್ದ. ಈ ಕೆಲಸ ಮಾಡಿಕೊಟ್ಟರೆ, ಆಸ್ಪತ್ರೆಯಲ್ಲಿ ಕೆಲಸ ಕೊಡಿಸುತ್ತೇನೆ ಎಂದು ಆಮಿಷವೊಡ್ಡಿದ್ದ. ಅದರಂತೆ ಸಿದ್ದೇಶ್ ಹಾಗೂ ನಿತೇಶ್ ಯೋಜನೆ ರೂಪಿಸಿದ್ದರು. ಕೊಲೆಗೆ ₹1 ಲಕ್ಷಕ್ಕೆ ಸುಪಾರಿ ಪಡೆದುಕೊಂಡಿದ್ದರು. ಸುಂಕದಕಟ್ಟೆಯಲ್ಲಿ ಚಂದ್ರಕಾಂತ್ ಅವರು ನಡೆದು ತೆರಳುತ್ತಿದ್ದ ವೇಳೆ ಕೊಲೆಗೆ ಯತ್ನಿಸಿದ್ದರು’ ಎಂದು ಪೊಲೀಸರು ಹೇಳಿದರು.

ಬೆರಗು ಮೂಡಿಸಿದ ವಿವಿಧ ನ್ಯೂನತೆ ಇರುವ ಮಕ್ಕಳ ಫಲಿತಾಂಶ; ವಿಜ್ಞಾನ ವಿಷಯದಲ್ಲಿ ಮೊದಲ ಸ್ಥಾನ ಹುಬ್ಬಳ್ಳಿ ಪಾಲು

ಗ್ರಾಮೀಣ–ನಗರ ವಿದ್ಯಾರ್ಥಿಗಳ ಸಮಬಲ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶದಲ್ಲಿ ಈ ಬಾರಿ ನಗರ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಸಮಬಲ ಸಾಧಿಸಿದ್ದಾರೆ.

ಪರೀಕ್ಷೆಗೆ ಹಾಜರಾಗಿದ್ದ 1.48 ಲಕ್ಷ ಗ್ರಾಮೀಣರಲ್ಲಿ 1.20 ಲಕ್ಷ (ಶೇ 81.31) ವಿದ್ಯಾರ್ಥಿಗಳು, ನಗರ ಪ್ರದೇಶದ 5.32 ಲಕ್ಷ ವಿದ್ಯಾರ್ಥಿಗಳಲ್ಲಿ 4.32 ಲಕ್ಷ (ಶೇ 81.10) ತೇರ್ಗಡೆಯಾಗಿದ್ದಾರೆ. ಕಳೆದ ಬಾರಿ ಗ್ರಾಮೀಣ ವಿದ್ಯಾರ್ಥಿಗಳು ಕೊಂಚ ಮೇಲುಗೈ ಸಾಧಿಸಿದ್ದರು. ಕಳೆದ ಬಾರಿ ಪರೀಕ್ಷೆ ತೆಗೆದುಕೊಂಡಿದ್ದ 5.41 ಲಕ್ಷ ನಗರದ ಮಕ್ಕಳಲ್ಲಿ 4.04 ಲಕ್ಷ ಹಾಗೂ 1.60 ಲಕ್ಷ ಗ್ರಾಮೀಣರಲ್ಲಿ 1.19 ಲಕ್ಷ ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು.

ಆದರೆ, ನಗರ ಪ್ರದೇಶದ ಕಾಲೇಜುಗಳಲ್ಲಿ ಪದವಿಪೂರ್ವ ಶಿಕ್ಷಣಕ್ಕೆ ಸೇರುವ ಮಕ್ಕಳ ಸಂಖ್ಯೆಯಲ್ಲಿ ಗಣನೀಯವಾಗಿ ಏರಿಕೆಯಾಗುತ್ತಿದೆ. ಗ್ರಾಮೀಣ ಕಾಲೇಜುಗಳ ಪ್ರವೇಶ ಕುಸಿಯುತ್ತಾ ಸಾಗಿರುವುದನ್ನು ಫಲಿತಾಂಶ ಸಾಬೀತುಪಡಿಸುತ್ತಿದೆ.

ವಿವಿಧ ನ್ಯೂನತೆ ಇರುವ ಮಕ್ಕಳ ಸಾಧನೆ: ದೃಷ್ಟಿ, ಶ್ರವಣ ದೋಷ ಸೇರಿದಂತೆ ವಿವಿಧ ನ್ಯೂನತೆ ಇರುವ 1,816 ಮಕ್ಕಳ ಪೈಕಿ 1,197 ಮಕ್ಕಳು ಈ ಬಾರಿಯ ದ್ವಿತೀಯ ಪಿಯು ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ದೃಷ್ಟಿದೋಷ ಇರುವ ಶೇ 79.19ರಷ್ಟು ಮಕ್ಕಳು, ಕಲಿಕೆಯಲ್ಲಿ ಹಿಂದುಳಿದಿದ್ದ 108 ಹಾಗೂ ಮಂದ ಬುದ್ಧಿಯ 62 ಮಕ್ಕಳು ಉತ್ತೀರ್ಣರಾಗಿದ್ದಾರೆ. ಬಹು ಅಂಗವೈಕಲ್ಯ ಇದ್ದರೂ 69 ವಿದ್ಯಾರ್ಥಿಗಳು ಯಶಸ್ವಿಯಾಗಿ ಪದವಿಪೂರ್ವ ಶಿಕ್ಷಣವನ್ನು ಪೂರೈಸಿದ್ದಾರೆ. ವಿಜ್ಞಾನ ವಿಷಯದಲ್ಲಿ ಇದುವರೆಗೂ ರಾಜಧಾನಿ ಹಾಗೂ ಕರಾವಳಿ ಕಾಲೇಜು ಗಳ ವಿದ್ಯಾರ್ಥಿಗಳದ್ದೇ ಪಾರುಪತ್ಯ ಇತ್ತು. ಈ ಬಾರಿ ಮೊದಲ ಸ್ಥಾನ ಹುಬ್ಬಳ್ಳಿ ಪಾಲಾಗಿದೆ.

ಎರಡನೇ ಸ್ಥಾನವನ್ನು ನಾಲ್ವರು ಹಂಚಿಕೊಂಡಿದ್ದು, ಅವರಲ್ಲಿ ಇಬ್ಬರು ಮೈಸೂರು ವಿದ್ಯಾರ್ಥಿಗಳು ತಲಾ ಒಬ್ಬರು ಉಡುಪಿ ಹಾಗೂ ದಕ್ಷಿಣ ಕನ್ನಡದವರು. ವಾಣಿಜ್ಯ ವಿಭಾಗದ ಮೊದಲ ಸ್ಥಾನ ತುಮಕೂರಿಗೆ ಒಲಿದಿದೆ. ಎರಡನೇ ಸ್ಥಾನವನ್ನು ನಾಲ್ವರು ಹಂಚಿಕೊಂಡಿದ್ದು, ಶಿವಮೊಗ್ಗ, ಬೆಂಗಳೂರು, ಉಡುಪಿ ಹಾಗೂ ದಕ್ಷಿಣ ಕನ್ನಡದ ತಲಾ ಒಬ್ಬರು ಇದ್ದಾರೆ. ಕಲಾ ವಿಭಾಗದಲ್ಲಿ ವಿಜಯಪುರ, ಬಳ್ಳಾರಿ ಹಾಗೂ ಬೆಂಗಳೂರಿನ ತಲಾ ಒಬ್ಬರು ಮೊದಲ ಸ್ಥಾನ ಹಂಚಿಕೊಂಡಿದ್ದಾರೆ. ಎರಡನೇ ಸ್ಥಾನ ಧಾರವಾಡದ ಪಾಲಾಗಿದೆ. ವಾಣಿಜ್ಯ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದ 11 ವಿದ್ಯಾರ್ಥಿಗಳಲ್ಲಿ ಎಂಟು ಹಾಗೂ ವಿಜ್ಞಾನ ವಿಭಾಗದಲ್ಲಿ ಮೂರನೇ ಸ್ಥಾನ ಪಡೆದ ಐವರಲ್ಲಿ ಮೂವರು ಬೆಂಗಳೂರಿನ ವಿದ್ಯಾರ್ಥಿಗಳು.

ಎರಡನೇ ರ್‍ಯಾಂಕ್: ವಾಣಿಜ್ಯ ವಿಭಾಗ



ತುಳಸಿ ಪೈ, ಕೆನರಾ ಪದವಿಪೂರ್ವ ಕಾಲೇಜು, ಮಂಗಳೂರು



ಹರ್ಷಿತ್, ಪೂರ್ಣ ಪ್ರಜ್ಞ ಪಿಯು ಕಾಲೇಜು, ಉಡುಪಿ



ಎಂ.ಎಸ್. ಪವನ್, ಕುಮದ್ವತಿ ಪದವಿಪೂರ್ವ ಕಾಲೇಜು, ಶಿಕಾರಿಪುರ



ತೇಜಸ್ವಿನಿ ಕೆ. ಕಾಳೆ, ಎಂಇಎಸ್ ಕಾಲೇಜು, ಬೆಂಗಳೂರು

ವಿಜ್ಞಾನ



ಕೆ.ಎಚ್.ಉರ್ವಿಶ್ ಪ್ರಶಾಂತ್, ಕುವೆಂಪುನಗರದ ಆದಿಚುಂಚನಗಿರಿ ಕಾಲೇಜು, ಮೈಸೂರು



ಜಾಹ್ನವಿ ತುಮಕೂರು ಗುರುರಾಜ್, ಆರ್‌ವಿಪಿಬಿ ಕಾಲೇಜು, ಮೈಸೂರು



ವೈಭವಿ ಆಚಾರ್ಯ, ವಿದ್ಯೋದಯ ಪಿಯು ಕಾಲೇಜು, ಉಡುಪಿ

ಕಲಾ



ರವಿನಾ ಲಮಾಣಿ, ಕೆಇಬಿ ಸಂಯುಕ್ತ ಪದವಿಪೂರ್ವ ಕಾಲೇಜು, ಧಾರವಾಡ

ಮೊದಲ 10 ಸ್ಥಾನದ ಜಿಲ್ಲೆಗಳು	ಶೇಕಡವಾರು
ದಕ್ಷಿಣ ಕನ್ನಡ	97.37
ಉಡುಪಿ	96.80
ವಿಜಯಪುರ	94.89
ಉತ್ತರ ಕನ್ನಡ	92.51
ಕೊಡಗು	92.13
ಬೆಂಗಳೂರು ದಕ್ಷಿಣ	89.57
ಬೆಂಗಳೂರು ಉತ್ತರ	88.67
ಶಿವಮೊಗ್ಗ	88.58
ಚಿಕ್ಕಮಗಳೂರು	88.20
ಬೆಂಗಳೂರು ಗ್ರಾಮಾಂತರ	87.55

ರಾಜ್ಯದ ಮೊದಲ 10ರಲ್ಲಿ ಆಳ್ವಾಸ್‌ನ 45 ವಿದ್ಯಾರ್ಥಿಗಳು

ಮೂಡುಬಿದಿರೆ (ದಕ್ಷಿಣ ಕನ್ನಡ): ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ಹಾಗೂ ವಾಣಿಜ್ಯ ವಿಭಾಗದಲ್ಲಿ ರಾಜ್ಯದ ಮೊದಲ 10 ಸ್ಥಾನಗಳಲ್ಲಿ ಇಲ್ಲಿನ ಆಳ್ವಾಸ್ ಕಾಲೇಜಿನ ಒಟ್ಟು 45 ವಿದ್ಯಾರ್ಥಿಗಳು ಇದ್ದಾರೆ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ತಿಳಿಸಿದರು.

ಸಂಸ್ಥೆಯ 682 ವಿದ್ಯಾರ್ಥಿಗಳು ಶೇ 95ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ನೂತನ ಆರ್. ಗೌಡ 595 ಅಂಕ ಪಡೆದು ರಾಜ್ಯಕ್ಕೆ 4ನೇ ಸ್ಥಾನ, ವಾಣಿಜ್ಯ ವಿಭಾಗದಲ್ಲಿ ತರುಣ್ ಕುಮಾರ್ ಪಾಟೀಲ 594 ಅಂಕ ಪಡೆದು 4ನೇ ಸ್ಥಾನ ಗಳಿಸಿದ್ದಾರೆ ಎಂದು ಅವರು ವಿವರಿಸಿದರು.

ಆಕಾಶ್ ಪಿ.ಎಸ್., ಅನಿರುದ್ಧ ಪಿ.ಮೆನನ್, ಸುಮಿತ್ ಹಾಗೂ ಸುಧೀಂದ್ರ 5ನೇ ರ್‍ಯಾಂಕ್. ಸಹನಾ ಕೆ ಮತ್ತು ಶಿವಪೇಶ 6ನೇ ರ್‍ಯಾಂಕ್. ವಾಣಿ ಕೆ., ಮೇಧಾ ವಿ., ಜೀವಿಕಾ ಎಸ್., ಹರೀಶ್ ಉದಯ್, ಭೂಮಿ, ಷಾನ್ ಪಿಂಟೊ, ಅಶೋಕ್ ಸುತಾರ್ ಮತ್ತು ಮಂಜುನಾಥ ಡಿ. 7ನೇ ರ್‍ಯಾಂಕ್ ಗಳಿಸಿದ್ದಾರೆ. ಕಾಲೇಜಿನ 5 ವಿಶೇಷ ಚೇತನ ವಿದ್ಯಾರ್ಥಿಗಳು ಉತ್ತಮ ಅಂಕ ಗಳಿಸಿದ್ದಾರೆ ಎಂದು ಅವರು ತಿಳಿಸಿದರು.

9 ವಿದ್ಯಾಥಿಗಳು 4 ವಿಷಯಗಳಲ್ಲಿ, 38 ವಿದ್ಯಾರ್ಥಿಗಳು 3 ವಿಷಯಗಳಲ್ಲಿ, 148 ವಿದ್ಯಾಥಿಗಳು 2 ವಿಷಯಗಳಲ್ಲಿ, 571 ವಿದ್ಯಾರ್ಥಿಗಳು 1 ವಿಷಯದಲ್ಲಿ ಶೇ100 ಅಂಕ ಪಡೆದಿದ್ದಾರೆ ಎಂದರು. ಪ್ರಾಂಶುಪಾಲ ಪ್ರೊ.ಎಂ. ಸದಾಕತ್, ವಾಣಿಜ್ಯ ವಿಭಾಗದ ಡೀನ್ ಪ್ರಶಾಂತ್ ಎಂ.ಡಿ. ಇದ್ದರು.

ಪಿಯು ಫಲಿತ: ದಾಖಲೆ ಜಿಗಿತ

ಒಂದನೇ ಪುಟದಿಂದ...

3.21 ಲಕ್ಷ ಬಾಲಕರಲ್ಲಿ 2.47 ಲಕ್ಷ (76.98) ಬಾಲಕರು ತೇರ್ಗಡೆಯಾಗಿದ್ದಾರೆ. ಕನ್ನಡ ಮಾಧ್ಯಮದವರಿಗಿಂತ (ಶೇ 70.41) ಇಂಗ್ಲಿಷ್ ಮಾಧ್ಯಮದ ವಿದ್ಯಾರ್ಥಿಗಳ ತೇರ್ಗಡೆ ಪ್ರಮಾಣವು ಶೇ 17ರಷ್ಟು ಹೆಚ್ಚು.

ಈ ಬಾರಿಯೂ ದಕ್ಷಿಣ ಕನ್ನಡ ಜಿಲ್ಲೆ ಅತ್ಯಧಿಕ ತೇರ್ಗಡೆಯ ಫಲಿತಾಂಶ (ಶೇ 97.37) ಪಡೆಯುವ ಮೂಲಕ ಮೊದಲ ಸ್ಥಾನ ಉಳಿಸಿಕೊಂಡಿದೆ. ಉಡುಪಿ ಎರಡನೇ ಸ್ಥಾನದಲ್ಲಿದ್ದರೆ (ಶೇ 96.80), ಗದಗ ಜಿಲ್ಲೆ (ಶೇ 72.86) ಕೊನೆಯ ಸ್ಥಾನದಲ್ಲಿದೆ. ಮಾರ್ಚ್‌1ರಿಂದ 22ರವರೆಗೆ 1,124 ಕೇಂದ್ರಗಳಲ್ಲಿ ಪರೀಕ್ಷೆ ನಡೆದಿತ್ತು. 36 ಸಾವಿರ ಪುನರಾವರ್ತಿತರು, 22 ಸಾವಿರ ಖಾಸಗಿ ವಿದ್ಯಾರ್ಥಿಗಳು ಸೇರಿದಂತೆ 6.81 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದರು.

ವಿಜ್ಞಾನ ವಿದ್ಯಾರ್ಥಿಗಳೇ ಅಧಿಕ:

ವಿಜ್ಞಾನ ವಿದ್ಯಾರ್ಥಿಗಳು ಅಧಿಕ ಸಂಖ್ಯೆಯಲ್ಲಿ ತೇರ್ಗಡೆಯಾಗಿದ್ದಾರೆ. ಶೇ 89.96ರಷ್ಟು ತೇರ್ಗಡೆಯಾಗಿ, ಒಟ್ಟಾರೆ ಫಲಿತಾಂಶಕ್ಕಿಂತ 8.71ರಷ್ಟು ಹೆಚ್ಚು ಮುಂದಿದ್ದಾರೆ. ಕಲಾ ವಿದ್ಯಾರ್ಥಿಗಳು ಶೇ 68.36 ಹಾಗೂ ವಾಣಿಜ್ಯ ವಿದ್ಯಾರ್ಥಿಗಳು ಶೇ 80.94ರಷ್ಟು ತೇರ್ಗಡೆಯಾಗಿದ್ದಾರೆ.

1.53 ಲಕ್ಷ ವಿದ್ಯಾರ್ಥಿಗಳು ಶೇ 85ಕ್ಕಿಂತ ಹೆಚ್ಚು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ, 2.89 ಲಕ್ಷ ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ, 72,098 ವಿದ್ಯಾರ್ಥಿಗಳು ದ್ವಿತೀಯ ಹಾಗೂ 37,489 ವಿದ್ಯಾರ್ಥಿಗಳು ತೃತೀಯ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ.

ಖಾಸಗಿ ಕಾಲೇಜುಗಳ ಮೇಲುಗೈ:

ಫಲಿತಾಂಶದಲ್ಲಿ ಖಾಸಗಿ ಕಾಲೇಜುಗಳೇ ಈ ಬಾರಿಯೂ ಮೇಲುಗೈ ಸಾಧಿಸಿವೆ. ಖಾಸಗಿ ಕಾಲೇಜುಗಳು ಶೇ 90.46ರಷ್ಟು ಫಲಿತಾಂಶ ಪಡೆದರೆ, ಅನುದಾನಿತ ಕಾಲೇಜುಗಳಿಗೆ ಶೇ 79.82 ಹಾಗೂ ಸರ್ಕಾರಿ ಕಾಲೇಜುಗಳಿಗೆ ಶೇ 75.29ರಷ್ಟು ಫಲಿತಾಂಶ ಬಂದಿದೆ.

35 ಕಾಲೇಜುಗಳಿಗೆ ಶೂನ್ಯ ಫಲಿತಾಂಶ

ರಾಜ್ಯದಲ್ಲಿ 35 ಕಾಲೇಜುಗಳು ಶೂನ್ಯ ಫಲಿತಾಂಶ ಪಡೆದಿವೆ. ಅವುಗಳಲ್ಲಿ 26 ಖಾಸಗಿ ಕಾಲೇಜುಗಳು. ಎರಡು ಸರ್ಕಾರಿ, ಆರು ಅನುದಾನಿತ ಹಾಗೂ ಒಂದು ವಿಭಜಿತ ಕಾಲೇಜು ಶೂನ್ಯ ಫಲಿತಾಂಶ ಪಡೆದಿವೆ.

345 ಖಾಸಗಿ, 91 ಸರ್ಕಾರಿ ಹಾಗೂ 26 ಅನುದಾನಿತ ಸೇರಿದಂತೆ 463 ಕಾಲೇಜುಗಳು ಶೇ 100ರಷ್ಟು ಫಲಿತಾಂಶ ಪಡೆದಿವೆ.

2ನೇ ಪರೀಕ್ಷೆಗೆ ಶುಲ್ಕ: ಏ.17 ಕೊನೆ ದಿನ

ತೇರ್ಗಡೆಯಾಗದ ವಿದ್ಯಾರ್ಥಿಗಳು ಫಲಿತಾಂಶ ಉತ್ತಮಪಡಿಸಿಕೊಳ್ಳಲು ಪರೀಕ್ಷೆ–2ಕ್ಕೆ ಅರ್ಜಿ ಸಲ್ಲಿಸಬಹುದು. ಎರಡು ಪರೀಕ್ಷೆಗಳಲ್ಲಿ ಯಾವುದರಲ್ಲಿ ಹೆಚ್ಚು ಅಂಕ ಇರುತ್ತದೆಯೋ ಆ ಅಂಕಪಟ್ಟಿ ಪಡೆಯಬಹುದು ಎಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧ್ಯಕ್ಷೆ ಎನ್.ಮಂಜುಶ್ರೀ ಹೇಳಿದರು.

ಮೊದಲ ಹಾಗೂ ಎರಡನೇ ಪರೀಕ್ಷೆಯಲ್ಲಿ ಯಾವ ಯಾವ ವಿಷಯಗಳಲ್ಲಿ ಹೆಚ್ಚು ಅಂಕ ಬಂದಿರುತ್ತದೆಯೋ ಅದನ್ನೇ ಪಡೆಯಬಹುದು. ಎರಡೂ ಪರೀಕ್ಷೆಗಳ ಅಂಕಗಳು ತೃಪ್ತಿಯಾಗದಿದ್ದರೆ ಮೂರನೇ ಪರೀಕ್ಷೆ ತೆಗೆದುಕೊಳ್ಳಬಹುದು. ಹಾಗೆಯೇ, ಅನುತ್ತೀರ್ಣರಾದವರು ಮರು ಪರೀಕ್ಷೆ ಬರೆಯಬಹುದು. ಮರು ಮೌಲ್ಯಮಾಪನಕ್ಕೂ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ಪರೀಕ್ಷೆ–2ಕ್ಕೆ ಅರ್ಜಿ ಸಲ್ಲಿಸಲು ಮರುಮೌಲ್ಯಮಾಪನದ ಫಲಿತಾಂಶದವರೆಗೆ ಕಾಯುವ ಅಗತ್ಯವಿಲ್ಲ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಯಾವುದಕ್ಕೆ ಯಾವಾಗ ಕೊನೆಯ ದಿನ?

ಏ.16	ಉತ್ತರ ಪತ್ರಿಕೆಗಳ ಛಾಯಾ (ಸ್ಕ್ಯಾನ್ಡ್) ಪ್ರತಿ
ಏ.19	ಛಾಯಾ ಪ್ರತಿ ಡೌನ್‌ಲೋಡ್
ಏ.20	ಮರು ಮೌಲ್ಯಮಾಪನ/ಎಣಿಕೆ
ಏ.17	ಪರೀಕ್ಷೆ–2ಗೆ ಅರ್ಜಿ ಸಲ್ಲಿಕೆ
ಏ.20	ದಂಡ ಸಹಿತ ಅರ್ಜಿ ಸಲ್ಲಿಕೆ

ಯಾವುದಕ್ಕೆ ಎಷ್ಟು ಶುಲ್ಕ (ಪ್ರತಿ ವಿಷಯಕ್ಕೆ ₹ಗಳಲ್ಲಿ)

ಛಾಯಾಪ್ರತಿ ಪಡೆಯಲು	530
ಮರು ಮೌಲ್ಯಮಾಪನ	1,670
ಎರಡನೇ ಪರೀಕ್ಷೆ	175
ಪುನರಾವರ್ತಿತರಿಗೆ	140 (ಗರಿಷ್ಠ 400)
ಮರು ಎಣಿಕೆ	ಉಚಿತ

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕಾಗಿನೆಲೆ ಕನಕ ಗುರುಪೀಠದ ಹೊಸದುರ್ಗ ಶಾಖಾ ಮಠದಿಂದ ಕುರುಬ ಸಮಾಜದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ಇದೇ ಸಾಲಿನ ಎಸ್ಸೆಸ್ಸೆಲ್ಸಿ, ಪಿಯು ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದಿರುವವರು ಅರ್ಜಿ ಸಲ್ಲಿಸಬಹುದು. ಅಂಕಪಟ್ಟಿ, ವರ್ಗಾವಣೆ ಪತ್ರಗಳ ಜೆರಾಕ್ಸ್ ಪ್ರತಿಯನ್ನು ಅಂಚೆ ಮೂಲಕ ಶ್ರೀಮದ್ ಜಗದ್ಗುರು ರೇವಣಸಿದ್ದೇಶ್ವರ ಸಿಂಹಾಸನ, ಕಾಗಿನೆಲೆ ಮಹಾಸಂಸ್ಥಾನ ಕನಕಗುರುಪೀಠ ಶಾಖಾಮಠ ಬೆಂಗಳೂರು, ಕನಕ ಭವನ 10ನೇ ಅಡ್ಡರಸ್ತೆ ಚಂದ್ರಾಲೇಔಟ್ 1ನೇ ಹಂತ ಬೆಂಗಳೂರು 560072 ಇಲ್ಲಿಗೆ ಜುಲೈ 12ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಮಾಹಿತಿಗೆ: 9036597972

ಕೂಲಿಕಾರನ ಮಗಳಿಗೆ 5ನೇ ರ್‍ಯಾಂಕ್



ಕಾವೇರಿ ಶಿವಪ್ಪ

ಲಿಂಗಸುಗೂರು (ರಾಯಚೂರು ಜಿಲ್ಲೆ): ಇಲ್ಲಿನ ಉಮಾ ಮಹೇಶ್ವರಿ ಪದವಿ ಪೂರ್ವ ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿನಿ ಕಾವೇರಿ ಶಿವಪ್ಪ ಅವರು ದ್ವಿತೀಯ ಪಿಯು ಪರೀಕ್ಷೆಯಲ್ಲಿ 600ಕ್ಕೆ 592 ಅಂಕ ಗಳಿಸಿ ರಾಜ್ಯಕ್ಕೆ 5ನೇ ರ್‍ಯಾಂಕ್ ಪಡೆದಿದ್ದಾರೆ.

ಲಿಂಗಸುಗೂರು ತಾಲ್ಲೂಕಿನ ಭೂಪುರ ತಾಂಡಾದ ಕೃಷಿ ಕೂಲಿಕಾರ ಶಿವಪ್ಪ ಅವರ ಮಗಳು ಕಾವೇರಿ ರಾಜ್ಯ ಮಟ್ಟದಲ್ಲಿ ಸಾಧನೆ ಮಾಡಿ ತಾಂಡಾದ ಕೀರ್ತಿ ಹೆಚ್ಚಿಸಿದ್ದಾರೆ ಎಂದು ತಾಂಡಾದ ನಿವಾಸಿಗಳು ಹರ್ಷ ವ್ಯಕ್ತಪಡಿಸಿದ್ದಾರೆ.

‘ಪ್ರಜಾವಾಣಿ’ ಜೊತೆ ಮಾತನಾಡಿದ ಕಾವೇರಿ, ‘ಇಷ್ಟೊಂದು ಅಂಕ ನಿರೀಕ್ಷೆ ಮಾಡಿರಲಿಲ್ಲ. ಕಾಲೇಜಿನಲ್ಲಿ ಉಪನ್ಯಾಸಕರ ಬೋಧನೆ ಸರಿಯಾಗಿ ಆಲಿಸಿ, ಪರಿಶ್ರಮ ಪಟ್ಟು ಓದಿರುವೆ. ಐಎಎಸ್ ಅಧಿಕಾರಿಯಾಗುವ ಗುರಿ ಇಟ್ಟುಕೊಂಡಿರುವೆ’ ಎಂದರು.

ಗಂಭೀರ ಕಾಯಿಲೆ ನಡುವೆಯೂ ಶೇ 87 ಅಂಕ

ಪ್ರಜಾವಾಣಿ ವಾರ್ತೆ



ದೈವಿಕ್

ಮಂಡ್ಯ: ಕೈ ಮತ್ತು ಕಾಲಿನ ಕೆಳಭಾಗದ ಸ್ನಾಯುಗಳಲ್ಲಿ ನಿಶ್ಯಕ್ತಿ ಮೂಡಿಸಿ, ಕ್ರಮೇಣ ದೇಹವಿಡೀ ಹಬ್ಬಿ, ಅಂಗಾಂಗಗಳ ಮೇಲೆ ದುಷ್ಪರಿಣಾಮ ಬೀರುವ ಗಂಭೀರ ಕಾಯಿಲೆ (ಡಿಸ್ಟಲ್ ಮಸ್ಕ್ಯುಲರ್ ಡಿಸ್ಟ್ರೊಫಿ)ಯಿಂದ ಬಳಲುತ್ತಿರುವ, ನಗರದ ಸೇಂಟ್ ಜಾನ್ಸ್ ಸಂಯುಕ್ತ ಪದವಿ ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ ದೈವಿಕ್ ಶೇಕಡಾ 87 ರಷ್ಟು ಅಂಕ ಗಳಿಸಿದ್ದಾನೆ.

ಕಳೆದ ಜನವರಿ-ಫೆಬ್ರವರಿಯಲ್ಲಿ ತೀವ್ರ ಉಸಿರಾಟದ ತೊಂದರೆಗೆ ಒಳಗಾಗಿ, ಸಾವು-ಬದುಕಿನೊಂದಿಗೆ ಹೋರಾಡಿ ಸ್ವಲ್ಪ ಮಟ್ಟಿಗೆ ಚೇತರಿಸಿಕೊಂಡು ಆತ ಪರೀಕ್ಷೆ ಬರೆದಿದ್ದ ಎಂದು ವಿದ್ಯಾರ್ಥಿಯ ತಂದೆ, ಮಂಡ್ಯ ನಗರದ ಸ್ವರ್ಣಸಂದ್ರದ ನಿವಾಸಿ ಶ್ರೀನಿವಾಸ್ ತಿಳಿಸಿದ್ದಾರೆ. ಅವರಿಗೆ ನಗರದಲ್ಲಿ ಸ್ಟೇಷನರಿ ಅಂಗಡಿ ಇದೆ. ‘ದೈವಿಕ್ ನನ್ನ ಮಗನೆಂದು ಹೇಳಲು ಹೆಮ್ಮೆ ಎನಿಸುತ್ತದೆ. ಆರೋಗ್ಯ ಸಮಸ್ಯೆ ಲೆಕ್ಕಿಸದೇ ಉತ್ತಮ ಅಂಕ ಗಳಿಸಿ ಇತರರಿಗೂ ಪ್ರೇರಣೆಯಾಗಿರುವುದು ಖುಷಿ ತಂದಿದೆ’ ಎಂದು ಅವರು ತಿಳಿಸಿದರು.

ತಾಯಿ, ಮಗಳು ಉತ್ತೀರ್ಣ

ಪ್ರಜಾವಾಣಿ ವಾರ್ತೆ

ಗೋಣಿಕೊಪ್ಪಲು (ಕೊಡಗು): ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ತಾಯಿ ಮತ್ತು ಮಗಳು ಉತ್ತೀರ್ಣರಾಗಿದ್ದಾರೆ.

ಮಗಳು ಟಿ.ಎಸ್.ರಿನಿಶಾ ಅರುವತ್ತೊಕ್ಕಲಿನ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ 570 ಅಂಕ ಗಳಿಸಿದ್ದರೆ, ತಾಯಿ ಎಂ.ಯು. ಬೇಬಿರಾಣಿ ಅವರು ನೆಲ್ಲಿಹುದಿಕೇರಿ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಕಲಾ ವಿಭಾಗದಲ್ಲಿ ಖಾಸಗಿಯಾಗಿ ಪರೀಕ್ಷೆ ಬರೆದು 388 ಅಂಕ ಗಳಿಸಿದ್ದಾರೆ. ರಿನಿಶಾ ಕನ್ನಡದಲ್ಲಿ 96 ಅಂಕ, ಬೇಬಿರಾಣಿ 93 ಅಂಕ ಪಡೆದಿದ್ದಾರೆ.



ರಿನಿಶಾ, ಬೇಬಿರಾಣಿ

ಸೌಂದರ್ಯ ಕಾಲೇಜಿನ ಸಾಧನೆ

ಪೀಣ್ಯ ದಾಸರಹಳ್ಳಿ: ಹಾವನೂರು ಬಡಾವಣೆಯ ಸೌಂದರ್ಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿನಿ ಐಮನ್ ಫಾತಿಮಾ ಅವರು ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ 592 (ಶೇ 98.66) ಅಂಕಗಳನ್ನು ಪಡೆದು ರಾಜ್ಯಕ್ಕೆ ಐದನೇ ಸ್ಥಾನ ಪಡೆದಿದ್ದಾರೆ.

ವಿಕಾಸ್ ಬಿ.ಆರ್. ಶೇ 98.5, ಪೂಜಾ ಎಂ., ಶಿಲ್ಪಾ ಎಸ್. ತಲಾ ಶೇ 98.33 ಅಂಕ ಪಡೆದಿದ್ದಾರೆ. ವಿಜ್ಞಾನ ವಿಭಾಗದ ವಿದ್ಯಾರ್ಥಿ ಕೆ. ದೀಪಾಂಕರ್ ವಸಂತ್ ಶೇ 98.66 ಅಂಕ ಗಳಿಸಿದ್ದಾರೆ.

ಎಕ್ಸ್‌ಪರ್ಟ್: ಫಲಿತಾಂಶದಲ್ಲಿ ಸಾಧನೆ

ಪ್ರಜಾವಾಣಿ ವಾರ್ತೆ

ಮಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ಕೊಡಿಯಾಲ್‌ಬೈಲ್ ಹಾಗೂ ವಳಚ್ಚಿಲ್‌ನ ಎಕ್ಸ್‌ಪರ್ಟ್ ಪದವಿ ಪೂರ್ವ ಕಾಲೇಜುಗಳು ಶೇ 100 ಫಲಿತಾಂಶ ದಾಖಲಿಸಿವೆ.

ಶೇ 99.94ರಷ್ಟು ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಪರೀಕ್ಷೆ ಬರೆದಿದ್ದ ಒಟ್ಟು 1,560 ವಿದ್ಯಾರ್ಥಿಗಳಲ್ಲಿ 23 ವಿದ್ಯಾರ್ಥಿಗಳು 590ಕ್ಕಿಂತ ಅಧಿಕ ಅಂಕ, 193 ವಿದ್ಯಾರ್ಥಿಗಳು 580ಕ್ಕಿಂತ ಅಧಿಕ, 400 ವಿದ್ಯಾರ್ಥಿಗಳು ಶೇ 95ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ.

982 ಮಕ್ಕಳು ಶೇ 90ಕ್ಕಿಂತ ಅಧಿಕ, 1,286 ಮಕ್ಕಳು ಶೇ 85ಕ್ಕಿಂತ ಅಧಿಕ ಹಾಗೂ 1,455 ವಿದ್ಯಾರ್ಥಿಗಳು ಶೇ 80ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ. 8 ವಿದ್ಯಾರ್ಥಿಗಳು ನಾಲ್ಕು ವಿಷಯಗಳಲ್ಲಿ, 48 ವಿದ್ಯಾರ್ಥಿಗಳು ಮೂರು ವಿಷಯಗಳಲ್ಲಿ, 113 ವಿದ್ಯಾರ್ಥಿಗಳು ಎರಡು ವಿಷಯಗಳಲ್ಲಿ ಹಾಗೂ 253 ವಿದ್ಯಾರ್ಥಿಗಳು ಒಂದು ವಿಷಯದಲ್ಲಿ ನೂರಕ್ಕೆ ನೂರು ಅಂಕ ಪಡೆದಿದ್ದಾರೆ.

ನಿಖಿತಾ ವೈ. ರೇವದಕುಂಡಿ (595 ಅಂಕ) ರಾಜ್ಯ ಮಟ್ಟದಲ್ಲಿ ನಾಲ್ಕನೇ ರ್‍ಯಾಂಕ್, ಶಾಶ್ವತಿ, ವಿ. ಅಕ್ಷತಾ ಕಾಮತ್, ಪಲ್ಲವಿ ಟಿ.ಎಸ್. (594 ಅಂಕ) ರಾಜ್ಯಕ್ಕೆ ಐದನೇ ರ್‍ಯಾಂಕ್ ಪಡೆದಿದ್ದಾರೆ ಎಂದು ಸಂಸ್ಥೆಯ ಅಧ್ಯಕ್ಷ ನರೇಂದ್ರ ಎಲ್. ನಾಯಕ್ ತಿಳಿಸಿದ್ದಾರೆ.



ರಥೋತ್ಸವ ಶ್ರೀಶೈಲ ಮಲ್ಲಿಕಾರ್ಜುನ ಜಾತ್ರಾ ಮಹೋತ್ಸವದ ಪ್ರಯುಕ್ತ ಆಂಧ್ರಪ್ರದೇಶದ ಶ್ರೀಶೈಲದಲ್ಲಿ ಮಂಗಳವಾರ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ರಥೋತ್ಸವ ವಿಜೃಂಭಣೆಯಿಂದ ಜರುಗಿತು ಪ್ರಜಾವಾಣಿ ಚಿತ್ರ- ಸಂಗಮೇಶ ಹೂಗಾರ

ಸಿಇಟಿ: ಶುಲ್ಕ ಪಾವತಿಗೆ ಕೊನೆಯ ಅವಕಾಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ್ದು, ಶುಲ್ಕ ಪಾವತಿಸದ ಅಭ್ಯರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಮತ್ತೊಂದು ಅವಕಾಶ ನೀಡಿದೆ.

ಇದುವರೆಗೂ ಶುಲ್ಕ ಪಾವತಿಸದೆ ಇರುವ ಅಭ್ಯರ್ಥಿಗಳು ಏ.10ರ ಬೆಳಿಗ್ಗೆಯಿಂದ ಏ.12ರ ಸಂಜೆ 5ರ ಒಳಗೆ ಶುಲ್ಕ ಪಾವತಿಸಬಹುದು. 'ಕಾರ್ಯ ನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ-ಬೆಂಗಳೂರು' ಇವರ ಹೆಸರಿಗೆ ₹600 ಮೊತ್ತದ ಡಿಡಿ ತೆಗೆಸಿಕೊಂಡು, ಸಿಇಟಿ ಅರ್ಜಿ ನಮೂನೆ ಸಹಿತ ಪ್ರಾಧಿಕಾರದ ಕಚೇರಿಗೆ ಖುದ್ದಾಗಿ ಹಾಜರಾಗಬಹುದು ಎಂದು ಪ್ರಾಧಿಕಾರ ಹೇಳಿದೆ.

ಅರ್ಜಿಯಲ್ಲಿ ಕೆಲವರು ಕೇವಲ ನೀಟ್ ಆಯ್ಕೆ ಮಾಡಿಕೊಂಡಿದ್ದು, ಅಂತಹವರು ಸಿಇಟಿ ಆಯ್ಕೆ ಮಾಡಿಕೊಳ್ಳಲು ಏ.12ರ ಸಂಜೆ 5ರ ಒಳಗೆ ಪ್ರಾಧಿಕಾರಕ್ಕೆ ಹಾಜರಾಗಿ ಅರ್ಜಿ ಸಲ್ಲಿಸಬಹುದು. ಹೀಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ರಾಜ್ಯದ ಯಾವುದೇ ಭಾಗದಲ್ಲಿ ಖಾಲಿ ಇರುವ ಪರೀಕ್ಷಾ ಕೇಂದ್ರಗಳಲ್ಲಿ ಅವಕಾಶ ಕೊಡಲಾಗುತ್ತದೆ ಎಂದು ಕೆಇಎ ತಿಳಿಸಿದೆ.

ಪ್ರವೇಶ ಪತ್ರ ಪಡೆಯಲು ಸೂಚನೆ: ಸಿಇಟಿ ಪರೀಕ್ಷೆಗೆ ಅರ್ಜಿ ಹಾಕಿರುವ ಇನ್ನೂ ಸುಮಾರು 50 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳು ಪ್ರವೇಶ ಪತ್ರವನ್ನು ಡೌನ್ಲೋಡ್ ಮಾಡಿಕೊಂಡಿಲ್ಲ ಎಂದು ಕೆಇಎ ಹೇಳಿದೆ.

ಸಿಇಟಿಗೆ 3,27,384 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಇದುವರೆಗೆ 2,76,495 ವಿದ್ಯಾರ್ಥಿಗಳು ಪ್ರವೇಶ ಪತ್ರ ಡೌನ್ಲೋಡ್ ಮಾಡಿಕೊಂಡಿದ್ದಾರೆ.

ಎದೆ ಹಾಲು ಮಾರಾಟ ಆರೋಪ ಮಾಹಿತಿಗೆ ಹೈಕೋರ್ಟ್ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಾಯಂದಿರ ಎದೆಹಾಲು ಸಂಗ್ರಹಣೆ ಹಾಗೂ ಮಾರಾಟ ಚಟುವಟಿಕೆ ತಡೆಯುವಂತಹ ನಿರ್ದಿಷ್ಟ ಕಾನೂನುಗಳು ಜಾರಿಯಲ್ಲಿವೆಯೇ ಎಂಬ ಬಗ್ಗೆ ಅಧ್ಯಯನ ನಡೆಸಿ ಮಾಹಿತಿ ಸಲ್ಲಿಸಿ’ ಎಂದು ಹೈಕೋರ್ಟ್, ಪ್ರಕರಣದ ಅರ್ಜಿದಾರರ ಪರ ವಕೀಲರಿಗೆ ನಿರ್ದೇಶಿಸಿದೆ.

ಈ ಸಂಬಂಧ ನಗರದ ಮರಳಕುಂಟೆಯ ಮುನೇಗೌಡ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಬಿ.ವಿಶ್ವೇಶ್ವರಯ್ಯ ‘ಕೆಲವು ಬಹುರಾಷ್ಟ್ರೀಯ ಕಂಪನಿಗಳು ತಾಯಂದಿರ ಎದೆಹಾಲು ಸಂಗ್ರಹಿಸಿ ಮಾರಾಟ ಮಾಡುತ್ತಿವೆ. ಇದರಿಂದ ವಾಣಿಜ್ಯ ಪ್ರಯೋಜನ ಪಡೆಯುತ್ತಿವೆ. ನೈತಿಕ ನಿಯಮಗಳಿಗೆ ವಿರುದ್ಧವಾದ ಇಂತಹ ಚಟುವಟಿಕೆಯನ್ನು ತಡೆಯಬೇಕು. ಈ ಸಂಬಂಧ ನಿರ್ದಿಷ್ಟ ಕಾನೂನು ರೂಪಿಸಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ತಾಯಂದಿರ ಎದೆಹಾಲು ಸಂಗ್ರಹಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಯಾವುದಾದರೂ ನಿರ್ದಿಷ್ಟ ಘಟನೆ ನಡೆದಿರುವುದು ನಿಮಗೆ ಕಂಡುಬಂದಿದೆಯೇ? ಅಂತೆಯೇ ಇಂತಹ ಚಟುವಟಿಕೆಯನ್ನು ತಡೆಯಲು ದೇಶದ ಯಾವುದಾದರೂ ರಾಜ್ಯಗಳು ಅಥವಾ ವಿದೇಶಗಳಲ್ಲಿ ಸ್ಪಷ್ಟವಾದ ಕಾನೂನುಗಳು ಇವೆಯೇ? ಎಂದು ಪ್ರಶ್ನಿಸಿತು. ಇದಕ್ಕೆ ವಿಶ್ವೇಶ್ವರಯ್ಯ, ‘ನಾನು ಈತನಕ ನಡೆಸಿರುವ ಅಧ್ಯಯನದ ಪ್ರಕಾರ ಅಂತಹ ಯಾವುದೇ ಕಾನೂನು ಇಲ್ಲ’ ಎಂದರು.

ಇದಕ್ಕೆ ನ್ಯಾಯಪೀಠ, ‘ಇದೊಂದು ಪ್ರಮುಖವಾದ ವಿಚಾರ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಹಾಗಾಗಿ, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತಷ್ಟು ಅಧ್ಯಯನ ನಡೆಸಿ ನ್ಯಾಯಾಲಯಕ್ಕೆ ಮಾಹಿತಿ ಸಲ್ಲಿಸಿ’ ಎಂದು ಸೂಚಿಸಿ ವಿಚಾರಣೆಯನ್ನು ಜೂನ್ 10ಕ್ಕೆ ಮುಂದೂಡಿತು.

ಪ್ರಕರಣದಲ್ಲಿ; ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಆಯುಷ್, ಕಾನೂನು, ಆರೋಗ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗಳ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಮಾನವ ಹಕ್ಕುಗಳ ಆಯೋಗದ ಮುಖ್ಯಸ್ಥರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

ಅರ್ಜಿಯಲ್ಲಿ ಏನಿದೆ?: ‘ಕೆಲ ಖಾಸಗಿ ಸಂಸ್ಥೆಗಳು ಗ್ರಾಮಾಂತರ ಪ್ರದೇಶಗಳಲ್ಲಿ ತಾಯಂದಿರಿಗೆ ಹಣ ನೀಡಿ ಎದೆಹಾಲು ಸಂಗ್ರಹಿಸಿ, ನಂತರ ಅದನ್ನು ಪೌಡರ್ ರೂಪದಲ್ಲಿ ದೇಶದಾದ್ಯಂತ ಮಾರಾಟ ಮಾಡುತ್ತಿವೆ. ತಾಯಂದಿರ ಎದೆಹಾಲನ್ನು ನವಜಾತ ಶಿಶುಗಳಿಗೆ ಉಣಿಸಲು ಮಾತ್ರವೇ ಬಳಸಬಹುದು. ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಕ್ಕೆ ಬಳಸಬಾರದು ಎಂದು ಆರೋಗ್ಯ ಇಲಾಖೆಯಡಿ ಕಾರ್ಯ ನಿರ್ವಹಿಸುವ ಹಾಲುಣಿಸುವ ನಿರ್ವಹಣಾ ಕೇಂದ್ರಗಳಿಗೆ 2017ರಲ್ಲಿಯೇ ಮಾರ್ಗಸೂಚಿ ನಿಗದಿಪಡಿಸಲಾಗಿದೆ’ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

‘ತಾಯಿಯ ಎದೆಹಾಲನ್ನು ಮಾರಾಟ ಮಾಡಿದರೆ, ಶಿಶುಗಳ ಆರೋಗ್ಯ ಮತ್ತು ಬೆಳವಣಿಗೆಯ ಮೇಲೆ ದುಷ್ಪರಿಣಾಮ ಬೀರಲಿದೆ. ಆದ್ದರಿಂದ, ತಾಯಂದಿರ ಎದೆಹಾಲು ಸಂಗ್ರಹಿಸುವ ಹಾಗೂ ಮಾರಾಟ ಮಾಡುವ ಮತ್ತು ನೈತಿಕ ನಿಯಮಗಳಿಗೆ ವಿರುದ್ಧವಾದ ಇಂತಹ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ತಡೆಯುವ ಅಗತ್ಯವಿದೆ. ಈ ದಿಸೆಯಲ್ಲಿ ಸಮಗ್ರ ತನಿಖೆ ನಡೆಯಬೇಕು. ಎದೆಹಾಲು ಸಂಗ್ರಹಣೆ ಹಾಗೂ ಮಾರಾಟದಿಂದ ಖಾಸಗಿ ಕಂಪನಿಗಳು ಗಳಿಸಿರುವ ಲಾಭವನ್ನು ವಸೂಲಿ ಮಾಡಲು ಸರ್ಕಾರಕ್ಕೆ ನಿರ್ದೇಶಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಧಾರವಾಡ, ಬೆಳಗಾವಿ, ವಿಜಯನಗರದಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಧಾರವಾಡ, ಬೆಳಗಾವಿ ಮತ್ತು ವಿಜಯ ನಗರ ಜಿಲ್ಲೆಯ ವಿವಿಧೆಡೆ ಬುಧವಾರ ಸಂಜೆ ಉತ್ತಮ ಮಳೆಯಾಯಿತು.

ಹುಬ್ಬಳ್ಳಿ ನಗರ ಸೇರಿ ಧಾರವಾಡ ಜಿಲ್ಲೆ ವ್ಯಾಪ್ತಿಯ ಕಲಘಟಗಿ, ನವಲಗುಂದ, ಕುಂದಗೋಳ ಭಾಗದಲ್ಲಿ ಮಳೆಯಾಯಿತು. ಜೋರಾಗಿ ಮಳೆಯಾದ ಪರಿಣಾಮ ಹುಬ್ಬಳ್ಳಿಯ ಬಹುತೇಕ ಕಡೆ ವಾಹನಗಳ ಸುಗಮ ಸಂಚಾರಕ್ಕೆ ತೊಂದರೆಯಾಯಿತು. ಕೆಲ ಕಡೆ ಮರಗಳು ಉರುಳಿ ಬಿದ್ದವು. ಅಲ್ಲಲ್ಲಿ ವಿದ್ಯುತ್ ಪೂರೈಕೆ ಕಡಿತಗೊಳಿಸಲಾಯಿತು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ, ಸಂಕೇಶ್ವರ ಹಾಗೂ ಯಮಕನಮರಡಿ ಭಾಗದಲ್ಲಿ ಒಂದು ಗಂಟೆಗೂ ಹೆಚ್ಚು ಹೊತ್ತು ಉತ್ತಮ ಮಳೆ ಸುರಿಯಿತು. ಬೆಳಗಾವಿ ನಗರ, ತಾಲ್ಲೂಕಿನಲ್ಲಿ ತುಂತುರು ಮಳೆ ಸುರಿಯಿತು.

ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕಿನ ಅರಸೀಕೆರೆ ಹೋಬಳಿ ವ್ಯಾಪ್ತಿಯಲ್ಲಿ ಗುಡುಗು, ಸಿಡಿಲು ಸಹಿತ ಮಳೆ ಸುರಿಯಿತು. ಅರಸೀಕೆರೆ, ಹೊಸಕೋಟೆ, ಕಣಬಘಟ್ಟ, ಅಣಜಿಗೆರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾಧಾರಣ ಮಳೆಯಾಗಿದೆ. ಉಚ್ಚಂಗಿದುರ್ಗ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತುಂತುರು ಮಳೆಯಾಯಿತು.



ಹುಬ್ಬಳ್ಳಿಯಲ್ಲಿ ಬುಧವಾರ ರಾತ್ರಿ ಧಾರಾಕಾರ ಮಳೆ ಸುರಿಯಿತು –ಪ್ರಜಾವಾಣಿ ಚಿತ್ರ/ಗೋವಿಂದರಾಜ ಜವಳಿ

ರಾಜ್ಯದ ವಿವಿಧೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಮುಂದಿನ ಆರು ದಿನಗಳು ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರಗಿ, ವಿಜಯಪುರ, ಬೆಳಗಾವಿ, ಬಾಗಲಕೋಟೆ, ಧಾರವಾಡ, ಯಾದಗಿರಿ, ರಾಯಚೂರು, ಗದಗ, ಹಾವೇರಿ, ಕೊಡಗು, ಚಿಕ್ಕಮಗಳೂರು, ಮೈಸೂರು, ಮಂಡ್ಯ ಮತ್ತು ಹಾಸನ ಜಿಲ್ಲೆಯ ಒಂದೆರಡು ಕಡೆ ಗುರುವಾರ ಸಾಧಾರಣ ಮಳೆಯಾಗಲಿದೆ ಎಂದು ಇಲಾಖೆ ತಿಳಿಸಿದೆ.

ಕೋಲಾರ ಹೊರತುಪಡಿಸಿ ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳು ಹಾಗೂ ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಶುಕ್ರವಾರ ಮಳೆಯಾಗುವ ಸಂಭವವಿದೆ. ಕರಾವಳಿಯ ಜಿಲ್ಲೆಗಳಲ್ಲಿ ಶನಿವಾರದಿಂದ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡು ಹಾಗೂ ದಕ್ಷಿಣ ಒಳನಾಡಿನ ಕೆಲ ಜಿಲ್ಲೆಗಳಲ್ಲಿಯೂ ಒಂದೆರಡು ಕಡೆ ಮಳೆ ಮುಂದುವರಿಯಬಹುದು ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಇದೇ 13ರವರೆಗೆ ಉತ್ತರ ಹಾಗೂ ದಕ್ಷಿಣ ಒಳನಾಡಿನ ಕೆಲವೆಡೆ ಗುಡುಗು ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಮುಂದಿನ ಐದು ದಿನಗಳು ರಾಜ್ಯದ ಗರಿಷ್ಠ ತಾಪಮಾನದಲ್ಲಿ ದೊಡ್ಡ ಬದಲಾವಣೆಯಿಲ್ಲ ಎಂದು ಇಲಾಖೆ ಹೇಳಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಗಳ ಅವಧಿಯಲ್ಲಿ ಬಾಗಲಕೋಟೆಯಲ್ಲಿ ಗರಿಷ್ಠ (41 ಡಿಗ್ರಿ ಸೆಲ್ಸಿಯಸ್) ಉಷ್ಣಾಂಶ ವರದಿಯಾಗಿದೆ.

ಡಿಕೆಶಿಗೆ ಲೋಕಾಯುಕ್ತ ನೋಟಿಸ್

ಬೆಂಗಳೂರು: 2013ರ ಏಪ್ರಿಲ್ 1ರಿಂದ 2018ರ ಏಪ್ರಿಲ್ 30ರ ಅವಧಿಯಲ್ಲಿ ಆದಾಯಕ್ಕೆ ಮೀರಿ ₹74.93 ಕೋಟಿ ಮೌಲ್ಯದ ಆಸ್ತಿ ಗಳಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಮತ್ತು ದಾಖಲಾತಿಗಳನ್ನು ಒದಗಿಸುವಂತೆ ಲೋಕಾಯುಕ್ತ ಪೊಲೀಸ್ ವಿಭಾಗ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬುಧವಾರ ನೋಟೀಸ್ ನೀಡಿದೆ.

ಈ ಪ್ರಕರಣದಲ್ಲಿ ಸಿಬಿಐ ತನಿಖೆಯನ್ನು ರದ್ದುಪಡಿಸಿದ್ದ ರಾಜ್ಯ ಕಾಂಗ್ರೆಸ್ ಸರ್ಕಾರ, ಈ ತನಿಖೆಯನ್ನು ಲೋಕಾಯುಕ್ತಕ್ಕೆ ವಹಿಸಿತ್ತು. ಈ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸ್ ವಿಭಾಗ, ಕಳೆದ ಫೆ.8ರಂದು ಡಿ.ಕೆ.ಶಿವಕುಮಾರ್ ವಿರುದ್ಧ ಎಫ್ಐಆರ್ ದಾಖಲಿಸಿಕೊಂಡಿತ್ತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೋಟಿಸ್ ನೀಡಿರುವ ಲೋಕಾಯುಕ್ತ ಬೆಂಗಳೂರು ನಗರ ವಿಭಾಗದ ತನಿಖಾಧಿಕಾರಿ ಎಂ.ಎಚ್. ಸತೀಶ್, ಈ ಹಿಂದೆ ಸಿಬಿಐ ತನಿಖಾಧಿಕಾರಿಗಳಿಗೆ ನೀಡಿದ್ದ ಮಾಹಿತಿ ಮತ್ತು ದಾಖಲಾತಿಗಳನ್ನು ಒದಗಿಸುವಂತೆ ನೋಟಿಸ್ ನಲ್ಲಿ ಸೂಚಿಸಿದ್ದಾರೆ.

ಕೇಂದ್ರ ಸರ್ಕಾರ ಹೊರಡಿಸಿದ್ದ ಸುತ್ತೋಲೆ ಪ್ರಶ್ನಿಸಿ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್

ಉಗ್ರ ತಳಿ ನಾಯಿ ಸಾಕುವುದಕ್ಕೆ ನಿಷೇಧ: ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನವರ ಜೀವಕ್ಕೆ ಎರವಾಗುವ ಮತ್ತು ಉಗ್ರ ಸ್ವರೂಪದವು ಎಂದೇ ಪರಿಗಣಿಸಲಾದ ಅಡ್ಡ ತಳಿಯೂ ಸೇರಿದಂತೆ 20ಕ್ಕೂ ಹೆಚ್ಚು ಬಗೆಯ ನಾಯಿಗಳ ತಳಿ ಅಭಿವೃದ್ಧಿ ಮತ್ತು ಸಾಕುವುದನ್ನು ನಿಷೇಧಿಸಿ ಕೇಂದ್ರ ಸರ್ಕಾರ ಹೊರಡಿಸಿದ್ದ ಸುತ್ತೋಲೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಸುತ್ತೋಲೆ ಪ್ರಶ್ನಿಸಿ ನಗರದ ಶ್ವಾನ ತರಬೇತುದಾರರಾದ ಕಿಂಗ್ ಸಾಲೊಮನ್ ಡೇವಿಡ್ ಮತ್ತು ಮರ್ಡೋನಾ ಜೋನ್ಸ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.



‘ನಿಷೇಧದ ನಿರ್ಧಾರಕ್ಕೆ ಸಂಬಂಧಿಸಿದಂತೆ ಶ್ವಾನ ತಳಿ ಪ್ರಮಾಣೀಕರಿಸುವ ಸಂಸ್ಥೆಗಳು ಮತ್ತು ಪ್ರಾಣಿ ದಯಾ ಸಂಘಟನೆಗಳ ವಿವರಣೆಯನ್ನು ಸರ್ಕಾರ ಕಡ್ಡಾಯವಾಗಿ ಆಲಿಸಬೇಕು. ನಂತರ ತಿದ್ದುಪಡಿಯ ಮೂಲಕ ಸಮಗ್ರ ಮಾರ್ಗದರ್ಶಿ ಸೂತ್ರದೊಂದಿಗೆ ಹೊಸ ಸುತ್ತೋಲೆ ಹೊರಡಿಸಬಹುದು’ ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ದೆಹಲಿ ಹೈಕೋರ್ಟ್‌ನಲ್ಲಿ ದಾಖಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರಲ್ಲಿ ನೀಡಲಾಗಿದ್ದ ನಿರ್ದೇಶನದ ಅನುಸಾರ, ಕೇಂದ್ರ ಪಶು ಸಂಗೋಪನೆ ಮತ್ತು ಡೈರಿ ಸಚಿವಾಲಯವು 20ಕ್ಕೂ ಹೆಚ್ಚು ಬಗೆ ತಳಿಗಳ ನಾಯಿ ಸಾಕಾಣಿಕೆ ಮತ್ತು ಅಭಿವೃದ್ಧಿಯನ್ನು ನಿಷೇಧಿಸಿ 2024ರ ಮಾರ್ಚ್ 12ರಂದು ಸುತ್ತೋಲೆ ಹೊರಡಿಸಿತ್ತು.

‘ಈ ಸುತ್ತೋಲೆ ಅಸಾಂವಿಧಾನಿಕವಾಗಿದೆ’ ಎಂದು ಆಕ್ಷೇಪಿಸಿ ಕರ್ನಾಟಕ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ದಾಖಲಿಸಿದ್ದ ಅರ್ಜಿದಾರರು, ‘ಅಪಾಯಕಾರಿ ಎಂಬ ಅಭಿಪ್ರಾಯಕ್ಕೆ ಬರುವ ಮುನ್ನ ಅಂತಹ ತಳಿಯ ಶ್ವಾನಗಳ ಬಗ್ಗೆ ಆಳವಾದ ಅಧ್ಯಯನದ ಅಗತ್ಯವಿದೆ. ಈ ವಿಷಯದಲ್ಲಿ ನಾವೂ ಪಾಲುದಾರರಿದ್ದೇವೆ ಮತ್ತು ಈ ದಿಸೆಯಲ್ಲಿ ಭಾರತದಾದ್ಯಂತ ಸುಪರಿಚಿತವಾದ ನಾಯಿಗಳ ತಳಿ ಅಭಿವೃದ್ಧಿಯ ಕೆನ್ನೆಲ್ ಕ್ಲಬ್ ಆಫ್ ಇಂಡಿಯಾದ ಜೊತೆ ತಜ್ಞರು ಯಾವ ಚರ್ಚೆಯನ್ನೂ ನಡೆಸಿಲ್ಲ. ಹಾಗಾಗಿ, ಸುತ್ತೋಲೆಯನ್ನು ರದ್ದುಗೊಳಿಸಬೇಕು’ ಎಂದು ಕೋರಿದ್ದರು. ಅರ್ಜಿದಾರರ ಪರ ವಕೀಲ ಆರ್.ಸ್ವರೂಪ್ ಆನಂದ್ ವಾದ ಮಂಡಿಸಿದ್ದರು.

ನಿಷೇಧಿತ ತಳಿಗಳು: ಪಿಟ್‌ಬುಲ್ ಟೆರ್‍ರಿಯರ್, ಟೋಸಾ ಇನು, ಅಮೆರಿಕನ್ ಸ್ಟಾಫರ್ಡ್ ಶೈರ್ ಟೆರಿಯರ್, ಫಿಲಾ ಬ್ರೆಸಿಲಿರೊ, ಡೊಗೊ ಅರ್ಜೆಂಟಿನೊ, ಅಮೆರಿಕನ್ ಬುಲ್ ಡಾಗ್, ಬೋರ್ ಬೋಲ್, ಕಂಗಲ್, ಮಧ್ಯ ಏಷ್ಯಾದ ಶೆಫರ್ಡ್ ಡಾಗ್, ಕಕೇಶಿಯನ್ ಶೆಫರ್ಡ್ ಡಾಗ್, ದಕ್ಷಿಣ ರಷ್ಯನ್ ಶೆಫರ್ಡ್ ಡಾಗ್ (ಓವ್ಚಾರ್ಕಾ), ಟೋರ್ನ್ ಜಾಕ್, ಸರ್‌ಪ್ಲಾನಿನಾಕ್, ಜಪಾನೀಸ್ ತೋಸಾ ಮತ್ತು ಅಕಿತಾ, ಮ್ಯಾಸ್ಟಿಫ್ಸ್ (ಬೋರ್ ಬುಲ್ಸ್), ರಾಟ್‌ವೀಲರ್, ಟೆರ್‍ರೈರ್ಸ್, ರೊಡೇಸಿಯನ್ ರಿಡ್ಜ್ ಬ್ಯಾಕ್, ವೂಲ್ಫ್ ಡಾಗ್ಸ್, ಕೆನಾರಿಯೊ, ಅಕ್ಬಷ್ ನಾಯಿ, ಮಾಸ್ಕೊ ಗಾರ್ಡ್ ನಾಯಿ, ಕೇನ್ ಕೊರ್ಸೊ ಮತ್ತು ಬ್ಯಾನ್ ಡಾಗ್.

‘ನೆರೆಹೊರೆ’ ವಿದೇಶಾಂಗ ನೀತಿಯಲ್ಲೂ ಭಾರತದೊಂದಿಗೆ ಚೀನಾ ಪ್ರತಿಸ್ಪರ್ಧೆ!

ಚನ್ನಬಸಪ್ಪ ರೊಟ್ಟಿ

ಭಾರತಕ್ಕೆ ಮಗ್ಗಲು ಮುಳ್ಳಾಗಿರುವ ಚೀನಾ ಕೆಲವೊಮ್ಮೆ ದುರುದ್ದೇಶಪೂರಿತವಾಗಿ ಮತ್ತೊಮ್ಮೆ ದಕ್ಷಿಣ ಏಷ್ಯಾದಲ್ಲಿ ತನ್ನದೇ ‘ಪಾರಮ್ಯ’ ಇದೆ ಎಂದು ತೋರಿಸಿಕೊಳ್ಳುವ ನಿಟ್ಟಿನಲ್ಲಿ ಭಾರತದೊಂದಿಗೆ ನೆರೆಹೊರೆ ವಿದೇಶಾಂಗ ನೀತಿಯಲ್ಲೂ ಪ್ರತಿಸ್ಪರ್ಧೆಗೆ ಇಳಿಯುತ್ತಿದೆ. ಈಚೆಗೆ ಚೀನಾ ಭಾರತದ ರಾಜ್ಯ ಅರುಣಾಚಲಪ್ರದೇಶ ತನಗೇ ಸೇರಿದ್ದು ಎಂದು ಹೇಳಿ, 30ಕ್ಕೂ ಹೆಚ್ಚು ಪ್ರದೇಶಗಳಿಗೆ ಚೀನಿ ಹೆಸರು ಇಡುವ ಮೂಲಕ ಉದ್ಧಟತನ ಮೆರೆದು ಮತ್ತೊಮ್ಮೆ ಭಾರತದ ಅಸ್ಮಿತೆಗೆ ಧಕ್ಕೆಯನ್ನುಂಟು ಮಾಡಿದೆ.

ಕೇವಲ ಅರುಣಾಚಲಪ್ರದೇಶ ವಿವಾದ ಮಾತ್ರವಲ್ಲ, ಇನ್ನೂ ಹಲವು ವಿಷಯಗಳಲ್ಲಿ ಚೀನಾ ಭಾರತದೊಂದಿಗೆ ಭಿನ್ನಾಭಿಪ್ರಾಯಗಳನ್ನು ಹೊಂದಿದ್ದು, ತನ್ನ ಅಭಿಪ್ರಾಯವೇ ಸರಿ ಎಂದು ವಾದಿಸುತ್ತ ಭಾರತದ ಮೇಲೂ ಆ ಅಭಿಪ್ರಾಯಗಳನ್ನು ಹೇರುವ ಪ್ರಯತ್ನವನ್ನು ಚೀನಾ ನಿರಂತರವಾಗಿ ಮಾಡುತ್ತ ಬಂದಿದೆ. LAC ಗೆ (ವಾಸ್ತವಿಕ ನಿಯಂತ್ರಣ ರೇಖೆ) ಸಂಬಂಧಿಸಿದ ಗಡಿ ವಿವಾದ, ಗಾಲ್ವನ್ ಕಣಿವೆ ಸಂಘರ್ಷ, ಬುಮ್‌ಲಾ ಪಾಸ್ ಸಂಘರ್ಷ, ಪ್ಯಾಂಗಾಂಗ್ ಸಂಘರ್ಷ, ಭಾರತದ ನೆಲದಲ್ಲಿ ಹಳ್ಳಿಗಳು, ರಸ್ತೆ-ಹೆದ್ದಾರಿಗಳ ನಿರ್ಮಾಣ, ‘ಅಕ್ಸಾಯ್ ಚಿನ್’ ವಿವಾದ, ಬಫರ್ ಝೋನ್ ವಿವಾದ, ಒನ್ ಚೀನಾ ನಿರ್ಮಾಣದ ಹೇಳಿಕೆ ವಿವಾದ ಹೀಗೆ ಹಲವು ವಿಷಯಗಳಲ್ಲಿ ಚೀನಾ ಭಾರತವನ್ನು ಗುರಿಯಾಗಿಸುತ್ತಲೇ ಬಂದಿದೆ.

ಈ ನಿಟ್ಟಿನಲ್ಲಿ ಭಾರತದ ಸುತ್ತಲೂ ಇರುವ ನೆರೆಹೊರೆ ರಾಷ್ಟ್ರಗಳು ಹಾಗೂ ಭಾರತದೊಂದಿಗೆ ಉತ್ತಮ ಸಂಬಂಧ ಹೊಂದಿರುವ / ಹೊಂದಿದ್ದ ರಾಷ್ಟ್ರಗಳ ಮೇಲೆ ತನ್ನ ‘ಪ್ರಭಾವ’ ಬೀರಿ ಭಾರತದ ಪ್ರಭಾವವನ್ನು ತಗ್ಗಿಸುವ ಪ್ರಯತ್ನವನ್ನು ಚೀನಾ ಮಾಡುತ್ತಿದೆ.

ಚೀನಾ ‘ಅತ್ಯಾಪ್ತ’ ಪಾಕ್!

ಭಾರತದ ಸಾಂಪ್ರದಾಯಿಕ ಎದುರಾಳಿ ಪಾಕಿಸ್ತಾನವನ್ನು ಚೀನಾ ತನ್ನ ‘ಪರಮ ಮಿತ್ರ’ ಎಂದು ಘೋಷಿಸಿದೆ. ‘ಬೆಲ್ಟ್ ಮತ್ತು ರೋಡ್’ ಉಪಕ್ರಮ ಹಾಗೂ ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ (CPEC) ಯೋಜನೆಗಳ ಮೂಲಕ ಚೀನಾ ಪಾಕಿಸ್ತಾನವನ್ನು ತನಗೆ ‘ಅತ್ಯಾಪ್ತ’ವಾಗಿಸಿಕೊಂಡಿದೆ. ಈ ಯೋಜನೆಯಡಿ ನಿರ್ಮಿಸಿದ ರಸ್ತೆ ಭಾರತ ತನ್ನ ಹಕ್ಕು ಸಾಧಿಸುವ ವಿವಾದಿತ ‘ಪಾಕ್ ಆಕ್ರಮಿತ ಕಾಶ್ಮೀರ’ ಮೂಲಕ ಸಾಗುತ್ತವೆ. ಈ ರಸ್ತೆ ಸಂಪರ್ಕದ ಮೂಲಕ ಬಲೂಚಿಸ್ತಾನದ ಆಯಕಟ್ಟಿನ ‘ಗ್ವಾದರ್’ ಬಂದರಿನ ಮೇಲೂ ಚೀನಾ ಹಿಡಿತ ಸಾಧಿಸಿದೆ.

ಈ ಮೂಲಕ ಅಫ್ಗಾನಿಸ್ತಾನಕ್ಕೂ ಅಡಿ ಇಡುವ ಪ್ರಯತ್ನವನ್ನು ಚೀನಾ ಮಾಡುತ್ತಿದೆ. ಪಾಕಿಸ್ತಾನ ಚೀನಾ ನಿರ್ಮಿತ ಯುದ್ಧ ಡ್ರೋನ್‌ಗಳು ಮತ್ತಿತರ ಮಿಲಿಟರಿ ಸಾಮಗ್ರಿಗಳನ್ನು ಖರೀದಿಸಿದೆ. ಅಲ್ಲದೇ, ದಕ್ಷಿಣ ಚೀನಾ ಸಮುದ್ರ, ತೈವಾನ್, ಕ್ಸಿನ್‌ಜಿಯಾಂಗ್ ಮತ್ತು ಟಿಬೆಟ್ ವಿಷಯಗಳಲ್ಲಿ ಚೀನಾದ ನಿಲುವನ್ನು ಅನುಮೋದಿಸಿ, ಭಾರತದ ನಿಲುವನ್ನು ವಿರೋಧಿಸಿದೆ.


ಇಂಡೋ ಚೀನಾ ಗಡಿ ಬುಮ್‌ಲಾ ಪಾಸ್‌ನಲ್ಲಿ ಭಾರತೀಯ ಹಾಗೂ ಚೀನಾ ಸೈನಿಕ ಪಡೆ (ಪಿಟಿಐ- ಸಂಗ್ರಹ ಚಿತ್ರ)

ಚೀನಾದ ಸಾಲದ ಸುಳಿಯಲ್ಲಿ ಶ್ರೀಲಂಕಾ

ಕೋವಿಡ್ ಮತ್ತು ರಾಜಕೀಯ ಅಸ್ಥಿರತೆಯಿಂದ ಕಂಗಾಲಾಗಿದ್ದ ಶ್ರೀಲಂಕಾಗೆ ಆರ್ಥಿಕ ನೆರವಿನ ಹೆಸರಿನಲ್ಲಿ ಸಾಲ ನೀಡಿದ್ದ ಚೀನಾ, ಶ್ರೀಲಂಕಾವನ್ನು ಸಾಲದ ಸುಳಿಯಲ್ಲಿ ಸಿಲುಕಿಸಿದೆ. ಈಗಾಗಲೇ ತಾನು ಮಾಡಿದ ಈ ‘ಉಪಕಾರಕ್ಕೆ’ ಪ್ರತಿಯಾಗಿ ಚೀನಾ ಶ್ರೀಲಂಕಾದ ರಾಜಧಾನಿ ಕೊಲಂಬೊ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಿಕೊಂಡಿದೆ. ಅಲ್ಲದೇ, ಶ್ರೀಲಂಕಾದ ಆಯಕಟ್ಟಿನ ಹಂಬನ್‌ತೋಟ ಬಂದರನ್ನು 99 ವರ್ಷಗಳ ಕಾಲ ಗುತ್ತಿಗೆಗೆ ಪಡೆದಿದೆ. ಈ ಬಂದರಿನ ಮೂಲಕ ಹಿಂದೂ ಮಹಾಸಾಗರದಲ್ಲಿ ಚೀನಾ ತನ್ನ ನೌಕಾಪಡೆಯ ಉಪಸ್ಥಿತಿಯನ್ನು ಸಮರ್ಥವಾಗಿ ಹೆಚ್ಚಿಸಿಕೊಂಡಿದೆ. ಈಗಾಗಲೇ ಚೀನಾ ಈ ಬಂದರಿನಲ್ಲಿ 13 ನೌಕೆಗಳನ್ನು ನಿಯೋಜಿಸಿದ್ದು, ಅದರಲ್ಲಿ 8 ನೌಕೆಗಳು ಚೀನಾ ಪೀಪಲ್ಸ್ ಲಿಬರೇಷನ್ ಆರ್ಮಿಗೆ ಸೇರಿವೆ.

ನೇಪಾಳ ಮೇಲೂ ‘ಚೀನಾ’ ಪ್ರಭಾವ

1950ರ ಇಂಡೋ-ನೇಪಾಳ ಶಾಂತಿ ಮತ್ತು ಸೌಹಾರ್ದ ಒಪ್ಪಂದದಡಿ ಭಾರತ ಮತ್ತು ನೇಪಾಳ ನಿಕಟ ಸಂಬಂಧ ಹೊಂದಿದ ನಂತರ ಚೀನಾ ಇದನ್ನು ‘ತನ್ನ ಗಡಿ ಭಾಗದಲ್ಲಿ ಭಾರತೀಯ ಪ್ರಭಾವದ ಅನಪೇಕ್ಷಿತ ವಿಸ್ತರಣೆ’ ಎಂದು ವ್ಯಾಖ್ಯಾನಿಸಿ ಭಾರತ-ನೇಪಾಳ ಸಂಬಂಧಕ್ಕೆ ಹುಳಿಹಿಂಡಲು ಪ್ರಯತ್ನಿಸಿದೆ. 1962ರ ಭಾರತ-ಚೀನಾ ಯುದ್ಧದ ನಂತರ ನೇಪಾಳದ ರಾಜ ಮಹೇಂದ್ರ ಅವರು ಕಾಲಾಪಾನಿ ಪ್ರದೇಶವನ್ನು ಭಾರತಕ್ಕೆ ನೀಡಿದ್ದರು. ಆದರೆ, ಈಚೆಗೆ ನೇಪಾಳದ ಪ್ರಧಾನಿ ಕೆಪಿ ಒಲಿ ಚೀನಾದತ್ತ ಒಲವು ತೋರಿದ್ದು, ನೇಪಾಳ ತನ್ನ ಹೊಸ ರಾಜಕೀಯ ನಕ್ಷೆಯಲ್ಲಿ ಈಗ ಭಾರತದ ಉತ್ತರಾಖಂಡ ರಾಜ್ಯದ ಭಾಗವಾಗಿರುವ ಕಾಲಾಪಾನಿ ಮಾತ್ರವಲ್ಲದೇ, ಲಿಂಪಿಯಾಧುರಾ ಮತ್ತು ಲಿಪುಲೇಖ್, ಬಿಹಾರದ ಪಶ್ಚಿಮ ಚಂಪಾರಣ್ ಜಿಲ್ಲೆಯ ಸುಸ್ತಾ ಪ್ರದೇಶಗಳನ್ನು ನೇಪಾಳದ ಭಾಗಗಳೆಂದು ಪ್ರತಿಪಾದಿಸಿದೆ.

ಮಾಲ್ದೀವ್ಸ್ ಮೇಲೂ ಚೀನಾ ಛಾಪು

ಈ ಮುಂಚೆ ಭಾರತದ ಮಿತ್ರ ರಾಷ್ಟ್ರವಾಗಿದ್ದ ಮಾಲ್ದೀವ್ಸ್ ಕೂಡ ಅಲ್ಲಿನ ಹಾಲಿ ಅಧ್ಯಕ್ಷ ಮೊಹಮದ್ ಮುಯಿಝು ಅಧಿಕಾರಕ್ಕೆ ಬಂದ ನಂತರ ಚೀನಾದತ್ತ ವಾಲಿದ್ದು, ಭಾರತದೊಂದಿಗಿನ ಸಂಬಂಧಗಳನ್ನು ಒಂದೊಂದಾಗಿ ಕಳಚಿಕೊಳ್ಳುತ್ತಿದೆ. ಈಚೆಗಷ್ಟೇ ಭಾರತದ ಸೈನ್ಯವನ್ನು ಮಾಲ್ದೀವ್ಸ್ ವಾಪಸ್ ಕಳುಹಿಸಿದ್ದನ್ನು ನಾವು ಈ ನಿಟ್ಟಿನಲ್ಲಿ ಸ್ಮರಿಸಬಹುದು.

ಭೂತಾನ್-ಭಾರತ ಸಂಬಂಧಕ್ಕೆ ಅಡ್ಡಗಾಲು

ಭಾರತ ಭೂತಾನ್ ಜೊತೆ ಉತ್ತಮ ಬಾಂಧವ್ಯ ರೂಪಿಸಿಕೊಂಡಿದ್ದು, ಭೂತಾನ್ ಆರ್ಥಿಕತೆಯ ಪುನಶ್ಚೇತನಕ್ಕೆ ₹ 10 ಸಾವಿರ ಕೋಟಿ ನೆರವು ಒದಗಿಸುವ ಒಪ್ಪಂದ ಮಾಡಿಕೊಂಡಿದೆ. ಭಾರತ-ಭೂತಾನ್ ಆರ್ಥಿಕ ಸಹಕಾರದ ಭಾಗವಾಗಿ, ರುಪೇ ಹಾಗೂ ಯುಪಿಐ ಮೂಲಕ ಅಲ್ಲಿನ ಹಣಕಾಸಿನ ವ್ಯವಸ್ಥೆಯ ಡಿಜಿಟಲೀಕರಣಕ್ಕೆ ನೆರವಾಗುವ ಉದ್ದೇಶವೂ ಇದೆ. ಆದರೆ, ಭಾರತ ಮತ್ತು ಭೂತಾನ್ ನಡುವಿನ ಸಂಬಂಧಕ್ಕೆ ತೊಡಕಾಗಿ ನಿಂತಿರುವ ಚೀನಾ, ಧೋಕ್ಲಾಂನಲ್ಲಿ ಭಾರತ, ಚೀನಾ ಮತ್ತು ಭೂತಾನ್ ದೇಶಗಳ ಗಡಿ ಸೇರುವಲ್ಲಿ, ಈಗ ಇರುವುದಕ್ಕಿಂತ ದಕ್ಷಿಣಕ್ಕೆ ತನ್ನ ಗಡಿ ವಿಸ್ತರಿಸಿಕೊಳ್ಳಬೇಕು ಎಂದು ಬಯಸುತ್ತಿದೆ.

ಭಾರತದ ಪರ್ಯಾಯ ಕ್ರಮಗಳು

ಚೀನಾದ ಈ ನಿಲುವಿಗೆ ಪರ್ಯಾಯವಾಗಿ ಭಾರತ ಚೀನಾದ ಸರ್ವಾಧಿಕಾರಿ ಧೋರಣೆಯನ್ನು ಖಂಡಿಸಿ, ಫಿಲಿಪ್ಪೀನ್ಸ್ ಹಾಗೂ ತೈವಾನ್ ದೇಶಗಳ ಸಾರ್ವಭೌಮತ್ವ ಎತ್ತಿಹಿಡಿಯಲು ಭಾರತ ನೆರವಾಗಲಿದೆ ಎಂದು ಹೇಳಿಕೆ ನೀಡಿ ಚೀನಾಗೆ ರಾಜತಾಂತ್ರಿಕ ಟಾಂಗ್ ನೀಡಿದೆ. ಶ್ರೀಲಂಕಾದಲ್ಲಿ ಇಂಧನ ಸೌಕರ್ಯ ಅಭಿವೃದ್ಧಿ ನಿಟ್ಟಿನಲ್ಲಿ 11 ಮಿಲಿಯನ್ ಡಾಲರ್ ಹೂಡಿಕೆ ಮಾಡುವುದಾಗಿ ಈಚೆಗೆ ಭಾರತ ಘೋಷಿಸಿದೆ.

ಸೆಶೆಲ್ಸ್ ದೇಶದ ಅಸಂಪ್ಷನ್ ದ್ವೀಪಗಳಲ್ಲಿ ಏರ್‌ಸ್ಟ್ರಿಪ್ ಮತ್ತು ವೈಮಾನಿಕ ನೆಲೆಯನ್ನು ಅಭಿವೃದ್ಧಿಪಡಿಸುವಲ್ಲಿ ಭಾರತ ಸಹಾಯ ಮಾಡಿದೆ. ಈ ಮೂಲಕ ಹಿಂದೂ ಮಹಾಸಾಗರ ಪ್ರದೇಶದಲ್ಲಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲು ಚೀನಾ ತೆಗೆದುಕೊಂಡಿರುವ ಉಪಕ್ರಮಗಳ ಹಿನ್ನೆಲೆಯಲ್ಲಿ ಭಾರತದ ಈ ಕ್ರಮ ನಿರ್ಣಾಯಕವಾಗಿದೆ.

❖

ಬಹು ಆಯ್ಕೆಯ ಪ್ರಶ್ನೆಗಳು

ಹನುಮಾನಾಯಕ್ ರಾಥೋಡ್

ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಬಹುಆಯ್ಕೆಯ ಪ್ರಶ್ನೋತ್ತರಗಳು ಇಲ್ಲಿವೆ..

1. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ರಾಜ್ಯದಲ್ಲಿ ಒಟ್ಟು 5 ಹುಲಿ ಸಂರಕ್ಷಣಾ ಪ್ರದೇಶಗಳಲ್ಲಿವೆ.
ಬಿ. ರಾಷ್ಟ್ರದಲ್ಲಿಯೇ ಅತಿ ಹೆಚ್ಚಿನ ಹುಲಿಗಳಿರುವ ರಾಜ್ಯಗಳ ಪೈಕಿ ಮಧ್ಯಪ್ರದೇಶ ಎರಡನೇಯ ಸ್ಥಾನದಲ್ಲಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಎ

2. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ರಾಜ್ಯವು 5 ರಾಷ್ಟ್ರೀಯ ಉದ್ಯಾನಗಳು, 36 ಅಭಯಾರಣ್ಯಗಳು ಮತ್ತು 5 ಹುಲಿ ಸಂರಕ್ಷಿತ ಪ್ರದೇಶಗಳನ್ನು ಹೊಂದಿದೆ.
ಬಿ. ರಾಜ್ಯವು 17 ಸಂರಕ್ಷಣಾ ಮೀಸಲು ಪ್ರದೇಶಗಳು ಮತ್ತು 1 ಸಮುದಾಯ ಮೀಸಲು ಪ್ರದೇಶವನ್ನು ಹೊಂದಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಡಿ

3. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 2023ನೇ ಸಾಲಿನಲ್ಲಿ ಕೈಗೊಂಡ ಆನೆ ಗಣತಿಯ ಪ್ರಕಾರ ಕರ್ನಾಟಕ ರಾಜ್ಯವು 6,395 ಆನೆಗಳನ್ನು ಹೊಂದಿದೆ.
ಬಿ. 2023ನೇ ಸಾಲಿನಲ್ಲಿ ಕೈಗೊಂಡ ಆನೆ ಗಣತಿಯ ಪ್ರಕಾರ ದೇಶದ ಒಟ್ಟು ಆನೆಗಳ ಶೇ 25ರಷ್ಟು ಮಧ್ಯಪ್ರದೇಶದಲ್ಲಿ ಕಂಡುಬರುತ್ತವೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಎ

4. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. 2022ನೇ ಸಾಲಿನ ಹುಲಿ ಗಣತಿ ಪ್ರಕಾರ ಮಧ್ಯ ಭಾರತ ಮತ್ತು ಶಿವಾಲಿಕ್ ಬೆಟ್ಟಗಳು ಮತ್ತು ಗಂಗಾ ಬಯಲು ಪ್ರದೇಶಗಳಲ್ಲಿ ಹುಲಿಗಳ ಸಂಖ್ಯೆಯಲ್ಲಿ ಗಮನಾರ್ಹ ಏರಿಕೆ ಕಂಡುಬಂದಿದೆ.
ಬಿ. 2022ನೇ ಸಾಲಿನ ಹುಲಿ ಗಣತಿ ಪ್ರಕಾರ ಪಶ್ಚಿಮ ಘಟ್ಟದ ಕೆಲವು ಪ್ರದೇಶಗಳಲ್ಲಿ ಸ್ಥಳೀಯವಾಗಿ ಹುಲಿಗಳ ಸಂಖ್ಯೆ ಕಡಿಮೆಯಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

5. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಜೈವಿಕ ವೈವಿಧ್ಯ ಅಧಿನಿಯಮ 2002ರ ಕಲಂ 22ರ ಪ್ರಕಾರ ಕರ್ನಾಟಕ ಜೀವ ವೈವಿಧ್ಯ ಮಂಡಳಿಯನ್ನು 2003ರಲ್ಲಿ ಸ್ಥಾಪಿಸಲಾಗಿದೆ.
ಬಿ. ಕರ್ನಾಟಕ ಜೀವ ವೈವಿಧ್ಯ ಮಂಡಳಿ ಕರ್ನಾಟಕದ ಎಲ್ಲಾ ಸ್ಥಳೀಯ ಸಂಸ್ಥೆಗಳಲ್ಲಿ 5,654 ಜೀವ ವೈವಿಧ್ಯ ನಿರ್ವಹಣಾ ಸಮಿತಿಗಳನ್ನು ರಚಿಸಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಎ

6. ಅಟಲ್ ಭೂಜಲ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಇದು ಸಮುದಾಯ ಸಹಭಾಗಿತ್ವದಲ್ಲಿ ಸುಸ್ಥಿರ ಅಂತರ್ಜಲ ನಿರ್ವಹಣಾ ಯೋಜನೆಯಾಗಿದೆ.
ಬಿ. ಕೇಂದ್ರ ವಲಯ ಯೋಜನೆಯಾದ ಇದು 2020ರಿಂದ 2030ರವರೆಗೆ ಜಾರಿಯಲ್ಲಿರುತ್ತದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಎ

7. ರಾಜ್ಯದ ನೀರಾವರಿ ಮೂಲಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ರಾಜ್ಯದ ಎಲ್ಲಾ ನೀರಾವರಿ ಮೂಲಗಳ ಪೈಕಿ ಕೊಳವೆ ಅಥವಾ ಕೊರೆದ ಬಾವಿಗಳಿಂದ ನೀರು ಪೂರೈಕೆ ಆಗಿರುವ ಪಾಲು ಅತ್ಯಧಿಕವಾಗಿದೆ.
ಬಿ. ಐತಿಹಾಸಿಕವಾಗಿ ಕೆರೆಗಳು ಪ್ರಮುಖ ನೀರಾವರಿ ಮೂಲವಾಗಿದ್ದರೂ ಸಹ ನಿವ್ವಳ ನೀರಾವರಿ ಕ್ಷೇತ್ರದಲ್ಲಿ ಕೆರೆಗಳ ಪಾಲು ಶೇ 2.07 ಆಗಿರುತ್ತದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ : ಡಿ

8. ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ.
ಎ. ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತವನ್ನು 1998ರಲ್ಲಿ ಸ್ಥಾಪಿಸಲಾಗಿದೆ.
ಬಿ. ಕರ್ನಾಟಕ ನೀರಾವರಿ ನಿಗಮವನ್ನು 1996ರಲ್ಲಿ ಸ್ಥಾಪಿಸಲಾಗಿದೆ.
ಕೆಳಗಿನವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ.
ಎ. ಹೇಳಿಕೆ ಎ ಸರಿಯಾಗಿದೆ.
ಬಿ. ಹೇಳಿಕೆ ಬಿ ಸರಿಯಾಗಿದೆ.
ಸಿ. ಎರಡೂ ಹೇಳಿಕೆಗಳು ತಪ್ಪಾಗಿವೆ.
ಡಿ. ಎರಡೂ ಹೇಳಿಕೆಗಳು ಸರಿಯಾಗಿವೆ.
ಉತ್ತರ: ಸಿ

ನೀಟ್- ಪಿಯುಸಿ ಸಿಇಟಿ ಪರೀಕ್ಷೆ ದಿಕ್ಸೂಚಿ

NEET PHYSICS

12) A cylindrical tube of length 0.2 m and radius R with sugar solution of concentration C produce a rotation of θ in the plane of vibration of a plane polarized light. The same sugar solution is transferred to another tube of length 0.3 m of same radius. The remaining gap is filled by distilled water. Now the optical rotation produced is

(a) θ (b) $2\frac{\theta}{3}$
(c) $3\frac{\theta}{2}$ (d) $9\frac{\theta}{4}$

Ans:- (a)

Expln- We know the specific rotation,

$$S = \frac{\theta}{l.c} = \frac{\theta.v}{l.m}$$

Where θ = rotation produced,
l = length of the tube
M = mass of sugar dissolved,
V = volume of sugar solution

$$\Rightarrow \theta = \frac{S.I.M}{V}$$

For first case, $\theta = \frac{S\,l\,m}{V}$ ....(i)

For second case, $\theta_1 = \frac{S\,l_1\,m_1}{V_1}$ ....(ii)

here, $l = 0.2\,m$ and $l_1 = 0.3\,m$

also, $V_1 = V + \frac{V}{2} = 1.5\,V = \frac{3}{2}V$

On dividing Eq. (ii) by Eq. (i), we get

$$\frac{\theta_1}{\theta} = \frac{\frac{S\,l_1\,m}{V_1}}{\frac{S\,l\,m}{V}} = \frac{l_1}{l} \times \frac{V}{V_1} = \frac{l_1}{l} \times \frac{2V}{3V} = \frac{0.3}{0.2} \times \frac{2}{3} = 1$$

$$\Rightarrow \theta_1 = \theta$$

13) Two tangent galvanometers, which are identical except in their number of turns, are connected in parallel. The ratio of their resistances of the coils is 1 : 3. If the deflections in the two tangent galvanometers are 30° and 60° respectively, then the ratio of their number of turns is

(a) 1:3 (b) 3:1
(c) 1:2 (d) 1:6

Ans:- (a)

Expln- we know that the current passing through galvanometer coil is

$$I = K\tan\theta \text{ where, } K = \frac{2rB_H}{n\mu_0}$$

$\therefore$ Here, $I_1 = K_1 \tan\theta_1$ and $I_2 = K_2 \tan\theta_2$

$$(\text{or})\ \frac{I_1}{I_2} = \frac{K_1\tan\theta_1}{K_2\tan\theta_2} = \frac{\frac{2r\,B_H}{n_1\mu_0}\tan\theta_2}{\frac{2r\,B_H}{n_2\mu_0}\tan\theta_2}$$

$$\Rightarrow \frac{R_1}{R_2} = \frac{n_2\tan 30^0}{n_1\tan 60^0}$$

$$\Rightarrow \frac{3}{1} = \frac{n_2}{n_1}\cdot\frac{\sqrt{3}}{\sqrt{3}} \qquad \left(\because I = \frac{V}{R}\right)$$

$$\Rightarrow \frac{n_1}{n_2} = \frac{1}{3}$$

14) Radii of curvature of a converging lens are in the ratio 1:2. Its focal length is 6cm and refractive index is 1.5. Then its radii of curvature are .... respectively.

(a) 9 cm and 18 cm (b) 6 cm and 12 cm
(c) 3 cm and 6 cm (d) 4.5 cm and 9 cm

Ans:- (d)

Expln– Given, $\frac{R_1}{R_2} = \frac{1}{2}$, $f = 6cm$ & $\mu = 1.5$

Let $R_1 = R$ and $R_2 = 2R$

We know the focal length of converging lens By using relation $\frac{1}{f} = (\mu - 1)\left[\frac{1}{R_1} + \frac{1}{R_2}\right]$

Substituting all the values, we get $R = 4.5$ cm

$\therefore R_1 = 4.5$ cm and $R_2 = 2 \times 4.5 = 9$ cm

15) Two mental spheres of radii 0.01 m and 0.02 m are given a charge of 15 mC and 45 mC respectively. They are then connected by a wire. The final charge on the first sphere is .... × 10^{-3}C.

(a) 40 (b) 30
(c) 20 (d) 10

Ans:- (c)

Expln- When two metal spheres are joined by a wire, charge flows from one at higher potential to the other at lower potential, till they acquire the same potential.

$$\therefore V_1 = V_2$$


$$\frac{q_1}{4\pi\varepsilon_0 r_1} = \frac{q_2}{4\pi\varepsilon_0 r_2}$$

$$\Rightarrow \frac{r_1}{r_2} = \frac{q_1}{q_2} = \frac{15\,mC}{45\,mC} = \frac{1}{3}$$

Final charge on first sphere,

$$q_1 = \frac{1}{3}(q_1 + q_2) = \frac{1}{3} \times 60 = 20\,mC$$

16) See the diagram. Area of each plate is 2.0 m² and d = 2 × 10^{-3} m. A charge of 8.85 × 10^{-8} C is given to Q. Then the potential of Q becomes



(a) 13 V (b) 10 V
(c) 6.67 V (d) 8.825 V

Ans:- (c)

Expln- In the given arrangement, plate Q is common for two capacitors which are connected in parallel.

$$\therefore C_{eff} = C_P = C_1 + C_2$$

$$\Rightarrow C_P = \frac{\varepsilon_0 A}{d} + \frac{\varepsilon_0 A}{2d} = \frac{2\varepsilon_0 A}{2d}$$ (Contd...)

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET CHEMISTRY

51) The lattice site in a pure crystal *cannot* be occupied by
a) molecule b) ion
c) electron d) atom
Ans: C

52). Cations are present in the interstitial sites in ....
a) Frenkel defect b) Schottky defect
c) vacancy defect d) Metal deficiency defect
Ans: a


53) Schottky defect is observed in crystals when ....
a) some cations move from their lattice site to interstitial sites.
b) equal number of cations and anions are missing from the lattice.
c) some lattice sites are occupied by electrons.
d) some impurity is present in the lattice.
Ans:-b

54) Which of the following is true about the charge acquired by *p*-type semiconductors?
a) positive b) neutral
c) negative
d) depends on concentration of *p* impurity
Ans:- d

55) To get a n-type semiconductor from silicon, it should be doped with a substance with valency..............
a) 2 b) 1
c) 3 d) 5
Ans:- d


56) Which of the following possess net dipole moment?
a) BF_3 b) SO_2
c) CO_2 d) $BeCl_2$
Ans: (b)

Expln:- By seeing geometry, we can easily find out the net dipole moment $BeCl_2$ and CO_2 have linear geometry, BF_3 has triangular planar geometry with zero dipole moment. While SO_2 geometry is in a bent shape.



57) The number of -bonds and -bonds present in naphthalene are respectively
a) 5, 19 b) 6, 19
c) 5, 20 d) 5, 11
Ans: (a)

Expln:-We can find out by drawing the structure of Naphthalene.



The number of -bonds and -bonds are 5, 19 respectively.

58) On e mole of ammonia was completely absorbed in one litre solution each of (1) 1 M HCl, (2) 1 M CH_3COOH and (3) 1 M H_2SO_4 at 298 K.

The decreasing order for the pH of the resulting solutions is (Given: Kb(NH3) = 4.74)
a) 2 > 3 > 1 b) 1 > 2 > 3
c) 2 > 1 > 3 d) 3 > 2 > 1

Soln: C

Decreasing order of pH →
$CH_3COOH > HCl > H_2SO_4$
(2) (1) (3)
Increasing acidic strength →

59) 5.5 mg of nitrogen gas dissolves in 180 g of water at 273 K and one atm pressure due to nitrogen gas. The mole fraction of nitrogen in 180 g of water at 5 atm nitrogen pressure is approximately
(a) 1 x 10^{-6} (b) 1 x 10^{-5}
(c) 1 x 10^{-3} (d) 1 x 10^{-4}

Soln: (c) Solubility of a gas ∝ mole fraction


$$^{n}N_2 = \frac{5.5 \times 10^{-3}}{28} = 1.96 \times 10^{-4} \text{ at 1 atm}$$

Now, p ∝ mole fraction

Then at 5atm the mole fraction will increase 5 times.

Hence, 5 x 1.96 x 10^{-4} = 9.8 x 10^{-4}
≈ 10 x 10^{-4} = 1.0 x 10^{-3}

60). Plot of Maxwell's distribution of velocities is given below:



Which of the following is correct about this plot?
(A) $f_1 > f_2$ (B) $V_1 < V_2$
(C) $T_1 < T_2$ (D) $T_1 > T_2$

Ans: (D) $T_1 > T_2$

Molecular velocity increases with temperature as $V_1 > V_2$.

Therefore T_1 must be greater than T_2.

61) The lattice site in a pure crystal *cannot* be occupied by
a) molecule b) ion
c) electron d) atom
Ans:-C

ದೆಹಲಿ: ಸಚಿವ ಸ್ಥಾನವನ್ನೂ ತೊರೆದ ನಾಯಕ • ಪಕ್ಷ ಭ್ರಷ್ಟಾಚಾರದಲ್ಲಿ ಮುಳುಗಿದೆ ಎಂದು ಆರೋಪ

ಎಎಪಿಗೆ ರಾಜಕುಮಾರ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೆಹಲಿ ಸಚಿವ ರಾಜಕುಮಾರ್ ಆನಂದ್ ಅವರು ತಮ್ಮ ಹುದ್ದೆಗೆ ಹಾಗೂ ಆಮ್ ಆದ್ಮಿ ಪಕ್ಷದ (ಎಎಪಿ) ಪ್ರಾಥಮಿಕ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ಘೋಷಿಸಿದ್ದಾರೆ.


ರಾಜಕುಮಾರ್ ಆನಂದ್

‘ಪಕ್ಷವು ಭ್ರಷ್ಟಾಚಾರದಲ್ಲಿ ಮುಳುಗಿದೆ ಹಾಗೂ ದಲಿತರನ್ನು ಕಡೆಗಣಿಸುತ್ತಿದೆ’ ಎಂದು ಟೀಕಿಸಿದ ಬೆನ್ನಲ್ಲೇ ಅವರು ಈ ನಿರ್ಧಾರ ಪ್ರಕಟಿಸಿದ್ದಾರೆ.

ಲೋಕಸಭಾ ಚುನಾವಣೆ ಕಣ ಕಾವೇರುತ್ತಿರುವ ಸಂದರ್ಭದಲ್ಲಿ, ಮುಖ್ಯಮಂತ್ರಿ ಹಾಗೂ ಪಕ್ಷದ ವರಿಷ್ಠ ಅರವಿಂದ ಕೇಜ್ರಿವಾಲ್, ನಾಯಕರಾದ ಮನೀಶ್ ಸಿಸೋಡಿಯಾ ಹಾಗೂ ಸತ್ಯೇಂದ್ರ ಜೈನ್ ಜೈಲಿನಲ್ಲಿದ್ದಾರೆ. ಪಕ್ಷವು ಸಂಕಷ್ಟ ಎದುರಿಸುತ್ತಿರುವ ಈ ಸಮಯದಲ್ಲಿಯೇ, ರಾಜಕುಮಾರ್ ಆನಂದ್ ಅವರು ರಾಜೀನಾಮೆ ನೀಡಿದ್ದಾರೆ.

ಅಲ್ಲದೇ, ಏಪ್ರಿಲ್ 14ರಂದು ‘ಸಂವಿಧಾನ ಉಳಿಸಿ, ಸರ್ವಾಧಿಕಾರ ತೊಲಗಿಸಿ ದಿನ’ ಎಂದು ಹಮ್ಮಿಕೊಳ್ಳುವುದಾಗಿ ಎಎಪಿ ಘೋಷಿಸಿದ ದಿನವೇ, ರಾಜಕುಮಾರ್ ಆನಂದ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ಘೋಷಿಸಿರುವುದು ಗಮನಾರ್ಹ.

ಅವರು ಕೇಂದ್ರ ದೆಹಲಿಯ ಪಟೇಲ್ ನಗರ ವಿಧಾನಸಭಾ ಕ್ಷೇತ್ರ ಪ್ರತಿನಿಧಿಸುತ್ತಿದ್ದರು.

ದಿಢೀರನೆ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ತಮ್ಮ ರಾಜೀನಾಮೆ ನಿರ್ಧಾರ ಕುರಿತು ಮಾಹಿತಿ ನೀಡಿದ ರಾಜಕುಮಾರ್ ಆನಂದ್, ‘ಎಎಪಿ ಭ್ರಷ್ಟ ಪಕ್ಷವಾಗಿದೆ. ದಲಿತರಿಗೆ ಸೂಕ್ತ ಪ್ರಾತಿನಿಧ್ಯ ಇಲ್ಲ. ಅಲ್ಲದೇ, ದಲಿತ ಸಮುದಾಯಕ್ಕೆ ಸೇರಿದ ಶಾಸಕರು ಮತ್ತು ಪಾಲಿಕೆ ಸದಸ್ಯರಿಗೆ ಗೌರವವನ್ನು ನೀಡುತ್ತಿಲ್ಲ’ ಎಂದು ಆರೋಪಿಸಿದರು.

‘ರಾಜಕಾರಣವನ್ನು ಬದಲಿಸುವ ಭರವಸೆಯೊಂದಿಗೆ ಆಮ್ ಆದ್ಮಿ ಪಕ್ಷ ಅಸ್ತಿತ್ವಕ್ಕೆ ಬಂತು. ಆದರೆ, ಬದಲಾದದ್ದು ಮಾತ್ರ ಪಕ್ಷದ ನಾಯಕರು. ಭ್ರಷ್ಟಾಚಾರದ ವಿರೋಧಿ ಚಳವಳಿಯಿಂದ ಹುಟ್ಟಿಕೊಂಡಂತಹ ಪಕ್ಷವೇ ಈಗ ಭ್ರಷ್ಟಾಚಾರದಲ್ಲಿ ಮುಳುಗಿದೆ. ನನ್ನ ಹೆಸರು ಇಂತಹ ಪಕ್ಷದೊಂದಿಗೆ ನಂಟು ಹೊಂದುವುದು ನನಗೆ ಬೇಡವಾಗಿದೆ’ ಎಂದರು.

‘ಪಕ್ಷದ ಉನ್ನತ ಸ್ಥಾನಗಳಲ್ಲಿ ದಲಿತರು ಇಲ್ಲ. ಭಾರಿ ವೇತನವಿರುವ ಹುದ್ದೆಗಳಿಗೆ ಇತ್ತೀಚೆಗೆ ನೇಮಕಾತಿ ನಡೆಯಿತು. ಅಲ್ಲಿ ಕೂಡ ಒಬ್ಬನೇ ಒಬ್ಬ ದಲಿತನನ್ನು ನೇಮಕ ಮಾಡಲಾಗಿಲ್ಲ. ನಾನು ಇಲ್ಲಿ ಸಿಕ್ಕಿಹಾಕಿಕೊಂಡಿದ್ದೇನೆ ಎಂಬ ಭಾವನೆ ಮೂಡುತ್ತಿದೆ’ ಎಂದು ಹೇಳಿದರು.

‘ಇಲ್ಲಿ (ದೆಹಲಿ ಅಬಕಾರಿ ನೀತಿ) ಪ್ರಮಾದವಾಗಿದೆ ಎಂದು ದೆಹಲಿ ಹೈಕೋರ್ಟ್ ನಿನ್ನೆ ಸ್ಪಷ್ಟವಾಗಿ ಹೇಳಿದೆ. ಇಲ್ಲಿ ತಪ್ಪು ಇದೆ’ ಎಂದರು.

ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ವಿರೋಧ ಪಕ್ಷಗಳು, ಮುಂಬರುವ ದಿನಗಳಲ್ಲಿ ಎಎಪಿಯ ದೆಹಲಿ ಮತ್ತು ಪಂಜಾಬ್ ಘಟಕದ ಹಲವು ಮುಖಂಡರು ಪಕ್ಷ ತೊರೆಯಲಿದ್ದಾರೆ ಎಂದು ಹೇಳಿದ್ದಾರೆ.

ರಾಜಕುಮಾರ್ ಆನಂದ್ ಅವರು ಆಮದು ಮಾಡಿಕೊಂಡಿದ್ದ ಸರಕುಗಳಿಗೆ ಸಂಬಂಧಿಸಿ ಅಂದಾಜು ₹7 ಕೋಟಿಯಷ್ಟು ಕಸ್ಟಮ್ ಸುಂಕವನ್ನು ಪಾವತಿಸಬೇಕಿತ್ತು. ಇದನ್ನು ತಪ್ಪಿಸುವ ಸಲುವಾಗಿ ತಪ್ಪು ಮಾಹಿತಿ ನೀಡಿದ್ದರು ಎಂಬ ಆರೋಪವನ್ನು ರಾಜಕುಮಾರ್ ಆನಂದ್ ಎದುರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ಕಳೆದ ವರ್ಷ ನವೆಂಬರ್‌ನಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳು ಅವರಿಗೆ ಸೇರಿದ ಸ್ಥಳಗಳಲ್ಲಿ ಸುಮಾರು 23 ಗಂಟೆಗಳ ಕಾಲ ಶೋಧ ನಡೆಸಿದ್ದರು.

ಅಗ್ನಿಪರೀಕ್ಷೆ ಕಾಲ: ಸಂಜಯ್ ಸಿಂಗ್

ರಾಜಕುಮಾರ್ ಆನಂದ್ ಅವರ ಸಚಿವ ಸ್ಥಾನ ಹಾಗೂ ಪಕ್ಷಕ್ಕೆ ರಾಜೀನಾಮೆ ನೀಡಿರುವುದಕ್ಕೆ ಪ್ರತಿಕ್ರಿಯಿಸಿರುವ ಎಎಪಿ ಮುಖಂಡ ಸಂಜಯ್ ಸಿಂಗ್, ‘ಇದು ಪಕ್ಷದ ಸಚಿವರು ಹಾಗೂ ಶಾಸಕರಿಗೆ ಅಗ್ನಿಪರೀಕ್ಷೆ ಕಾಲ. ಒತ್ತಡ ಸಹಿಸಲಾರದೇ ಕೆಲವರು ಪಕ್ಷ ತೊರೆಯುತ್ತಿರುವುದು ಗೊತ್ತು. ಆದರೆ, ಕೆಲವೇ ಜನರು ಪಕ್ಷದಲ್ಲಿದ್ದು ಹೋರಾಟ ನಡೆಸುತ್ತೇವೆ’ ಎಂದರು.

ಸಚಿವ ಸೌರಭ್ ಭಾರದ್ವಾಜ್, ‘ರಾಜಕುಮಾರ್ ಹೆದರಿದ್ದಾರೆ ಎಂಬುದು ಗೊತ್ತು. ಹೀಗಾಗಿ ಅವರನ್ನು ಮೋಸಗಾರ ಎಂದು ಕರೆಯುವುದಿಲ್ಲ’ ಎಂದರು.

‘ಅವರಿಗೆ ಕುಟುಂಬ ಇದೆ, ಬಂಧು-ಬಳಗ ಇದೆ. ವರ್ಷಗಟ್ಟಲೇ ತಿಹಾರ್ ಜೈಲಿನಲ್ಲಿರುವುದು ಅವರಿಗೂ ಬೇಕಾಗಿಲ್ಲ. ಹೀಗಾಗಿ, ಅವರ ವಿರುದ್ಧ ನಾವು ಏನೂ ಹೇಳುವುದಿಲ್ಲ’ ಎಂದು ಭಾರದ್ವಾಜ್ ಪ್ರತಿಕ್ರಿಯಿಸಿದರು. ‘ಒಬ್ಬ ದಲಿತ ಹಾಗೂ ದಲಿತ ಸಚಿವರಿಗೆ ಬೆದರಿಕೆ ಹಾಕಲಾಗುತ್ತದೆ ಅಂದರೆ, ಒಬ್ಬ ಸಾಮಾನ್ಯ ಮನುಷ್ಯನಿಗೆ ಏನಾಗಬಹುದು’ ಎಂದು ಪ್ರಶ್ನಿಸಿದ ಅವರು, ‘ಎಲ್ಲರೂ ಸಂಜಯ್ ಸಿಂಗ್ ಆಗಲು ಸಾಧ್ಯವಿಲ್ಲ. ಇಲ್ಲಿರುವ ಮುಖ್ಯ ಅಂಶವೆಂದರೆ ಯಾರೂ ಹೆದರಬಾರದು ಅಷ್ಟೆ’ ಎಂದು ಹೇಳಿದರು.

‘ಜೈಲು ಸೇರುವ ಭಯದಿಂದ ರಾಜೀನಾಮೆ’

‘ಕೆಲ ತಿಂಗಳುಗಳ ಹಿಂದೆ ಜಾರಿ ನಿರ್ದೇಶನಾಲಯ ಅಧಿಕಾರಿಗಳು ದಾಳಿ ನಡೆಸಿದ್ದರು. ಜೈಲು ಸೇರುವ ಭಯದಿಂದ ಆನಂದ್ ಈ ನಿರ್ಧಾರ ಕೈಗೊಂಡಿದ್ದಾರೆ’ ಎಂದು ಈ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಎಎಪಿ ಹೇಳಿದೆ.

‘ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನೇತೃತ್ವದ ಪಕ್ಷವನ್ನು ಒಡೆಯಲು ಹಾಗೂ ನಾಶ ಮಾಡಲು ಬಿಜೆಪಿ ಯತ್ನಿಸುತ್ತಿದೆ ಎಂಬ ತನ್ನ ಆರೋಪಗಳಿಗೆ ಆನಂದ್ ರಾಜೀನಾಮೆ ನೀಡಿರುವುದು ಪ್ರತ್ಯಕ್ಷ ಪುರಾವೆಯಾಗಿದೆ’ ಎಂದೂ ಎಎಪಿ ಹೇಳಿದೆ. ‘ಕೇಂದ್ರ ಸರ್ಕಾರದಿಂದ ಎದುರಾಗಿರುವ ಬೆದರಿಕೆಯನ್ನು ಎದುರಿಸಲು ಆನಂದ್ ಅವರಿಗೆ ಸಾಧ್ಯವಾಗಿಲ್ಲ’ ಎಂದಿರುವ ಎಎಪಿ, ‘ಶೀಘ್ರವೇ ಅವರು ಬಿಜೆಪಿ ಸೇರುವರು’ ಎಂದಿದೆ. ಎಎಪಿಯ ಈ ಹೇಳಿಕೆಗಳನ್ನು ರಾಜಕುಮಾರ್ ಆನಂದ್ ಅಲ್ಲಗಳೆದಿದ್ದಾರೆ.

‘ಶಾಸಕರಿಗೆ ಸಂದೇಶ ಕಳಿಸಿದ್ದಕ್ಕೆ ಕೇಜ್ರಿವಾಲ್ ವಿರುದ್ಧ ತನಿಖೆ’

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಿಹಾರ್ ಜೈಲಿನಿಂದ ಎಎಪಿ ಶಾಸಕರಿಗೆ ತಮ್ಮ ವಕೀಲರ ಮೂಲಕ ಸಂದೇಶ ರವಾನಿಸಿರುವ ಕುರಿತು ತನಿಖೆ ಪ್ರಾರಂಭವಾಗಿದೆ ಎಂದು ಎಎಪಿಯ ಹಿರಿಯ ನಾಯಕ, ರಾಜ್ಯಸಭಾ ಸದಸ್ಯ ಸಂಜಯ್ ಸಿಂಗ್ ಬುಧವಾರ ತಿಳಿಸಿದರು.

ಶಾಸಕರು ತಮ್ಮ ಕ್ಷೇತ್ರಗಳಿಗೆ ತೆರಳಿ ಜನರ ಸಮಸ್ಯೆಗಳನ್ನು ಪರಿಹರಿಸುವಂತೆ ಕೇಜ್ರಿವಾಲ್ ಅವರು ಸಂದೇಶ ರವಾನಿಸಿದ ಬಳಿಕ, ವಕೀಲರು ಮತ್ತು ಅವರ ಕುಟುಂಬದ ಸದಸ್ಯರ ಭೇಟಿಗೆ ಅವಕಾಶ ನಿರಾಕರಿಸಲಾಗುವುದು ಎಂದು ಜೈಲು ಆಡಳಿತ ಬೆದರಿಕೆಯನ್ನು ಹಾಕಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

14ಕ್ಕೆ ‘ಸಂವಿಧಾನ ಉಳಿಸಿ, ಸರ್ವಾಧಿಕಾರ ತೊಲಗಿಸಿ’ ದಿನ ಆಚರಣೆ: ಎಎಪಿ

ನವದೆಹಲಿ: ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಸೂಚನೆಯಂತೆ ಅಂಬೇಡ್ಕರ್ ಅವರ ಜನ್ಮದಿನವಾದ ಏಪ್ರಿಲ್ 14ರಂದು ‘ಸಂವಿಧಾನ ಉಳಿಸಿ, ಸರ್ವಾಧಿಕಾರ ತೊಲಗಿಸಿ ದಿನ’ ಆಚರಿಸುವುದಾಗಿ ಎಎಪಿ ಬುಧವಾರ ಘೋಷಿಸಿದೆ.

‘ಬುಧವಾರ ತಿಹಾರ್ ಜೈಲಿನಲ್ಲಿ ಕೇಜ್ರಿವಾಲ್ ಅವರನ್ನು ಭೇಟಿಯಾದ ಅವರ ಪತ್ನಿ ಸುನೀತಾ ಕೇಜ್ರಿವಾಲ್ ಅವರು ಪಕ್ಷದ ಸಭೆಯಲ್ಲಿ ಕೇಜ್ರಿವಾಲ್ ಸಂದೇಶವನ್ನು ತಿಳಿಸಿದ್ದಾರೆ’ ಎಂದು ಪಕ್ಷದ ನಾಯಕ ಗೋಪಾಲ್ ರಾಯ್ ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

‘ಕೇಜ್ರಿವಾಲ್ ಅವರು ಜೈಲಿನಿಂದ ಕಳುಹಿಸಿರುವ ಮತ್ತೊಂದು ಸಂದೇಶದಲ್ಲಿ, ಎಎಪಿ ಶಾಸಕರು ಮತ್ತು ಕಾರ್ಯಕರ್ತರು ದೆಹಲಿ ಜನರಿಗೆ ಯಾವುದೇ ತೊಂದರೆಯಾಗದಂತೆ ಕ್ರಮಕೈಗೊಳ್ಳುವಂತೆ ತಿಳಿಸಿದ್ದಾರೆ’ ಎಂದು ಹೇಳಿದ್ದಾರೆ.

ಪುನರಾವರ್ತಿತ ಅರ್ಜಿ: ಕೋರ್ಟ್ ಕಿಡಿ

ಕೇಜ್ರಿವಾಲ್ ವಜಾಕ್ಕೆ ಕೋರಿದ ಪ್ರಕರಣ • ಅರ್ಜಿದಾರರಿಗೆ ₹50 ಸಾವಿರ ದಂಡ

ನವದೆಹಲಿ (ಪಿಟಿಐ): ಬಂಧಿತರಾಗಿರುವ ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ವಜಾಗೊಳಿಸುವಂತೆ ಕೋರಿ ಪದೇ ಪದೇ ಅರ್ಜಿಗಳು ಸಲ್ಲಿಕೆಯಾಗುತ್ತಿರುವುದಕ್ಕೆ ದೆಹಲಿ ಹೈಕೋರ್ಟ್ ಬುಧವಾರ ಅಸಮಾಧಾನ ವ್ಯಕ್ತಪಡಿಸಿತು.

ಒಮ್ಮೆ ಈ ರೀತಿಯ ಅರ್ಜಿಯನ್ನು ನ್ಯಾಯಾಲಯ ಪರಿಶೀಲಿಸಿದ ಬಳಿಕವೂ ಇದೇ ರೀತಿಯ ಅರ್ಜಿಗಳು ಪುನರಾವರ್ತಿತವಾಗಿ ಬರುತ್ತಿರುವುದು ಸರಿಯಲ್ಲ ಎಂದ ಕೋರ್ಟ್, ಮುಂದುವರಿದ ಭಾಗಗಳನ್ನು ಹೊಂದಿರಲು ಇದು ಜೇಮ್ಸ್ ಬಾಂಡ್ ಸಿನಿಮಾ ಅಲ್ಲ ಎಂದು ಎಚ್ಚರಿಸಿತು.

ಈ ಕುರಿತು ಅರ್ಜಿ ಸಲ್ಲಿಸಿದ್ದ ಎಎಪಿ ಮಾಜಿ ಶಾಸಕ ಸಂದೀಪ್ ಕುಮಾರ್ ಅವರನ್ನು ತರಾಟೆಗೆ ತೆಗೆದುಕೊಂಡ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಮನಮೋಹನ್, ನ್ಯಾಯಮೂರ್ತಿ ಮನ್ಮೀತ್ ಪಿ.ಎಸ್. ಅರೋರಾ ಅವರ ಪೀಠವು, ರಾಜಕೀಯ ಉದ್ದೇಶದಿಂದ ನೀವು ಇಲ್ಲಿಗೆ ಬಂದಿದ್ದೀರಿ ಎಂದು ಹೇಳಿತು. ಅಲ್ಲದೆ, ‘ನೀವು ವ್ಯವಸ್ಥೆಯನ್ನು ಅಣಕಿಸುತ್ತಿದ್ದೀರಿ’ ಎಂದ ಪೀಠವು, ಅರ್ಜಿದಾರರಿಗೆ ₹50,000 ದಂಡವನ್ನೂ ವಿಧಿಸಿತು.

‘ಈ ಕುರಿತು ಲೆಫ್ಟಿನೆಂಟ್ ಗವರ್ನರ್ ಪರಿಶೀಲಿಸುತ್ತಾರೆ. ಆದರೆ ನೀವು ಈ ವಿಚಾರದಲ್ಲಿ ನಮ್ಮನ್ನು ಎಳೆದು ತರಲು ಪ್ರಯತ್ನಿಸುತ್ತಿದ್ದೀರಿ’ ಎಂದು ಪೀಠ ಬೇಸರ ವ್ಯಕ್ತಪಡಿಸಿತು. ನ್ಯಾಯಪೀಠವು, ರಾಜಧಾನಿಯಲ್ಲಿ ರಾಷ್ಟ್ರಪತಿ ಆಡಳಿತ ಹೇರಲು ಸಾಧ್ಯವಿಲ್ಲ ಎಂದು ಪುನರುಚ್ಚರಿಸಿತು.

ಕೇಜ್ರಿವಾಲ್ ಅವರ ಪದಚ್ಯುತಿಗಾಗಿ ಸಲ್ಲಿಕೆಯಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು (ಪಿಐಎಲ್) ನ್ಯಾಯಾಲಯ ಮಾರ್ಚ್ 28ರಂದು ವಜಾಗೊಳಿಸಿತ್ತು. ಇಂತಹ ಪ್ರಕರಣದಲ್ಲಿ ನ್ಯಾಯಾಂಗದ ಹಸ್ತಕ್ಷೇಪಕ್ಕೆ ಯಾವುದೇ ಅವಕಾಶವಿಲ್ಲ. ಇದು ಇತರೆ ಅಂಗದ ಕೆಲಸ ಎಂದು ಹೇಳಿತ್ತು.

ವಿಶ್ವದಾದ್ಯಂತ ಪ್ರತಿಭಟನೆ

ವಾಷಿಂಗ್ಟನ್ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಡಿ ಬಂಧನದಲ್ಲಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬೆಂಬಲಿಸಿ ವಿಶ್ವದಾದ್ಯಂತ ಇರುವ ಎಎಪಿ ಸದಸ್ಯರು ಮತ್ತು ಬೆಂಬಲಿಗರು ಪ್ರತಿಭಟನೆ ಮತ್ತು ಉಪವಾಸ ಸತ್ಯಾಗ್ರಹ ಮಾಡಿದರು.

ಅಮೆರಿಕ, ಕೆನಡಾ, ಬ್ರಿಟನ್, ಐರ್ಲೆಂಡ್ ಮತ್ತು ಆಸ್ಟ್ರೇಲಿಯಾದಲ್ಲಿರುವ ಎಎಪಿ ಕಾರ್ಯಕರ್ತರು ಭಾರತೀಯ ರಾಯಭಾರ ಕಚೇರಿ ಎದುರು ಮತ್ತು ಪ್ರಮುಖ ಸ್ಥಳಗಳಲ್ಲಿ ಪ್ರತಿಭಟನೆ ನಡೆಸಿ, ಕೇಜ್ರಿವಾಲ್ ಅವರನ್ನು ತಕ್ಷಣ ಬಿಡುಗಡೆಗೊಳಿಸುವಂತೆ ಆಗ್ರಹಿಸಿದರು.

‘ಸಮಾನತೆಯ ಸಮಾಜಕ್ಕಾಗಿ ಹೋರಾಟ ಮಾಡುತ್ತಿರುವ ಲಕ್ಷಾಂತರ ಭಾರತೀಯರ ಭರವಸೆಯ ಪ್ರತೀಕ ಅರವಿಂದ ಕೇಜ್ರಿವಾಲ್. ಅವರ ಬಂಧನವು ಪ್ರಜಾಪ್ರಭುತ್ವದ ಮೇಲಿನ ದಾಳಿಗೆ ಉದಾಹರಣೆ’ ಎಂದು ಲಾಸ್‌ಏಂಜಲೀಸ್‌ನಲ್ಲಿರುವ ಎಎಪಿ ಸದಸ್ಯ ಜಸ್ವಂತ್ ರೆಡ್ಡಿ ಆರೋಪಿಸಿದರು.

ನ್ಯೂಯಾರ್ಕ್, ಬಾಸ್ಟನ್, ಸ್ಯಾನ್‌ಫ್ರಾನ್ಸಿಸ್ಕೊ, ಡಲ್ಲಾಸ್, ಲಾಸ್‌ಏಂಜಲೀಸ್, ಟೊರಾಂಟೊ, ವ್ಯಾಂಕೋವರ್, ಲಂಡನ್, ಬರ್ಲಿನ್, ಓಸ್ಲೊ, ಮೆಲ್ಬರ್ನ್ ಮೊದಲಾದ ಕಡೆ ಎಎಪಿ ಕಾರ್ಯಕರ್ತರು ಉಪವಾಸ ಸತ್ಯಾಗ್ರಹ ನಡೆಸಿದರು.

ಬಂಧನ ಪ್ರಶ್ನಿಸಿ ‘ಸುಪ್ರೀಂ’ಗೆ ಮೊರೆ

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣ ಜತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ತನ್ನ ಬಂಧನವನ್ನು ಎತ್ತಿಹಿಡಿದಿರುವ ಹೈಕೋರ್ಟ್ ತೀರ್ಪಿನ ವಿರುದ್ಧ ದಹೆಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಬುಧವಾರ ಅರ್ಜಿ ಸಲ್ಲಿಸಿದ್ದಾರೆ.

ಈ ಕುರಿತ ಅರ್ಜಿಯನ್ನು ಶೀಘ್ರವೇ ಪಟ್ಟಿ ಮಾಡಿ, ವಿಚಾರಣೆ ನಡೆಸುವಂತೆ ಕೇಜ್ರಿವಾಲ್ ಪರ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರನ್ನು ಕೋರಿದರು. ಇದಕ್ಕೆ ಸ್ಪಂದಿಸಿದ ಮುಖ್ಯ ನ್ಯಾಯಮೂರ್ತಿ ಈ ಕುರಿತು ಇ-ಮೇಲ್ ಮಾಡಿ, ಪರಿಶೀಲಿಸುತ್ತೇನೆ ಎಂದು ಸೂಚಿಸಿದರು.

ಇ.ಡಿ ತನ್ನನ್ನು ಬಂಧಿಸಿರುವುದನ್ನು ಪ್ರಶ್ನಿಸಿ ಕೇಜ್ರಿವಾಲ್ ಸಲ್ಲಿಸಿದ್ದ ಅರ್ಜಿಯನ್ನು ದೆಹಲಿ ಹೈಕೋರ್ಟ್ ಮಂಗಳವಾರ ವಜಾಗೊಳಿಸಿತ್ತು.



ಸಂಭ್ರಮ

ಕೇರಳದ ತಿರುವನಂತಪುರದಲ್ಲಿ ಬುಧವಾರ ರಂಜಾನ್ ಪವಿತ್ರ ಮಾಸ ಮುಕ್ತಾಯದ ಈದ್ ಉಲ್-ಫಿತ್ರ್ ವೇಳೆ ಮಹಿಳೆಯೊಬ್ಬರು ಮಗುವನ್ನು ಎತ್ತಿ ಆಡಿಸುತ್ತಾ ಹರ್ಷ ವ್ಯಕ್ತಪಡಿಸಿದರು –ಪಿಟಿಐ ಚಿತ್ರ

ಸಂದೇಶ್‌ಖಾಲಿ ಸಿಬಿಐ ತನಿಖೆಗೆ ಸೂಚನೆ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಯಲ್ಲಿ ನಡೆದಿದೆ ಎನ್ನಲಾದ ಮಹಿಳೆಯರ ವಿರುದ್ಧದ ಅಪರಾಧಗಳು ಮತ್ತು ಭೂಕಬಳಿಕೆ ಆರೋಪಕ್ಕೆ ಸಂಬಂಧಿಸಿದಂತೆ ಸಿಬಿಐ ತನಿಖೆ ನಡೆಸುವಂತೆ ಕಲ್ಕತ್ತಾ ಹೈಕೋರ್ಟ್ ಬುಧವಾರ ಆದೇಶಿಸಿದೆ.

ಕೋರ್ಟ್ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯಲಿದೆ. ಕೃಷಿ ಭೂಮಿಯನ್ನು ಮತ್ಸ್ಯ ಕೃಷಿಗಾಗಿ ಜಲಮೂಲವಾಗಿ ಅಕ್ರಮವಾಗಿ ಬದಲಾಯಿಸಿದ ಆರೋಪದ ಬಗ್ಗೆಯೂ ಸಮಗ್ರ ವರದಿ ನೀಡಬೇಕು ಎಂದು ಮುಖ್ಯ ನ್ಯಾಯಮೂರ್ತಿ ಟಿ.ಎಸ್.ಶಿವಗನಂ ಅವರನ್ನು ಒಳಗೊಂಡ ವಿಭಾಗೀಯ ಪೀಠ ನಿರ್ದೇಶನ ನೀಡಿತು.

ಪ್ರಕರಣದ ಬಗ್ಗೆ ಸಿಬಿಐನಿಂದ ನಿಷ್ಪಕ್ಷಪಾತ ತನಿಖೆಯ ಅಗತ್ಯವಿದೆ ಎಂದು ಕೋರ್ಟ್ ಹೇಳಿತು.

ಪ್ರಕರಣದ ವಿಚಾರಣೆಯನ್ನು ಮೇ 2ಕ್ಕೆ ಮುಂದೂಡಿ, ಅಂದು ಸಿಬಿಐ ಸಮಗ್ರ ವರದಿ ಸಲ್ಲಿಸಬೇಕು ಎಂದು ತಿಳಿಸಿತು.

ಕ್ಷಮೆ ಒಪ್ಪುವಷ್ಟು ಉದಾರಿ ಆಗುವುದಿಲ್ಲ: ‘ಸುಪ್ರೀಂ’

ಒಂದನೇ ಪುಟದಿಂದ...

‘ರಾಮದೇವ ಹಾಗೂ ಬಾಲಕೃಷ್ಣ ಅವರಿಗೆ ಶೋಕಾಸ್ ನೋಟಿಸ್ ನೀಡಿದ್ದಲ್ಲದೇ, ನ್ಯಾಯಪೀಠದ ಮುಂದೆ ಹಾಜರಾಗುವಂತೆ ನಿರ್ದೇಶನ ನೀಡಲಾಗಿತ್ತು. ಕೋರ್ಟ್ ಮುಂದೆ ಸ್ವತಃ ಹಾಜರಾಗದೇ ನುಣುಚಿಕೊಳ್ಳಲು ಪ್ರಯತ್ನಿಸಿದರು. ಇಂತಹ ನಡೆಯನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ’ ಎಂದು ಪೀಠ ಹೇಳಿತು.

‘ರಾಮದೇವ ಮತ್ತು ಬಾಲಕೃಷ್ಣ ಅವರ ನಡೆಯನ್ನು, ಕೋರ್ಟ್‌ನ ಆದೇಶ ಮತ್ತು ಮುಚ್ಚಳಿಕೆ ಪತ್ರದ ಉದ್ದೇಶಪೂರ್ವಕ ಉಲ್ಲಂಘನೆ ಎಂದು ಭಾವಿಸುತ್ತೇವೆ’ ಎಂದು ಇಬ್ಬರ ಪರ ಹಾಜರಿದ್ದ ಹಿರಿಯ ವಕೀಲ ಮುಕುಲ್ ರೋಹ್ಟಗಿ ಅವರನ್ನು ಉದ್ದೇಶಿಸಿ ನ್ಯಾಯಮೂರ್ತಿಗಳು ಹೇಳಿದರು.

‘ನನ್ನ ಕಕ್ಷಿದಾರರು ಬೇಷರತ್ತಾಗಿ ಕ್ಷಮೆ ಯಾಚಿಸಿದ್ದಾರೆ’ ಎಂಬ ಅಂಶವನ್ನು ರೋಹ್ಟಗಿ ಅವರು ಪೀಠದ ಗಮನಕ್ಕೆ ತಂದರು.

‘ಈ ಪ್ರಕರಣದ ಇತಿಹಾಸ ಹಾಗೂ ನ್ಯಾಯಾಲಯದ ಆದೇಶವನ್ನು ಕಡೆಗಣಿಸಿರುವ ಈ ಇಬ್ಬರ ನಡವಳಿಕೆಯನ್ನು ಗಮನಿಸಿದ ಮೇಲೆ, ಅವರು ಸಲ್ಲಿಸಿರುವ ಪ್ರಮಾಣಪತ್ರವನ್ನು ಸ್ವೀಕರಿಸಲು ಆಗದು’ ಎಂದು ನ್ಯಾಯಪೀಠ ಹೇಳಿತು.

ಆಗ, ರೋಹ್ಟಗಿ, ‘ಜನರು ತಪ್ಪುಗಳನ್ನು ಮಾಡುವುದು ಸಹಜ’ ಎಂದು ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಹಾಗಾದರೆ, ಅವರು ಪರಿಣಾಮವನ್ನು ಎದುರಿಸಲಿ’ ಎಂದಿತು.

‘ಕೋರ್ಟ್‌ಗೆ ನೀಡಿದ್ದ ಮುಚ್ಚಳಿಕೆ ಪತ್ರಕ್ಕೆ ನೀವು ತೋರಿದಂತಹ ಅಸಡ್ಡೆಯನ್ನೇ ನಿಮ್ಮ ಕ್ಷಮಾಪಣೆ ಪತ್ರಕ್ಕೆ ನಾವು ತೋರಿಸಬಾರದೇಕೆ’ ಎಂದು ಪ್ರಶ್ನಿಸಿದ ನ್ಯಾಯಪೀಠ, ‘ಈ ಇಬ್ಬರು ಸಲ್ಲಿಸಿದ ಪ್ರಮಾಣ ಪತ್ರಗಳ ಬಗ್ಗೆ ನಮಗೆ ವಿಶ್ವಾಸ ಇಲ್ಲ’ ಎಂದು ಹೇಳಿ, ವಿಚಾರಣೆಯನ್ನು ಏಪ್ರಿಲ್ 16ಕ್ಕೆ ಮುಂದೂಡಿತು.

ಔಷಧ ಪರವಾನಗಿ ಪ್ರಾಧಿಕಾರಕ್ಕೂ ಚಾಟಿ

ಪತಂಜಲಿ ಆಯುರ್ವೇದ ಕಂಪನಿಯ ಜಾಹೀರಾತುಗಳ ಕುರಿತಾಗಿ ಸೂಕ್ತ ಕ್ರಮ ಕೈಗೊಳ್ಳುವಲ್ಲಿ ವಿಫಲವಾಗಿರುವ ಉತ್ತರಾಖಂಡದ ಔಷಧ ಪರವಾನಗಿ ಮತ್ತು ನಿಯಂತ್ರಣ ಪ್ರಾಧಿಕಾರವನ್ನು ಕೂಡ ತರಾಟೆಗೆ ತೆಗೆದುಕೊಂಡ ನ್ಯಾಯಪೀಠ, ‘ಈ ವಿಷಯವನ್ನು ಲಘುವಾಗಿ ತೆಗೆದುಕೊಳ್ಳುವುದಿಲ್ಲ’ ಎಂದು ಕಟು ಮಾತುಗಳಲ್ಲಿ ಎಚ್ಚರಿಕೆ ನೀಡಿತು.

‘ಪ್ರಾಧಿಕಾರವು ಕಡತಗಳನ್ನು ಸಾಗಿಸುವುದನ್ನು ಹೊರತುಪಡಿಸಿ, ಕಳೆದ 4–5 ವರ್ಷಗಳಲ್ಲಿ ಯಾವುದೇ ಕ್ರಮ ಕೈಗೊಂಡಿಲ್ಲ ಎಂಬುದನ್ನು ತಿಳಿದು ದಿಗ್ಭ್ರಮೆಯಾಗಿದೆ’ ಎಂದ ಪೀಠ, ಪ್ರಾಧಿಕಾರದ ಪರ ಅಧಿಕಾರಿಯೊಬ್ಬರು ಹಾಜರಾಗಿ, ಕ್ರಮ ಕೈಗೊಳ್ಳದಿರುವುದಕ್ಕೆ ಕಾರಣಗಳನ್ನು ವಿವರಿಸಬೇಕು ಎಂದು ಸೂಚಿಸಿತು.

ವಿಚಾರಣೆ ವೇಳೆ, ಪ್ರಾಧಿಕಾರದ ಜಂಟಿ ನಿರ್ದೇಶಕರನ್ನು ಉದ್ದೇಶಿಸಿ, ‘ನೀವು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕಿತ್ತು’ ಎಂದು ಪೀಠ ಹೇಳಿತು.

‘ಈ ಪ್ರಕರಣ ಕುರಿತು ತಾನು ಏಕೆ ಕ್ರಮ ಕೈಗೊಳ್ಳಲಿಲ್ಲ ಎಂಬ ಬಗ್ಗೆ, ನಿಮಗಿಂತಲೂ ಮೊದಲು ಇದ್ದ ಅಧಿಕಾರಿಗಳು ಕೂಡ ಪ್ರಮಾಣಪತ್ರ ಸಲ್ಲಿಸಲಿ’ ಎಂದು ಸೂಚಿಸಿತು.

2018ರಿಂದ ಇಲ್ಲಿಯ ವರೆಗೆ ಹರಿದ್ವಾರದಲ್ಲಿ ಕರ್ತವ್ಯ ನಿರ್ವಹಣೆ ಮಾಡಿರುವ ಜಿಲ್ಲಾ ಆಯುರ್ವೇದ ಮತ್ತು ಯುನಾನಿ ಅಧಿಕಾರಿಗಳು ಕೂಡ, ಕ್ರಮ ಕೈಗೊಳ್ಳದಿರುವ ಕುರಿತು ಪ್ರಮಾಣಪತ್ರ ಸಲ್ಲಿಸಬೇಕು ಎಂದೂ ಪೀಠ ನಿರ್ದೇಶನ ನೀಡಿತು.

ಆಳುವವರಿಗೆ ಬೇಡವೇ ಬಡವರ ಬೋಗಿ?

ಒಂದನೇ ಪುಟದಿಂದ...

ಎ.ಸಿ ಕೋಚ್‌ಗಳನ್ನು ಹೆಚ್ಚಿಸಲಾಗಿದೆ. ಇದೇ ರೀತಿ ಹಲವು ರೈಲುಗಳಲ್ಲಿ ಸಾಮಾನ್ಯ ಬೋಗಿಗಳನ್ನು ಕಡಿತಗೊಳಿಸಲಾಗಿದೆ. ರೈಲಿನ ಮುಂಭಾಗದಲ್ಲಿ ಒಂದು ಮತ್ತು ಹಿಂಭಾಗದಲ್ಲಿ ಎರಡು ಬೋಗಿಗಳಷ್ಟೇ ಬಡವರ ಪಾಲಿಗೆ ಸಿಗುತ್ತಿವೆ.

‘ಆಧುನಿಕ ಸೌಲಭ್ಯಗಳನ್ನು ಹೊಂದಿರುವ ‘ವಂದೇ ಭಾರತ್’ ರೈಲುಗಳ ಸಂಚಾರ ಹೆಚ್ಚಿಸುವ ಗುರಿಯನ್ನು ರೈಲ್ವೆ ಸಚಿವರು ಇಟ್ಟುಕೊಂಡಿದ್ದಾರೆ. ಇದು ನಿಜವಾದರೆ, ಸಾಮಾನ್ಯ ಬೋಗಿಗಳೇ ಇಲ್ಲದ ರೈಲುಗಳು ಹೆಚ್ಚು ಓಡಾಡಲಿವೆ. ಬಡವರು ಈಗಲೇ ನೂಕುನುಗ್ಗಲಿನಲ್ಲಿ ಸಾಮಾನ್ಯ ಬೋಗಿಗಳಿಗೆ ಹತ್ತಲಾಗುತ್ತಿಲ್ಲ. ಮುಂದೆ ಕೆಂಪು ಬಸ್‌ಗಳಿಗಾಗಿ ಕಾಯುವ ಪರಿಸ್ಥಿತಿ ಬರಲಿದೆ’ ಎಂದು ಹಾವೇರಿಯ ರೈಲು ಪ್ರಯಾಣಿಕ ಎಂ. ಕರಿಬಸಪ್ಪ ಆತಂಕ ವ್ಯಕ್ತಪಡಿಸುತ್ತಾರೆ.

ಕಡಿಮೆ ಟಿಕೆಟ್ ದರ: ಬೆಂಗಳೂರಿನಿಂದ ಮಂಗಳೂರಿಗೆ ತೆರಳುವ ಪ್ರಯಾಣಿಕರಿಗೆ ಸಾಮಾನ್ಯ ಬೋಗಿಯ ದರ ₹140 ಇದ್ದರೆ, ಸ್ಲೀಪರ್‌ನಲ್ಲಿ ₹300 ಇದೆ. ಇವೆರಡೇ ಜನಸಾಮಾನ್ಯರು ಬಯಸುವ ಬೋಗಿಗಳು. ಏಕೆಂದರೆ 3 ಟೈರ್ ಎ.ಸಿ ಕೋಚ್‌ಗೆ ₹790, 2ಟೈರ್ ಎ.ಸಿ ಕೋಚ್‌ಗೆ ₹1,100, ಫಸ್ಟ್‌ಕ್ಲಾಸ್ ಎ.ಸಿ ಕೋಚ್‌ಗೆ ₹1,840 ದರವಿರುವುದರಿಂದ ಬಡವರು ಈ ಬೋಗಿಗಳಲ್ಲಿ ಸಂಚರಿಸಲು ಬಯಸುವುದಿಲ್ಲ. ಇದೇ ರೀತಿ ಬೆಂಗಳೂರಿನಿಂದ ಹುಬ್ಬಳ್ಳಿಗೆ ರಾಣಿ ಚನ್ನಮ್ಮ ಎಕ್ಸ್‌ಪ್ರೆಸ್‌ನಲ್ಲಿ ತೆರಳುವವರಿಗೂ ಬಹುತೇಕ ದರಗಳು ಇಷ್ಟೇ ಇವೆ.

ಕಲಬುರಗಿ, ಮಂತ್ರಾಲಯ, ಮಂಗಳೂರು ಸಹಿತ ವಿವಿಧೆಡೆಗೆ ಸಂಚರಿಸುವ ರೈಲುಗಳ ಸಾಮಾನ್ಯ ಬೋಗಿಗಳಲ್ಲಿ ಜಾಗವಿಲ್ಲದೇ ಇದ್ದಾಗ ಕೆಲ ಪ್ರಯಾಣಿಕರು ಸೀಟು ಕಾಯ್ದಿರಿಸಿದ ಎರಡನೇ ದರ್ಜೆ ಸ್ಲೀಪರ್ ಕೋಚ್ ಸೇರಿದಂತೆ, ಎ.ಸಿ 3 ಟೈರ್, 2 ಟೈರ್, ಫಸ್ಟ್ ಕ್ಲಾಸ್ ಬೋಗಿಗಳಿಗೂ ನುಗ್ಗುತ್ತಾರೆ. ಇದರಿಂದ ಸೀಟು ಕಾಯ್ದಿರಿಸಿದವರು ತೊಂದರೆಗೆ ಸಿಲುಕುತ್ತಿದ್ದಾರೆ ಎಂಬ ದೂರೂ ಕೇಳಿ ಬರುತ್ತಿದೆ.

ಸಾಮಾನ್ಯ ಬೋಗಿಗಳನ್ನು ಹೆಚ್ಚಿಸಲು ರೈಲ್ವೆ ಕ್ರಮ ಕೈಗೊಳ್ಳುತ್ತಿಲ್ಲ. ಜನಪ್ರತಿನಿಧಿಗಳಿಗೂ ಈ ಬಗ್ಗೆ ಕಾಳಜಿ ಇಲ್ಲ ಎಂಬುದು ಪ್ರಯಾಣಿಕರ ದೂರು.

ಪ್ರಯಾಣವೇ ಪ್ರಯಾಸ

‘ನಾನು ಹುಬ್ಬಳ್ಳಿ– ಬೆಂಗಳೂರು ನಡುವೆ ಆಗಾಗ ಪ್ರಯಾಣ ಮಾಡುತ್ತಿರುತ್ತೇನೆ. ಬೇಗ ಬಂದವರಿಗೆ ಜನರಲ್ ಬೋಗಿಯಲ್ಲಿ ಸೀಟು ಸಿಗುತ್ತದೆ. ಹೀಗೆ ಸೀಟು ಹಿಡಿದು ಕೂತವರಿಗೆ ಶೌಚಾಲಯಕ್ಕೆ ಎದ್ದು ಹೋಗುವುದೂ ಕಷ್ಟ. ಕುಳಿತಿದ್ದವರು ಎದ್ದುಹೋದರೆ, ಮತ್ತೆ ಸೀಟು ಸಿಗುವುದಿಲ್ಲ. ಸೀಟಿಗಾಗಿಯೇ ಹಲವು ಬಾರಿ ಜಗಳಗಳು ನಡೆದಿವೆ. ಯಾವುದಾದರೂ ಸ್ಪರ್ಧಾತ್ಮಕ ಪರೀಕ್ಷೆಗಳು ಇದ್ದರಂತೂ ಜಾಡಿಯಲ್ಲಿ ಉಪ್ಪಿನಕಾಯಿ ತುಂಬಿದಂತೆ ಪ್ರಯಾಣಿಕರು ತುಂಬಿರುತ್ತಾರೆ.

ರಾಯಸಾಬ್ ಅನ್ಸಾರಿ, ಪ್ರಯಾಣಿಕ, ಹುಬ್ಬಳ್ಳಿ

ಎ.ಸಿ ಕೋಚ್‌ಗೆ ಸ್ಕ್ಯಾನಿಂಗ್ ಅಳವಡಿಸಿ

ನಾನು ಎ.ಸಿ. ಕೋಚ್‌ನಲ್ಲೇ ಪ್ರಯಾಣಿಸುವುದು. ಜನರಲ್ ಬೋಗಿ ಭರ್ತಿಯಾದ ಕಾರಣ, ಅಲ್ಲಿನ ಪ್ರಯಾಣಿಕರು ಎ.ಸಿ ಕೋಚ್‌ಗಳಿಗೆ ನುಗ್ಗುತ್ತಾರೆ. ಇದನ್ನು ತಪ್ಪಿಸಲು ಜನರಲ್ ಬೋಗಿಗಳನ್ನು ಹೆಚ್ಚಿಸಬೇಕು. ಜೊತೆಗೆ ಎ.ಸಿ ಕೋಚ್‌ಗಳಿಗೆ ಸ್ಕ್ಯಾನಿಂಗ್ ಸಿಸ್ಟಂ ಅಳವಡಿಸಬೇಕು. ಎ.ಸಿ ಕೋಚ್ ಪ್ರಯಾಣಿಕರ ಟಿಕೆಟ್‌ನಲ್ಲಿ ಕ್ಯೂಆರ್ ಕೋಡ್ ಇರಬೇಕು. ಅದನ್ನು ಸ್ಕ್ಯಾನ್ ಮಾಡಿದರಷ್ಟೇ ಬಾಗಿಲು ತೆರೆಯುವಂತಾಗಬೇಕು

ರಾಘವೇಂದ್ರ ಉಡುಪಿ, ರೈಲು ಪ್ರಯಾಣಿಕ

ವಿಶೇಷ ರೈಲು ಎಂಬ ಲೆಕ್ಕಾಚಾರ

ಜನದಟ್ಟಣೆ ಹೆಚ್ಚಿರುವಾಗ ವಿಶೇಷ ರೈಲುಗಳ ಕಾರ್ಯಾಚರಣೆ ನಡೆಸಲಾಗುತ್ತದೆ. ಈ ಮೂಲಕ ದಟ್ಟಣೆ ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ. ಜನಕಲ್ಯಾಣವನ್ನು ಗಮನದಲ್ಲಿಟ್ಟುಕೊಂಡು ರೈಲ್ವೆ ಕಾರ್ಯ ನಿರ್ವಹಿಸುತ್ತಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಸಾಮಾನ್ಯ ರೈಲಿಗಿಂತ ವಿಶೇಷ ರೈಲಿನಲ್ಲಿ ಟಿಕೆಟ್ ದರ ಶೇ 30ರಷ್ಟು ಅಧಿಕವಾಗಿರುತ್ತದೆ. ಅದಕ್ಕಾಗಿಯೇ ಜನದಟ್ಟಣೆ ಸಮಯದಲ್ಲಿ ಅಲ್ಲದೇ, ನಿಯಮಿತವಾಗಿ ಸಂಚರಿಸುವ ಹಲವು ರೈಲುಗಳನ್ನು ಕೂಡ ವಿಶೇಷ ರೈಲು ಎಂದೇ ತೋರಿಸುತ್ತಿದ್ದಾರೆ. ಯಶವಂತಪುರ–ವಿಜಯಪುರ, ಮಂಗಳೂರು–ವಿಜಯಪುರ ರೈಲುಗಳು ಈ ರೀತಿ ಇವೆ ಎಂದು ರೈಲ್ವೆ ಹೋರಾಟಗಾರ ಕೆ.ಎನ್. ಕೃಷ್ಣಪ್ರಸಾದ್ ಮಾಹಿತಿ ನೀಡುತ್ತಾರೆ.


ಕೇರಳದ ಮಲಪ್ಪುರಂನ ಮಂಜೇರಿಯಲ್ಲಿ ಹೃದಯಸ್ಪರ್ಶಿ ಘಟನೆ

ಈದ್ ಪ್ರಾರ್ಥನೆಗೆ ಬಾಗಿಲು ತೆರೆದ ಚರ್ಚ್

ಮಲಪ್ಪುರಂ (ಕೇರಳ) (ಪಿಟಿಐ): ಕೇರಳದ ಮಲಪ್ಪುರಂ ಜಿಲ್ಲೆಯ ಮಂಜೇರಿ ಚರ್ಚ್ ಬುಧವಾರ ಮುಸ್ಲಿಮರಿಗೆ ಈದ್ ಪ್ರಾರ್ಥನೆ ಸಲ್ಲಿಸಲು ಅವಕಾಶ ನೀಡಿ ಹೃದಯಸ್ಪರ್ಶಿ ಬೆಳವಣಿಗೆಗೆ ಸಾಕ್ಷಿಯಾಗಿದ್ದು, ಕೋಮುಸೌಹಾರ್ದದ ಸಂದೇಶವನ್ನೂ ಸಾರಿದೆ.

ಮಂಜೇರಿಯ ನಿಕೋಲಸ್ ಮೆಮೊರಿಯಲ್ ಸಿಎಸ್ಐ ಚರ್ಚ್ ಮುಂಭಾಗದ ವಿಶಾಲ ಆವರಣದಲ್ಲಿ ಪ್ರಾರ್ಥನೆಗಾಗಿ ಮುಸ್ಲಿಮರು ನೂರಾರು ಸಂಖ್ಯೆಯಲ್ಲಿ ಸೇರಿದ್ದರು. ಮಂಜೇರಿಯ ಈದ್ ಜಂಟಿ ಸಮಿತಿಯು ಇಲ್ಲಿ ಪ್ರಾರ್ಥನೆ ಆಯೋಜಿಸಿತ್ತು. ಪ್ರತಿ ವರ್ಷ ಈದ್ ಪ್ರಾರ್ಥನೆ ನಡೆಯುತ್ತಿದ್ದ ಮಂಜೇರಿ ಪಟ್ಟಣದ ಸರ್ಕಾರಿ ಶಾಲೆಯ ಮೈದಾನವನ್ನು ಈ ಬಾರಿ ಲೋಕಸಭಾ ಚುನಾವಣೆ ಸಿದ್ಧತೆಯ ಹಿನ್ನೆಲೆಯಲ್ಲಿ ಮುಚ್ಚಲಾಗಿದೆ.

ಮುಸ್ಲಿಂ ಸಮುದಾಯದವರ ಈದ್ ಪ್ರಾರ್ಥನೆಗಾಗಿ ಆತಿಥ್ಯ ವಹಿಸುವ ಅವಕಾಶ ಸಿಕ್ಕಿರುವುದಕ್ಕೆ ಚರ್ಚ್‌ನ ಧರ್ಮಾಧಿಕಾರಿ ಫಾದರ್ ಜಾಯ್ ಮಸ್ಲಮನಿ ಅವರು ಸಂತಸ ವ್ಯಕ್ತಪಡಿಸಿದರು. ವಿಶೇಷವಾಗಿ ಧಾರ್ಮಿಕ ಉದ್ವಿಗ್ನತೆ ಕಾಣಿಸಿದ ಸಂದರ್ಭಗಳಲ್ಲಿ ಪ್ರೀತಿ ಮತ್ತು ಏಕತೆ ಮೂಡಿಸಬೇಕಾದ ಪ್ರಾಮುಖ್ಯವನ್ನು ಜಾಯ್ ಒತ್ತಿಹೇಳಿದರು.



ಈದ್ ಆಚರಣೆ ಸಮಿತಿ ಸದಸ್ಯ ಅಬ್ದುಲ್ ಅಲಿ, ಜಾತ್ಯತೀತ ಮನಸ್ಸಿನ ವ್ಯಕ್ತಿಗಳ ನಡುವೆ ಭಿನ್ನಾಭಿಪ್ರಾಯ ಬಿತ್ತಲು ಬಯಸುವ ವಿಭಜಕ ಶಕ್ತಿಗಳಿಗೆ ಇಂತಹ ಜಾತ್ಯತೀತ ಸ್ಥಳಗಳು ಪರಿಣಾಮಕಾರಿ ಸಂದೇಶ ರವಾನಿಸುತ್ತವೆ ಎಂದು ಪ್ರಶಂಸಿಸಿದರು.

ಸಿರೋ-ಮಲಬಾರ್ ಕ್ಯಾಥೋಲಿಕ್ ಚರ್ಚ್ ಅಧೀನದ ವಿವಿಧ ಚರ್ಚ್‌ಗಳು, ಸುದೀಪ್ತೊ ಸೆನ್ ನಿರ್ದೇಶನದ ವಿವಾದಾತ್ಮಕ ಸಿನಿಮಾ ‘ದಿ ಕೇರಳ ಸ್ಟೋರಿ’ಯನ್ನು ಪ್ರದರ್ಶಿಸುತ್ತಿರುವಾಗ, ಚರ್ಚ್ ಆಫ್ ಸೌತ್ ಇಂಡಿಯಾ (ಸಿಎಸ್ಐ) ಅಧಿಕಾರಿಗಳ ಈ ನಡೆಯು ನಿಜವಾದ ‘ಕೇರಳ ಸ್ಟೋರಿ’ಯೆನಿಸಿದೆ ಎಂದು ನೆಟ್ಟಿಗರು ಶ್ಲಾಘಿಸಿದ್ದಾರೆ.

‘ಸಿಎಸ್ಐ ಚರ್ಚ್‌ನ ಒಗ್ಗಟ್ಟಿನ ಕಾರ್ಯವು ಧಾರ್ಮಿಕ ಗಡಿಗಳನ್ನು ಮೀರಿದೆ. ವೈವಿಧ್ಯಮಯ ಸಮುದಾಯಗಳ ನಡುವಿನ ಸಹಬಾಳ್ವೆ ಮತ್ತು ಪರಸ್ಪರರನ್ನು ಗೌರವಿಸುವ ಕೇರಳದ ಶ್ರೀಮಂತ ಸಂಪ್ರದಾಯವನ್ನು ನೆನಪಿಸುತ್ತದೆ’ ಎಂದೂ ನೆಟ್ಟಿಗರು ಅಭಿಪ್ರಾಯಪಟ್ಟಿದ್ದಾರೆ.

ಹಿಂದೂ–ಮುಸ್ಲಿಂ ಬಾಂಧವ್ಯದ ನೈಜ ‘ಕೇರಳ ಸ್ಟೋರಿ’

ಮುಸ್ಲಿಮರೇ ಬಹುಸಂಖ್ಯೆಯಲ್ಲಿರುವ ಮಲಪ್ಪುರಂ ಜಿಲ್ಲೆಯ ಹಳ್ಳಿಯೊಂದರಲ್ಲಿನ ನೈಜ ಕಥೆ ಇದು. ಶತಮಾನಗಳ ಹಿಂದಿನ ದೇಗುಲವೊಂದು ಜೀರ್ಣೋದ್ಧಾರಗೊಂಡು ದೇವರ ಹೊಸ ವಿಗ್ರಹ ಪ್ರತಿಷ್ಠಾಪನೆಗೆ ಕಾದಿದೆ. ಇದರಲ್ಲೇನು ವಿಶೇಷ ಎನ್ನುತ್ತೀರಾ? ಈ ದೇಗುಲದ ಜೀರ್ಣೋದ್ಧಾರಕ್ಕೆ ದೇಣಿಗೆ ನೀಡಿದವರಲ್ಲಿ ಹೆಚ್ಚಿನವರು ನೆರೆಹೊರೆಯ ಮುಸ್ಲಿಮರು. ಕಟ್ಟುಕಥೆಗಳ ಅಪಪ್ರಚಾರ ಮತ್ತು ದ್ವೇಷದ ಭಾವನೆಗಳನ್ನು ಬಿತ್ತುವವರ ನಡುವೆ, ಹಿಂದೂ–ಮುಸ್ಲಿಮರ ಬಾಂಧವ್ಯ, ಸಾಮರಸ್ಯದ ನೈಜ ‘ಕೇರಳ ಸ್ಟೋರಿ’ಗೆ ಈ ಗ್ರಾಮ ಸಾಕ್ಷಿಯಾಗಿದೆ.

ಸುಮಾರು ನಾಲ್ಕು ಶತಮಾನಗಳಷ್ಟು ಹಳೆಯದಾದ ಶ್ರೀ ದುರ್ಗಾ ಭಗವತಿ ದೇವಸ್ಥಾನದ ನವೀಕರಣಕ್ಕಾಗಿ ಹಿಂದೂಗಳು ಮತ್ತು ಮುಸ್ಲಿಮರು ಕೈಜೋಡಿಸಿದ್ದಾರೆ. ಈ ದೇಗಲ ಕೊಂಡೊಟ್ಟಿಯ ಮುತುವಲ್ಲೂರಿನಲ್ಲಿ ನೆಲೆಗೊಂಡಿದ್ದು, ಪುಣ್ಯಕ್ಷೇತ್ರವೆನಿಸಿದೆ.

ಜೀರ್ಣೋದ್ಧಾರಕ್ಕೆ ಇದುವರೆಗೆ ವಿನಿಯೋಗಿಸಿದ ಸುಮಾರು ₹50 ಲಕ್ಷದಲ್ಲಿ ಅರ್ಧದಷ್ಟು ಹಣವನ್ನು ಮುಸ್ಲಿಮರು ಉದಾರವಾಗಿ ದೇಣಿಗೆ ನೀಡಿದ್ದಾರೆ ಎಂದು ದೇವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಮೊದಲ ಹಂತದ ನವೀಕರಣ ಬಹುತೇಕ ಪೂರ್ಣಗೊಂಡಿದೆ. 173 ಸೆಂ.ಮೀ ಎತ್ತರದ ದುರ್ಗಾ ದೇವಿಯ ವಿಗ್ರಹದ ಪ್ರತಿಷ್ಠಾಪನೆಯು ಮೇ 7ರಂದು ಪ್ರಾರಂಭವಾಗಿ, ಮೂರು ದಿನಗಳ ಕಾಲ ನಡೆಯಲಿದೆ.

ಸರ್ಕಾರಿ ಒಡೆತನದ ಮಲಬಾರ್ ದೇವಸ್ವಂ ಮಂಡಳಿಯ ಅಧೀನದ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಚಂದ್ರನ್ ಪಿ., ‘ದೇಗುಲದ ನವೀಕರಣವನ್ನು 2015ರಲ್ಲಿ ಪ್ರಾರಂಭಿಸಲಾಯಿತು. ನಾವು ಧಾರ್ಮಿಕ ಮತ್ತು ಕೋಮುಭೇದ ಮೀರಿ ಜನರಿಂದ ದೇಣಿಗೆ ಪಡೆದಿದ್ದೇವೆ. ಉದಾರ ದೇಣಿಗೆ ನೀಡಿದವರಲ್ಲಿ ಮುಸ್ಲಿಮರು ಪ್ರಮುಖರು ಎಂಬುದನ್ನು ತಿಳಿಸಲು ನಮಗೆ ಖುಷಿ ಇದೆ. ಜೀರ್ಣೋದ್ಧಾರಕ್ಕೆ ಮುಸ್ಲಿಂ ವ್ಯಕ್ತಿಯೊಬ್ಬರು ವೈಯಕ್ತಿಕವಾಗಿ ₹2 ಲಕ್ಷ ನೀಡಿದರೆ, ಮತ್ತೊಬ್ಬರು ₹1 ಲಕ್ಷ ದೇಣಿಗೆ ನೀಡಿರುವ ಉದಾಹರಣೆ ಇದೆ’ ಎಂದು ತಿಳಿಸಿದರು.

ಸಿರೋ ಮಲಬಾರ್ ಕ್ಯಾಥೋಲಿಕ್ ಚರ್ಚ್‌ನಿಂದ ಆಯೋಜನೆ

ಮಣಿಪುರ ಹಿಂಸೆ: ಸಾಕ್ಷ್ಯಚಿತ್ರ ಪ್ರದರ್ಶನ

ಕೊಚ್ಚಿ (ಪಿಟಿಐ): ಸಿರೋ ಮಲಬಾರ್ ಕ್ಯಾಥೋಲಿಕ್ ಚರ್ಚ್‌ನ ಇಡುಕ್ಕಿ ಧರ್ಮಪ್ರಾಂತ್ಯವು ಮಣಿಪುರ ಹಿಂಸಾಚಾರ ಕುರಿತ ಸಾಕ್ಷ್ಯಚಿತ್ರವನ್ನು ವಿದ್ಯಾರ್ಥಿಗಳಿಗೆ ಬುಧವಾರ ಪ್ರದರ್ಶಿಸಿದೆ.

‘ದಿ ಕೇರಳ ಸ್ಟೋರಿ’ ಚಲನಚಿತ್ರವನ್ನು ಇತ್ತೀಚೆಗೆ ಪ್ರದರ್ಶಿಸಿದ್ದ ಇದೇ ಧರ್ಮಪ್ರಾಂತ್ಯ, ‘ಕ್ರೈ ಆಫ್ ದಿ ಆಪ್ರೆಸ್ಡ್’ ಎಂಬ ಸಾಕ್ಷ್ಯಚಿತ್ರವನ್ನು ಸುಮಾರು 125 ವಿದ್ಯಾರ್ಥಿಗಳಿಗೆ ಸಿರೋ ಮಲಬಾರ್ ಕ್ಯಾಥೋಲಿಕ್ ಚರ್ಚ್ ಅಡಿಯಲ್ಲಿನ ಸಂಜೋಪುರಂನ ಸೇಂಟ್ ಜೋಸೆಫ್ ಚರ್ಚ್ ಪ್ರದರ್ಶಿಸಿದೆ.

‘ದಿ ಕೇರಳ ಸ್ಟೋರಿಯು ವ್ಯವಸ್ಥಿತ ಅಪಪ್ರಚಾರದ ಚಲನಚಿತ್ರವಾಗಿದ್ದು, ಅದನ್ನು ಚರ್ಚ್‌ನಲ್ಲಿ ಪ್ರದರ್ಶಿಸಬಾರದಾಗಿತ್ತು’ ಎಂದು ಚರ್ಚ್‌ನ ಪಾದ್ರಿ ಜೇಮ್ಸ್ ಪನವೇಲಿಲ್ ತಿಳಿಸಿದ್ದಾರೆ.


‘ವ್ಯವಸ್ಥಿತ ಅಪಪ್ರಚಾರದ ಉದ್ದೇಶ ಹೊಂದಿರುವ ಚಿತ್ರವನ್ನು ಪ್ರದರ್ಶಿಸಿದರೆ, ನಾವೂ ಅಂತಹ ಯೋಜನೆಯ ಭಾಗವಾಗಿಬಿಡುತ್ತೇವೆ. ಅಂಥ ವಿವಾದಿಂದ ದೂರವಿರುವಿರುವ ಬಗ್ಗೆ ಸಂದೇಶ ನೀಡಲು ಮತ್ತು ಮಣಿಪುರದಲ್ಲಿ ನಡೆದ ಹಿಂಸಾಚಾರವನ್ನು ಮರೆಯಬಾರದು ಎಂಬ ಉದ್ದೇಶದೊಂದಿಗೆ 15 ನಿಮಿಷದ ಸಾಕ್ಷ್ಯಚಿತ್ರ ಪ್ರದರ್ಶಿಸಿದ್ದೇವೆ’ ಎಂದಿದ್ದಾರೆ.

‘ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸುವುದಕ್ಕೋಸ್ಕರ ಇಡುಕ್ಕಿ ಧರ್ಮಪ್ರಾಂತ್ಯವು ‘ದಿ ಕೇರಳ ಸ್ಟೋರಿ’ ಚಿತ್ರವನ್ನು ಪ್ರದರ್ಶಿಸಿರಬಹುದು. ಆದರೆ, ಅದರ ಬದಲಾಗಿ ‘ಕಾಪ್ಪೆಲ’ ಚಿತ್ರದಂಥ ಬೇರೆ ವಿಷಯವಸ್ತುವನ್ನು ಹೊಂದಿರುವ ಚಿತ್ರವನ್ನು ಆಯ್ಕೆ ಮಾಡಿಕೊಳ್ಳಬಹುದಿತ್ತು’ ಎಂದು ಅಭಿಪ್ರಾಯಪಟ್ಟಿದ್ದಾರೆ.

ಸಾಕ್ಷ್ಯಚಿತ್ರ ಪ್ರದರ್ಶಿಸಿದರೆ ತಪ್ಪೇನು?: ‘ಮಣಿಪುರದಲ್ಲಿ ನಡೆದ ಹಿಂಸಾಚಾರ ಉತ್ಪ್ರೇಕ್ಷೆಯಾಗಲೀ ಅಥವಾ ಸುಳ್ಳಾಗಲೀ ಅಲ್ಲ. ಅಲ್ಲಿ ಏನು ನಡೆದಿದೆಯೋ ಅದನ್ನೇ ಸಾಕ್ಷ್ಯಚಿತ್ರದಲ್ಲಿ ತೋರಿಸಲಾಗಿದೆ. ಈ ಸಾಕ್ಷ್ಯಚಿತ್ರ ಪ್ರದರ್ಶಿಸುವುದರಲ್ಲಿ ತಪ್ಪೇನಿದೆ?’ ಎಂದಿದ್ದಾರೆ.

ತರೂರ್‌ಗೆ ರಾಜೀವ್ ಚಂದ್ರಶೇಖರ್ ನೋಟಿಸ್

ತಿರುವನಂತಪುರ (ಪಿಟಿಐ): ಟಿವಿ ವಾಹಿನಿಯೊಂದರಲ್ಲಿ ತಮ್ಮ ವಿರುದ್ಧ ನಿಂದನಾತ್ಮಕ ಹೇಳಿದ ನೀಡಿದ ಆರೋಪದ ಮೇಲೆ ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ಕಾಂಗ್ರೆಸ್ ಸಂಸದ ಶಶಿ ತರೂರ್ ಅವರಿಗೆ ನೋಟಿಸ್ ನೀಡಿದ್ದಾರೆ.



ಸುಭಾಷಿತ
ಪ್ರಯತ್ನ ಯಾವಾಗಲೂ ರಹಸ್ಯವಾಗಿರಲಿ, ಬೆಳೆದ ಫಲ ಮಾತ್ರ ಜನರಿಗೆ ಕಾಣಿಸಲಿ.
-ದ.ರಾ.ಬೇಂದ್ರೆ

ರಾಜ್ಯ ಬೋರ್ಡ್ ಪರೀಕ್ಷೆ ಗೊಂದಲ ಸರ್ಕಾರಕ್ಕೆ ಮುಕ್ತ ಮನಸ್ಸು ಅಗತ್ಯ

ರಾಜ್ಯ ಪಠ್ಯಕ್ರಮದ 5, 8, 9 ಹಾಗೂ 11ನೇ ತರಗತಿಗಳ ಬೋರ್ಡ್ ಪರೀಕ್ಷೆಯ ಫಲಿತಾಂಶಕ್ಕೆ ತಡೆಯಾಜ್ಞೆ ನೀಡಿ, ಸುಪ್ರೀಂ ಕೋರ್ಟ್ ವ್ಯಕ್ತಪಡಿಸಿರುವ ಅಭಿಪ್ರಾಯಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಬೋರ್ಡ್ ಪರೀಕ್ಷೆಗೆ ಸಂಬಂಧಿಸಿದ ರಾಜ್ಯ ಸರ್ಕಾರದ ನಿರ್ಧಾರದಿಂದಾಗಿ ವಿದ್ಯಾರ್ಥಿಗಳು ಹಾಗೂ ಪೋಷಕರು ಆತಂಕ-ಒತ್ತಡ ಅನುಭವಿಸುವಂತೆ ಆಗಿರುವುದಲ್ಲದೆ, ಶಿಕ್ಷಕರು ಹಾಗೂ ಶಾಲಾ ಆಡಳಿತ ಮಂಡಳಿ ಸಹ ಗೊಂದಲಕ್ಕೆ ಸಿಲುಕುವಂತಾಗಿದೆ. ಬೋರ್ಡ್ ಪರೀಕ್ಷೆ ನಡೆಸುವುದಕ್ಕೆ ಸಂಬಂಧಿಸಿದಂತೆ ಹೈಕೋರ್ಟ್ ವಿಭಾಗೀಯ ಪೀಠ ನೀಡಿರುವ ಆದೇಶವು ಆರ್‌ಟಿಇ ಕಾಯ್ದೆಯ ನಿಯಮಗಳು ಮತ್ತು ನಿಬಂಧನೆಗಳಿಗೆ ಅನುಗುಣವಾಗಿಲ್ಲ ಎಂದೂ ಸುಪ್ರೀಂ ಕೋರ್ಟ್ ನ್ಯಾಯಪೀಠ ಹೇಳಿದೆ. ನಿಯಮವನ್ನು ಹೊರತುಪಡಿಸಿ ನೋಡಿದರೂ ಈ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ಖಾಸಗಿ ಶಾಲೆಗಳ ಸಂಘಟನೆಗಳು ಹಾಗೂ ಸರ್ಕಾರದ ನಡುವಿನ ತಿಕ್ಕಾಟವು ವಿದ್ಯಾರ್ಥಿಗಳನ್ನು ಅನಗತ್ಯ ಗೊಂದಲ ಹಾಗೂ ಒತ್ತಡಕ್ಕೆ ಸಿಲುಕಿಸಿದೆ. ಈ ಪರೀಕ್ಷೆಗಳ ಪ್ರಕಟಿತ ಫಲಿತಾಂಶಕ್ಕೆ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡುವುದರೊಂದಿಗೆ ವಿದ್ಯಾರ್ಥಿಗಳು ಹಾಗೂ ಪೋಷಕರ ಗೊಂದಲ ಮತ್ತಷ್ಟು ಹೆಚ್ಚಾಗಿದೆ. ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆ ಹಾಗೂ ಕಾಲೇಜುಗಳಲ್ಲಿ ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯನ್ನು ಬೋರ್ಡ್ ಮೂಲಕ ನಡೆಸಲು ಅನುಮತಿ ನೀಡಿದ್ದ ಕರ್ನಾಟಕ ಹೈಕೋರ್ಟ್ ಆದೇಶಕ್ಕೂ ಸುಪ್ರೀಂ ಕೋರ್ಟ್ ತಡೆಯಾಜ್ಞೆ ನೀಡಿದೆ. ಫಲಿತಾಂಶ ಪ್ರಕಟಣೆಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿಯು ಹೊರಡಿಸಿದ್ದ ಆದೇಶಕ್ಕೂ ತಡೆ ನೀಡಲಾಗಿದೆ. ಇದರಿಂದಾಗಿ ಇಡೀ ಪರೀಕ್ಷಾ ಪ್ರಕ್ರಿಯೆಯ ಸಿಂಧುತ್ವದ ಪ್ರಶ್ನೆಯೇ ಎದುರಾದಂತಾಗಿದೆ. ಬೋರ್ಡ್ ಪರೀಕ್ಷೆಗೆ ಸಂಬಂಧಿಸಿದಂತೆ ಸರ್ಕಾರ ಹಾಗೂ ಅನುದಾನರಹಿತ ಖಾಸಗಿ ಶಾಲೆಗಳ ಸಂಘಟನೆ ನಡುವೆ ಮೊದಲಿನಿಂದಲೂ ತಿಕ್ಕಾಟ ನಡೆಯುತ್ತಿದೆ. ಚರ್ಚೆಯ ಮೂಲಕ ಬಗೆಹರಿಸಿಕೊಳ್ಳಬಹುದಾದ ಸಂಗತಿ ಸುಪ್ರೀಂ ಕೋರ್ಟ್ ಅಂಗಳ ತಲುಪಿರುವುದರಲ್ಲಿ ರಾಜ್ಯ ಸರ್ಕಾರದ ಪ್ರತಿಷ್ಠೆಯೂ ಪ್ರಮುಖ ಕಾರಣವಾಗಿರುವಂತಿದೆ. ಖಾಸಗಿ ಶಾಲೆಗಳ ತೀವ್ರ ವಿರೋಧದ ನಡುವೆಯೂ ಬೋರ್ಡ್ ಪರೀಕ್ಷೆಗಳನ್ನು ಆತುರಾತುರವಾಗಿ ನಡೆಸಿದ್ದ ಶಿಕ್ಷಣ ಇಲಾಖೆಯು ಮೌಲ್ಯಮಾಪನ ಹಾಗೂ ಫಲಿತಾಂಶವನ್ನು ತರಾತುರಿಯಲ್ಲಿ ಪ್ರಕಟಿಸಿದೆ. ಬೋರ್ಡ್ ಪರೀಕ್ಷೆಗಳನ್ನು ನಡೆಸುವುದಕ್ಕೆ ಸಂಬಂಧಿಸಿದಂತೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಳ್ಳುವಲ್ಲಿ ಸರ್ಕಾರ ಯಶಸ್ವಿಯಾಗಿಲ್ಲ. ಈ ಹಿಂದಿನ ಸರ್ಕಾರ ಕೂಡ ಬೋರ್ಡ್ ಪರೀಕ್ಷೆಗಳನ್ನು ನಡೆಸುವುದಕ್ಕೆ ಉತ್ಸುಕವಾಗಿತ್ತು; ಆ ಉತ್ಸಾಹವನ್ನು ಈಗಿನ ಸರ್ಕಾರ ತಾರ್ಕಿಕ ಹಂತಕ್ಕೆ ಕೊಂಡೊಯ್ಯುವ ಮೂಲಕ ಕಾನೂನು ಸಂಘರ್ಷ ಎದುರಿಸುವಂತಾಗಿದೆ.



ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸರ್ಕಾರ ವ್ಯಾಪಕ ಚರ್ಚೆ ನಡೆಸಿ, ಎಲ್ಲರ ಅಭಿಪ್ರಾಯ ಪಡೆಯುವುದು ಉತ್ತಮ

ಹತ್ತನೇ ತರಗತಿಗೆ ಮೊದಲು ಬೋರ್ಡ್ ಪರೀಕ್ಷೆ ನಡೆಸುವುದರ ಕುರಿತು ರಾಜ್ಯ ಸರ್ಕಾರ ಪುನರ್‌ಚಿಂತನೆ ನಡೆಸಬೇಕಾಗಿದೆ. ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಹಾಗೂ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸುವ ಉದ್ದೇಶದಿಂದ ಬೋರ್ಡ್ ಪರೀಕ್ಷೆ ನಡೆಸಬೇಕೆನ್ನುವ ವಾದವನ್ನು ತಾರ್ಕಿಕವಾಗಿ ನಿರಾಕರಿಸುವುದು ಕಷ್ಟ. ಆದರೆ, ಕಲಿಕೆಯ ಗುಣಮಟ್ಟ ನಿರ್ಣಯಕ್ಕೆ ಬೋರ್ಡ್ ಪರೀಕ್ಷೆಯೊಂದೇ ಮಾನದಂಡವಲ್ಲ. ಮಕ್ಕಳ ಮನಸ್ಸಿನ ಮೇಲೆ ಒತ್ತಡ ಉಂಟುಮಾಡುವ ಪರೀಕ್ಷಾ ಪ್ರಕ್ರಿಯೆಯನ್ನು ಸರಳೀಕರಿಸಬೇಕು ಎನ್ನುವ ಚಿಂತನೆಗಳು ನಡೆಯುತ್ತಿರುವ ಸಂದರ್ಭದಲ್ಲಿ, ಎಳೆಯರನ್ನು ಒತ್ತಡಕ್ಕೆ ಸಿಲುಕಿಸುವ ಬೋರ್ಡ್ ಪರೀಕ್ಷೆಗಳನ್ನು ಒಪ್ಪಿಕೊಳ್ಳುವುದು ಕಷ್ಟ. ಸಾಮಾಜಿಕ ಆಯಾಮದ ದೃಷ್ಟಿಯಿಂದಲೂ ಈ ಪರೀಕ್ಷೆಗಳನ್ನು ನೋಡಬೇಕಾಗಿದೆ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಗಳ ನಂತರ ವಿದ್ಯಾಭ್ಯಾಸದಿಂದ ದೂರವುಳಿಯುವ ವಿದ್ಯಾರ್ಥಿಗಳನ್ನು ಗಮನಿಸಿದರೆ, ಸಮಾಜದ ದುರ್ಬಲ ವರ್ಗಗಳಿಂದ ಬರುವ ಮಕ್ಕಳಿಗೆ ಬೋರ್ಡ್ ಪರೀಕ್ಷೆ ಎನ್ನುವುದು ಪೆಡಂಭೂತದಂತೆ ಭಯ ಹುಟ್ಟಿಸುತ್ತದೆ. ಸ್ಪರ್ಧಾತ್ಮಕ ಶಿಕ್ಷಣದ ಹೆಸರಿನಲ್ಲಿ ನಡೆಯುವ ಈ ಪರೀಕ್ಷೆಗಳು, ಶಿಕ್ಷಣದ ಪ್ರಾಥಮಿಕ ಆಶಯಗಳಲ್ಲೊಂದಾದ ಸಾಮಾಜಿಕ ನ್ಯಾಯಕ್ಕೆ ಪೂರಕವಲ್ಲ. ಹಾಗಾಗಿ, ಹತ್ತನೇ ತರಗತಿಗೆ ಮೊದಲೇ ವಿವಿಧ ಹಂತಗಳಲ್ಲಿ ಬೋರ್ಡ್ ಪರೀಕ್ಷೆಗಳನ್ನು ನಡೆಸಬೇಕೆನ್ನುವ ಹಟವನ್ನು ಸರ್ಕಾರ ಬಿಡುವುದೇ ಒಳ್ಳೆಯದು. ಮಕ್ಕಳ ವಿದ್ಯಾಭ್ಯಾಸದ ದಿಸೆಯಲ್ಲಿ ಹಟ ಹಿಡಿಯುವುದು ಅಥವಾ ಪ್ರತಿಷ್ಠೆ ಸಾಧಿಸುವುದು ಯಾರಿಗೂ ಸಲ್ಲದು. ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ತೀರ್ಪಿಗೆ ಸಂಬಂಧಿಸಿದಂತೆ ಕಾನೂನು ಸಲಹೆ ಪಡೆದು ಮುಂದುವರಿಯುತ್ತೇವೆ ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಹೇಳಿದ್ದಾರೆ. ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಸರ್ಕಾರ ವ್ಯಾಪಕ ಚರ್ಚೆ ನಡೆಸಿ, ಎಲ್ಲರ ಅಭಿಪ್ರಾಯ ಪಡೆಯುವುದು ಉತ್ತಮ. ಅಧಿಕಾರಿಗಳ ಮಾತುಗಳಿಗಿಂತಲೂ ಶಿಕ್ಷಣ ತಜ್ಞರ ಅಭಿಪ್ರಾಯಗಳನ್ನು ಪಡೆದು ಸರ್ಕಾರ ಮುಂದುವರಿಯಬೇಕಾಗಿದೆ.

ದಿನದ ಟ್ವೀಟ್

ಬಡವರಲ್ಲದ ಬಡವರು!



ಶ್ರೀಮಂತಿಕೆಯನ್ನು ತರುವ ಸ್ಕೀಮ್‌ಗಳಲ್ಲಿ ಪಾಲ್ಗೊಳ್ಳುವವರು, ಲಾಟರಿ ಕೊಳ್ಳುವವರಲ್ಲಿ ಹೆಚ್ಚಾಗಿ ಕಾಣುವವರು ಬಡವರು. ಶ್ರೀಮಂತರು ಮತ್ತು ಖ್ಯಾತನಾಮರ ಬದುಕನ್ನು 24/7 ಸುಲಭವಾಗಿ ನೋಡುವುದನ್ನು ಸಾಧ್ಯವಾಗಿಸಿರುವ ಸಾಮಾಜಿಕ ಮಾಧ್ಯಮಗಳು ಎಲ್ಲರಲ್ಲಿಯೂ ತಾವು ಬಡವರು ಎಂಬ ಭಾವನೆ ಬರುವಂತೆ ಮಾಡುತ್ತಿವೆ. ಈಗ ಪ್ರತಿಯೊಬ್ಬರಿಗೂ ತಾವು ಬಡವರು ಅನ್ನಿಸುವುದರಿಂದ ಶ್ರೀಮಂತಿಕೆ ತರುವ ಸ್ಕೀಮ್‌ಗಳಿಗೆ ಎಲ್ಲರೂ ಮನಸೋಲುತ್ತಿರುವುದು ಅಚ್ಚರಿಯ ಸಂಗತಿಯಲ್ಲ.

ಕುನಾಲ್ ಶಾ, ಉದ್ಯಮಿ

ಕಿಡಿನುಡಿ



ಆಂಧ್ರಪ್ರದೇಶದಲ್ಲಿ ವ್ಯಕ್ತಿಯೊಬ್ಬ, ಕಪ್ಪು ಬಣ್ಣದವಳಾಗಿದ್ದ ಕಾರಣಕ್ಕೆ 18 ತಿಂಗಳಿನ ತನ್ನ ಮಗಳನ್ನು ಕೊಲ್ಲಲು ಸತತ ಪ್ರಯತ್ನ ನಡೆಸಿದ. ಕೊನೆಗೂ ವಿಷವುಣಿಸಿ ಆಕೆಯನ್ನು ಕೊಂದು ದೇಹವನ್ನು ಹೂತಿದ್ದಾನೆ. ಇದು 2024ರ ಭಾರತ. ಕಾಳಿಯನ್ನು ಆರಾಧಿಸುವ ದೇಶ. ಬಾಲ್ಯದಲ್ಲಿ ನೀಡುತ್ತಿರುವ ಶಿಕ್ಷಣ ಎಲ್ಲೋ ದಾರಿ ತಪ್ಪುತ್ತಿದೆ.

ರಿತುಪರ್ಣ ಚಟರ್ಜಿ, ಪತ್ರಕರ್ತೆ

25 ವರ್ಷಗಳ ಹಿಂದೆ

ಭಾನುವಾರ, 11-4-1999

● **ಕಾಂಗ್ರೆಸ್‌ಗೆ ಬೆಂಬಲ: ದೇವೇಗೌಡರ ಮನವಿ**

ಬೆಂಗಳೂರು, ಏ. 10– ಅಟಲ್ ಬಿಹಾರಿ ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ಬಿದ್ದುಹೋದರೆ ಎಲ್ಲ ಜಾತ್ಯತೀತ ಪಕ್ಷಗಳು ತಮ್ಮ ನಡುವೆ ಇರುವ ಭಿನ್ನಾಭಿಪ್ರಾಯಗಳನ್ನು ಮರೆತು ಪರ್ಯಾಯ ಸರ್ಕಾರ ರಚನೆಗೆ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಬೇಕು ಎಂದು ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಇಂದು ಇಲ್ಲಿ ಮನವಿ ಮಾಡಿದರು.

'ವಾಜಪೇಯಿ ನೇತೃತ್ವದ ಸರ್ಕಾರ ಬಿದ್ದುಹೋಗುತ್ತದೆಯೋ ಇಲ್ಲವೋ ಎಂದು ನಾನು ಖಚಿತವಾಗಿ ಹೇಳಲಾರೆ. ಒಂದು ವೇಳೆ ಸರ್ಕಾರ ಬಿದ್ದು ಹೋದಲ್ಲಿ ದೇಶ ತಕ್ಷಣವೇ ಮತ್ತೊಂದು ಚುನಾವಣೆಗೆ ಸಿದ್ಧವಿಲ್ಲ. ಇಂಥ ಸಂದರ್ಭದಲ್ಲಿ ಕೇಂದ್ರದಲ್ಲಿ ಪರ್ಯಾಯ ಸರ್ಕಾರ ರಚಿಸಲು ಲೋಕಸಭೆಯಲ್ಲಿ ಎರಡನೇ ಅತಿ ದೊಡ್ಡ ಪಕ್ಷವಾದ ಕಾಂಗ್ರೆಸ್ ಪಕ್ಷಕ್ಕೆ ಎಲ್ಲ ಜಾತ್ಯತೀತ ಪಕ್ಷಗಳೂ ಬೆಂಬಲ ನೀಡುತ್ತವೆ ಎಂಬ ವಿಶ್ವಾಸ ನನಗಿದೆ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ವಾಜಪೇಯಿ ನೇತೃತ್ವದ ಸರ್ಕಾರ ಜನರ ವಿಶ್ವಾಸ ಕಳೆದುಕೊಂಡಿದೆ. ಮೇಲ್ನೋಟಕ್ಕೆ ಇದು 19 ಪಕ್ಷಗಳಿಂದ ಕೂಡಿದ ಸಮ್ಮಿಶ್ರ ಸರ್ಕಾರದಂತೆ ಕಂಡುಬಂದರೂ, ಸರ್ಕಾರವನ್ನು ನಿಯಂತ್ರಿಸುತ್ತಿರುವುದು ಆರ್‌ಎಸ್‌ಎಸ್, ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗ ದಳ ಸಂಘಟನೆಗಳೇ ಹೊರತು ಸರ್ಕಾರದ ಪಾಲುದಾರ ಪಕ್ಷಗಳಲ್ಲ. ಈ ಹಿನ್ನೆಲೆಯಲ್ಲಿ ಎಲ್ಲ ಜಾತ್ಯತೀತ ಪಕ್ಷಗಳೂ ಒಗ್ಗಟ್ಟಿನಿಂದ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಬೇಕು' ಎಂದರು.

50 ವರ್ಷಗಳ ಹಿಂದೆ

ಗುರುವಾರ, 11-4-1974

● **ವೈದ್ಯಕೀಯ ವಿದ್ಯಾರ್ಥಿಗಳ ಹಿತ ರಕ್ಷಿಸುವ ಭರವಸೆ**

ಬೆಂಗಳೂರು, ಏ. 10– ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಹಿತವನ್ನು ರಕ್ಷಿಸಲಾಗುವುದೆಂದು ಕೇಂದ್ರ ಸರ್ಕಾರದ ಆರೋಗ್ಯ ಸಚಿವರು ಭರವಸೆ ನೀಡಿದ್ದಾರೆ ಎಂದು ರಾಜ್ಯದ ಆರೋಗ್ಯ ಸಚಿವ ಎಚ್.ಸಿದ್ಧವೀರಪ್ಪ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಈ ಸಂಬಂಧದಲ್ಲಿ ಯಾರೂ ಕಳವಳಪಡಬಾರದೆಂದು ಹೇಳಿದ ಸಚಿವರು, ಮಟ್ಟವನ್ನು ಉತ್ತಮಗೊಳಿಸಲು ಎಲ್ಲ ಕ್ರಮಗಳನ್ನೂ ಕೈಗೊಳ್ಳಲಾಗುವುದೆಂದರು.

ರಾಜ್ಯದ ಐದು ಮೆಡಿಕಲ್ ಕಾಲೇಜುಗಳಿಗೆ ಮಾನ್ಯತೆ ನೀಡಬಾರದೆಂದು ಇಂಡಿಯನ್ ಮೆಡಿಕಲ್ ಕೌನ್ಸಿಲ್ ನಿರ್ಣಯದ ಸಂಬಂಧದಲ್ಲಿ ತಾವು ಕೇಂದ್ರ ಸರ್ಕಾರದ ಆರೋಗ್ಯ ಸಚಿವರೊಡನೆ ಇತ್ತೀಚೆಗೆ ಮಾತುಕತೆ ನಡೆಸಿರುವುದಾಗಿ ಹೇಳಿದರು.

● **ಸಚಿವರ ಹೇಳಿಕೆ ಬಗ್ಗೆ ಅತೃಪ್ತಿ: ಸಭಾತ್ಯಾಗ**

ಬೆಂಗಳೂರು, ಏ. 10– ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಹಾರ ಹಂಚಿಕೆಯಿಂದಾಗಿ ಉದ್ಭವಿಸಿರುವ ಪರಿಸ್ಥಿತಿಯ ಸಂಬಂಧದಲ್ಲಿ ಆಹಾರ ಸಚಿವರ ಹೇಳಿಕೆ ತೃಪ್ತಿಕರವಾಗಿಲ್ಲ ಎಂದು ಹೇಳಿ ಕಮ್ಯುನಿಸ್ಟ್ ಪಕ್ಷದ ಸದಸ್ಯರೊಬ್ಬರು ಇಂದು ವಿಧಾನಸಭೆಯಲ್ಲಿ ಸಭಾತ್ಯಾಗ ಮಾಡಿದರು.

ಭೂಮಿಗೆ ಬಿಸಿ ಮುಟ್ಟಿಸುವ ಕೆಲಸ ಮತ್ತು ತಂಪು ನೀಡುವ ಕೆಲಸ ಒಟ್ಟೊಟ್ಟಿಗೆ!

ಡ್ರೋನ್ ದೀದಿ ಮತ್ತು ಬದಲೀ ಹಾದಿ



ವಿಜ್ಞಾನ ವಿಶೇಷ

ನಾಗೇಶ ಹೆಗಡೆ

ಹರಿಯಾಣದಲ್ಲಿ ಭತ್ತ-ಗೋಧಿ ಪೈರಿನ ಮೇಲೆ ಡ್ರೋನ್ ಮೂಲಕ ಹೆಣ್ಣುಮಕ್ಕಳೇ ರಸಗೊಬ್ಬರ ಸಿಂಚನ ಮಾಡತೊಡಗಿದ್ದಾರೆ. ಅತ್ತ ಬ್ರಿಟನ್ನಿನ ಆಯ್ದ ಹೊಲಗಳಿಗೆ ಕೃಷಿ ವಿಜ್ಞಾನಿಗಳು ಕಲ್ಲಿನ ನುಣ್ಣನೆಯ ಪುಡಿಯನ್ನು ಎರಚುತ್ತಿದ್ದಾರೆ. ಭೂಮಿಯ ಕಾವನ್ನು ಹೆಚ್ಚಿಸುವ ಕೆಲಸ ಒಂದು ಕಡೆ, ಭೂಮಿಯನ್ನು ತಂಪು ಮಾಡುವ ಕೆಲಸ ಇನ್ನೊಂದು ಕಡೆ! ಇವುಗಳ ವಿವರ ಇಂತಿದೆ:

ಕಳೆದ ತಿಂಗಳ ಇದೇ ದಿನ ಪ್ರಧಾನಿ ನರೇಂದ್ರ ಮೋದಿಯವರು ದಿಲ್ಲಿಯ ಪೂಸಾ ಕೃಷಿ ಕ್ಯಾಂಪಸ್ಸಿನಲ್ಲಿ 'ಡ್ರೋನ್ ದೀದಿ'ಯರ ಜೊತೆ ಸೇರಿ ರಂಗುರಂಗಿನ ಶೋ ಕೊಟ್ಟರು. ಹಸಿರು ಚಿಮ್ಮುತ್ತಿದ್ದ ಪ್ರಾಯೋಗಿಕ ಹೊಲಗಳ ಮೇಲೆ ಹತ್ತಿಪ್ಪತ್ತು ಡ್ರೋನ್‌ಗಳು ದುಂಬಿಗಳಂತೆ ಹಾರುತ್ತ ರಸಗೊಬ್ಬರ ಸಿಂಚನ ಮಾಡಿದವು. ಒಂದೊಂದು ಡ್ರೋನನ್ನು ಒಬ್ಬೊಬ್ಬ ಗ್ರಾಮೀಣ ಮಹಿಳೆ ನಿಯಂತ್ರಿಸುತ್ತಿದ್ದಳು. 'ಇದು ಮಹಿಳಾ ಸ್ವಯಂಸಹಾಯದ ಬಹುದೊಡ್ಡ ಕ್ರಾಂತಿಯ ನಾಂದಿ' ಎನ್ನುತ್ತ ಮೋದಿಯವರು ಕ್ಯಾಮೆರಾ ಕಡೆ ಕೈಬೀಸಿದರು.

ರಸಗೊಬ್ಬರ ತಯಾರಿಸುವ 'ಇಫ್ಕೊ' ಕಂಪನಿಯ ಮೂಲಕ 'ನಮೋ ಡ್ರೋನ್ ದೀದಿ' ಹೆಸರಿನಲ್ಲಿ ಆರಂಭವಾದ ಈ ನಡೆ ನಿಜಕ್ಕೂ ಗ್ರಾಮಭಾರತದಲ್ಲಿ ಹೊಸ ಸಂಚಲನ ಮೂಡಿಸಬಹುದಾಗಿದೆ. ಡ್ರೋನ್ ಚಾಲನೆಯ ತರಬೇತಿ ಪಡೆದ ಪ್ರತಿ ಮಹಿಳೆಗೆ ತಲಾ ₹ 10 ಲಕ್ಷ ಮೌಲ್ಯದ, 30 ಕಿಲೊ ಭಾರದ ಒಂದೊಂದು ಡ್ರೋನ್ ಯಂತ್ರವನ್ನೂ ಅದಕ್ಕೆ ಜೋಡಿಸಲೆಂದು ಯೂರಿಯಾ ಅಥವಾ ಡಿಎಪಿಯ ಡಬ್ಬಿಯನ್ನೂ ಜೊತೆಗೆ ಅವನ್ನು ಸಾಗಿಸಲು ಬ್ಯಾಟರಿ ಚಾಲಿತ ವಾಹನವನ್ನೂ ನೀಡಲಾಗುತ್ತಿದೆ. ಒಬ್ಬ ಮಹಿಳೆ ದಿನಕ್ಕೆ ಸರಾಸರಿ 35 ಎಕರೆ ಪ್ರದೇಶಕ್ಕೆ ರಸಗೊಬ್ಬರ ಅಥವಾ ಪೀಡೆನಾಶಕ ವಿಷವನ್ನು ಸಿಂಪಡಿಸಬಹುದಾಗಿದೆ. ಶರ್ಮಿಳಾ ಯಾದವ್ ಹೆಸರಿನ ರೈತಮಹಿಳೆ 'ಐದು ವಾರಗಳ ಅವಧಿಯಲ್ಲಿ 150 ಎಕರೆಗಳ ಹೊಲದ ಮೇಲೆ ಎರಡು ಬಾರಿ ಸಿಂಪಡನೆ ನಡೆಸಿ ₹ 50 ಸಾವಿರ ಗಳಿಸಲಿದ್ದಾಳೆ' ಎಂದು ಎಎಫ್‌ಪಿ ವಾರ್ತಾ ಸಂಸ್ಥೆ ವರದಿ ಮಾಡಿದೆ. ಹರಿಯಾಣದಲ್ಲಿ ಡ್ರೋನ್ ಕ್ರಾಂತಿಯೇ ನಡೆಯುತ್ತಿದೆ. ಅಲ್ಲಿ ಐದು ಸಾವಿರ ಮಹಿಳೆಯರಿಗೆ ತರಬೇತಿ ಕೊಟ್ಟು ಅವರನ್ನೆಲ್ಲ 'ಲಕ್ಷಾಪತಿ ದೀದಿ'ಯರನ್ನಾಗಿ ಮಾಡುವುದಾಗಿ ಮುಖ್ಯಮಂತ್ರಿ ಖಟ್ಟರ್ ಘೋಷಿಸಿದ್ದಾರೆ.

ರಸಗೊಬ್ಬರ ಸಿಂಪಡನೆಯ ಹಿಂದೆ ಇಷ್ಟೇ ರಸವತ್ತಾದ ಇನ್ನೊಂದು ಸಂಗತಿ ಇದೆ: ಎರಡು ವರ್ಷಗಳ ಹಿಂದೆ ಗುಜರಾತಿನ ಕಲೋಲ್ ಎಂಬಲ್ಲಿ ಜಗತ್ತಿನ ಮೊದಲ ದ್ರವರೂಪಿ ನ್ಯಾನೊ ಯೂರಿಯಾ ಘಟಕವನ್ನು ಇಷ್ಟೇ ವಿಜೃಂಭಣೆಯಿಂದ ಮೋದಿಯವರು ಉದ್ಘಾಟಿಸಿದ್ದರು. ಒಂದಿಡೀ ಮೂಟೆ ಯೂರಿಯಾವನ್ನು ಹೊಲಕ್ಕೆ ಸುರಿಯುವ ಬದಲು, ಗೇಣುದ್ದದ ಒಂದು ಕ್ಯಾನ್‌ನಲ್ಲಿರುವ ನ್ಯಾನೊ ಯೂರಿಯಾವನ್ನು ಸಿಂಪಡಿಸಿದರೆ ಅಷ್ಟೇ ಇಳುವರಿ ಸಿಗುತ್ತದೆ, ರಸಗೊಬ್ಬರ ಆಮದು ತಗ್ಗುತ್ತದೆ ಎಂದಿದ್ದರು. ಆದರೆ ಕೆಲವು ವಿಜ್ಞಾನಿಗಳು ಇಳುವರಿ ಕುಸಿದೀತೆಂದು ಅಪಸ್ವರ ಎತ್ತಿದ್ದರು. ರೈತರೂ ಸಿಂಪಡನೆಗೆ ಹಿಂದೇಟು ಹಾಕುತ್ತಿದ್ದರು.

ದ್ರವರೂಪಿ ಸಾರಜನಕವನ್ನು ಡ್ರೋನ್ ಮೂಲಕ ಸಿಂಪಡಿಸಿದರೆ ರೈತರಿಗೆ ಶ್ರಮ ಕಡಿಮೆ, ಕೂಲಿಯಾಳುಗಳ ಸಮಸ್ಯೆ ನೀಗುತ್ತದೆ, ಮಹಿಳೆಯ ಕೈಯಲ್ಲಿ ಹಣ ಓಡಾಡುತ್ತದೆ ಎಲ್ಲವೂ ಹೌದು. ಇವೆಲ್ಲ ಅನುಕೂಲಗಳನ್ನು ಗಮನಿಸಿದರೆ ರಸಗೊಬ್ಬರ ಬಳಕೆ (ಈಗಾಗಲೇ ವರ್ಷಕ್ಕೆ ಶೇ 7ರಂತೆ ಹೆಚ್ಚುತ್ತಿದೆ) ಇನ್ನಷ್ಟು ಹೆಚ್ಚಲಿದೆ. ಕಾರ್ಬನ್ ಡೈಆಕ್ಸೈಡ್‌ಗೆ ಹೋಲಿಸಿದರೆ, ರಸಗೊಬ್ಬರದ ಮೂಲಕ ಬಿಡುಗಡೆಯಾಗುವ ನೈಟ್ರಸ್ ಆಕ್ಸೈಡ್‌ನಲ್ಲಿ ವಾತಾವರಣ ಶಾಖವರ್ಧನ ಸಾಮರ್ಥ್ಯ 300 ಪಟ್ಟು ಹೆಚ್ಚಿಗೆ ಇದೆ. ಕೃತಕ ಗೊಬ್ಬರಗಳ ಬಳಕೆ ಹೆಚ್ಚುತ್ತಲೇ ಹೋದಷ್ಟೂ ಭೂತಾಪಮಾನ ಹೆಚ್ಚುತ್ತಲೇ ಇರುತ್ತದೆ ಎಂದು ವಿಶ್ವಸಂಸ್ಥೆಯ ಐಪಿಸಿಸಿ ವಿಜ್ಞಾನಿಗಳ ತಂಡ ಹಿಂದೆಯೇ ಹೇಳಿದೆ.

ಅದು ಅತ್ತ ಇರಲಿ. ಈಗ ಬ್ರಿಟಿಷ್ ವಿಜ್ಞಾನಿಗಳು ಹೊಲಕ್ಕೆ ಕಲ್ಲಿನ ಪುಡಿಯನ್ನು ಸಿಂಪಡಿಸುವ ಕತೆಗೆ ಬರೋಣ. ಬೆಸಾಲ್ಟ್ ಎಂಬ ಕಲ್ಲನ್ನು ನುಣ್ಣಗೆ ಅರೆದು ಬೆಳೆಗಳ ಮೇಲೆ ಸಿಂಪಡಿಸಿದರೆ ವಾತಾವರಣದ ಕಾರ್ಬನ್ನನ್ನು ಭೂಮಿಯಲ್ಲಿ ಇಂಗಿಸಲು ಸಾಧ್ಯವೆಂಬುದು ಹತ್ತು ವರ್ಷಗಳ ಹಿಂದೆಯೇ ಗೊತ್ತಿತ್ತು. ಕಳೆದ ನಾಲ್ಕಾರು ವರ್ಷಗಳಿಂದ ಯುರೋಪ್ ಮತ್ತು ಅಮೆರಿಕದ ದೇಶಗಳಲ್ಲಿ ಹೊಲಗಳಿಗೆ ಬೆಸಾಲ್ಟ್ ಪುಡಿಯನ್ನು ಎರಚಲಾಗುತ್ತಿದೆ (ಬೆಸಾಲ್ಟ್ ಎಂದರೆ ಮತ್ತೇನಲ್ಲ; ದಕ್ಷಿಣ ಭಾರತದಲ್ಲಿ ಆರು ಕೋಟಿ ವರ್ಷಗಳ ಹಿಂದೆ ಪದೇ ಪದೇ ಲಾವಾರಸ ಉಕ್ಕಿ ಹರಿದಾಗಿನ ಹಾಸುಗಲ್ಲೇ ಬೆಸಾಲ್ಟ್ ಶಿಲೆ. ಅದು ಕ್ರಮೇಣ ಕಪ್ಪು ಎರೆಮಣ್ಣಾಗುವಾಗ ಗಾಳಿಯಲ್ಲಿನ ನೀರಾವಿಯನ್ನೂ ಇಂಗಾಲಾಮ್ಲವನ್ನೂ ಹೀರಿಕೊಂಡು ಸುಣ್ಣವನ್ನಾಗಿಸಿ ಭೂಮಿಗೆ ಸೇರಿಸುತ್ತದೆ). ಈ ಕಲ್ಲನ್ನು ಪುಡಿರೂಪದಲ್ಲಿ ಎರಚಿದರೆ ಪ್ರಕೃತಿಯಲ್ಲಿ ಸಹಜವಾಗಿ, ನಿಧಾನ ನಡೆಯುತ್ತಿದ್ದ ಕ್ರಿಯೆ ಸಾವಿರಾರು ಪಟ್ಟು ಶೀಘ್ರವಾಗುತ್ತದೆ. ವಾತಾವರಣದ ಇಂಗಾಲ ತ್ವರಿತವಾಗಿ ಭೂಮಿಗೆ ಸೇರುತ್ತದೆ.

ಹೀಗೆ ಕಲ್ಲಿನ ಪುಡಿಯನ್ನು ಹೊಲಕ್ಕೆ ಎರಚಲೆಂದೇ ನಾಲ್ಕು ತಿಂಗಳ ಹಿಂದೆ ಅಲ್ಫಾಬೆಟ್ (ಗೂಗಲ್), ಮೆಟಾ (ಫೇಸ್‌ಬುಕ್) ಸೇರಿದಂತೆ ಜಗತ್ತಿನ ಅತಿ ಶ್ರೀಮಂತ 'ಬಿಗ್ ಟೆಕ್' ಕಂಪನಿಗಳು ನೂರು ಕೋಟಿ ಡಾಲರ್‌ಗಳ ವಂತಿಗೆ ಕೂಡಿಸಿವೆ. ಬ್ರೆಜಿಲ್, ಕ್ಯಾಲಿಫೋರ್ನಿಯಾದ ಲಕ್ಷಾಂತರ ಎಕರೆಗಳಲ್ಲಿ ಸಿಂಚನ ನಡೆಯುತ್ತಿದೆ. ಕಾದ ಭೂಮಿಯನ್ನು ತಂಪು ಮಾಡಲು ಈ ವಿಧಾನವೇ ಅತ್ಯುತ್ತಮ ಎನ್ನಲಾಗುತ್ತಿದೆ (ಇತರ ನಿಧಾನ ವಿಧಾನಗಳೆಂದರೆ ಅರಣ್ಯ ಬೆಳೆಸುವುದು, ಕಾರ್ಖಾನೆಗಳ ಹೊಗೆಯನ್ನು ಪಾತಾಳಕ್ಕೆ ಕಳಿಸುವುದು, ಸಾಗರದಾಳದಲ್ಲಿ ಪಾಚಿಯನ್ನು ಬೆಳೆಸುವುದು ಇತ್ಯಾದಿ). ಬೆಸಾಲ್ಟ್ ಶಿಲೆಯ ಪುಡಿಯನ್ನು ಎರಚಿದರೆ ಫಸಲಿನ ಮೇಲೆ ನಿಜಕ್ಕೂ ಏನು ಪರಿಣಾಮ ಆಗುತ್ತಿದೆ ಎಂಬುದನ್ನು ಬ್ರಿಟಿಷ್ ವಿಜ್ಞಾನಿಗಳು ಅಳೆದು ನೋಡುತ್ತಿದ್ದಾರೆ. ಅವರ ಪ್ರಕಾರ, ಸೋಯಾ ಇಳುವರಿ ಶೇ 16ರಷ್ಟು ಹೆಚ್ಚಾಗಿದೆ. ಇತರ ಬೆಳೆಗಳ ಇಳುವರಿ ಶೇ 8ರಿಂದ 20ರಷ್ಟು ಹೆಚ್ಚಾಗಿದೆ.

ಈಗ 'ಡ್ರೋನ್ ದೀದಿ'ಯರ ಶ್ಲಾಘನೀಯ ಹೆಜ್ಜೆಯತ್ತ ಮತ್ತೊಮ್ಮೆ ಬರೋಣ. ಅವರು ಎರಚುವ ಬಹುಪಾಲು ರಸಗೊಬ್ಬರವೆಲ್ಲ ಅಧಿಕ ಇಳುವರಿಯ ಭತ್ತ-ಗೋಧಿಯ ತಳಿಗಳಿಗೇ ತಾನೆ? ಈ ಎರಡು ಫಸಲುಗಳಲ್ಲಿ ಪ್ರಮುಖ ಪೋಷಕಾಂಶಗಳು ವರ್ಷವರ್ಷವೂ ಕಡಿಮೆ ಆಗುತ್ತಿವೆ. ಭಾರತೀಯ ಕೃಷಿ ಸಂಶೋಧನಾ ಮಂಡಳಿಯ ಪ್ರಕಾರ, ಕಳೆದ 50 ವರ್ಷಗಳಲ್ಲಿ ಅಕ್ಕಿಯಲ್ಲಿ ಸತುವಿನ ಅಂಶ ಶೇ 33ರಷ್ಟು ಕಡಿಮೆ ಆಗಿದೆ, ಕಬ್ಬಿಣದ ಅಂಶ ಶೇ 27ರಷ್ಟು ಕಡಿಮೆ ಆಗಿದೆ. ಗೋಧಿಯಲ್ಲಿ ಇವೇ ಪೋಷಕಾಂಶಗಳು ಕ್ರಮವಾಗಿ ಶೇ 30 ಮತ್ತು 19ರಷ್ಟು ಕಮ್ಮಿಯಾಗಿವೆ. ಸಾಲದೆಂಬಂತೆ, ಆರೋಗ್ಯಕ್ಕೆ ಅಪಾಯವನ್ನೇ ತಂದೊಡ್ಡಬಲ್ಲ ಆರ್ಸೆನಿಕ್ ಅಂಶ 15 ಪಟ್ಟು (ಶೇ 1,493) ಹೆಚ್ಚಾಗಿದೆ! ನಮ್ಮ ಊಟ-ತಿಂಡಿಯಲ್ಲಿ ಈ ಎರಡು ಧಾನ್ಯಗಳದ್ದೇ ಹೆಚ್ಚಿನ ಪಾಲು ಇರುವುದರಿಂದ ಹೃದಯ, ಶ್ವಾಸಕೋಶ, ಮೂತ್ರಪಿಂಡ, ಅಸ್ಥಿಪಂಜರ ಮತ್ತು ಯಕೃತ್ತಿಗೆ ಬರುವ 'ಅಸಾಂಸರ್ಗಿಕ' ಕಾಯಿಲೆಗಳು ಹೆಚ್ಚಾಗುತ್ತಿವೆ. ಹೀಗೆಂದು ಪಶ್ಚಿಮ ಬಂಗಾಳದ ಕೃಷಿ ವಿಶ್ವವಿದ್ಯಾಲಯ ಮತ್ತು ತೆಲಂಗಾಣದ ರಾಷ್ಟ್ರೀಯ ಪೋಷಕಾಂಶ ಸಂಸ್ಥೆಯ ಹನ್ನೊಂದು ವಿಜ್ಞಾನಿಗಳು ಆರು ತಿಂಗಳ ಹಿಂದೆ ಪ್ರತಿಷ್ಠಿತ 'ನೇಚರ್' ಪತ್ರಿಕೆಯಲ್ಲಿ ಸಂಶೋಧನಾ ಪ್ರಬಂಧವನ್ನು ಪ್ರಕಟಿಸಿದ್ದಾರೆ. ಹೊಟ್ಟೆತುಂಬ ತಿಂದಂತೆನಿಸಿದರೂ ಅದರಲ್ಲಿ ಪೋಷಕಾಂಶ ಕೊರತೆ ಇದ್ದರೆ ಅದಕ್ಕೆ 'ಗುಪ್ತ ಹಸಿವೆ' ಎನ್ನುತ್ತಾರೆ. ಈಗಾಗಲೇ ನಮ್ಮಲ್ಲಿ ಶೇ 35ರಷ್ಟು ಮಕ್ಕಳು ಪೋಷಕಾಂಶ ಕೊರತೆಯಿಂದ ಬಳಲುತ್ತಿದ್ದಾರೆ. ಅಕ್ಕಿ ಅಥವಾ ಗೋಧಿಯನ್ನೇ ಮುಖ್ಯ ಆಹಾರವಾಗಿ ಸೇವನೆ ಮಾಡುವವರಲ್ಲಿ ಅಸಾಂಸರ್ಗಿಕ ರೋಗ ಸಾಧ್ಯತೆ ಹೆಚ್ಚುತ್ತಲೇ ಹೋಗಲಿದೆ. ನಮ್ಮ ದೇಶ ಎದುರಿಸಬೇಕಾದ ಈ ಸವಾಲಿಗೆ 'ನಿಶ್ಶಬ್ದ ಕ್ಷಾಮ' ಎಂದು ಹೆಸರಿಸಿ, ದಿಲ್ಲಿಯ 'ಡೌನ್ ಟು ಅರ್ಥ್' ಪತ್ರಿಕೆ ಈಚೆಗೆ ಪ್ರಧಾನ ಲೇಖನವನ್ನು ಪ್ರಕಟಿಸಿದೆ.

2047ನೇ ಇಸವಿಯ ವೇಳೆಗೆ ನಮ್ಮದು 'ವಿಕಸಿತ ಭಾರತ' ಆಗಬೇಕು. ನಾವು ಧನಿಕ ರಾಷ್ಟ್ರಗಳ ಸಾಲಿಗೆ ಸೇರಬೇಕು. ಅಂದರೆ ಈಗ 'ಸಾಲೆ'ಗೆ ಸೇರುವ ಮಕ್ಕಳಿಗೆ ಪೌಷ್ಟಿಕ ಆಹಾರ ಮೊದಲು ಸಿಗಬೇಕು.



ಚುರುಮುರಿ



ಸಮ್ಮರ್ ಕ್ಯಾಂಪ್

● ತುರುವೇಕೆರೆ ಪ್ರಸಾದ್

'**ಲೇಯ್**, ರಜಾದಲ್ಲಿ ನಮ್ ಹೈಕ್ಳೆಲ್ಲಾ ಮೊಬೈಲ್, ಸಿನಿಮಾ ನೋಡಿ ಅಳಾಗೋಯ್ತವೆ. ಅದಕ್ಕೇ ಒಂದು ಸಮ್ಮರ್ ಕ್ಯಾಂಪ್ ಮಾಡಣ ಅಂದ್ಕಂಡಿವ್ನಿ' ಎಂದ ಗುದ್ಲಿಂಗ.

'ಓ ಅಂಗಾ? ಏನೇನು ಯೇಳ್ಕೊಡ್ತೀಯ? ಈ ಜಿಮ್ಮು, ಕರಾಟೆ ಎಲ್ಲಾ ಇರ್ತದಾ?' ಕೇಳಿದ ಮಾಲಿಂಗ.

'ಲೇಯ್, ಅವೆಲ್ಲ ಯಾವನಿಗ್ಲಾ ಬೇಕು? ಬೋರೆಲ್ಲ ತಳ ಹತ್ತಿ ಉಪ್ಪಿಡಿದು ಕೂತವೆ. ಹಳೇ ಬಾವಿ ಕೆರೆದು ನೀರ್ ಎತ್ತಕ್ಕೆ ರಾಟೆ ಎಳೆಯೋದು ಯೇಳ್ಕೊಡ್ಬೇಕು' ಎಂದ ಕಲ್ಲೇಶಿ.

'ಊ ಕಣ್ಲಾ, ಈ ಡಾನ್ಸು, ಮ್ಯೂಸಿಕ್ಕು, ಕ್ರಾಫ್ಟು ಎಲ್ಲಾ ಯೋಳ್ಕಡೋದು ಬಿಟ್ಟು ಮಕ್ಳಿಗೆ ರಾಜಕೀಯ ಪಟ್ಟುಗಳನ್ನ ಯೇಳ್ಕೊಡ್ಬೇಕು. ಭಾಷಣ, ವಿತಂಡವಾದ ಮಾಡಾದು, ಎಲೆಕ್ಷನ್‌ಗೆ ಬಂಡೆದ್ದು ನಿಂತ್ಕೋಳೋದು, ಟಿ.ವಿ., ಪೇಪರ್ನೋರ್ ಮುಂದೆ ಹೇಳಿಕೆ ಕೊಡೋದು, ಕೊಟ್ಟಿದ್ದನ್ನ ತಿರುಚವ್ರೆ ಅಂತ ಬೊಮ್ಮಿಡಿ ಹೊಡೆಯೋದು ಇಂತದ್ದೆಲ್ಲಾ ಯೇಳ್ಕೊಡೋಣ ಅಂದ್ಕಂಡಿದೀನಿ'.

'ಸೂಪರ್ ಐಡಿಯಾ ಕಣ್ಲಾ. ಅಂಗೇ ಕಾಲೆಳೆಯೋ ಕಬಡ್ಡಿ ಆಟ, ಕೈ ಕೈ ಮಿಲಾಯಿಸೋಕೆ ಕುಸ್ತಿ ಇಂತ ಸ್ಪೋರ್ಟ್ಸ್ ಯೇಳ್ಕೊಡ್ಬೇಕು'.

'ಜೊತೆಗೆ ಅಣಕು ಶಾಸನಸಭೆ ಮಾಡಿ ಹೈಕ್ಳಿಗೆ ಆರೋಪ, ಪ್ರತ್ಯಾರೋಪ ಮಾಡೋ ಅಸ್ತ್ರಗಳು, ಬೈದಾಡೋದನ್ನೂ ಹೇಳ್ಕೊಡ್ಬೇಕು' ಎಂದ ಚಿಕ್ಕೀರ.

'ಅಂಗೇ ಸ್ಪೋಕನ್ ಕನ್ನಡ ಇನ್ ಬ್ರೋಕನ್ ಇಂಗ್ಲಿಷ್ ಹೇಳ್ಕೊಡ್ಬೇಕು. ಎಲ್ಲಕ್ಕಿಂತ ಮುಖ್ಯವಾಗಿ ನಮ್ ಹೈಕ್ಳು ಲೆಕ್ಕದಾಗೆ ಶಾನೆ ವೀಕು, ಅವಕ್ಕೆ ಮೊದ್ಲು ಪರ್ಸಂಟೇಜ್ ಲೆಕ್ಕ ಯೋಳ್ಕೊಡ್ಬೇಕು...'

'ಅದೆಲ್ಲ ಸರಿ, ಈ ಟ್ರಿಪ್ಪು ಅಂತ ಕರ್ಕೊಂಡ್ ಓಯ್ತಾರಲ್ಲ, ಹೈಕ್ಳನ್ನ ಎಲ್ಲಿಗೆ ಕರ್ಕಂಡೋಗೋದು?'

'ಬಯಲುಸೀಮೆ ಗೋಮಾಳ, ಕಿತ್ತೂರ್ ಸೀಮೆ ಕೆರೆ, ಮಲ್ನಾಡಿನ ಸೇತುವೆಗಳನ್ನ ತೋರಿಸಿ, ಎಚ್ಚಮನಾಯಕನಂಗೆ 'ನೋಡುಬಾ ಮಗನೆ ನೋಡುಬಾ, ಎಂಗ್ ನುಂಗವ್ರೆ ನೋಡಿ ಕಲಿಬಾ' ಅಂತ ತೋರುಸ್ಬೇಕು'.

'ಊ ಕಣ್ರಲಾ, ನಮ್ ಹೈಕ್ಳನ್ನ ಇಂಗ್ ತಯಾರಿ ಮಾಡ್ಬಿಟ್ರೆ ಮೂಗುನೇಣಿಕ್ಕದ ರಾಜಕೀಯ ಹೋರಿಗಳೆಲ್ಲಾ ತಮ್ಮ ಉಂಡಾಡಿ ಕರು, ಪೋರಿಗಳಿಗೆ ಪಟ್ಟ ಕಟ್ಟೋದು ಅರ್ಥ ತಪ್ತದೆ' ಎಂದ ಪರ್ಮೇಶಿ. ಎಲ್ಲಾ ಹೌದೌದು ಎಂದು ತಲೆಯಾಡಿಸಿದರು.

ಸಂಗತ

ಫಲಿತಾಂಶ ಪರೀಕ್ಷೆಯದು, ಬದುಕಿನದಲ್ಲ

ವಿದ್ಯಾರ್ಥಿಯ ಸಾಮರ್ಥ್ಯದ ಮಾಪನಕ್ಕೆ ಅಂಕಗಳ ಶೇಕಡಾವಾರು ಮೀರಿ ಪರಿಗಣಿಸಬೇಕಾದ ನಾನಾ ಅಂಶಗಳು ಇರುತ್ತವೆ

● ಬಿ.ಎಸ್.ಭಗವಾನ್

ಆ ಪ್ರೌಢಶಾಲೆಯ ವಾರ್ಷಿಕೋತ್ಸವ ಸಮಾರಂಭದಲ್ಲಿ ನಿವೃತ್ತ ಪ್ರಾಚಾರ್ಯರೊಬ್ಬರು ಮುಖ್ಯ ಅತಿಥಿಯಾಗಿದ್ದರು. ತಮ್ಮ ಭಾಷಣದ ಕೊನೆಯಲ್ಲಿ ಅವರು 'ಮಕ್ಕಳೇ, ನೀವು ಮುಂದೆ ಏನಾಗಬಯಸಿದ್ದೀರಿ?' ಎಂದರು. ಭಾವಿ ಪ್ರಜೆಗಳ ಉತ್ಸಾಹದ ಕೇಕೆಯ ನಡುವೆ 'ಡಾಕ್ಟರ್', 'ಎಂಜಿನಿಯರ್', 'ಪೈಲಟ್', 'ಎಕ್ಸ್‌ಪರ್ಟ್ ಆ್ಯನಿಮೇಟರ್'... ಆಶಯಗಳು ಕೇಳಿಬಂದವು. ಆದರೆ ಅತಿಥಿವರ್ಯರು ಕಡ್ಡಿ ಎರಡು ತುಂಡು ಮಾಡಿದಂತೆ 'ಸದ್ಯಕ್ಕೆ ಅವರ ಕೊರತೆ ಇಲ್ಲ. ನೀವು ಮನುಷ್ಯರಾಗುವ ಗುರಿಯಿಟ್ಟುಕೊಳ್ಳಿ' ಎಂದರು. ಸಭೆ ಕ್ಷಣ ತಳಮಳಿಸಿತಾದರೂ ಜೋರು ಕರತಾಡನದ ಮೂಲಕ ಹಿತನುಡಿಗೆ ತಲೆದೂಗಿತ್ತು.

'ನಾಳೆ ನನ್ನ ಪರೀಕ್ಷೆಯಿದೆ. ಒಂದು ಹಾಳೆ ನನ್ನ ಭವಿಷ್ಯವನ್ನೇನೂ ನಿರ್ಧರಿಸದ ಕಾರಣ ನನಗೆ ಗಾಬರಿಯೇನಿಲ್ಲ'- ಥಾಮಸ್ ಆಲ್ವ ಎಡಿಸನ್ ಅವರು ಶೈಕ್ಷಣಿಕ ಪರೀಕ್ಷೆ ಕುರಿತು ಹೇಳಿದ ಈ ನುಡಿಯ ಧ್ವನ್ಯಾರ್ಥ ಗಾಢವಾದದ್ದು. ಅತಿರೇಕ, ಹೋಲಿಕೆ, ನಿರಾಸೆಗೆ ಆಸ್ಪದ ನೀಡದೆ ಫಲಿತಾಂಶವನ್ನು ಸಂಯಮದಿಂದ ಅನುಸಂಧಾನಿಸುವುದೂ ಒಂದು ಪರೀಕ್ಷೆಯೆ. ಯಾವುದೇ ಪರೀಕ್ಷಾ ಫಲಿತಾಂಶ, ಅದರಲ್ಲಿ ಗಳಿಸಿದ ಗ್ರೇಡ್, ಅಂಕ, ದರ್ಜೆ ವಿದ್ಯಾರ್ಥಿಗಳ ಜೀವನಗತಿಯನ್ನು ನಿರ್ಧರಿಸದು. ತಮ್ಮ ಭವಿಷ್ಯ ನಿರ್ಮಿಸಿಕೊಳ್ಳುವವರು ಸ್ವತಃ ವಿದ್ಯಾರ್ಥಿಗಳೇ ವಿನಾ ಅವರು ಹಿಡಿದ ಅಂಕಪಟ್ಟಿ ಅಥವಾ 'ಅರ್ಹತಾ ಪತ್ರ' ಅಲ್ಲ.

ಪರೀಕ್ಷೆ ಎನ್ನುವುದು ಕೇಳಿರುವ ಪ್ರಶ್ನೆಗಳಿಗೆ ಎರಡು ಅಥವಾ ಮೂರು ತಾಸುಗಳ ಅವಧಿಯಲ್ಲಿ ವಿದ್ಯಾರ್ಥಿಯ ಪ್ರಸ್ತುತಿಯಷ್ಟೆ. ವಿದ್ಯಾರ್ಥಿಯ ಸಾಮರ್ಥ್ಯದ ಮಾಪನಕ್ಕೆ ಅಂಕಗಳ ಶೇಕಡಾವಾರು ಮೀರಿ ಪರಿಗಣಿಸಬೇಕಾದ ನಾನಾ ಅಂಶಗಳಿವೆ. ಒಬ್ಬರಿಗೆ ಭಾಷಾ ವಿಷಯದಲ್ಲಿ ಹೆಚ್ಚಿನ ಅಂಕಗಳು, ಆದರೆ ಗಣಿತದಲ್ಲಿ ಕಳಪೆ ಅಂಕಗಳು. ಇದು ಅವರ ಮನಃಸ್ಥಿತಿಗೆ ಸಂಬಂಧಿಸಿದ್ದೇ ವಿನಾ ನ್ಯೂನತೆಯಲ್ಲ. ನಾವು ಯಾವುದನ್ನು ಒಳ್ಳೆಯ ಗ್ರೇಡ್ ಎನ್ನುತ್ತೇವೋ ಅದು ಅಭ್ಯಾಸದ ಆಯ್ಕೆಯನ್ನು ಅವಲಂಬಿಸಿದೆ. ಪಠ್ಯದಲ್ಲಿ ಒಂದೆರಡು ಅಧ್ಯಾಯಗಳನ್ನು ಬಿಟ್ಟೂ ಅಧಿಕ ಅಂಕಗಳನ್ನು ಪಡೆಯುವವರಿದ್ದಾರೆ. ಎದುರಾಗುವ ಪ್ರಶ್ನೆಗಳನ್ನು ಊಹಿಸಿ ಪರೀಕ್ಷೆಯಲ್ಲಿ 'ಜಾಣತನ' ತೋರುವವರಿದ್ದಾರೆ. ಪಠ್ಯದ ಅಂಶಗಳು ಪಕ್ವವಾಗಿ ಮನನವಾಗದೆ 'ಜ್ಞಾಪಕಶಕ್ತಿ' ತುಸು ಹರಿತವಿದ್ದರಾಯಿತು, ಪರೀಕ್ಷೆಯನ್ನು ಗೆಲ್ಲಿಸಿರುತ್ತದೆ!

ಪರೀಕ್ಷಾ ಒತ್ತಡದಿಂದ ಭಾರತವೊಂದರಲ್ಲೇ ವರ್ಷಕ್ಕೆ ಸರಾಸರಿ 370 ವಿದ್ಯಾರ್ಥಿಗಳು ತಮ್ಮ ಬದುಕಿಗೆ ವಿದಾಯ ಹೇಳುತ್ತಿದ್ದಾರೆ ಎಂಬ ಮಾಹಿತಿ ಆತಂಕಕಾರಿ. ಯಶಸ್ಸಿಗಿಂತ ಪ್ರಯತ್ನವೇ ಮೌಲಿಕ ಎಂಬ ವಾಸ್ತವವನ್ನು ಹಿರಿಯರು ಮಕ್ಕಳಲ್ಲಿ ಬಿತ್ತಿದರೆ ಅನಾಹುತಗಳು ಗಣನೀಯವಾಗಿ ತಪ್ಪುತ್ತವೆ.

ಫಲಿತಾಂಶದ ಪಟ್ಟಿ ನಡುಕ ಹುಟ್ಟಿಸಬೇಕಾದ್ದಿಲ್ಲ. ವಿದ್ಯಾಸಂಸ್ಥೆಗೆ ಇಗೋ ನೋಡಿ, ಇವರೇ ನಮ್ಮ ಸಾಹಸಿಗಳೆಂದು 'ರ‍್ಯಾಂಕ್' ಪಡೆದವರ ಸಾಲು ಫೋಟೊಗಳನ್ನು ಪ್ರದರ್ಶಿಸುವ ಅತಿಶಯ ಬೇಕಿಲ್ಲ. ಗಣಿತಜ್ಞ ಶ್ರೀನಿವಾಸ ರಾಮಾನುಜನ್ ಅವರು ಇಂಟರ್‌ಮೀಡಿಯಟ್ ಪರೀಕ್ಷೆಗಳಲ್ಲಿ ನಾಲ್ಕು ಬಾರಿ ಫೇಲಾಗಿದ್ದರು. ಗಣಿತದ ಹೊರತಾಗಿ ಯಾವ ವಿಷಯದಲ್ಲೂ ಅವರಿಗೆ ತೇರ್ಗಡೆಯ ಕನಿಷ್ಠ ಅಂಕ ಬಂದಿರಲಿಲ್ಲ. ಮುಂದೆ ಮದ್ರಾಸು ವಿಶ್ವವಿದ್ಯಾಲಯದಲ್ಲಿ ಎಫ್.ಎ. ಪರೀಕ್ಷೆಯಲ್ಲಿ ಮತ್ತೆ ಸೋಲು. ಆದರೆ ಕೇಂಬ್ರಿಜ್ ವಿಶ್ವವಿದ್ಯಾಲಯ ಅವರ ಅಸಾಧಾರಣ ಗಣಿತ ಪ್ರತಿಭೆಯನ್ನು ಪರಿಗಣಿಸಿ ಅವರಿಗೆ ಬಿ.ಎ., ಎಫ್.ಆರ್.ಎಸ್.ನಂತಹ ಪದವಿಗಳನ್ನಿತ್ತು ತನ್ನನ್ನು ತಾನೇ ಗೌರವಿಸಿಕೊಂಡಿತು.



ಆಲ್ಬರ್ಟ್ ಐನ್‌ಸ್ಟೀನ್ ಒಂದೆಡೆ ಹೀಗೆ ಹೇಳಿದ್ದಾರೆ: 'ಮೀನನ್ನು ಮರವೇರುವ ಪರೀಕ್ಷೆಗೊಡ್ಡಿದರು ಅನ್ನಿ. ಆಗ ಅದಕ್ಕೆ ತನ್ನ ಜೀವನಪರ್ಯಂತ ಮೂರ್ಖತನದ ಪಟ್ಟವೇ ಗತಿ!' ಮೀನಿಗೆ ಕುದುರೆ ಅಥವಾ ಚಿರತೆಯೊಂದಿಗೆ ಓಡಲು ಹೇಳಿ ಅದರ ವಿಜಯ ನಿರೀಕ್ಷಿಸಬಹುದೇ? ವಿದ್ಯಾಲಯದ ಮುಖ್ಯಸ್ಥರು, ಶಿಕ್ಷಕರು ಮತ್ತು ಪೋಷಕರ ಒತ್ತಡಕ್ಕೆ ಮಣಿದು ಅಂಕಪಟ್ಟಿಯಲ್ಲಿ ಬರೀ 'ಸ್ಪೆಷಲ್ ಗ್ರೇಡ್', 'ಡಿಸ್ಟಿಂಕ್ಷನ್', 'ಫಸ್ಟ್ ಕ್ಲಾಸ್'ನಂತಹ ನಮೂದಿಗೆ ಮಕ್ಕಳು ಹಪಹಪಿಸುತ್ತಾರೆ. ನಿಜವಾದ ಪ್ರಾಪಂಚಿಕ ಅರಿವನ್ನು ಆಸ್ವಾದಿಸಲಾಗದೆ ಅವರು ಜ್ಞಾನವಂಚಿತರಾಗುತ್ತಾರೆ. ಉತ್ತಮ ಫಲಿತಾಂಶ ಬಂದರಾಯಿತು, ಜಗತ್ತನ್ನು ಕಟ್ಟಿಕೊಂಡು ಆಗಬೇಕಾದ್ದೇನು ಎನ್ನಲಾಗದು. ಏಕೆಂದರೆ ಕಲಿಕಾರ್ಥಿ ಜಗತ್ತಿನ ಒಂದು ಭಾಗವೇ.

ವಿಶ್ವದ ಅತಿಶ್ರೇಷ್ಠ ವಿಜ್ಞಾನಿಗಳು, ತಂತ್ರಜ್ಞರು ತಮ್ಮ ಸಂಶೋಧನೆಗಳ ಫಲಿತಾಂಶ, ಪ್ರತಿಫಲಗಳ ಬಗ್ಗೆ ಚಿಂತಿಸಿದ್ದಿಲ್ಲ. ಅವರ ಗಮನವೆಲ್ಲ ಪ್ರಯೋಗ, ಮರಳಿಯತ್ನ, ಚಿಂತನ ಮಂಥನಗಳಿಗೆ ಮೀಸಲಿತ್ತು. ವಾಸ್ತವವಾಗಿ ನಿಜ ಜ್ಞಾನ, ನಿಜ ಅಧ್ಯಯನ ನಮ್ಮನ್ನು ಕಿರಿಯರನ್ನಾಗಿಸುತ್ತವೆ, ಮತ್ತಷ್ಟು ತಿಳಿಯಬೇಕೆಂಬ ಹಂಬಲವನ್ನು ಸೃಜಿಸುತ್ತವೆ.

ಸ್ವಾರಸ್ಯ ಗೊತ್ತೇ? ಕಡಿಮೆ ಅಂಕ ಗಳಿಸಿದ್ದಕ್ಕೆ ಮಕ್ಕಳಿಗೆ ಆತಂಕವಿಲ್ಲ. ಅವರ ಭಯವೇನಿದ್ದರೂ ತಮ್ಮ ಪೋಷಕರು ಹೇಗೆ ಪ್ರತಿಕ್ರಿಯಿಸುವರೋ ಎಂದು! ಇಂದಿನ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಅವರವರ ಪ್ರತಿಭೆಗೆ ತಕ್ಕಂತೆ ಉದ್ಯೋಗ ಲಭ್ಯ. ಅಭಿನಯ, ಹಾಡುಗಾರಿಕೆ, ಅಡುಗೆ, ಪ್ರಾಣಿ ಪೋಷಣೆ, ನಲ್ಲಿ ದುರಸ್ತಿ, ಕೇಶ ವಿನ್ಯಾಸ... ಒಂದೆರಡಲ್ಲ. ಶುಚಿರುಚಿ ಮೃದು ದೋಸೆ ತಯಾರಿಕೆ ವೈರಲ್ ಆಗಿ ನೆರೆಹೊರೆಯ ಪಟ್ಟಣಗಳಿಂದ ಜನ ಬಂದು ಸರದಿ ನಿಲ್ಲುವ ಉದಾಹರಣೆಗಳಿಲ್ಲವೇ? ಅಂತೆಯೇ ಜನ ಮುಗಿಬೀಳುವ ಹೊಲಿಗೆಯಂತ್ರ ರಿಪೇರಿ ಮಳಿಗೆಗಳು ಅವೆಷ್ಟೋ? ದುರ್ದೈವವೆಂದರೆ, ಇಂಥ ವೃತ್ತಿಗಳು ಪರ್ಯಾಯವೆಂದು ಸೂಚಿಸಲ್ಪಡುವುದೇ ಇಲ್ಲ! ಅದು ಹಾಗಿರಲಿ, ಒಬ್ಬ ಬೈಕ್ ಮೆಕ್ಯಾನಿಕ್ 'ನನ್ನ ತಲೆಮಾರಿಗೇ ಇದು ಸಾಕು, ಮುಂದೆ ನನ್ನ ಮಕ್ಕಳಿಗೆ ಬೇಡ' ಎನ್ನುವುದು ಎಂಥ ಹಿನ್ನಡೆ?!

ವಾಚಕರ ವಾಣಿ

ಜಾತಿ ಆಧಾರಿತ ವಿಮರ್ಶೆಗೆ ಕಡಿವಾಣವಿರಲಿ

ಲೋಕಸಭಾ ಚುನಾವಣೆಗೆ ಸ್ಪರ್ಧಿಸುತ್ತಿರುವವರನ್ನು ಕೆಲವರು ಅವರ ಜಾತಿಯ ಆಧಾರದ ಮೇಲೆ ಪ್ರತ್ಯೇಕಿಸಿ ಟೀಕೆ, ಟಿಪ್ಪಣಿ ಮಾಡುತ್ತಿರುವುದು ಆರೋಗ್ಯಕರ ಬೆಳವಣಿಗೆಯಲ್ಲ. ಅಭ್ಯರ್ಥಿಯ ಸಾಮರ್ಥ್ಯ ಮತ್ತು ಮಿತಿಗಳು ವಸ್ತುನಿಷ್ಠವಾಗಿ ನಿಕಷಕ್ಕೆ ಒಳಗಾಗಲಿ. ಅದುಬಿಟ್ಟು ಅವರ ಜಾತಿಯನ್ನು ಹಿಡಿದು ಮಾತನಾಡುವುದು ತಪ್ಪು. ಎಲ್ಲ ಜಾತಿಯವರಿಗೂ ಅವರವರ ಜಾತಿ ದೊಡ್ಡದು. 'ನಮ್ಮ ಧರ್ಮದಲ್ಲಿ ಇರೋಣ, ಬೇರೆಬೇರೆ ಧರ್ಮದವರನ್ನು ಪ್ರೀತಿಸೋಣ' ಎಂದ ಮಹಾತ್ಮ ಗಾಂಧಿಯವರ ಮಾತಿನಂತೆ ನಮ್ಮ ವಿಮರ್ಶೆಗಳು ಇರುವುದು ಒಳಿತು. ಇದನ್ನು ಎಲ್ಲ ವರ್ಗದವರೂ ತಿಳಿದುಕೊಳ್ಳುವುದು ಅಗತ್ಯ.

ಚಿದಂಬರ ಪಿ. ನಿಂಬರಗಿ, ಧಾರವಾಡ

ಬೋರ್ಡ್ ಪರೀಕ್ಷೆ: ಪ್ರಹಸನ ಸಲ್ಲ

ರಾಜ್ಯ ಪಠ್ಯಕ್ರಮದ 5, 8, 9ನೇ ತರಗತಿಗಳ ಬೋರ್ಡ್ ಪರೀಕ್ಷೆಯ ಪ್ರಹಸನ ಇನ್ನೂ ಮುಂದುವರಿದಿದೆ. ಫಲಿತಾಂಶವನ್ನು ತಡೆಹಿಡಿಯುವಂತೆ ರಾಜ್ಯ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಇದರಿಂದಾಗಿ, ಇಬ್ಬರ ಜಗಳದಲ್ಲಿ ಕೂಸು ಬಡವಾಯಿತು ಎಂಬಂತಾಗಿದೆ. ರಾಜ್ಯ ಸರ್ಕಾರ ಮತ್ತು ಖಾಸಗಿ ಶಾಲೆಗಳ ಸಂಘಟನೆಗಳ ಜಗಳದ ನಡುವೆ ಇಲ್ಲಿ ಬಡವಾಗಿದ್ದು ವಿದ್ಯಾರ್ಥಿಗಳು ಮತ್ತು ಪಾಲಕರು. ಸರ್ಕಾರ ಇನ್ನಾದರೂ ಎಚ್ಚೆತ್ತುಕೊಳ್ಳಬೇಕು ಹಾಗೂ ಸೂಕ್ತ ವಾರ್ಷಿಕ ಕ್ರಿಯಾಯೋಜನೆಯೊಂದಿಗೆ ಮುಂಬರುವ ಶೈಕ್ಷಣಿಕ ವರ್ಷವು ಸುಗಮವಾಗಿ ನಡೆಯುವಂತೆ ನೋಡಿಕೊಳ್ಳಬೇಕು.

ಸುರೇಂದ್ರ ಪೈ, ಭಟ್ಕಳ

ವೆಬ್ ಕಾಸ್ಟಿಂಗ್: ಶಿಕ್ಷಣದ ಮೌಲ್ಯ ಉಳಿಸುವ ಕ್ರಮ

ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯನ್ನು ಶಿಕ್ಷಣ ಇಲಾಖೆಯು ವೆಬ್ ಕಾಸ್ಟಿಂಗ್ ಮೂಲಕ ನಡೆಸಿರುವುದು ದೇಶದ ಶಿಕ್ಷಣ ಕ್ಷೇತ್ರದಲ್ಲಿಯೇ ಹೊಸ ಮೈಲಿಗಲ್ಲು ಎನ್ನಬಹುದು. ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೀ ನಾಮಕಾವಸ್ತೆಗೆ ಬೋರ್ಡ್ ಪರೀಕ್ಷೆಯಾಗಿದ್ದುದು ವಿಷಾದದ ಸಂಗತಿಯಾಗಿತ್ತು. ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುವ ಪ್ರಯತ್ನ ಮಾಡಿದೆ. ಆದರೆ ವಾಸ್ತವದಲ್ಲಿ ನಿಜವಾಗಿಯೂ ಗುಣಾತ್ಮಕ ಶಿಕ್ಷಣ ಸಿಗುತ್ತಿಲ್ಲ ಎನ್ನುವುದು ಶಿಕ್ಷಣ ಇಲಾಖೆಗೆ ಈಗ ಮನವರಿಕೆಯಾದಂತಿದೆ. ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಉತ್ತಮ ಫಲಿತಾಂಶ ದಾಖಲಿಸುವ ಹಂಬಲದಿಂದ ಮಕ್ಕಳಿಗೆ ನಕಲು ಮಾಡಲು ಅವಕಾಶ ಕಲ್ಪಿಸಲಾಗುತ್ತಿತ್ತು ಎಂಬ ಆರೋಪವಿದೆ. ಇಂತಹ ಆರೋಪವನ್ನು ನಿವಾರಿಸುವ ದಿಸೆಯಲ್ಲಿ ಪರೀಕ್ಷಾ ಕೊಠಡಿಗಳಲ್ಲಿ ಸಿ.ಸಿ. ಟಿ.ವಿ. ಕ್ಯಾಮೆರಾ ಅಳವಡಿಸುವ ವೆಬ್ ಕಾಸ್ಟಿಂಗ್ ಎಂಬ ಕಟ್ಟುನಿಟ್ಟಾದ ಕ್ರಮವನ್ನು ಇಲಾಖೆ ಕೈಗೊಂಡಿದ್ದು ಅಭಿನಂದನೀಯ.

ಮೊಬೈಲ್ ಫೋನ್ ಮತ್ತು ಅಂತರ್ಜಾಲದ ಗೀಳಿನಿಂದಾಗಿ ಈಗಿನ ಮಕ್ಕಳಲ್ಲಿ ಪುಸ್ತಕವನ್ನು ತೆಗೆದು ಓದುವ ಹವ್ಯಾಸ ಮರೆಯಾಗಿದೆ. ಶಿಕ್ಷಕರ ಪಾಠವನ್ನು ಕೇಳುವುದು ಹಾಗೂ ಸಲಹೆಗಳನ್ನು ಸ್ವೀಕರಿಸುವುದರಲ್ಲಿ ಉದಾಸೀನ ತೋರುತ್ತಾರೆ. ಇನ್ನು ಕೆಲವು ಮಕ್ಕಳು ಶಿಕ್ಷಕರನ್ನೇ ಬೆದರಿಸುವ ಪ್ರಕರಣಗಳು ಜಗಜ್ಜಾಹೀರಾಗಿವೆ. ಎಸ್‌ಎಸ್‌ಎಲ್‌ಸಿ ಎಂಬ ಪರೀಕ್ಷೆಯು ಪಿಯುಸಿಗೆ ಸೇರಿಸುವ ಅಥವಾ ಸುರಿಯುವ ರೀತಿಯಲ್ಲಿ ಆಗಬಾರದು. ಯಾರು ನಿಷ್ಠೆಯಿಂದ ಅಭ್ಯಾಸ ಮಾಡಿರುತ್ತಾರೋ ಅವರಿಗಷ್ಟೇ ಉತ್ತಮ ಫಲಿತಾಂಶ ಲಭ್ಯವಾಗಬೇಕು. ವೆಬ್ ಕಾಸ್ಟಿಂಗ್ ವ್ಯವಸ್ಥೆಯಿಂದಾಗಿ ಈ ಬಾರಿ ಉತ್ತೀರ್ಣರಾಗುವ ಮಕ್ಕಳ ಸಂಖ್ಯೆಯು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುವುದು ನಿಶ್ಚಿತ. ಆದರೂ ಪರವಾಗಿಲ್ಲ, ಪರೀಕ್ಷೆಯನ್ನು ಕಟ್ಟುನಿಟ್ಟಾಗಿ ನಡೆಸುವುದರಿಂದ ಶಿಕ್ಷಣ ಮತ್ತು ಶಿಕ್ಷಕರ ಮೌಲ್ಯವಾದರೂ ಉಳಿದೀತು. ಇಲಾಖೆಯು ಕನಿಷ್ಠ ಐದು ವರ್ಷ ವೆಬ್ ಕಾಸ್ಟಿಂಗ್ ಕ್ರಮವನ್ನು ಮುಂದುವರಿಸಿದರೂ ಮಕ್ಕಳು ಮತ್ತು ಶಿಕ್ಷಕರು ಸ್ವಚ್ಛವಾಗುವುದರಲ್ಲಿ ಎರಡು ಮಾತಿಲ್ಲ.

ಕೆ.ಮಂಜುನಾಥ, ಹರಪನಹಳ್ಳಿ

'ವರ್ಷದ ತೊಡಕು' ಸೂಕ್ತ ಬಳಕೆ

'ಹೊಸ ತೊಡಕು' ಪದ ಬಳಕೆಯೇ ತೊಡಕು ಎಂದು ತಾ.ಸಿ.ತಿಮ್ಮಯ್ಯ ಹೇಳಿದ್ದಾರೆ (ವಾ.ವಾ., ಏ. 8). ವಾಸ್ತವದಲ್ಲಿ ಇದರ ಸರಿಯಾದ ಅರ್ಥ 'ವರ್ಷದ ತೊಡಕು'. ಹಳೆ ಮೈಸೂರು ಪ್ರಾಂತ್ಯದಲ್ಲಿ ಇದರ ಆಚರಣೆ ಯುಗಾದಿಯಷ್ಟೇ ಮಹತ್ವ ಪಡೆದಿದೆ. ರೈತ ಸಮುದಾಯವು ಒಕ್ಕಲುತನದ ವಿಶ್ರಾಂತಿಯಿಂದ ಮಳೆಯ ನಿರೀಕ್ಷೆಯಲ್ಲಿ ಬಿತ್ತನೆ ಮತ್ತು ಆರಂಬಕ್ಕೆ ತೊಡಗುವ ಹಾಗೂ ಪ್ರಕೃತಿ ಪುಟಿದೇಳುವ ಸಮಯವಿದು. ಇದರ ಸಂಭ್ರಮವನ್ನು ಯುಗಾದಿಯ ಮರುದಿನ ಮಾಂಸದ ಆಹಾರ ತಯಾರಿಸಿ ಉಣ್ಣುವುದರೊಂದಿಗೆ ಆಚರಿಸಲಾಗುತ್ತದೆ. ಯುಗಾದಿಯ ಮರುದಿನ ಹಳ್ಳಿಗಳಲ್ಲಿ ಬೇರೆಯವರ ಮನೆಯ ಮೇಲೆ ಕಲ್ಲು ಎಸೆದು ಬೈಗುಳ ಪಡೆಯುವ ಒಂದು ಪ್ರತೀತಿಯೂ ಇದೆ. ಅಂದರೆ ವರ್ಷದ ಎಲ್ಲಾ ತೊಡಕುಗಳನ್ನು ಅಂದೇ ನಿವಾರಿಸಿಕೊಳ್ಳುವುದು. ಇದರ ಹಿನ್ನೆಲೆಯನ್ನು ಜನಪದ ವಿದ್ವಾಂಸ ಎಚ್.ಎಲ್.ನಾಗೇಗೌಡರ 'ದೊಡ್ಡಮನೆ' ಕಾದಂಬರಿಯಲ್ಲಿ ಕಾಣಬಹುದು. ಅದರಲ್ಲಿ ಅವರು ವರ್ಷದ ತೊಡಕಿನ ಬಗ್ಗೆ ವಿವರಿಸಿದ್ದಾರೆ. ಆದ್ದರಿಂದ, ವರ್ಷ ತೊಡಕು ಎಂಬುದು ಹೆಚ್ಚು ಸೂಕ್ತ ಮತ್ತು ಸಂದರ್ಭೋಚಿತ.

ಸಿ.ಆರ್.ಗೋಪಾಲಸ್ವಾಮಿ, ಬೆಂಗಳೂರು

ಹೆಸರಿನಿಂದ ದಿಕ್ಕು ತಪ್ಪಿಸುವ ವ್ಯರ್ಥ ಪ್ರಯತ್ನ

ಚುನಾವಣೆ ಸಂದರ್ಭದಲ್ಲಿ ಮತದಾರರಲ್ಲಿ ಗೊಂದಲ ಉಂಟುಮಾಡಲು ಅಥವಾ ಮತದಾರರನ್ನು ದಾರಿ ತಪ್ಪಿಸುವ ಉದ್ದೇಶದಿಂದ ಒಂದೇ ಹೆಸರಿನ ಹಲವು ಅಭ್ಯರ್ಥಿಗಳನ್ನು ಪಕ್ಷೇತರ ಅಭ್ಯರ್ಥಿಗಳಾಗಿ ಸ್ಪರ್ಧಿಸುವಂತೆ ಮಾಡುವುದು, ಈ ಮೂಲಕ ಅದೇ ಹೆಸರಿನ ಎದುರಾಳಿ ಅಭ್ಯರ್ಥಿಗೆ ತೊಂದರೆ ಕೊಡಲು ಪ್ರಯತ್ನಿಸುವುದು ರಾಜಕೀಯ ಪಕ್ಷಗಳ ಉದ್ದೇಶವಾಗಿರುತ್ತದೆ. ಆದರೆ ಇಂದಿನ ಕಾಲಘಟ್ಟದಲ್ಲಿ ಮತದಾರರು ಬಹಳಷ್ಟು ಪ್ರಜ್ಞಾವಂತರಾಗಿದ್ದಾರೆ. ಯಾರಿಗೆ ಮತ್ತು ಯಾವ ಪಕ್ಷದ ಅಭ್ಯರ್ಥಿಗೆ ಮತ ಹಾಕಬೇಕೆಂದು ಮೊದಲೇ ನಿರ್ಧರಿಸಿರುತ್ತಾರೆ. ಎಲ್ಲಕ್ಕಿಂತ ಮುಖ್ಯವಾಗಿ ಆಯಾ ಪಕ್ಷದ ಕಾರ್ಯಕರ್ತರು ಪಕ್ಷದ ಚಿಹ್ನೆ, ಅಭ್ಯರ್ಥಿಯ ಹೆಸರು ಮತ್ತು ಕ್ರಮಸಂಖ್ಯೆಯನ್ನು ಮತದಾರರಿಗೆ ಮನದಟ್ಟು ಮಾಡಿಕೊಟ್ಟಿರುತ್ತಾರೆ. ಇದರಿಂದ, ಮತಗಟ್ಟೆಗೆ ಹೋಗಿ ಮತದಾನ ಮಾಡುವ ಹಳ್ಳಿಯ ನಿರಕ್ಷರರನ್ನು ಸಹ ಬರೀ ಅಭ್ಯರ್ಥಿಯ ಹೆಸರಿನಿಂದ ದಿಕ್ಕು ತಪ್ಪಿಸಲು ಸಾಧ್ಯವಿಲ್ಲ. ಹೀಗಾಗಿ ಇದು ರಾಜಕೀಯ ಪಕ್ಷಗಳ ವ್ಯರ್ಥ ಪ್ರಯತ್ನವೆಂದೇ ಹೇಳಬಹುದು.

ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸುಮಲತಾ ಅಂಬರೀಷ್ ಇದಕ್ಕೊಂದು ಉದಾಹರಣೆ. ಅವರನ್ನು ಸೋಲಿಸಲು ಸುಮಲತಾ ಎಂಬ ಹೆಸರಿನ ನಾಲ್ವರು ಅಭ್ಯರ್ಥಿಗಳನ್ನು ಪಕ್ಷೇತರರನ್ನಾಗಿ ನಿಲ್ಲಿಸಲಾಗಿತ್ತಾದರೂ ಸುಮಲತಾ ಅಂಬರೀಷ್ ಅವರೇ ಜಯ ಗಳಿಸಿದ್ದನ್ನು ಮರೆಯಬಾರದು.

ಬೂಕನಕೆರೆ ವಿಜೇಂದ್ರ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಪ್ರಜಾವಾಣಿ ವಾರ್ತೆ

ಆರ್‌ಬಿಐ @90



ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಈಗ 90ನೇ ವರ್ಷಕ್ಕೆ ಕಾಲಿಟ್ಟಿದೆ. ಆರ್‌ಬಿಐ ಅನ್ನು ಸ್ಥಾಪಿಸಿದ್ದು ಬ್ರಿಟಿಷರು, 1935ರಲ್ಲಿ. ಹಿಲ್ಟನ್ ಯಂಗ್ ಆಯೋಗದ ಶಿಫಾರಸಿನ ಆಧಾರದಲ್ಲಿ, 'ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ 1934' ಅನ್ನು ಜಾರಿಗೊಳಿಸಿ, ಈ ಬ್ಯಾಂಕ್ ಅನ್ನು ಸ್ಥಾಪಿಸಲಾಗಿತ್ತು. ಆರ್‌ಬಿಐ ತನ್ನ ಕಾರ್ಯಚಟುವಟಿಕೆಯನ್ನು 1935ರ ಏಪ್ರಿಲ್ 1ರಿಂದ ಆರಂಭಿಸಿತು.

ಹೆಸರೇ ಸೂಚಿಸುವಂತೆ, ಹಣಕಾಸಿನ ಸ್ಥಿರತೆಯನ್ನು ಕಾಪಾಡುವುದಕ್ಕಾಗಿ ಒಂದಿಷ್ಟು ಹಣವನ್ನು ಕೂಡಿಟ್ಟುಕೊಳ್ಳುವುದು (ರಿಸರ್ವ್) ಈ ಬ್ಯಾಂಕ್ ಸ್ಥಾಪನೆಯ ಮೂಲ ಉದ್ದೇಶಗಳಲ್ಲಿ ಒಂದು. ನೋಟು ವಿತರಣೆ, ಸಾಲ, ಹಣಕಾಸಿನ ವ್ಯವಹಾರಗಳನ್ನು ನಿಯಂತ್ರಣದಲ್ಲಿ ಇರಿಸಿಕೊಳ್ಳಲು ವ್ಯವಸ್ಥೆಯೊಂದನ್ನು ರೂಪಿಸುವುದು ಮತ್ತು ಅದರ ಜಾರಿ– ಇವು ಇನ್ನಿತರ ಮೂಲ ಉದ್ದೇಶಗಳಾಗಿದ್ದವು. 89 ವರ್ಷದ ಬಳಿಕವೂ ಆರ್‌ಬಿಐನ ಈ ಮೂಲ ಉದ್ದೇಶಗಳಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಆಧುನಿಕತೆಗೆ ತಕ್ಕಂತೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆಯಷ್ಟೇ.

ಬ್ರಿಟಿಷ್ ಸರ್ಕಾರದ ವ್ಯವಹಾರಗಳನ್ನು ನೋಡಿಕೊಳ್ಳುತ್ತಿದ್ದ ಆರ್‌ಬಿಐ, ಸ್ವಾತಂತ್ರ್ಯಾನಂತರ ಜನರ ಹಿತಾಸಕ್ತಿಗಾಗಿ ಕೆಲಸ ನಿರ್ವಹಿಸುತ್ತಿದೆ. ಖಾಸಗಿ ಷೇರುದಾರರ ಬ್ಯಾಂಕ್ ಆಗಿದ್ದ ಆರ್‌ಬಿಐ, 1949ರಲ್ಲಿ ರಾಷ್ಟ್ರೀಕರಣಗೊಂಡಿತು. ಕಾಲ ಕಾಲಕ್ಕೆ ಹಣಕಾಸಿನ ನೀತಿಗಳನ್ನು ರೂಪಿಸುತ್ತಾ, ಬ್ಯಾಂಕ್‌ಗಳ ಬ್ಯಾಂಕ್ ಆಗಿ, ದೇಶದ ಇಡೀ ಅರ್ಥ ವ್ಯವಸ್ಥೆಯ ಕೇಂದ್ರವಾಗಿ, ಆರ್ಥಿಕತೆಯ ಆಧಾರವಾಗಿಯೂ ಆರ್‌ಬಿಐ ಕೆಲಸ ನಿರ್ವಹಿಸುತ್ತಿದೆ.

ಸರ್ ಒಸ್‌ಬೋರ್ನ್ ಸ್ಮಿತ್ ಅವರು ಆರ್‌ಬಿಐನ ಮೊದಲ ಗವರ್ನರ್. ಅಲ್ಲಿಂದ ಇಲ್ಲಿಯವರೆಗೆ ಸುಮಾರು 24 ಗವರ್ನರ್‌ಗಳು ಕಾರ್ಯನಿರ್ವಹಿಸಿದ್ದಾರೆ. ಶಕ್ತಿಕಾಂತ್ ದಾಸ್ ಅವರು ಆರ್‌ಬಿಐನ 25ನೇ ಗವರ್ನರ್. ಆರ್‌ಬಿಐನ ಕಾರ್ಯಗಳನ್ನು ನಿರ್ಧರಿಸುವುದು ಅದರ ನಿರ್ದೇಶಕರ ಮಂಡಳಿ. ಗವರ್ನರ್ ಸೇರಿದಂತೆ ನಿರ್ದೇಶಕರ ಮಂಡಳಿಯನ್ನು ನೇಮಿಸುವುದು ಕೇಂದ್ರ ಸರ್ಕಾರ. ಬ್ರಿಟಿಷ್ ಸರ್ಕಾರದ ವ್ಯವಹಾರಗಳಿಗಾಗಿಯೇ ಸೀಮಿತವಾಗಿದ್ದ ಆರ್‌ಬಿಐ, ಬರುಬರುತ್ತಾ ತನ್ನ ಕಾರ್ಯವ್ಯಾಪ್ತಿಯನ್ನು ಬದಲಾಯಿಸಿಕೊಂಡಿದೆ; ವಿಸ್ತರಿಸಿಕೊಂಡಿದೆ. ಸ್ವಾಯತ್ತ ಸಂಸ್ಥೆಯಾಗಿ ಜನರ ಏಳಿಗೆಗಾಗಿ ಕೆಲಸ ಮಾಡುತ್ತಾ ಬಂದಿದೆ. ಕೇಂದ್ರ ಸರ್ಕಾರದಿಂದಲೇ ನೇಮಕವಾದರೂ, ಕೇಂದ್ರ ಸರ್ಕಾರದ ವಿರುದ್ಧ ಮಾತನಾಡಬಹುದಾದಷ್ಟು ಸ್ವಾಯತ್ತೆಯನ್ನು ಆರ್‌ಬಿಐ ಈಗಲೂ ಉಳಿಸಿಕೊಂಡಿದೆಯೇ ಎನ್ನುವುದು ಚರ್ಚಾ ವಿಷಯ. ಬ್ರಿಟಿಷರ ಕೈಯಲ್ಲಿ 12 ವರ್ಷ ಆರ್‌ಬಿಐ ಕಾರ್ಯನಿರ್ವಹಿಸಿದೆ. ಸ್ವಾತಂತ್ರ್ಯಾನಂತರ ಹಲವು ಪಕ್ಷಗಳ ಸರ್ಕಾರಗಳ ಅಧಿಕಾರಾವಧಿಯಲ್ಲಿ ಇದು ಕಾರ್ಯ ನಡೆಸಿದೆ.

1938ರಲ್ಲಿ ಮೊದಲ ಬಾರಿಗೆ ಆರ್‌ಬಿಐ ನೋಟುಗಳನ್ನು ವಿತರಿಸಿತು. 1940ರಲ್ಲಿ ಮೀಸಲು ಚಿನ್ನದ ನಿಧಿ ಹೊರತಾದ ನೋಟು ಮುದ್ರಣವನ್ನು ಆರ್‌ಬಿಐ ನಡೆಸಿತು. ಇದು ಬ್ರಿಟಿಷ್ ಆಡಳಿತದ ಅವಧಿಯಲ್ಲಾದ ಪ್ರಮುಖ ಬೆಳವಣಿಗೆ. ಸ್ವಾತಂತ್ರ್ಯಾನಂತರ, ಹಲವು ಸುಧಾರಣೆಗಳು, ಹಲವು ನೀತಿಗಳು, ಕಾನೂನುಗಳನ್ನು ತರಲಾಯಿತು. ಆರ್‌ಬಿಐನ ಕಾರ್ಯವು ವಿಸ್ತರಣೆಗೊಂಡಿತು ಮತ್ತು ಹೆಚ್ಚು ಹೆಚ್ಚು ನಿರ್ದಿಷ್ಟವಾಯಿತು. 1949ರ ಬ್ಯಾಂಕಿಂಗ್ ಕಂಪನಿ ಕಾಯ್ದೆ ಜಾರಿಯು ಆರ್‌ಬಿಐಗೆ ಶಾಸನಬದ್ಧ ಅಧಿಕಾರ ನೀಡಿತು.

ಪಂಚವಾರ್ಷಿಕ ಯೋಜನೆಗಳ ಘೋಷಣೆಯಾಯಿತು. ಭಾರತೀಯ ಸ್ಟೇಟ್ ಬ್ಯಾಂಕ್ ಸ್ಥಾಪನೆಯು (1955) ಈ ಕಾಲಘಟ್ಟದ ಪ್ರಮುಖ ಬೆಳವಣಿಗೆ. ಬ್ಯಾಂಕ್‌ಗಳು ನಗರ ಕೇಂದ್ರಿತವಾಗದೆ, ಗ್ರಾಮೀಣ ಭಾಗಕ್ಕೂ ಎಟುಕುವಂತಾಯಿತು. ಆ ಮೂಲಕ ಬ್ಯಾಂಕಿಂಗ್ ವ್ಯವಹಾರಗಳಲ್ಲಿ ಜನರ ಪಾಲ್ಗೊಳ್ಳುವಿಕೆ ಅಧಿಕವಾಯಿತು. ನೋಟು ಮುದ್ರಣ ಮಾಡಬೇಕು ಅಂತಾದರೆ, ಕನಿಷ್ಠ ಶೇ 40ರಷ್ಟು ಚಿನ್ನ ಮೀಸಲು ಇರಬೇಕಿತ್ತು. ಎರಡನೇ ಪಂಚ ವಾರ್ಷಿಕ ಯೋಜನೆ ಕಾಲಘಟ್ಟದಲ್ಲಿ ಮೀಸಲು ನಿಧಿಯನ್ನು ಸಡಿಲಿಸಲಾಯಿತು. 1957ರಲ್ಲಿ ಈ ಮೀಸಲು ಪ್ರಮಾಣವನ್ನು ಮತ್ತಷ್ಟು ಸಡಿಲಿಸಲಾಯಿತು. 1959ರ ಭಾರತೀಯ ಸ್ಟೇಟ್ ಬ್ಯಾಂಕ್ (ಅಧೀನ ಬ್ಯಾಂಕ್‌ಗಳು) ಕಾಯ್ದೆಯು ಈ ಕಾಲಘಟ್ಟದ ಮುಖ್ಯ ಬೆಳವಣಿಗೆ. ಪ್ರಾದೇಶಿಕವಾಗಿ ಇದ್ದ ಹಲವು ಬ್ಯಾಂಕ್‌ಗಳು ಸ್ಟೇಟ್ ಬ್ಯಾಂಕ್ ಅಧೀನಕ್ಕೆ ಬಂದವು.

1960ರಿಂದ 1971ರ ಅವಧಿಯಲ್ಲಿ ಆರ್‌ಬಿಐನಲ್ಲಿ ಹಲವು ಸಾಂಸ್ಥಿಕ ಬದಲಾವಣೆಗಳಾದವು. ಹಲವು ನೀತಿಗಳು ಜಾರಿಯಾದವು. ಈ ನೀತಿಗಳು ಆರ್‌ಬಿಐನ ಕಾರ್ಯ ವ್ಯಾಪ್ತಿಯನ್ನು ಹೆಚ್ಚಿಸಿತಲ್ಲದೆ, ಹೆಚ್ಚಿನ ಅಧಿಕಾರವನ್ನೂ ತಂದುಕೊಟ್ಟವು. 1969ರಲ್ಲಿ 14 ವಾಣಿಜ್ಯ ಬ್ಯಾಂಕ್‌ಗಳ ರಾಷ್ಟ್ರೀಕರಣವೂ ಅಂದಿನ ಕೇಂದ್ರ ಸರ್ಕಾರದ ಪ್ರಮುಖ ನಿರ್ಧಾರವಾಗಿತ್ತು. ಇದು ಕೂಡ ಆರ್‌ಬಿಐನ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿತು. ಬ್ಯಾಂಕ್‌ಗಳು ಹೆಚ್ಚು ಹೆಚ್ಚು ಜನಸ್ನೇಹಿಯಾದವು. 1974ರಲ್ಲಿ ವಿದೇಶಿ ವಿನಿಮಯ ನಿಯಂತ್ರಣ ಕಾಯ್ದೆಯು ಜಾರಿಗೊಂಡಿತು. ವಿದೇಶಿ ವಿನಿಮಯ ನಿಯಂತ್ರಣದ ಹೊಣೆಯನ್ನು ಆರ್‌ಬಿಐಗೆ ನೀಡಲಾಯಿತು.

ಗ್ರಾಮೀಣ ಬ್ಯಾಂಕ್‌ಗಳನ್ನು 1975ರಲ್ಲಿ ಸ್ಥಾಪಿಸಲಾಯಿತು. 20 ಅಂಶದ ಕಾರ್ಯಕ್ರಮದ ಅಡಿಯಲ್ಲಿ ಈ ಬೆಳವಣಿಗೆ ನಡೆಯಿತು. ಈ ಮೂಲಕ ಅತ್ಯಂತ ಕುಗ್ರಾಮದ ಜನರು ಕೂಡ ಬ್ಯಾಂಕಿಂಗ್ ವ್ಯವಸ್ಥೆಯ ಭಾಗವಾದರು. 1980ರಲ್ಲಿ ಆರು ಖಾಸಗಿ ವಲಯದ ಬ್ಯಾಂಕ್‌ಗಳನ್ನು ರಾಷ್ಟ್ರೀಕರಣಗೊಳಿಸಲಾಯಿತು. 1968ರಿಂದ 1985ರ ಕಾಲಘಟ್ಟವನ್ನು ಬ್ಯಾಂಕ್‌ಗಳ ರಾಷ್ಟ್ರೀಕರಣ ಯುಗ ಹಾಗೂ ಬ್ಯಾಂಕ್ ಸೇವೆಯ ವಿಸ್ತಾರದ ಯುಗ ಎಂದೇ ಹೇಳಬೇಕು.

1991 ಭಾರತದ ಮಟ್ಟಿಗೆ ಪ್ರಮುಖವಾದ ಘಟ್ಟ. ಭಾರತವು ಜಾಗತೀಕರಣಗೊಂಡಿತು. ಭಾರತದ ಬ್ಯಾಂಕ್‌ಗಳೂ ಜಾಗತೀಕರಣಗೊಳ್ಳಬೇಕಾಯಿತು. ಆರ್‌ಬಿಐನ ಕಾರ್ಯವ್ಯಾಪ್ತಿ ಮತ್ತಷ್ಟು ಹೆಚ್ಚಿತು. ಬೇರೆ ದೇಶಗಳೊಟ್ಟಿಗೆ ಸ್ಪರ್ಧಿಸುವ ಜೊತೆಯಲ್ಲಿಯೇ, ಆಧುನಿಕರಣಗೊಳ್ಳುತ್ತಿದ್ದ ಜನರಿಗೆ ಅನುಕೂಲವಾಗುವಂಥ ನೀತಿಗಳನ್ನು ಆರ್‌ಬಿಐ ರೂಪಿಸಬೇಕಿತ್ತು. 1988ರಲ್ಲಿಯೇ ಸೆಬಿಯನ್ನು ಸ್ಥಾಪಿಸಲಾಗಿತ್ತು. 1991ರನಂತರ ಇದಕ್ಕೆ ಹೆಚ್ಚಿನ ಅಧಿಕಾರ ನೀಡಲಾಯಿತು. ಬ್ಯಾಂಕ್‌ಗಳು ಆಧುನೀಕರಣಕ್ಕೆ ತೆರೆದುಕೊಂಡವು. ಬ್ಯಾಂಕ್‌ಗಳು ಡಿಜಿಟಲೀಕರಣಗೊಂಡವು. 1999ರಲ್ಲಿ ಡೆಬಿಟ್ ಕಾರ್ಡ್‌ಅನ್ನು ಬ್ಯಾಂಕ್‌ಗಳು ವಿತರಿಸಲು ಆರಂಭಿಸಿದವು.

ಬ್ಯಾಂಕ್‌ಗಳನ್ನು ಮಾತ್ರವಲ್ಲ, ದೇಶದ ಆರ್ಥಿಕತೆಯನ್ನು ಪ್ರಭಾವಿಸುವ ಕೇಂದ್ರ ಸರ್ಕಾರದ ನೀತಿ ರೂಪಣೆಯಲ್ಲಿ ಆರ್‌ಬಿಐ ಮಹತ್ವದ ಪಾತ್ರ ವಹಿಸುತ್ತದೆ. ಇಂತಹ ಅಧಿಕಾರ ವ್ಯಾಪ್ತಿಯ ಕಾರಣದಿಂದಲೇ ಆರ್‌ಬಿಐ, ಕೇಂದ್ರ ಸರ್ಕಾರದೊಂದಿಗೆ ಹಲವು ಬಾರಿ ತೆರೆಮರೆಯ ಜಟಾಪಟಿ ನಡೆಸಿದ್ದೂ ಇದೆ. ಹೀಗೆ ಜನರ ಹಿತಾಸಕ್ತಿಗೆ ಅನುಗುಣವಾಗಿ ಕಾರ್ಯನಿರ್ವಹಿಸುತ್ತಾ ಬಂದಿರುವ ಆರ್‌ಬಿಐ ಈಗ 90ರ ವಸಂತಕ್ಕೆ ಕಾಲಿರಿಸಿದೆ.

ಬ್ಯಾಂಕ್‌ಗಳ ಬ್ಯಾಂಕ್

ಆರ್‌ಬಿಐ ದೇಶದ ಕೇಂದ್ರೀಯ ಬ್ಯಾಂಕ್ ಆಗಿದ್ದು, ದೇಶದ ಬೇರೆಲ್ಲಾ ಬ್ಯಾಂಕ್‌ಗಳು ಇದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ. ಹೀಗಾಗಿ, ಇದನ್ನು ಬ್ಯಾಂಕ್‌ಗಳ ಬ್ಯಾಂಕ್ ಎಂದು ಕರೆಯಲಾಗುತ್ತದೆ.

ಭಾರತೀಯ ರಿಸರ್ವ್ ಬ್ಯಾಂಕ್

- ವಾಣಿಜ್ಯ ಬ್ಯಾಂಕ್‌ಗಳು
  - ಸಾರ್ವಜನಿಕ ಕ್ಷೇತ್ರ
    - ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ
    - ರಾಷ್ಟ್ರೀಕೃತ ಬ್ಯಾಂಕ್‌ಗಳು
  - ಖಾಸಗಿ ಕ್ಷೇತ್ರ
    - ಭಾರತೀಯ
    - ವಿದೇಶಿ
- ಸಹಕಾರಿ ಬ್ಯಾಂಕ್‌ಗಳು
  - ದೀರ್ಘಾವಧಿ ಸಾಲ ಬ್ಯಾಂಕ್‌ಗಳು
  - ಅಲ್ಪಾವಧಿ ಸಾಲ ಬ್ಯಾಂಕ್‌ಗಳು
- ಕ್ಷೇತ್ರವಾರು ಅಭಿವೃದ್ಧಿ ಬ್ಯಾಂಕ್‌ಗಳು
  - ಆಮದು–ರಫ್ತು
    - ಭಾರತೀಯ ಆಮದು–ರಫ್ತು ಬ್ಯಾಂಕ್
  - ಕೃಷಿ
    - ನಬಾರ್ಡ್
  - ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್‌ಗಳು
    - ಐಎಫ್‌ಸಿಐ
    - ಐಸಿಐಸಿಐ
    - ಐಡಿಬಿಐ
    - ಎಸ್‌ಎಫ್‌ಸಿ
    - ಎಸ್‌ಐಡಿಬಿಐ
    - ಎಸ್‌ಐಡಿಸಿಐ
- ಪೇಮೆಂಟ್ಸ್ ಬ್ಯಾಂಕ್

ನೋಟು ರದ್ದತಿ, ಚುನಾವಣಾ ಬಾಂಡ್: ಆರ್‌ಬಿಐನ ಆಕ್ಷೇಪ ನಿರ್ಲಕ್ಷಿಸಿದ್ದ ಸರ್ಕಾರ

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಸಾಂವಿಧಾನಿಕ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಮತ್ತು ಅವುಗಳನ್ನು ದುರ್ಬಲಗೊಳಿಸುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರವು ಆರ್‌ಬಿಐ ಅನ್ನು ಸಹ ಈ ರೀತಿ ದುರ್ಬಲಗೊಳಿಸಲು ಯತ್ನಿಸಿದೆ ಎಂಬುದು ವಿರೋಧ ಪಕ್ಷಗಳ ದೊಡ್ಡ ಆರೋಪ. ಈ ಆರೋಪವನ್ನು ದೃಢಪಡಿಸುವಂತಹ ಹಲವು ದಾಖಲೆಗಳು ಈಗಾಗಲೇ ಬಹಿರಂಗವಾಗಿವೆ. ಸರ್ಕಾರದ ಹಲವು ನೀತಿಗಳಿಗೆ ಆರ್‌ಬಿಐ ಸಲ್ಲಿಸಿದ ಆಕ್ಷೇಪಗಳನ್ನು ಸರ್ಕಾರವು ಸಾರಾಸಗಟಾಗಿ ಕಡೆಗಣಿಸಿದೆ ಎಂಬುದನ್ನು ಈ ದಾಖಲೆಗಳು ಹೇಳುತ್ತವೆ. ನೋಟುರದ್ದತಿ ಮತ್ತು ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ಆರ್‌ಬಿಐ ಸಲ್ಲಿಸಿದ್ದ ಆಕ್ಷೇಪಗಳು ಇದಕ್ಕೆ ಸ್ಪಷ್ಟ ಉದಾಹರಣೆ.

2016ರಲ್ಲಿ ಕೇಂದ್ರ ಸರ್ಕಾರವು ₹500 ಮತ್ತು ₹1,000 ಮುಖಬೆಲೆಯ ನೋಟುಗಳ ಚಲಾವಣೆಯನ್ನು ರದ್ದುಪಡಿಸಿತ್ತು. ನೋಟುರದ್ದತಿ ಎಂದು ಕರೆಯಲಾದ ಈ ಯೋಜನೆಗೆ ಸಂಬಂಧಿಸಿದಂತೆ ಕೇಂದ್ರ ಹಣಕಾಸು ಸಚಿವಾಲಯವು ಆರ್‌ಬಿಐನ ಸಲಹೆಯನ್ನು ಕೇಳಿತ್ತು. ಈ ಯೋಜನೆ ಕಾರ್ಯಸಾಧುವಲ್ಲ ಎಂದು ಆರ್‌ಬಿಐ ಟಿಪ್ಪಣಿ ನೀಡಿತ್ತು. ಆದರೆ ಆ ಟಿಪ್ಪಣಿಯನ್ನು ಕಡೆಗಣಿಸಿ ನೋಟುರದ್ದತಿಯನ್ನು ಜಾರಿಗೆ ತರಲಾಗಿತ್ತು. ಆರ್‌ಬಿಐನ ಆಕ್ಷೇಪವನ್ನು ಕೇಂದ್ರ ಸರ್ಕಾರವು ಕಡೆಗಣಿಸಿತ್ತು ಎಂದು ಅಂದಿನ ಆರ್‌ಬಿಐ ಗವರ್ನರ್ ಆಗಿದ್ದ ರಘುರಾಮ್ ರಾಜನ್ ಅವರು ಸಾರ್ವಜನಿಕವಾಗಿಯೇ ಹಲವು ಬಾರಿ ಹೇಳಿದ್ದಾರೆ.

ಚುನಾವಣಾ ಬಾಂಡ್‌ಗೆ ಸಂಬಂಧಿಸಿದಂತೆ ಆರ್‌ಬಿಐ ನೀಡಿದ್ದ ಆಕ್ಷೇಪವನ್ನು ಕೇಂದ್ರ ಸರ್ಕಾರವು ಇದೇ ರೀತಿ ನಿರ್ಲಕ್ಷಿಸಿತ್ತು. ಚುನಾವಣಾ ಬಾಂಡ್ ಸ್ವರೂಪದ 'ಪ್ರಾಮಿಸರಿ ನೋಟ್'ಗಳನ್ನು ನೀಡುವ ಅಧಿಕಾರ ಆರ್‌ಬಿಐಗೆ ಮಾತ್ರ ಇತ್ತು. ಅಂತಹ ಅಧಿಕಾರವನ್ನು ಎಸ್‌ಬಿಐಗೆ ನೀಡಲು ಚುನಾವಣಾ ಬಾಂಡ್ ಯೋಜನೆಯಲ್ಲಿ ಅವಕಾಶವಿತ್ತು. ಎಸ್‌ಬಿಐ, ಆರ್‌ಬಿಐನ ಅಧೀನ ಬ್ಯಾಂಕ್. ಈ ಬಗ್ಗೆ ಮತ್ತು ಚುನಾವಣಾ ಬಾಂಡ್‌ನಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿದೆ ಎಂಬುದರ ಬಗ್ಗೆ ಆರ್‌ಬಿಐ ತೀವ್ರ ಆಕ್ಷೇಪ ವ್ಯಕ್ತಪಡಿಸಿತ್ತು. ಈ ಸಂಬಂಧ ಆರ್‌ಬಿಐ, ಕೇಂದ್ರ ಹಣಕಾಸು ಸಚಿವಾಲಯಕ್ಕೆ ಸುದೀರ್ಘ ಪತ್ರ ಬರೆದಿತ್ತು.

'ರಾಜಕೀಯ ಪಕ್ಷಗಳಿಗೆ ನೀಡಲಾಗುವ ದೇಣಿಗೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಚುನಾವಣಾ ಬಾಂಡ್ ವ್ಯವಸ್ಥೆ ಅಸ್ತಿತ್ವಕ್ಕೆ ಬರಲಿದೆ ಎನ್ನಲಾಗಿತ್ತು. ಆದರೆ, ಯಾರು ಈ ಬಾಂಡ್ ಖರೀದಿಸುತ್ತಾರೆ ಮತ್ತು ಯಾರು ಇದನ್ನು ರಾಜಕೀಯ ಪಕ್ಷಗಳಿಗೆ ನೀಡುತ್ತಾರೆ ಎಂಬುದರ ದಾಖಲೆ ಇರುವುದಿಲ್ಲ. ಈ ದಾಖಲೆ ಇಲ್ಲದಿರುವ ಕಾರಣ, ಈ ಯೋಜನೆಯ ಮೂಲ ಉದ್ದೇಶವನ್ನು ಸಾಧಿಸಲು ಸಾಧ್ಯವೇ ಇಲ್ಲ. ಬಾಂಡ್ ಖರೀದಿಸುವವರು 'ನಿಮ್ಮ ಗ್ರಾಹಕರನ್ನು ತಿಳಿಯಿರಿ (ಕೆವೈಸಿ)' ದಾಖಲೆಗಳನ್ನು ಸಲ್ಲಿಸಬೇಕು. ಅದರಲ್ಲಿ ಅವರ ಗುರುತು ಇರುತ್ತದೆ. ಆದರೆ, ಬಾಂಡ್ ಅನ್ನು ಪಡೆಯುವವರ ಗುರುತು ಇರುವುದಿಲ್ಲ. ಇದು ಹಣದ ಅಕ್ರಮ ವರ್ಗಾವಣೆಗೆ ದಾರಿ ಮಾಡಿಕೊಡುತ್ತದೆ. ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಉದ್ದೇಶದಿಂದ ಮಾತ್ರ ಈ ಚುನಾವಣಾ ಬಾಂಡ್‌ಗಳನ್ನು ಖರೀದಿಸಲಾಗುತ್ತದೆ. ಈಗ ಚಾಲ್ತಿಯಲ್ಲಿರುವ ಚೆಕ್, ಡಿಮ್ಯಾಂಡ್ ಡ್ರಾಫ್ಟ್–ಡಿ.ಡಿ, ಆನ್‌ಲೈನ್ ಬ್ಯಾಂಕಿಂಗ್, ಮೊಬೈಲ್ ಬ್ಯಾಂಕಿಂಗ್ ಮತ್ತು ಇತರ ಡಿಜಿಟಲ್ ಪಾವತಿ ವ್ಯವಸ್ಥೆಗಳ ಮೂಲಕವೇ ದೇಣಿಗೆ ನೀಡಲು ಅವಕಾಶವಿದೆ. ಇಂತಹ ವ್ಯವಸ್ಥೆಗಳು ಇರುವಾಗಲೇ, ರಾಜಕೀಯ ಪಕ್ಷಗಳಿಗೆ ದೇಣಿಗೆ ನೀಡುವ ಉದ್ದೇಶದಿಂದ ವಿಶೇಷ ಮತ್ತು ಪ್ರತ್ಯೇಕ ವ್ಯವಸ್ಥೆಯನ್ನು ಜಾರಿಗೆ ತರುವ ಅವಶ್ಯಕತೆ ಇಲ್ಲ' ಎಂದು ಆರ್‌ಬಿಐ ಆಕ್ಷೇಪ ಸಹಿತ ಸಲಹೆ ನೀಡಿತ್ತು.

ಆರ್‌ಬಿಐನ ಆಕ್ಷೇಪವನ್ನು ತಿರಸ್ಕರಿಸಿ ಅಂದಿನ ಕೇಂದ್ರ ಸರ್ಕಾರದ ರೆವಿನ್ಯೂ ಕಾರ್ಯದರ್ಶಿಯಾಗಿದ್ದ ಹಸಮುಖ್ ಅಧಿಯಾ ಅವರು ಹಣಕಾಸು ಸಚಿವಾಲಯದ ಕಾರ್ಯದರ್ಶಿಗೆ, 'ದೇಣಿಗೆ ನೀಡುವವರ ವಿವರವನ್ನು ಗೋಪ್ಯವಾಗಿ ಇಡುವುದರ ಹಿಂದಿನ ಉದ್ದೇಶವನ್ನು ಆರ್‌ಬಿಐ ಅರ್ಥಮಾಡಿಕೊಂಡಿಲ್ಲ. ಅಲ್ಲದೆ, ಆರ್‌ಬಿಐ ತಡವಾಗಿ ಸಲಹೆ ನೀಡಿದೆ. ಈಗಾಗಲೇ ಹಣಕಾಸು ಮಸೂದೆಯ ಮುದ್ರಣ ಮುಗಿದಿದೆ. ಹೀಗಾಗಿ, ಯೋಜನೆಯನ್ನು ಜಾರಿಗೆ ತರೋಣ' ಎಂದು ಪತ್ರ 2017ರ ಜನವರಿ 30ರಂದು ಬರೆದರು. ರಿಸರ್ವ್ ಬ್ಯಾಂಕ್‌ನ ಅಧಿಕಾರಗಳನ್ನು ಮೊಟಕುಗೊಳಿಸುವ ಸ್ವರೂಪದ ನಿಯಮಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿತು.

ಆರ್‌ಬಿಐನ ಅಧಿಕಾರಗಳನ್ನು ಮೊಟಕುಗೊಳಿಸುವ ಕೇಂದ್ರ ಸರ್ಕಾರದ ಯತ್ನಗಳ ಬಗ್ಗೆ ಆರ್‌ಬಿಐನ ಅಂದಿನ ಗವರ್ನರ್ ಉರ್ಜಿತ್ ಪಟೇಲ್ ಹಲವು ಬಾರಿ ಆಕ್ಷೇಪ ವ್ಯಕ್ತಪಡಿಸಿದ್ದರು. ಈ ಸಂಬಂಧ ಅಂದಿನ ಹಣಕಾಸು ಸಚಿವ ಅರುಣ್ ಜೇಟ್ಲಿ ಜತೆಗೆ ಮಾತುಕತೆಯೂ ನಡೆದಿತ್ತು. ಆದರೆ ಸರ್ಕಾರವು ಪಟ್ಟು ಬಿಡದ ಕಾರಣ ಆ ಯೋಜನೆಗಳು ಜಾರಿಗೆ ಬಂದಿದ್ದವು. ಸರ್ಕಾರದೊಂದಿಗೆ ತೀವ್ರ ಭಿನ್ನಾಭಿಪ್ರಾಯ ಮೂಡಿದ್ದರಿಂದಲೇ ಉರ್ಜಿತ್ ಪಟೇಲ್ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು ಎಂದು ಆ ಅವಧಿಯಲ್ಲಿ ಹಣಕಾಸು ಕಾರ್ಯದರ್ಶಿಯಾಗಿದ್ದ ಸುಭಾಷ್‌ಚಂದ್ರ ಗರ್ಗ್ ತಮ್ಮ 'ವಿ ಆಲ್ಸೊ ಮೇಕ್ ಪಾಲಿಸಿ' ಪುಸ್ತಕದಲ್ಲಿ ಬರೆದುಕೊಂಡಿದ್ದಾರೆ.

ಬರ್ಮಾ, ಪಾಕಿಸ್ತಾನಕ್ಕೂ ಕೇಂದ್ರೀಯ ಬ್ಯಾಂಕ್ ಆಗಿದ್ದ ಆರ್‌ಬಿಐ

1937ರಲ್ಲಿ ಮ್ಯಾನ್ಮಾರ್ (ಅಂದಿನ ಬರ್ಮಾ) ಭಾರತದಿಂದ ಬೇರ್ಪಟ್ಟಿತು. ಆದರೆ, ಜಪಾನಿಗರು ಮ್ಯಾನ್ಮಾರ್ ಅನ್ನು ವಶಪಡಿಸಿಕೊಳ್ಳುವ ವರೆಗೂ (1947) ಭಾರತೀಯ ರಿಸರ್ವ್ ಬ್ಯಾಂಕ್ ಮ್ಯಾನ್ಮಾರ್‌ನ ಕೇಂದ್ರೀಯ ಬ್ಯಾಂಕ್ ಆಗಿ ಕಾರ್ಯನಿರ್ವಹಿಸಿತ್ತು. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು, ಪಾಕಿಸ್ತಾನವು ರಚನೆಗೊಂಡ ಬಳಿಕವೂ, ಭಾರತೀಯ ರಿಸರ್ವ್ ಬ್ಯಾಂಕ್ ಪಾಕಿಸ್ತಾನಕ್ಕೂ ಕೇಂದ್ರೀಯ ಬ್ಯಾಂಕ್ ಆಗಿತ್ತು. 1948ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಪಾಕಿಸ್ತಾನ ಸ್ಥಾಪನೆಗೊಂಡಿತು. ಈ ತರುವಾಯ, ಭಾರತೀಯ ರಿಸರ್ವ್ ಬ್ಯಾಂಕ್ ಭಾರತಕ್ಕಷ್ಟೇ ಕೇಂದ್ರೀಯ ಬ್ಯಾಂಕ್ ಆಯಿತು.

ಆಧಾರ: ಭಾರತೀಯ ರಿಸರ್ವ್ ಬ್ಯಾಂಕ್ ವೆಬ್‌ಸೈಟ್, ಪಿಟಿಐ

‘ಕೋಟಿ’ ಒಡೆಯನಾದ ಧನಂಜಯ


ಧನಂಜಯ

'ಗುರುದೇವ್ ಹೊಯ್ಸಳ' ಸಿನಿಮಾ ಬಳಿಕ ನಟ 'ಡಾಲಿ' ಧನಂಜಯ ಹೊಸ ಸಿನಿಮಾ ಯಾವುದು ಎನ್ನುವ ಪ್ರಶ್ನೆಗೆ ಉತ್ತರ ಸಿಕ್ಕಿದೆ. ಕಿರುತೆರೆಯಲ್ಲಿ ತಮ್ಮದೇ ಛಾಪು ಮೂಡಿಸಿದ್ದ ಪರಮೇಶ್ವರ್ ಗುಂಡ್ಕಲ್(ಪರಮ್) ಧನಂಜಯಗೆ ಆ್ಯಕ್ಷನ್ ಕಟ್ ಹೇಳಿದ್ದು, ಏ.13ರಂದು 'ಕೋಟಿ' ಸಿನಿಮಾದ ಟೀಸರ್ ಬಿಡುಗಡೆಯಾಗಲಿದೆ.

ಸದ್ಯ 'ಉತ್ತರಕಾಂಡ' ಪ್ರಾಜೆಕ್ಟ್‌ನಲ್ಲಿ ತೊಡಗಿಸಿಕೊಂಡಿರುವ ಧನಂಜಯ 'ಕೋಟಿ'ಯ ಒಡೆಯನಾಗಿ ತೆರೆ ಮೇಲೆ ಬರಲಿದ್ದಾರೆ. ಯುಗಾದಿ ಹಬ್ಬದ ದಿನ 'ಕೋಟಿ' ಚಿತ್ರದ ಶೀರ್ಷಿಕೆ ಹಾಗೂ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಐನೂರು ರೂಪಾಯಿ ನೋಟುಗಳಲ್ಲಿ ಶೀರ್ಷಿಕೆ ಮೂಡಿಬಂದಿದ್ದು, ಫಸ್ಟ್‌ಲುಕ್‌ನಲ್ಲಿ ಧನಂಜಯ ಕಣ್ಣುಗಳನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಕೋಟಿ ಕನಸು ಕಾಣುವ ಒಬ್ಬ ಸಾಮಾನ್ಯನ ಕಥೆ ಇದು ಎನ್ನುವಂತೆ ಮೂಡಿಬಂದಿದೆ. 'ಕೋಟಿ' ಒಂದೆರಡು ತಿಂಗಳಲ್ಲಿ ಬಿಡುಗಡೆಯಾಗುವ ಸಾಧ್ಯತೆ ಇದೆ.

ಈ ಸಿನಿಮಾಗೆ ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯನ್ನು ಬರೆದು ಸ್ವತಃ ಪರಮ್ ನಿರ್ದೇಶನ ಮಾಡಿದ್ದಾರೆ. ಈ ಸಿನಿಮಾವನ್ನು ಜಿಯೋ ಸ್ಟುಡಿಯೋಸ್‌ನ ಜ್ಯೋತಿ ದೇಶಪಾಂಡೆ ನಿರ್ಮಾಣ ಮಾಡುತ್ತಿದ್ದಾರೆ. ವಾಸುಕಿ ವೈಭವ್ ಸಾಹಿತ್ಯ, '2018', '777 ಚಾರ್ಲಿ' ಖ್ಯಾತಿಯ ನೊಬಿನ್ ಪೌಲ್ ಹಿನ್ನೆಲೆ ಸಂಗೀತ ಚಿತ್ರಕ್ಕಿದೆ. ಸಿನಿಮಾಗೆ ಅರುಣ್ ಬ್ರಹ್ಮನ್ ಛಾಯಾಚಿತ್ರಗ್ರಹಣವಿದೆ.

ಝೈದ್ ಮುಂದಿನ ಸಿನಿಮಾ ‘ಕಲ್ಟ್’

'ಬನಾರಸ್' ಸಿನಿಮಾ ಬಳಿಕ ನಟ ಝೈದ್ ಖಾನ್, 'ಉಪಾಧ್ಯಕ್ಷ' ಚಿತ್ರದ ನಿರ್ದೇಶಕ ಅನಿಲ್ ಕುಮಾರ್ ಆ್ಯಕ್ಷನ್ ಕಟ್ ಹೇಳಲಿರುವ ಸಿನಿಮಾದಲ್ಲಿ ನಟಿಸಲಿದ್ದಾರೆ ಎನ್ನುವುದು ಇತ್ತೀಚೆಗಷ್ಟೇ ಬಹಿರಂಗಗೊಂಡಿತ್ತು. ಇದೀಗ ಸಿನಿಮಾದ ಶೀರ್ಷಿಕೆಯನ್ನು ಯುಗಾದಿಯಂದು ಚಿತ್ರತಂಡ ಘೋಷಿಸಿದೆ.

ಚಿತ್ರಕ್ಕೆ 'ಕಲ್ಟ್' ಎಂದು ಹೆಸರಿಡಲಾಗಿದೆ. ಸಿನಿಮಾರಂಗದಲ್ಲಿ 'ಕಲ್ಟ್' ಎಂಬ ಪದದ ಬಳಕೆ ಇತ್ತೀಚೆಗೆ ಅಧಿಕವಾಗಿದೆ. ಕೆಲವು ಮಾಸ್ ಸಿನಿಮಾಗಳನ್ನು 'ಇದೊಂದು ಕಲ್ಟ್ ಸಿನಿಮಾ' ಎಂದು ಸಂಬೋಧಿಸಲಾಗಿದೆ. ಇದೇ ಕಾರಣದಿಂದಾಗಿ ಸಿನಿಮಾಗೆ ಈ ಹೆಸರು ಇಡಲಾಗಿದೆ ಎಂದಿದೆ ಚಿತ್ರತಂಡ. 'ಬನಾರಸ್' ಚಿತ್ರದಲ್ಲಿ ಮುಗ್ಧ ಹುಡುಗನಾಗಿ ಕಾಣಿಸಿಕೊಂಡಿದ್ದ ಝೈದ್ ಖಾನ್, ಈ ಚಿತ್ರದಲ್ಲಿ ಮಾಸ್ ಲುಕ್‌ನಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಚಿತ್ರದ ಫಸ್ಟ್‌ಲುಕ್‌ನಲ್ಲಿ ಝೈದ್ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಸದ್ಯದಲ್ಲೇ 'ಕಲ್ಟ್' ಸೆಟ್ಟೇರಲಿದ್ದು, ಅದ್ದೂರಿ ಮುಹೂರ್ತದೊಂದಿಗೆ ಚಿತ್ರಕ್ಕೆ ಚಾಲನೆ ಸಿಗಲಿದೆ ಎಂದಿದೆ ಚಿತ್ರತಂಡ. ಆ ಸಂದರ್ಭದಲ್ಲಿ ಚಿತ್ರದ ಕುರಿತು ಹೆಚ್ಚಿನ ಮಾಹಿತಿ ನೀಡುವುದಾಗಿ ಅನಿಲ್ ಕುಮಾರ್ ತಿಳಿಸಿದ್ದಾರೆ.

ಆಶ್ರಿತ್ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣವಾಗಲಿದ್ದು, ಜೆ.ಎಸ್. ವಾಲಿ ಛಾಯಾಚಿತ್ರಗ್ರಹಣ, ಅರ್ಜುನ್ ಜನ್ಯ ಸಂಗೀತ ನಿರ್ದೇಶನ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.


ಝೈದ್ ಖಾನ್

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಯಾರೂ ಅರಿಯದ ವೀರರು

ನುಡಿ ಬೆಳಗು


ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

2017ನೇ ಇಸವಿಯ ಅಗಸ್ಟ್ 25ರ ಬೆಳಿಗ್ಗಿನ ಸಮಯ. ಮಧ್ಯಪ್ರದೇಶದ ಸಾಗರ ಜಿಲ್ಲೆಯ ಚಿತೋರಾ ಎಂಬ ಶಾಲೆಯಲ್ಲಿ ಆತಂಕ ಮನೆಮಾಡಿತ್ತು. ಕಾರಣ ಆ ಶಾಲೆಯ ಹಿಂದೆ ಬಾಂಬ್ ಒಂದು ಪತ್ತೆಯಾಗಿತ್ತು. ನಾನೂರು ಮಕ್ಕಳಿರುವ ಶಾಲೆ ಅದು. ಜತೆಗೆ ಶಾಲೆಯ ಸುತ್ತ ಜನವಸತಿಯೂ ಇತ್ತು. ಪೋಲೀಸರಿಗೆ ಸುದ್ದಿ ಹೋಯಿತು. ಕಾನ್‌ಸ್ಟೆಬಲ್ ಅಭಿಷೇಕ್ ಪಟೇಲ್ ನೇತೃತ್ವದಲ್ಲಿ ಪೋಲೀಸರ ತಂಡ ಸ್ಥಳಕ್ಕೆ ಆಗಮಿಸಿತು. ಆದರೆ ಬಾಂಬ್ ನಿಷ್ಕ್ರಿಯಗೊಳಿಸುವ ತಂಡ ತಕ್ಷಣಕ್ಕೆ ಲಭ್ಯವಿರಲಿಲ್ಲ.

ಮುಂದೇನು ಮಾಡುವುದೆಂದು ಬಿಸಿಬಿಸಿ ಚರ್ಚೆಗಳು ನಡೆಯುತ್ತಿದ್ದಂತೆಯೇ ಅಭಿಷೇಕ್ ಅವರು ಮಕ್ಕಳನ್ನು ಶಾಲೆಯಿಂದ ಹೊರಗೆ ಕಳಿಸಲು ಹೇಳಿದರು. ಮತ್ತು ತಾವು ಮುಂದೆ ಹೋಗಿ ಹನ್ನೆರಡು ಇಂಚಿನ ಸುಮಾರು ಹತ್ತು ಕೇಜಿ ತೂಕದ ಬಾಂಬ್ ಅನ್ನು ಭುಜದ ಮೇಲೆ ಇರಿಸಿಕೊಂಡವರೇ ಓಡಲು ಶುರು ಮಾಡಿದರು. ಎಲ್ಲರೂ ಬಿಟ್ಟ ಕಣ್ಣು ಬಿಟ್ಟಂತೆ ಅಚ್ಚರಿಯಿಂದ ನೋಡುತ್ತಲೇ ಇದ್ದರು. ಓಡುತ್ತ ಓಡುತ್ತ ಒಂದು ಕಿಲೋಮೀಟರ್ ದೂರದಲ್ಲಿರುವ ನಿರ್ಜನ ಪ್ರದೇಶವೊಂದರಲ್ಲಿ ಬಾಂಬ್ ಅನ್ನು ಇರಿಸಿ ವಾಪಾಸು ಬಂದರು ಅಭಿಷೇಕ್.

'ಅಕಸ್ಮಾತ್ತಾಗಿ ಬಾಂಬ್ ಸ್ಫೋಟವಾದರೆ ಸುತ್ತಲಿನ ಐನೂರು ಮೀಟರ್ ಪ್ರದೇಶ ಹಾನಿಗೊಳಗಾಗುತ್ತದೆಂದು ನಮಗೆ ತರಬೇತಿಯಲ್ಲಿ ಹೇಳಿದ್ದರು. ಹಾಗಾಗಿ ಬಾಂಬ್ ಅನ್ನು ಈ ಜನನಿಬಿಡ ಜಾಗದಿಂದ ಎಷ್ಟು ಸಾಧ್ಯವೋ ಅಷ್ಟು ದೂರ ಸಾಗಿಸುವುದು ನನ್ನ ಉದ್ದೇಶವಾಗಿತ್ತು' ಎಂದು ನಲವತ್ತು ವರ್ಷದ ಅಭಿಷೇಕ್ ನಂತರ ಹೇಳಿದರು.

'ಬಾಂಬ್ ಹೊತ್ತುಕೊಂಡು ಓಡುವಾಗ ಭಯವಾಗಲಿಲ್ಲವೇ' ಎಂದು ಕೇಳಿದಾಗ ಅವರು 'ನಾನೂರು ಮಂದಿಯ ಜೀವಗಳು ನನ್ನೊಬ್ಬನ ಜೀವಕ್ಕಿಂತ ಅಮೂಲ್ಯ ಎಂದುಕೊಂಡೆ' ಎಂದರು.

ಅಭಿಷೇಕ್ ಬಾಂಬ್ ಹೊತ್ತು ಓಡುತ್ತಿರುವ ವಿಡಿಯೊಗಳು ವೈರಲ್ ಆದವು. ಎಲ್ಲೆಡೆ ಪ್ರಶಂಸೆಯ ಸುರಿಮಳೆ. ಮಧ್ಯಪ್ರದೇಶದ ಮುಖ್ಯಮಂತ್ರಿಯವರು ತಮ್ಮ ನಿವಾಸಕ್ಕೆ ಕರೆದು ನಗದು ಬಹುಮಾನ ನೀಡಿ ಗೌರವಿಸಿದರು. ಅವೆಲ್ಲ ಸಹಜವೇ. ಆದರೆ ಅಭಿಷೇಕ್ ಅವರ ಧೈರ್ಯ ಮತ್ತು ತ್ಯಾಗಕ್ಕೆ ಯಾವ ಬೆಲೆಯನ್ನೂ ಕಟ್ಟಲು ಸಾಧ್ಯವಿಲ್ಲ. ತಮ್ಮ ಜೀವ ಉಳಿಸಿಕೊಳ್ಳುವಾಗ ರಕ್ತಸಂಬಂಧಗಳೂ ಪರಕೀಯವಾಗುವಾಗ ಸಾವಿನ ಬಾಯಿಗೆ ಹೋಗುವ ಸಾಧ್ಯತೆಯಿದ್ದರೂ ಯಾರೋ ಅಪರಿಚಿತ ವಿದ್ಯಾರ್ಥಿಗಳಿಗಾಗಿ ಒಂದಿಷ್ಟೂ ಹಿಂಜರಿಯದೇ ಮುನ್ನುಗ್ಗಿದ ಈ ಅಪರಿಮಿತ ತ್ಯಾಗದ ಕಥೆ ನಿಜಕ್ಕೂ ಪ್ರತಿಯೊಬ್ಬರಿಗೂ ಸ್ಫೂರ್ತಿಯ ಸೆಲೆ. ಪೋಲೀಸ್ ಇಲಾಖೆಯ ಹೆಮ್ಮೆಯ ಪ್ರತಿನಿಧಿ ಅಭಿಷೇಕ್ ಪಟೇಲ್. ಹಿಂದಿನಿಂದಲೂ ಇಂತಹ ಅಸಂಖ್ಯಾತ 'ಯಾರೂ ಅರಿಯದ ವೀರರು' ಮಾನವೀಯತೆಯ ಅಡಿಪಾಯವಾಗಿದ್ದಾರೆ. ಇಂತಹ ವ್ಯಕ್ತಿಗಳು ಸಮಾಜದಲ್ಲಿ ಇದ್ದಾರೆ ಎನ್ನುವುದೇ ಹೆಮ್ಮೆಯ ಸಂಗತಿ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಏಪ್ರಿಲ್ 11, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ತೃತೀಯ ಗಂ. 15-04 ನಕ್ಷತ್ರ: ಕೃತ್ತಿಕಾ ಗಂ. 25-38 ಯೋಗ: ಪ್ರೀತಿ ಗಂ. 07-19 ನಂತರ ಆಯುಷ್ಮಾನ್ ಗಂ. 28-29 ಕರಣ: ಗರ ಗಂ. 15-04, ಮೀನ ಮಾಸದ 27 ನೇ ದಿನ, ಮಳೆನಕ್ಷತ್ರ: ರೇವತಿ 4.
ರಾಹುಕಾಲ : ಮಧ್ಯಾಹ್ನ 01-30 - 03-00
ಸೂರ್ಯೋದಯ : 06-23 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 01 ಶವ್ವಾಲ್ ,ದಿನ ವಿಶೇಷ : ಗೌರಿ ತೃತೀಯ, ಈದ್-ಉಲ್-ಫಿತರ್ (ಮುಸ್ಲಿಂ), ಅದೃಷ್ಟ ಸಂಖ್ಯೆ : 3, 9

ಮೇಷ: ವೃತ್ತಿ ಜೀವನಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ನಿರ್ಣಯ ಕೈಗೊಳ್ಳಲು ಆಪ್ತರೊಬ್ಬರ ಸಲಹೆ ಕೇಳುವಿರಿ. ಉನ್ನತ ವ್ಯಾಸಂಗದವರಿಗೆ ನೇರ ಆಯ್ಕೆಯಾಗುವ ಸಂಭವವಿದೆ. ಸಾಧ್ಯವಾದಲ್ಲಿ ದೇವಾಲಯಕ್ಕೆ ಭೇಟಿ ನೀಡಿ.

ವೃಷಭ : ಭೌತವಿಜ್ಞಾನ ಸಂಶೋಧನೆಯಲ್ಲಿ ತೊಡಗಿರುವ ವ್ಯಕ್ತಿಗಳಿಗೆ ಫಲಿತಾಂಶದ ಕಡೆಗೆ ಹೊಸ ಹೊಸ ಮಾರ್ಗಗಳು ಗೋಚರಿಸುವುದು. ಪುಟ್ಟದೊಂದು ಪ್ರಯಾಣ ಮತ್ತಷ್ಟು ಹುರುಪು ತುಂಬಲಿದೆ.

ಮಿಥುನ : ಅಕ್ಕ-ತಂಗಿಯರಲ್ಲಿ ಭಿನ್ನಾಭಿಪ್ರಾಯವಿದ್ದರೇ, ಸ್ವ-ಪ್ರಯತ್ನದಿಂದ ಸಂಬಂಧ ಉತ್ತಮಪಡಿಸಿಕೊಳ್ಳುವ ಪ್ರಯತ್ನ ಈ ದಿನ ನಡೆಸಿ. ರಾಜಕೀಯ ವ್ಯಕ್ತಿಗಳಿಗೆ ಅನೇಕ ಜನರ ಜತೆ ಸಮಾಲೋಚನೆ ನಡೆಸಬೇಕಾಗುವುದು.

ಕರ್ಕಾಟಕ: ಉದರ ಸಂಬಂಧಿ ಕಾಯಿಲೆಗಳಿಂದ ನಿಮ್ಮನ್ನು ನೀವು ರಕ್ಷಿಸಿಕೊಳ್ಳಲು ದ್ರವರೂಪಿ ಆಹಾರವನ್ನು ಹೆಚ್ಚು ಸೇವಿಸಿ. ತಾವು ಬಯಸಿದ ಕ್ಷೇತ್ರದಲ್ಲಿ ತಿರುವನ್ನು ಪಡೆಯುವಲ್ಲಿ ಯಶಸ್ವಿಯಾಗುವಿರಿ.

ಸಿಂಹ : ಕಾರ್ಯಕ್ಷೇತ್ರದಲ್ಲಿ ಕೆಲಸದ ಹೊರೆ ಬೆಟ್ಟದಂತೆ ಇರುವುದು. ಕಾನೂನು ವಿದ್ಯಾರ್ಥಿಗಳು ಮುಂಬರುವ ಪರೀಕ್ಷೆಗಾಗಿ ಹೆಚ್ಚು ಮಾಹಿತಿಯನ್ನು ಸಂಗ್ರಹಿಸಲು ಉತ್ತಮ ದಿನ. ಹಳದಿ ವರ್ಣ ಶುಭದಾಯಕ.

ಕನ್ಯಾ: ಎಲ್ಲಾ ಸನ್ನಿವೇಶಗಳು ನಿಮ್ಮ ಪರ ಇರುವುದರಿಂದ ನಿರಾಳವಾಗಿ ಮುಂದುವರಿಯಬಹುದು. ಕಾರ್ಮಿಕ ವರ್ಗದವರಿಗೆ ಹೆಚ್ಚಿನ ಸವಲತ್ತುಗಳು ಒದಗಲಿದೆ. ಮಾನವೀಯತೆ ಮುಖ್ಯ ಧ್ಯೇಯವಾಗಿರಲಿ.

ತುಲಾ: ಮೇಲಧಿಕಾರಿಗಳ ಒತ್ತಾಯಕ್ಕೆ ಮಣಿದು ಸ್ವಯಂ ನಿವೃತ್ತಿ ಯೋಚನೆಯನ್ನು ಕೈ ಬಿಡಬೇಕಾಗುವುದು. ಹಣ್ಣು ಹಾಗೂ ತರಕಾರಿ ವ್ಯಾಪಾರಿಗಳಿಗೆ ಸರಕು ಸಾಗಾಣಿಕೆಯಲ್ಲಿ ತೊಂದರೆಗಳಾಗಬಹುದು.

ವೃಶ್ಚಿಕ: ಕೌಟುಂಬಿಕ ಸಮಸ್ಯೆಗಳಿಗೆ ಸಂಗಾತಿಯೊಂದಿಗೆಸಮಾಲೋಚನೆ ಮಾಡಿದಲ್ಲಿ ಉತ್ತಮ ಪರಿಹಾರವು ದೊರೆಯುವುದು. ಹಿರಿಯರೊಂದಿಗೆ ಯಾತ್ರೆ ಕೈಗೊಳ್ಳುವುದರ ಪುಣ್ಯದಿಂದ ಕಾರ್ಯಾನುಕೂಲವಾಗುವುದು.

ಧನು: ರಸ್ತೆ ಗುತ್ತಿಗೆದಾರರು, ಮರ-ಮುಟ್ಟುಗಳ ಮತ್ತು ಕಲ್ಲಿನ ವ್ಯಾಪಾರ ಮಾಡುವವರು ಶ್ರಮದ ದುಪ್ಪಟ್ಟು ಸಂಪಾದನೆಯನ್ನು ಅಪೇಕ್ಷಿಸಬಹುದು. ದಿನಸಿ ವ್ಯಾಪಾರಸ್ಥರಿಗೆ , ಆಲಂಕಾರಿಕ ವಸ್ತುಗಳ ವ್ಯಾಪಾರದವರಿಗೆ ಶುಭದಿನ.

ಮಕರ: ನಿಧಾನವಾಗಿಯಾದರೂ ಕಾರ್ಯದ ಲಾಭ ಬಂದು ಕೈ ಸೇರಿದ ಸಂತಸ ಆಗುತ್ತದೆ. ಮಕ್ಕಳ ಯೋಗ ಕ್ಷೇಮದ ಬಗ್ಗೆ ಅತಿಯಾಗಿ ಚಿಂತಿಸುವುದನ್ನು ಕಡಿಮೆ ಮಾಡುವುದು ಉತ್ತಮ. ಕ್ರೀಡಾಪಟುಗಳಿಗೆ ಪ್ರೋತ್ಸಾಹ ಲಭಿಸುವುದು.

ಕುಂಭ: ಏಜೆನ್ಸಿಯಂಥ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟದಲ್ಲಿರುವ ನಿಮಗೆ ಅನುಕೂಲಕರವಾದ ಸ್ಥಳ ದೊರಕುವುದು. ಗೃಹ ತಾಪತ್ರಯಗಳಿಂದಲೂ ಮುಕ್ತರಾಗಿ ನಿಶ್ಚಿಂತತೆ ತೋರಿ ಬರುತ್ತದೆ.


ಮೀನ: ಭೂಮಿಗೆ ಸಂಬಂಧಿಸಿದಂತೆ ಹಲವು ದಿನಗಳಿಂದ ಪ್ರಯತ್ನ ಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ. ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸುವ ರೀತಿಗೆ ಇತರರು ಮೆಚ್ಚುಗೆಯನ್ನು ಸೂಚಿಸುತ್ತಾರೆ.

ಪದಬಂಧ 5647

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ವರ್ಣನೆಯಲ್ಲಿರುವ ಬಣ್ಣ (2)
3.ಆಶ್ರಮದಲ್ಲಿ ಪ್ರಯತ್ನವಿದೆ (2)
5.ಕೈಯನ್ನು ಕುಲುಕುವಿಕೆ (5)
6.ಗಡಕ್ಕನೆ ಬಂದೆರಗಿದ ಗಂಡುಕೋತಿ (3)
7.ಜಗಲಿಯಲ್ಲಿ ನಿಂತು ಪರಸ್ಪರ ಬೈದಾಡುವುದು (3)
8.ಮಧ್ಯಸ್ಥಿಕೆಗೊಂದು ಪರ್ಯಾಯ ಪದ (5)
9.ದುಃಖ ಈ ರೀತಿ ಬಂದಿದೆ (3)
10.ಪಿತನ ಹತ್ತಿರವಿರುವ ಕ್ಷೌರಿಕ (3)
13.ನೀರಿನಿಂದಾದ ಅನಿಲ (5)
14.ಮಾಗಿದ ಫಲ (2)
15.ನಷ್ಟ ಹೀಗೆ ಬಂದಿದೆ (2)

ಮೇಲಿಂದ ಕೆಳಕ್ಕೆ
1.ಕಾಡುಪ್ರಾಣಿ ಇಲ್ಲಿದೆ (4)
2.ಕೆಲಸಕ್ಕೆ ಬಳಸಿದ್ದು ಈ ಬಗೆಯ ಆಯುಧ (3)
4.ಬಟ್ಟೆಗಳನ್ನು ನೈರ್ಮಲ್ಯ ಮಾಡುವವ (4)
5.ಅಶ್ವದ ಮೊಗವಿದು (5)
7.ಮಂದಿಗೆಲ್ಲ ಒಡೆಯನೀತ (5)
9.ಮೂರ್ಖತನದಿಂದ ಕೂಡಿದ ಹಟ (4)
11.ಈತ ದಾರ್ಶನಿಕ (4)
12.ದನಕರುಗಳ ಮೂತ್ರ (3)



5646ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪವಾಸ 3.ಮದರಂಗಿ
5.ಪುರಲೆ 6.ಖಡ್ಗಮೃಗ
7.ನದೀಮುಖಜಭೂಮಿ
10.ತಪರಾಕು 11.ಅಂಜನ
14.ನತದೃಷ್ಟ 15.ನರುಗಂಪು

ಮೇಲಿಂದ ಕೆಳಕ್ಕೆ:
1.ಉಕ್ತಿ 2.ವಾನರ
4.ಗಿಡುಗ 5.ಪುದೀನ
6.ಖನಿಜ 8.ಮುಸುಕು
9.ಮಿಥುನ 10.ತಲ್ಲೀನ
12.ಜರೂರು 13.ಸಂಪು

ಸುಡೊಕು 6032

6		4	9		7	3		8
				4				
	7	8	2			4		6
7					8		6	
	8		4			7	3	
		5		7				
4	9		3	8		6		1
	6						8	
8		7			4	2		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6031 ಸುಡೊಕು

9	1	7	3	5	8	6	2	4
8	4	6	9	2	7	5	1	3
2	5	3	4	1	6	9	7	8
5	3	8	1	6	2	7	4	9
4	2	9	7	3	5	1	8	6
6	7	1	8	4	9	2	3	5
3	8	5	6	7	1	4	9	2
7	9	2	5	8	4	3	6	1
1	6	4	2	9	3	8	5	7





ಮತ ಪತ್ರ

ಬದಲಾವಣೆ ಬಯಸುವುದೇ ನಿಮ್ಮ ಮತ



ಚುನಾವಣೆಯ ಪರಿಣಾಮಗಳು ನೇರವಾಗಿ ನಮ್ಮನ್ನೇ ಭಾದಿಸುವುದರಿಂದ ಪ್ರತಿಯೊಂದು ಮತ ಬಹಳ ಮಹತ್ವದ್ದು.

ಆರ್ಥಿಕ ನ್ಯಾಯ, ಹೆಣ್ಮಕ್ಕಳ ಪ್ರಾಣ–ಮಾನ ರಕ್ಷಣೆ, ಪರಿಸರ ರಕ್ಷಣೆ, ನಿಮ್ಮ ಸೂರು, ಹೀಗೆ ನೀವು ಕಾಳಜಿ ಮಾಡುವ ಮಾಡುವಂತಹ ಯಾವುದೇ ಸಮಸ್ಯೆಗಳಿಗಾಗಿ, ಯಾವುದೇ ಅನ್ಯಾಯದ ವಿರುದ್ಧ ಎದ್ದು ನಿಲ್ಲಲು ಸಿಗುವ ಒಂದು ಅವಕಾಶವೇ ನಿಮ್ಮ ಮತ ಚಲಾಯಿಸುವಿಕೆ. ನೀವು ಬಯಸುವ ಸುಧಾರಿತ ಜೀವನಮಟ್ಟ ನಿಮಗಾಗಿ, ನಿಮ್ಮ ಕುಟುಂಬಕ್ಕಾಗಿ, ನಿಮ್ಮ ಜನರಿಗಾಗಿ – ಜನಾಂಗಕ್ಕಾಗಿ ಕೇಳಿ ಪಡೆಯುವ ಹಕ್ಕು ನಿಮ್ಮ ಮತದಾನ.

ಹೌದು, ಮತದಾನ ನಿಮ್ಮ ಹಕ್ಕು, ನನಗ್ಯಾವ ಗೊಡವೆ ಬೇಡವೆಂದು ಮತ ಚಲಾಯಿಸದೆ ಕೂತರೆ ನಿಮ್ಮ ಹಕ್ಕನ್ನು ಬೇರೆ ಯಾರಿಗೋ ಬಿಟ್ಟುಕೊಟ್ಟಂತೆ. ನಿಮ್ಮ ಅಸ್ತಿತ್ವವೇ ನಾಶವಾದಂತೆ. ಹಾಗೆಯೇ ಯಾವುದೇ ಎಂಜಲು ಕಾಸಿಗೆ, ಗಿಲೀಟಿನ ಸೀರೆ, ಭಾಂಡೇ ಸಮಾನುಗಳಿಗೆ ಸಮವಲ್ಲ ನಿಮ್ಮ ಮತ. ಬೆಲೆ ಕಟ್ಟಲಾಗದ ನಿಮ್ಮ ಹಕ್ಕು ನಿಮ್ಮ ಮತ. ಅದಕ್ಕೆ ಮತವನ್ನು ಮಾರಿಕೊಂಡರೆ ನಿಮ್ಮನ್ನೇ ಮಾರಿಕೊಂಡಂತೆ. ಜವಾಬ್ದಾರಿ ಇರಲಿ, ನಿಮಗೆ, ನಿಮ್ಮ ಕುಟುಂಬಕ್ಕೆ, ನಿಮ್ಮ ಜನ–ಜನಾಂಗಕ್ಕೆ ಒಳಿತು ಮಾಡುವಂತಹ, ಪ್ರಜಾಪ್ರಭುತ್ವಕ್ಕೆ ಗೌರವ ನೀಡುವಂತಹ, ಸಂವಿಧಾನದ ಆಶಯಗಳಿಗೆ ಬೆಲೆ ನೀಡುವಂತಹ ಅಭ್ಯರ್ಥಿಯನ್ನು ಆರಿಸಿ, ಮತ ಚಲಾಯಿಸಿ. ಯಾವುದೇ ಬದಲಾವಣೆ ನಮ್ಮಿಂದಲೇ ಆಗಬೇಕು. ಬದಲಾವಣೆ ನಿಮ್ಮಿಂದಲೇ ಆಗಲಿ. ಮತ ಚಲಾಯಿಸಿ.

ಬಿ.ಟಿ. ಜಾಹ್ನವಿ

ಮತ ಆಮಿಷ: ಆಯೋಗದ ವಶ

₹45.01 ಕೋಟಿ ನಗದು

ಉಚಿತ ಉಡುಗೊರೆ ಮತ್ತು ಇತರೆ	₹ 79.64 ಕೋಟಿ
ಮದ್ಯ	₹ 144.40 ಕೋಟಿ (1.39 ಕೋಟಿ ಲೀ)
ಮಾದಕವಸ್ತು	₹ 9.70 ಕೋಟಿ (383.13 ಕೆ.ಜಿ.)
ಚಿನ್ನ	₹ 10.56 ಕೋಟಿ (19.16 ಕೆ.ಜಿ.)
ಬೆಳ್ಳಿ	₹69 ಲಕ್ಷ (230.04 ಕೆ.ಜಿ.)

ಎಂಥಾ ಮಾತು!



‘ನಟ ಪ್ರಕಾಶ್ ರಾಜ್ ಒಬ್ಬ ಅತೃಪ್ತ ಜೀವಿ, ಅಹಂಕಾರ ಸ್ವಭಾವದ ವ್ಯಕ್ತಿ. ರಾಜಕಾರಣದಲ್ಲಿ ಅವರ ಸ್ಥಾನಮಾನ ಏನು? ಪ್ರಧಾನಿ ನರೇಂದ್ರ ಮೋದಿ ಅವರ ಆಡಳಿತದ ಬಗ್ಗೆ ಪ್ರಕಾಶ್ ರಾಜ್ ಮತ್ತು ಕಮಲ್ ಹಾಸನ್ ಮಾಡುವ ಟೀಕೆಗಳಿಗೆ ಮಹತ್ವ ಕೊಡುವ ಅಗತ್ಯವಿಲ್ಲ. ಅವರಿಬ್ಬರನ್ನೂ ಶೇ 1ರಷ್ಟು ಜನರೂ ಬೆಂಬಲಿಸಲ್ಲ. ಬಿಜೆಪಿ ಇಂದು 18 ರಾಜ್ಯಗಳಲ್ಲಿ ಅಧಿಕಾರದಲ್ಲಿದೆ. ಆದರೆ, ಅವರಿಗೆ ಒಂದೇ ಒಂದು ಸ್ಥಾನ ಗೆಲ್ಲಲು ಸಾಧ್ಯವಾಗಲ್ಲ

ಪ್ರಲ್ಹಾದ ಜೋಶಿ, ಬಿಜೆಪಿ ಅಭ್ಯರ್ಥಿ, ಧಾರವಾಡ ಲೋಕಸಭಾ ಕ್ಷೇತ್ರ

(ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 400 ಸ್ಥಾನ ಗೆಲ್ಲಲು ಆಗದು ಎಂದು ಪ್ರಕಾಶ್ ರಾಜ್ ನೀಡಿದ ಹೇಳಿಕೆಗೆ ಪ್ರತಿಕ್ರಿಯೆ)

ಮೊದಲ ಮತದ ಸಂಭ್ರಮ



ಇದು ನನ್ನ ಮೊದಲನೇ ಮತದಾನವಾಗಿರುವುದರಿಂದ ಬಹಳ ಉತ್ಸಾಹದಿಂದ ಇರುವೆ. ನಾನು ಚಲಾಯಿಸುವ ಮತ ನನ್ನ ಜಿಲ್ಲೆಯ ಅಭಿವೃದ್ಧಿಗೆ ಕಾರಣವಾಗುತ್ತದೆ ಎಂದು ಭಾವಿಸಿ ನನ್ನ ಹಕ್ಕನ್ನು ಚಲಾಯಿಸುವೆ. ಮತದಾನ ಪ್ರತಿಯೊಬ್ಬ ಪ್ರಜೆಯ ಕರ್ತವ್ಯ. ಸಮರ್ಥ ಅಭ್ಯರ್ಥಿಯ ಆಯ್ಕೆಗಾಗಿ ನಾವೆಲ್ಲ ಮತ ಚಲಾಯಿಸಬೇಕಿದೆ

ದೀಕ್ಷಾ, ಪುತ್ತೂರು

ಕಣ ಸ್ವಾರಸ್ಯ

ವೃತ್ತಿ ಬಳಿಕ ರಾಜಕೀಯ ಪ್ರವೃತ್ತಿ

ಬೆಂಗಳೂರು: ಸರ್ಕಾರಿ ಅಥವಾ ಖಾಸಗಿ ವಲಯದಲ್ಲಿ ಕರ್ತವ್ಯ ನಿರ್ವಹಿಸಿ, ನಿವೃತ್ತಿ ಅಥವಾ ಸ್ವಯಂ ನಿವೃತ್ತಿ ಬಳಿಕ ರಾಜಕೀಯ ರಂಗ ಪ್ರವೇಶಿಸುವುದು ಹೊಸತೇನಲ್ಲ.

ಅಧಿಕಾರಿ, ಪೊಲೀಸ್, ಎಂಜಿನಿಯರ್, ವೈದ್ಯರಾಗಿದ್ದಾಗ ರಾಜಕಾರಣಿಗಳ ಜೀವನ ಶೈಲಿ, ಅಧಿಕಾರದಲ್ಲಿದ್ದಾಗ ಅವರಿಗಿರುವ ಪ್ರಭಾವ, ಎಂತಹ ಅಧಿಕಾರಿಗಳನ್ನೂ ತಮ್ಮ ತಾಳಕ್ಕೆ ತಕ್ಕಂತೆ ಕುಣಿಸುವ ‘ಅಧಿಕಾರ’ಗಳನ್ನು ಕಂಡವರು, ನಿವೃತ್ತಿ ಬಳಿಕ ‘ಬಿಳಿ ಅಂಗಿ’ ಧರಿಸಿ ಶಕ್ತಿಕೇಂದ್ರದಲ್ಲಿ ಕುಳಿತುಕೊಳ್ಳಲು ಹಂಬಲಿಸುತ್ತಾರೆ. ಐಪಿಎಸ್, ಐಎಎಸ್, ಪೊಲೀಸ್ ಇನ್‌ಸ್ಪೆಕ್ಟರ್‌ಗಳಾಗಿದ್ದವರು ಸ್ವಯಂ ನಿವೃತ್ತಿ ಪಡೆದು, ಚುನಾಯಿತ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದು ಉಂಟು. ತಮ್ಮ ಎದುರು ಅಧಿಕಾರದಿಂದ ದಬ್ಬಾಳಿಕೆ ನಡೆಸಿದವರ ಜತೆಗೇ ವಿಧಾನಸಭೆ–ಲೋಕಸಭೆಯಲ್ಲಿ ಕುಳಿತುಕೊಂಡಿದ್ದೂ ಉಂಟು.

ಹಿಂದಿನ ಚುನಾವಣೆಗಳಿಗೆ ಹೋಲಿಸಿದರೆ, ಈ ಬಾರಿ ಅಂತಹ ಹುರಿಯಾಳುಗಳು ಕಡಿಮೆ. ಈ ಬಾರಿ ವೈದ್ಯ, ಪ್ರಾಧ್ಯಾಪಕ, ಐಎಎಸ್ ಅಧಿಕಾರಿ, ಸೇನೆಯಲ್ಲಿದ್ದವರು ಕಣದಲ್ಲಿದ್ದಾರೆ.



ಪ್ರೊ. ಎಂ.ವಿ. ರಾಜೀವ್ ಗೌಡ
ಬೆಂಗಳೂರು ಉತ್ತರ, ಕಾಂಗ್ರೆಸ್

- ಅಮೆರಿಕದ ಓಕ್ಲಹೋಮ ವಿಶ್ವವಿದ್ಯಾಲಯದಲ್ಲಿ ರಾಜ್ಯಶಾಸ್ತ್ರದ ಸಹಾಯಕ ಪ್ರಾಧ್ಯಾಪಕರಾಗಿ ವೃತ್ತಿ ಆರಂಭಿಸಿದ ಅವರು, ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಪ್ರಾಧ್ಯಾಪಕರಾಗಿದ್ದರು. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾದ ಕೇಂದ್ರ ಮಂಡಳಿಯ ನಿರ್ದೇಶಕರಾಗಿದ್ದರು



ಡಾ.ಸಿ.ಎನ್. ಮಂಜುನಾಥ್
ಬೆಂಗಳೂರು ಗ್ರಾಮಾಂತರ, ಬಿಜೆಪಿ

- ಬೆಂಗಳೂರು ವೈದ್ಯಕಾಲೇಜಿನಲ್ಲಿ ವೃತ್ತಿ ಜೀವನ ಆರಂಭಿಸಿ, ಹೃದ್ರೋಗ ತಜ್ಞರಾಗಿ ಹೆಸರು ಮಾಡಿದವರು. ರಾಜ್ಯ ಸರ್ಕಾರದ ಅಡಿಯಲ್ಲಿರುವ ಜಯದೇವ ಹೃದ್ರೋಗ ಆಸ್ಪತ್ರೆಯ ನಿರ್ದೇಶಕರಾಗಿ ಕಾರ್ಯನಿರ್ವಹಿಸಿ ನಿವೃತ್ತರಾದವರು



ಜಿ.ಕುಮಾರನಾಯಕ
ರಾಯಚೂರು, ಕಾಂಗ್ರೆಸ್

- ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿ; ರಾಜ್ಯದ ಹಲವು ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸಿದ್ದ ಅವರು, ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯಾಗಿ ನಿವೃತ್ತರಾದರು



ಬ್ರಿಜೇಶ್ ಚೌಟ
ದಕ್ಷಿಣ ಕನ್ನಡ, ಬಿಜೆಪಿ

- ನಿವೃತ್ತ ಸೇನಾಧಿಕಾರಿ. ಭೂಸೇನೆಗೆ ಸೇರಿ, ಎಂಟನೇ ಗೂರ್ಖಾ ರೈಫಲ್ಸ್ 7ನೇ ಬೆಟಾಲಿಯನ್‌ನಲ್ಲಿ ಉತ್ತರ ಭಾರತ ಮತ್ತು ಈಶಾನ್ಯ ರಾಜ್ಯಗಳಲ್ಲಿ ಸೇವೆ ಸಲ್ಲಿಸಿ ಕ್ಯಾಪ್ಟನ್ ಹುದ್ದೆಗೇರಿದ್ದರು

ಈ ಬಾರಿ ಟಿಕೆಟ್ ಪಡೆದವರೂ ಬೆರಳೆಣಿಕೆಯಷ್ಟೇ

ಮಹಿಳಾ ಪ್ರಾತಿನಿಧ್ಯ ಕನ್ನಡಿಯೊಳಗಿನ ಗಂಟು?

ಮತ ಮಂಥನ



ಪ್ರಾತಿನಿಧಿಕ ಚಿತ್ರ

28 ಒಟ್ಟು ಕ್ಷೇತ್ರ

17 ಪುರುಷರಿಗಿಂತ ಮಹಿಳಾ ಮತದಾರರು ಹೆಚ್ಚಿರುವ ಕ್ಷೇತ್ರಗಳು

5.42 ಕೋಟಿ ರಾಜ್ಯದ ಒಟ್ಟು ಮತದಾರರ ಸಂಖ್ಯೆ

2.70 ಕೋಟಿ ಮಹಿಳಾ ಮತದಾರರ ಸಂಖ್ಯೆ

• ಮಂಜುಶ್ರೀ ಎಂ. ಕಡಕೋಳ

ಬೆಂಗಳೂರು: ‘ಆಕಾಶದ ಅರ್ಧ ನಕ್ಷತ್ರಗಳು ನಾವು; ಈ ಭೂಮಿಯಲರ್ಧ ಕೇಳುವೆವು’ ಎಂಬುದು ಮಹಿಳಾ ಚಳವಳಿಯ ಸತ್ವಪೂರ್ಣ ಘೋಷಣೆಗಳಲ್ಲೊಂದು. ಭೂಮಿಯಲರ್ಧ ಪಾಲು ಹೋಗಲಿ, ಪ್ರಜಾತಂತ್ರದ ಆಧಾರ ಸ್ತಂಭಗಳಾದ ಲೋಕಸಭೆ–ವಿಧಾನಸಭೆಗಳಲ್ಲಿ ಅರ್ಧವಲ್ಲ; ಶೇ 33ರಷ್ಟು ಪ್ರಾತಿನಿಧ್ಯವೂ ಸಿಕ್ಕಿಲ್ಲ. ಅದಕ್ಕಾಗಿ ದಶಕಗಳ ಕಾಲ ಹೋರಾಟ ನಡೆದಿದೆ. ಆದರೆ ಈ ಹೋರಾಟಕ್ಕೆ ಈ ವರೆಗೂ ನ್ಯಾಯ ದಕ್ಕಿಸಿಕೊಳ್ಳಲು ಪುರುಷ ಮೇಲಾಧಿಪತ್ಯದ ರಾಜಕಾರಣ ಅವಕಾಶ ಕೊಟ್ಟಿಲ್ಲ.

ಈ ಚುನಾವಣೆಯಲ್ಲಿ ರಾಜ್ಯದಲ್ಲಿ ಮಹಿಳೆಯರಿಗೆ ಸಿಕ್ಕಿರುವ ರಾಜಕೀಯ ಪ್ರಾತಿನಿಧ್ಯವೆಷ್ಟು ಎಂಬ ಲೆಕ್ಕಾಚಾರ ಹಾಕಲು ಹೊರಟರೆ ಬೆರಳೆಣಿಕೆಯಲ್ಲೇ ಶುರುವಾಗುವ ಲೆಕ್ಕ ಅಲ್ಲಿಯೇ ಮುಗಿಯುತ್ತದೆ. 28 ಕ್ಷೇತ್ರಗಳ ಪೈಕಿ ಸಮಬಲದಲ್ಲಿ ಸ್ಪರ್ಧಿಸಬೇಕಾಗಿದ್ದ ಮಹಿಳೆಯರ ಸಂಖ್ಯೆ 8ಕ್ಕೆ ಸೀಮಿತ. ಆಡಳಿತಾರೂಢ ಕಾಂಗ್ರೆಸ್ ಪಕ್ಷ ಸಚಿವರನ್ನೇ ಕಣಕ್ಕೆ ಇಳಿಸಬೇಕು ಎಂಬ ನಿರ್ಣಯಕ್ಕೆ ಬಂದಿದ್ದರಿಂದಾಗಿ, ಸಚಿವರು ತಮ್ಮ ಹೆಣ್ಣುಮಕ್ಕಳನ್ನು ಕಣಕ್ಕೆ ದೂಡಿದರು, ಹೀಗಾಗಿ ಇಷ್ಟಾದರೂ ಮಹಿಳೆಯರು ಕಣದಲ್ಲಿ ಇದ್ದಾರೆ.

ಮಹಿಳೆಯರಿಗೆ ಟಿಕೆಟ್ ನೀಡುವ ವಿಚಾರದಲ್ಲಿ ಎಲ್ಲ ರಾಜಕೀಯ ಪಕ್ಷಗಳದ್ದು ತಾರತಮ್ಯದ ಧೋರಣೆಯೇ. ಮಹಿಳೆಯರಿಗೇಕೆ ರಾಜಕಾರಣ? ಕುಟುಂಬ, ಅಡುಗೆ ಮನೆ ಚೆನ್ನಾಗಿ ನಿಭಾಯಿಸಿದರೆ ಸಾಕು ಎನ್ನುವ ಮನಃಸ್ಥಿತಿ ಈಗಲೂ ಬದಲಾಗಿಲ್ಲ. (ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರು ತಮ್ಮ ಸೊಸೆಯ ಎದುರಾಳಿ ಸ್ಪರ್ಧಿ ಗಾಯತ್ರಿ ಸಿದ್ದೇಶ್ವರ ಅವರು ಅಡುಗೆ ಮಾಡಲು ಲಾಯಕ್ಕು ಎಂದಿದ್ದರು).

ರಾಜ್ಯದಲ್ಲಿ ನಡೆದ ಲೋಕಸಭಾ ಚುನಾವಣೆಗಳಲ್ಲಿ ಮಹಿಳೆಯೊಬ್ಬರು ಮೊದಲ ಬಾರಿಗೆ ಸ್ಪರ್ಧಿಸುವ ಅವಕಾಶ ಪಡೆದದ್ದು 3ನೇ ಲೋಕಸಭಾ ಚುನಾವಣೆಯಲ್ಲಿ. ಅಂದರೆ, 1952ರಲ್ಲಿ ನಡೆದ ಪ್ರಥಮ ಲೋಕಸಭಾ ಚುನಾವಣೆಯ ಹತ್ತು ವರ್ಷಗಳ ಬಳಿಕ. 1962ರಲ್ಲಿ ಧಾರವಾಡ ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿದ್ದ ಸರೋಜಿನಿ ಮಹಿಷಿ ಮೊದಲ ಚುನಾವಣೆಯಲ್ಲೇ ಗೆಲುವು ಸಾಧಿಸಿ, ರಾಜ್ಯದ ಮೊದಲ ಸಂಸದೆಯಾದರು.

1962ರಿಂದ 2019ರವರೆಗೆ ನಡೆದ ಲೋಕಸಭಾ ಚುನಾವಣೆಯಲ್ಲಿ ರಾಜ್ಯದಿಂದ ಆಯ್ಕೆಯಾದ ಸಂಸದೆಯರ ಸಂಖ್ಯೆ 16 ಮಾತ್ರ. 2009, 2014ರಲ್ಲಿ ತಲಾ ಒಬ್ಬರು, 2019ರಲ್ಲಿ ಇಬ್ಬರು ಸಂಸದೆಯರು ಮಾತ್ರ ಆಯ್ಕೆಯಾಗಿದ್ದರು. 2024ರಲ್ಲಿ ಈ ಸಂಖ್ಯೆ ಹೆಚ್ಚಾಗಬಹುದು ಎಂಬ ನಿರೀಕ್ಷೆ ಗರಿಗೆದರಿದೆ.

ಪಕ್ಷವಾರು ಮಹಿಳಾ ಅಭ್ಯರ್ಥಿಗಳು

ಕಾಂಗ್ರೆಸ್	8
ಬಿಜೆಪಿ	2
ಜೆಡಿಎಸ್	0

ಇಂದಿರಾಗೆ ಪುನರ್ಜನ್ಮ

1978ರ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಇಂದಿರಾ ಗಾಂಧಿ ಅವರಿಗೆ ಚಿಕ್ಕಮಗಳೂರು ಕ್ಷೇತ್ರ ರಾಜಕೀಯ ಪುನರ್ ಜನ್ಮನೀಡಿತ್ತು. 1999ರಲ್ಲಿ ಬಳ್ಳಾರಿ ಲೋಕಸಭಾ ಚುನಾವಣೆಯಲ್ಲಿ ಸೋನಿಯಾ ಗಾಂಧಿ ಹಾಗೂ ಸುಷ್ಮಾ ಸ್ವರಾಜ್ ನಡುವಿನ ಸ್ಪರ್ಧೆಯಲ್ಲಿ ಸೋನಿಯಾ ಗೆದ್ದಿದ್ದರು. 2004ರಲ್ಲಿ ಕನಕಪುರದಿಂದ ಸ್ಪರ್ಧಿಸಿದ್ದ ತೇಜಸ್ವಿನಿ ಶ್ರೀರಮೇಶ್ ಅವರು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರನ್ನು 1 ಲಕ್ಷಕ್ಕೂ ಹೆಚ್ಚು ಮತಗಳ ಅಂತರದಿಂದ ಸೋಲಿಸಿದ್ದು ದಾಖಲೆಯಾಗಿತ್ತು.

ಮೀಸಲಾತಿ ವರವಾಗುವುದೇ?

ಕರ್ನಾಟಕಕ್ಕೆ ಮಹಿಳಾ ಮೀಸಲಾತಿ ಕಲ್ಪನೆ ಹೊಸದೇನಲ್ಲ. ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 50ರಷ್ಟು ಮೀಸಲಾತಿ ನೀಡುವ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ಕಾಯ್ದೆ 2010ರಲ್ಲಿಯೇ ಜಾರಿಗೆ ಬಂದಿದೆ. ಆದರೆ, ಮಾದರಿ ಹಾಕಿಕೊಟ್ಟ ಬಳಿಕವೂ ವಿಧಾನಸಭೆಯಲ್ಲಿನ ಮಹಿಳೆಯರ ಪ್ರಾತಿನಿಧ್ಯ ಶೇ 33 ಅನ್ನೂ ತಲುಪಲಿಲ್ಲ.

‘ಮಹಿಳೆಯರಿಗೆ ಟಿಕೆಟ್ ನೀಡುವಾಗ ಗೆಲ್ಲುವ ಅಭ್ಯರ್ಥಿಗೇ ಮಣೆ ಹಾಕುವುದು ವಾಡಿಕೆ. ಜತೆಗೆ ಕುಟುಂಬದ ರಾಜಕೀಯ ಹಿನ್ನೆಲೆ, ಹಣಬಲ, ಜಾತಿಯ ಪ್ರಭಾವವನ್ನೂ ಲೆಕ್ಕ ಹಾಕಲಾಗುತ್ತದೆ. ಸ್ವತಂತ್ರ ವ್ಯಕ್ತಿತ್ವ, ಹಣಬಲ, ರಾಜಕೀಯ ಹಿನ್ನೆಲೆ ಇಲ್ಲದ ಮಹಿಳೆಯರಿಗೆ ಸುಲಭವಾಗಿ ಟಿಕೆಟ್ ಸಿಗುವುದಿಲ್ಲ. ಜನಮನ್ನಣೆಗಿಂತ ಪಕ್ಷ, ನಾಯಕರ ಮನ್ನಣೆಯೇ ಇಲ್ಲಿ ನಿರ್ಣಾಯಕ’ ಎಂಬುದು ವಿವಿಧ ಪಕ್ಷಗಳ ಮಹಿಳಾ ರಾಜಕಾರಣಿಗಳ ಒಕ್ಕೊರಲ ಅಭಿಪ್ರಾಯ. ಮಹಿಳಾ ಮೀಸಲಾತಿ ಸಕಾಲಕ್ಕೆ ಜಾರಿಯಾದಲ್ಲಿ ಚುನಾವಣಾ ಕಣದಲ್ಲಿ ಮಹಿಳೆಗೆ ಮತ್ತೊಬ್ಬ ಮಹಿಳೆಯೇ ಎದುರಾಳಿಯಾಗುತ್ತಾರೆ. ಅದಕ್ಕೂ 2029ವರೆಗೆ ಕಾಯಬೇಕು.

ಕರ್ನಾಟಕದಿಂದ ಲೋಕಸಭೆಗೆ ಆಯ್ಕೆಯಾದವರು

ಹೆಸರು	ಕ್ಷೇತ್ರ	ಪಕ್ಷ
1. ಸರೋಜಿನಿ ಮಹಿಷಿ	ಧಾರವಾಡ ಉತ್ತರ	ಕಾಂಗ್ರೆಸ್
2. ಬಸವರಾಜೇಶ್ವರಿ	ಬಳ್ಳಾರಿ	ಕಾಂಗ್ರೆಸ್
3. ಡಿ.ಕೆ. ತಾರಾದೇವಿ	ಚಿಕ್ಕಮಗಳೂರು	ಕಾಂಗ್ರೆಸ್
4. ಚಂದ್ರಪ್ರಭಾ ಅರಸು	ಮೈಸೂರು	ಕಾಂಗ್ರೆಸ್
5. ರತ್ನಮಾಲಾ ಸವಣೂರು	ಚಿಕ್ಕೋಡಿ	ಜೆಡಿಯು
6. ಸೋನಿಯಾ ಗಾಂಧಿ	ಬಳ್ಳಾರಿ	ಕಾಂಗ್ರೆಸ್
7. ಮಾರ್ಗರೆಟ್ ಆಳ್ವ	ಉತ್ತರ ಕನ್ನಡ (ಕೆನರಾ)	ಕಾಂಗ್ರೆಸ್
8. ತೇಜಸ್ವಿನಿಗೌಡ	ಕನಕಪುರ	ಕಾಂಗ್ರೆಸ್
9. ಮನೋರಮಾ ಮಧ್ವರಾಜ್	ಉಡುಪಿ	ಬಿಜೆಪಿ
10. ಜೆ. ಶಾಂತಾ	ಬಳ್ಳಾರಿ	ಬಿಜೆಪಿ
11. ಶೋಭಾ ಕರಂದ್ಲಾಜೆ	ಉಡುಪಿ–ಚಿಕ್ಕಮಗಳೂರು	ಬಿಜೆಪಿ
12. ಸುಮಲತಾ ಅಂಬರೀಷ್	ಮಂಡ್ಯ	ಪಕ್ಷೇತರ

ಉಪ ಚುನಾವಣೆಯಲ್ಲಿ ಗೆದ್ದ ಮಹಿಳೆಯರು

ಹೆಸರು	ಕ್ಷೇತ್ರ	ಪಕ್ಷ
1. ಸುಧಾ ವಿ. ರೆಡ್ಡಿ	ಮಧುಗಿರಿ	ಕಾಂಗ್ರೆಸ್
2. ಇಂದಿರಾ ಗಾಂಧಿ	ಚಿಕ್ಕಮಗಳೂರು	ಕಾಂಗ್ರೆಸ್
3. ದಿವ್ಯಸ್ಪಂದನಾ (ರಮ್ಯಾ)	ಮಂಡ್ಯ	ಕಾಂಗ್ರೆಸ್
4. ಮಂಗಲಾ ಅಂಗಡಿ	ಬೆಳಗಾವಿ	ಬಿಜೆಪಿ



ಮಹಿಳಾ ಮೀಸಲಾತಿ ಜಾರಿಯಾದರೆ, ಪಕ್ಷ ಯಾವುದೇ ಇರಲಿ, ಒಟ್ಟಾರೆ ಅಲ್ಲಿ ಮಹಿಳೆಯರೇ ಆಯ್ಕೆಯಾಗುತ್ತಾರೆ ಎಂಬುದು ಗಮನೀಯ. ಆ ಕಾಲ ದೂರವಿಲ್ಲ

ಭವ್ಯಾ ನರಸಿಂಹಮೂರ್ತಿ, ಕಾಂಗ್ರೆಸ್ ಯುವ ನಾಯಕಿ



ರಾಜಕೀಯ ಸ್ಥಾನಮಾನಗಳನ್ನು ನಿರ್ಣಯಿಸುವ ಸಮಿತಿಗಳಲ್ಲಿ ಮಹಿಳೆ, ಎಲ್ಲಿಯವರೆಗೆ ಧ್ವನಿ ಎತ್ತುವುದಿಲ್ಲವೋ ಅಲ್ಲಿಯವರೆಗೆ ಮಹಿಳೆಯರಿಗೆ ಯಾವ ರಾಜಕೀಯ ಸೌಲಭ್ಯವೂ ಸಿಗುವುದಿಲ್ಲ

ಲೀಲಾದೇವಿ ಆರ್. ಪ್ರಸಾದ್, ಮಾಜಿ ಅಧ್ಯಕ್ಷೆ, ಜೆಡಿಎಸ್ ಮಹಿಳಾ ಘಟಕ



ಮಹಿಳೆಯರು ಹೆಚ್ಚಿರುವ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಟಿಕೆಟ್ ನೀಡಬೇಕಿತ್ತು. ಬಿಜೆಪಿ ಆಡಳಿತಾವಧಿಯಲ್ಲಿ ಅಂಗೀಕೃತವಾಗಿರುವ ಮಹಿಳಾ ಮೀಸಲಾತಿ ಮಸೂದೆಯು ಈ ಆಶಯ ಈಡೇರಿಸುವ ವಿಶ್ವಾಸವಿದೆ

ಭಾರತಿ ಶೆಟ್ಟಿ, ಸಹ ಸಂಚಾಲಕಿ, ಬಿಜೆಪಿ ಲೋಕಸಭಾ ಚುನಾವಣಾ ನಿರ್ವಹಣಾ ಸಮಿತಿ

ಕುಮಾರಸ್ವಾಮಿ ತೋಟದಲ್ಲಿ ಬಾಡೂಟಕ್ಕೆ ಅಧಿಕಾರಿಗಳ ತಡೆ

ಮುಖಂಡರಿಗೆ ಊಟದ ವ್ಯವಸ್ಥೆ ದೂರು: ಶಾಮಿಯಾನ, ಕುರ್ಚಿ ತೆರವು

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಬಿಡದಿ ಹೋಬಳಿಯ ಕೇತಗಾನಹಳ್ಳಿಯಲ್ಲಿರುವ ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಅವರ ತೋಟದ ಮನೆಯಲ್ಲಿ ರಾಜಕೀಯ ಮುಖಂಡರಿಗೆ ಬಾಡೂಟ ವ್ಯವಸ್ಥೆ ಮಾಡಲಾಗಿದೆ ಎಂಬ ದೂರಿನ ಕಾರಣ ಚುನಾವಣಾ ಅಧಿಕಾರಿಗಳ ತಂಡ ಬುಧವಾರ ತೋಟಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ಮಾಗಡಿ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾಧಿಕಾರಿ, ಕ್ಷಿಪ್ರ ಕಾರ್ಯಪಡೆ ತಂಡ (ಎಫ್‌ಎಸ್‌ಟಿ) ಹಾಗೂ ವಿಡಿಯೊ ನಿಗಾ ತಂಡ (ವಿಎಸ್‌ಟಿ) ಸ್ಥಳಕ್ಕೆ ಭೇಟಿ ನೀಡಿದಾಗ ತೋಟದಲ್ಲಿ ಶಾಮಿಯಾನ ಹಾಕಿ ಸುಮಾರು 50 ಕುರ್ಚಿ ಹಾಗೂ ಊಟದ ಟೇಬಲ್ ಹಾಕಲಾಗಿತ್ತು. ಮಧ್ಯಾಹ್ನದ ಊಟಕ್ಕೆ ಬಾಣಸಿಗರು ಬಾಡೂಟ ಸಿದ್ಧಪಡಿಸುತ್ತಿದ್ದರು.

‘ತೋಟದೊಳಗೆ ರಾಜಕೀಯ ಮುಖಂಡರಿಗೆ ಬಾಡೂಟ ಸಿದ್ಧಪಡಿಸಲಾಗುತ್ತಿದೆ ಎಂಬ ಮಾಹಿತಿ ಮೇರೆಗೆ ಎಫ್‌ಎಸ್‌ಟಿ ತಂಡದವರು ತೋಟದ ಮನೆಗೆ ತೆರಳಲು ಮುಂದಾದಾಗ ಗೇಟ್‌ನಲ್ಲಿದ್ದ ಸಿಬ್ಬಂದಿ ಒಳಗೆ ಬಿಡುತ್ತಿಲ್ಲ ಎಂಬ ವಿಷಯ ಗೊತ್ತಾಯಿತು. ಹಾಗಾಗಿ, ನಾನೇ ಅಲ್ಲಿಗೆ ಪೊಲೀಸರೊಂದಿಗೆ ತೆರಳಿ ಶಾಮಿಯಾನ ಹಾಕಿದ್ದ ಜಾಗವನ್ನೆಲ್ಲಾ ಪರಿಶೀಲನೆ ನಡೆಸಿದೆ’ ಎಂದು ಮಾಗಡಿ ವಿಧಾನಸಭಾ ಕ್ಷೇತ್ರದ ಸಹಾಯಕ ಚುನಾವಣಾ ಅಧಿಕಾರಿ ರಮೇಶ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಯುಗಾದಿ ಪ್ರಯುಕ್ತ ಮನೆಗೆ ಬರುವ ಸಂಬಂಧಿಕರು ಹಾಗೂ ಸ್ನೇಹಿತರಿಗೆ ಮಧ್ಯಾಹ್ನದ ಊಟ ಸಿದ್ಧಪಡಿಸಲಾಗುತ್ತಿತ್ತು. ಅದಕ್ಕಾಗಿ, ಹೊರಗಡೆ ಶಾಮಿಯಾನ ವ್ಯವಸ್ಥೆ ಮಾಡಿ, ಕುರ್ಚಿ ಮತ್ತು ಟೇಬಲ್ ಹಾಕಲಾಗಿತ್ತು ಎಂದು ಸ್ಥಳದಲ್ಲಿದ್ದವರು ಹೇಳಿದರು’ ಎಂದರು.

‘ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಊಟದ ವ್ಯವಸ್ಥೆಗೆ ಅವಕಾಶವಿಲ್ಲ ಎಂದು ಸ್ಥಳದಲ್ಲಿದ್ದವರಿಗೆ ಎಚ್ಚರಿಕೆ ನೀಡಲಾಯಿತು’ ಎಂದು ಹೇಳಿದರು.

ಶಾಸಕ ಮುನಿರತ್ನ ಸೇರಿದಂತೆ ಕೆಲ ಮುಖಂಡರು ಮಧ್ಯಾಹ್ನದ ಹೊತ್ತಿಗೆ ತೋಟದ ಮನೆಗೆ ಭೇಟಿ ನೀಡಿದರು. ಚುನಾವಣಾ ಅಧಿಕಾರಿಗಳು ಹಾಗೂ ಸಿಬ್ಬಂದಿ ಇರುವುದನ್ನು ನೋಡುತ್ತಿದ್ದಂತೆಯೇ ಸ್ಥಳದಿಂದ ತೆರಳಿದರು.



ಎಚ್.ಡಿ. ಕುಮಾರಸ್ವಾಮಿ ಅವರ ತೋಟದ ಮನೆಯಲ್ಲಿ ಬಾಡೂಟಕ್ಕಾಗಿ ಹಾಕಲಾಗಿದ್ದ ಶಾಮಿಯಾನ, ಕುರ್ಚಿ ಹಾಗೂ ಟೇಬಲ್‌ಗಳನ್ನು ತೆರವುಗೊಳಿಸಲಾಯಿತು

‘ರಾಜಕಾರಣಿಗಳು ಇರಲಿಲ್ಲ’

‘ತೋಟದ ಮನೆಗೆ ಭೇಟಿ ನೀಡಿದಾಗ ಎಚ್.ಡಿ. ಕುಮಾರಸ್ವಾಮಿ ಅವರು ಸೇರಿದಂತೆ ಕುಟುಂಬದ ಸದಸ್ಯರು ಹಾಗೂ ರಾಜಕೀಯ ಮುಖಂಡರು ಇರಲಿಲ್ಲ. ಕೆಲಸ ಮಾಡುವ ಕಾರ್ಮಿಕರು ಹಾಗೂ ಕೆಲ ಸಿಬ್ಬಂದಿ ಮಾತ್ರ ಇದ್ದರು. ಸ್ಥಳದಲ್ಲಿ ರಾಜಕೀಯ ಪಕ್ಷದ ಬಾವುಟ, ಚಿಹ್ನೆ ಹಾಗೂ ಯಾವುದೇ ಸಾಮಗ್ರಿ ಕಂಡುಬಂದಿಲ್ಲ. ಮುನ್ನೆಚ್ಚರಿಕೆ ಕ್ರಮವಾಗಿ ಎಫ್‌ಎಸ್‌ಟಿ ಮತ್ತು ವಿಎಸ್‌ಟಿ ತಂಡ ಸ್ಥಳದಲ್ಲೇ ಸಂಜೆವರೆಗೆ ಬೀಡು ಬಿಟ್ಟಿತ್ತು. ತಂಡಗಳು ನೀಡುವ ವರದಿ ಮೇರೆಗೆ ಒಂದು ವೇಳೆ ರಾಜಕೀಯ ಮುಖಂಡರಿಗೆ ಬಾಡೂಟ ಆಯೋಜನೆ ಮಾಡಿರುವುದು ಖಚಿತವಾದರೆ ಸಂಬಂಧಪಟ್ಟವರ ವಿರುದ್ಧ ಪ್ರಕರಣ ದಾಖಲಿಸಲಾಗುವುದು’ ಎಂದು ಸಹಾಯಕ ಚುನಾವಣಾ ಅಧಿಕಾರಿ ರಮೇಶ್ ತಿಳಿಸಿದರು.

‘ಭಯೋತ್ಪಾದನೆಯಂತೆ ಬಾಡೂಟ ವೈಭವೀಕರಣ’

ಬಾಡೂಟಕ್ಕೆ ಅಧಿಕಾರಿಗಳ ತಡೆ ಕುರಿತು ಪ್ರತಿಕ್ರಿಯಿಸಿರುವ ಜೆಡಿಎಸ್, ‘ಯುಗಾದಿ ಹೊಸತೊಡಕು ಸಂಭ್ರಮಕ್ಕೆ ಅಡ್ಡಿ ಮಾಡುವ ಮೂಲಕ ಕಾಂಗ್ರೆಸ್ ಪಕ್ಷವು ಹಿಂದೂ ಸಂಸ್ಕೃತಿಯ ಮೇಲೆ ತನ್ನ ಕಾಕದೃಷ್ಟಿ ಬೀರಿದೆ. ಕಾಂಗ್ರೆಸ್ ಪಕ್ಷ ನಮ್ಮ ಸಂಪ್ರದಾಯ, ಸಂಸ್ಕೃತಿ, ಆಚರಣೆಯ ಮೇಲೆಯೂ ಕಾಕದೃಷ್ಟಿ ಬೀರಿದೆ. ಬಾಡೂಟವನ್ನು ಭಯೋತ್ಪಾದನೆಯಂತೆ ವೈಭವೀಕರಿಸುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದೆ.

‘ಯುಗಾದಿ ಹಿಂದೂಗಳ ಹೊಸ ವರ್ಷವಾಗಿದ್ದು, ಹಿಂದೂಗಳ ಸಾಂಸ್ಕೃತಿಕ ಮತ್ತು ಧಾರ್ಮಿಕ ಅಸ್ಮಿತೆ. ಈ ಹಬ್ಬದ ಮರುದಿನದ ಸಂಭ್ರಮ ಹೊಸತೊಡಕು ಆಚರಣೆ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಪ್ರದಾಯ. ಹಿಂದೂ ಮನೆಯಲ್ಲಿ ನಡೆಯುವಂತೆ ಕುಮಾರಸ್ವಾಮಿ ಅವರ ಮನೆಯಲ್ಲಿಯೂ ಹೊಸತೊಡಕು ಆಚರಣೆ ನಡೆಯುತ್ತಿದೆ. ಅದರಲ್ಲಿ ವಿಶೇಷವೇನೂ ಇಲ್ಲ. ಸಂಬಂಧಿಕರು, ಸ್ನೇಹಿತರು ಹಾಗೂ ರಾಜಕೀಯ ಸಹಪಾಠಿಗಳನ್ನು ಅವರು ಊಟಕ್ಕೆ ಆಹ್ವಾನಿಸಿದ್ದಾರೆ. ಮಾಂಸದ ಅಡುಗೆ ಈ ದಿನದ ಸಾಮಾನ್ಯ ತಿನಿಸು. ಈ ಊಟಕ್ಕೂ ಕಾಂಗ್ರೆಸ್ ಕಲ್ಲು ಹಾಕಿ ವಿಕೃತಿ ಮೆರೆದಿದೆ’ ಎಂದು ಕಿಡಿಕಾರಿದೆ.

‘ಮತಕ್ಕಾಗಿ ಹಣ, ಹೆಂಡ, ಸೀರೆ, ಕುಕ್ಕರ್, ಫ್ರಿಜ್, ಕೂಪನ್ ಹಂಚುವ ಸತ್ಸಂಪ್ರದಾಯ ಹೊಂದಿರುವ ಕಾಂಗ್ರೆಸ್‌ಗೆ, ಕಾವೇರಿ ಹೆಸರಿನಲ್ಲಿ ನಡೆಸಿದ ಮೇಕೆದಾಟು ಪಾದಯಾತ್ರೆಯಲ್ಲಿ ನದಿಯಂತೆ ಹರಿದ ಮಾಂಸ, ಮದ್ಯದ ಹೊಳೆಯನ್ನು ಕಾಣದವರು ಯಾರೂ ಇಲ್ಲ. ಆದರೆ, ಆ ಪಕ್ಷದ ಕಾಮಾಲೆ ಕಣ್ಣು ಹಿಂದೂಗಳ ಹಬ್ಬಗಳ ಮೇಲೆಯೇ ಬಿದ್ದಿದೆ. ಜಾತಿ, ಧರ್ಮಗಳ ತುಷ್ಟೀಕರಣ ಜಾಡ್ಯ ಕಾಂಗ್ರೆಸ್ ಪಕ್ಷವನ್ನು ಅಂಟಿಕೊಂಡಿದೆ’ ಎಂದು ದೂರಿದೆ.

‘ಕಾಂಗ್ರೆಸ್ ಸೋಲಿನ ಹತಾಶೆಯಿಂದ ಜೆಡಿಎಸ್ ಹಾಗೂ ಬಿಜೆಪಿ ಪಕ್ಷಗಳನ್ನು ಟೀಕಿಸುವ ಬರದಲ್ಲಿ ನಮ್ಮ ಹಿಂದೂ ಸಂಪ್ರದಾಯದ ಬಗ್ಗೆ ಅವಹೇಳನ ಮಾಡಿದೆ. ಅದರ ಕೊಳಕುತನ ಅದರ ಟ್ವೀಟ್‌ನಲ್ಲಿ ಎದ್ದು ಕಾಣುತ್ತಿದೆ. ನಿರಂತರವಾಗಿ ಹಿಂದೂ ವಿರೋಧಿ ಮತ್ತು ದ್ರೋಹಿ ಆಗಿರುವ ಕಾಂಗ್ರೆಸ್ ಪಕ್ಷಕ್ಕೆ ಹೊಸತೊಡಕಿಗಿಂತ ಇಫ್ತಾರ್ ಕೂಟದಲ್ಲಿಯೇ ಹೆಚ್ಚು ಪ್ರೀತಿ. ಜನ್ಮದಾರಭ್ಯ ಬಂದಿದ್ದನ್ನು ನಾವಂತೂ ಅವಹೇಳನ ಮಾಡುವುದಿಲ್ಲ’ ಎಂದು ವ್ಯಂಗ್ಯವಾಡಿದೆ.

ಮೀನು ತಿಂದ ತೇಜಸ್ವಿ: ಬಿಜೆಪಿ ಟೀಕೆ

ಪಟ್ನಾ (ಪಿಟಿಐ): ಆರ್‌ಜೆಡಿ ನಾಯಕ ತೇಜಸ್ವಿ ಯಾದವ್ ಅವರು ಚೈತ್ರ ನವರಾತ್ರಿ ಸಮಯದಲ್ಲಿ ಹೆಲಿಕಾಪ್ಟರ್‌ನಲ್ಲಿ ಮೀನು ಊಟ ಸವಿಯುತ್ತಿರುವ ವಿಡಿಯೊ ಹಂಚಿಕೊಂಡಿದ್ದು, ಬಿಜೆಪಿ ಮತ್ತು ಕೆಲ ನೆಟ್ಟಿಗರ ಆಕ್ರೋಶಕ್ಕೆ ಕಾರಣವಾಗಿದೆ.

ವಿಕಾಸಶೀಲ ಇನ್ಸಾನ್ ಪಕ್ಷದ ಮುಕೇಶ್ ಸಾಹ್ನಿ ಅವರೊಂದಿಗೆ ಹೆಲಿಕಾಪ್ಟರ್‌ನಲ್ಲಿ ತೆರಳುತ್ತಿರುವ ವೇಳೆ ಮೀನಿನ ಊಟ ಸೇವಿಸಿರುವುದಾಗಿ ತೇಜಸ್ವಿ ವಿಡಿಯೊದಲ್ಲಿ ಹೇಳಿದ್ದಾರೆ. ಇದಕ್ಕೆ ಪ್ರತಿಕ್ರಿಯಿಸಿರುವ ಕೇಂದ್ರ ಸಚಿವ ಗಿರಿರಾಜ್ ಸಿಂಗ್ ಅವರು, ತೇಜಸ್ವಿ ಯಾದವ್ ಅವರನ್ನು ‘ಸೀಸನಲ್ ಸನಾತನಿ’ ಎಂದು ಜರೆದಿದ್ದಾರೆ. ಈ ಮೂಲಕ ತೇಜಸ್ವಿ ತುಷ್ಟೀಕರಣದ ರಾಜಕೀಯದಲ್ಲಿ ತೊಡಗಿದ್ದಾರೆ. ಅವರ ತಂದೆ ಲಾಲು ಅವರು ಬಿಹಾರದಲ್ಲಿ ಅಧಿಕಾರದಲ್ಲಿದ್ದಾಗ ರೋಹಿಂಗ್ಯಾ ಮುಸ್ಲಿಮರು ಮತ್ತು ಬಾಂಗ್ಲಾದೇಶದ ವಲಸಿಗರು ಪ್ರವೇಶಿಸಲು ಅನುಮತಿ ನೀಡಿದ್ದರು’ ಎಂದು ದೂರಿದ್ದಾರೆ.

ಬಿಹಾರದ ಉಪ ಮುಖ್ಯಮಂತ್ರಿ ವಿಜಯ್ ಕುಮಾರ್ ಸಿನ್ಹಾ ಅವರು, ‘ಶ್ರಾವಣದಲ್ಲಿ ಅವರು ಕುರಿ ಮಾಂಸದ ಔತಣವನ್ನೂ ಮಾಡಿದ್ದರು. ಕಳೆದ ವರ್ಷ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ದೆಹಲಿಯ ಲಾಲು ಪ್ರಸಾದ್ ಅವರ ನಿವಾಸದಲ್ಲಿ ಊಟ ಸವಿದಿದ್ದರು’ ಎಂದು ಉಲ್ಲೇಖಿಸಿದ್ದಾರೆ.

ಬಳಿಕ ಈ ಕುರಿತು ಪ್ರತಿಕ್ರಿಯಿಸಿರುವ ಯಾದವ್ ಅವರು, ವಿರೋಧಿಗಳ ಐಕ್ಯೂ (ಬುದ್ಧಿಮತ್ತೆ) ಎಷ್ಟಿದೆ ಎಂಬುದನ್ನು ಪರೀಕ್ಷಿಸಲು ಈ ಪೋಸ್ಟ್ ಮಾಡಿದ್ದಾಗಿ ಹೇಳಿದ್ದಾರೆ. ಒಂಬತ್ತು ದಿನಗಳ ಕಠಿಣ ವ್ರತ ಪ್ರಾರಂಭವಾಗುವ ಒಂದು ದಿನ ಮೊದಲು, ಅಂದರೆ ಏಪ್ರಿಲ್ 8ರಂದು ವಿಡಿಯೊ ಚಿತ್ರೀಕರಿಸಲಾಗಿದೆ ಎಂದು ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ ಎಂದು ಅವರು ಹೇಳಿದ್ದಾರೆ.

‘ಬಿಜೆಪಿ ಬೆಂಬಲಿಗರು ಮತ್ತು ಕೆಲ ಮಾಧ್ಯಮಗಳ ಐಕ್ಯೂ ತೋರಿಸಲು ನಾವು ಬಯಸಿದ್ದೆವು. ಅದರಲ್ಲಿ ಯಶಸ್ವಿಯಾಗಿದ್ದೇವೆ’ ಎಂದೂ ಅವರು ವ್ಯಂಗ್ಯವಾಡಿದ್ದಾರೆ.



ತೇಜಸ್ವಿ ಯಾದವ್

ಪ್ರಜ್ವಲ್ ಹೆಸರು ಹೇಳದೆ ಪ್ರಚಾರ

ದೂರು ಕೊಟ್ಟರೆ ಮನೆಯಲ್ಲಿ ಕೂರುತ್ತೇನೆ: ಪ್ರೀತಂ ಗೌಡ ಆಕ್ರೋಶ

ಪ್ರಜಾವಾಣಿ ವಾರ್ತೆ

ಹಾಸನ: ಬಿಜೆಪಿ– ಜೆಡಿಎಸ್ ಮೈತ್ರಿಯಲ್ಲಿ ಉಂಟಾಗಿರುವ ಗೊಂದಲದ ಮಧ್ಯೆಯೇ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂ ಗೌಡ ಅವರು ಬುಧವಾರ ನಗರದ 89ನೇ ಬೂತ್‌ನಿಂದ ಪ್ರಚಾರ ಆರಂಭಿಸಿದರು. ಎಲ್ಲಿಯೂ ಪ್ರಜ್ವಲ್ ರೇವಣ್ಣ ಅವರ ಹೆಸರು ಹೇಳದೆ, ‘ಮೈತ್ರಿಕೂಟದ ಅಭ್ಯರ್ಥಿಯ ಗೆಲುವಿಗೆ ಮತ ನೀಡಿ’ ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ‘ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕೆಂದು, ಮೈತ್ರಿ ಅಭ್ಯರ್ಥಿ ಪರ ಪ್ರಚಾರ ಆರಂಭಿಸಿದ್ದೇನೆ. ರಾಜ್ಯದಲ್ಲಿ ಎಲ್ಲ ಸ್ಥಾನ ಗೆದ್ದು, ದೇಶದಲ್ಲಿ 400ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಬೇಕೆಂಬ ಗುರಿಯೊಂದಿಗೆ ಪ್ರಚಾರ ಅರಂಭಿಸಲಾಗಿದೆ. ಹಿರಿಯರು ಕೊಟ್ಟಿರುವ ಜವಾಬ್ದಾರಿಯಂತೆ ಕೆಲಸ ಮಾಡುತ್ತಿದ್ದೇನೆ’ ಎಂದರು.

‘ಮೈತ್ರಿ ಧರ್ಮ ಪಾಲಿಸುತ್ತಿಲ್ಲವೆಂದು ನಿಮ್ಮ ವಿರುದ್ಧ ಕೇಂದ್ರಕ್ಕೆ ದೂರು ಹೋಗಿದೆಯೇ’ ಎಂಬ ಪ್ರಶ್ನೆಗೆ ಖಾರವಾಗಿಯೇ ಪ್ರತಿಕ್ರಿಯಿಸಿದ ಅವರು, ‘ಪ್ರೀತಿ ತೋರಿಸಿದರೆ ಕೆಲಸ ಮಾಡುವವನು ನಾನು. ನನ್ನ ವಿರುದ್ಧ ದೂರು ಕೊಟ್ಟರೆ, ನನಗೆ ರಾಜಕೀಯವೇ ಬೇಡವೆಂದು ಮನೆಯಲ್ಲಿ ಕೂರುತ್ತೇನೆ. ಬಿಜೆಪಿಯ ಕೇಂದ್ರ ಅಥವಾ ರಾಜ್ಯದ ಯಾವುದೇ ನಾಯಕರು ನನಗೆ ಸೂಚನೆ ಕೊಟ್ಟಿಲ್ಲ. ಬೇಕಿದ್ದರೆ ಯಾರನ್ನಾದರೂ ಕೇಳಿ’ ಎಂದರು.

‘ಪ್ರಪಂಚದಲ್ಲಿಯೇ ದೊಡ್ಡ ಪಕ್ಷವಾದ ಬಿಜೆಪಿಯಲ್ಲಿ ವ್ಯಕ್ತಿಗಿಂತ ಪಕ್ಷ, ಪಕ್ಷಕ್ಕಿಂತ ದೇಶ ದೊಡ್ಡದು ಎಂದೇ ಹೇಳಲಾಗುತ್ತದೆ. ಮತಗಟ್ಟೆ ಗೆದ್ದರೆ ದೇಶ ಹಾಗೂ ಚುನಾವಣೆ ಗೆದ್ದಂತೆ ಎಂದು ನಂಬಿದ್ದೇವೆ. ಶಾಸಕ ಸಿಮೆಂಟ್ ಮಂಜು, ಬಿಜೆಪಿ ಜಿಲ್ಲಾ ಅಧ್ಯಕ್ಷ ಸಿದ್ದೇಶ್ ನಾಗೇಂದ್ರ ಅವರಿಗೆ ಗುರುವಾರ ಆಲೂರಿನಲ್ಲಿ ಪ್ರಚಾರ ಮಾಡಲು ಸೂಚಿಸಿರುವೆ. ಅವರೂ ತಮ್ಮ ಮತಗಟ್ಟೆಯಿಂದಲೇ ಪ್ರಚಾರ ಆರಂಭಿಸಲಿದ್ದಾರೆ’ ಎಂದರು.

‘ಈ ಬಾರಿಯ ಚುನಾವಣೆಯನ್ನು ಸವಾಲಾಗಿ ಸ್ವೀಕರಿಸಿದ್ದೇನೆ. ಎನ್‌ಡಿಎ ಮೈತ್ರಿಕೂಟ ಗೆಲ್ಲಿಸುವುದೇ ಗುರಿ. ನಮ್ಮ ರಾಜ್ಯ ಘಟಕದ ಅಧ್ಯಕ್ಷರು ಸೂಚಿಸುವ ಕೆಲಸ ಮಾಡುತ್ತೇನೆ. ಈಗಾಗಲೇ ಮತಗಟ್ಟೆ, ತಾಲ್ಲೂಕು, ಜಿಲ್ಲಾ ಮಟ್ಟದ ಪದಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದರು.



ಹಾಸನದಲ್ಲಿ ಬುಧವಾರ ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪ್ರೀತಂಗೌಡ ಅವರು ಮೈತ್ರಿ ಅಭ್ಯರ್ಥಿ ಪ್ರಜ್ವಲ್ ರೇವಣ್ಣ ಪರ ಪ್ರಚಾರ ನಡೆಸಿದರು



ಪ್ರಜಾ ಮತ 2024

ಜನತಂತ್ರದ ಹಬ್ಬ



ಪ್ರಜಾವಾಣಿ ಗುರುವಾರ • ಏಪ್ರಿಲ್ 11, 2024 11

ರಾಷ್ಟ್ರ ಮಟ್ಟದಲ್ಲಿ ಚುನಾವಣಾ ಕಣವನ್ನು ಕಳೆಗಟ್ಟಿಸಿದ್ದ ನಾಯಕರು

ಅಖಾಡದಲ್ಲಿ ಕಾಡುವ ಕುಶಲಿಗಳ ಗೈರು

• ಶಮಿನ್ ಜಾಯ್



ಅಹ್ಮದ್ ಪಟೇಲ್ | ಮುಲಾಯಂ ಸಿಂಗ್ | ಮಾಯಾವತಿ | ಮೋತಿಲಾಲ್ ವೋರಾ | ಅರುಣ್ ಜೇಟ್ಲಿ

ಕೆಲವು ರಾಜಕೀಯ ಮುಖಂಡರು ತಮ್ಮ ತಂತ್ರಗಾರಿಕೆ, ಮುಂಗಾಣ್ಕೆ, ಬುದ್ಧಿಮತ್ತೆಗಳಿಂದ ಚುನಾವಣಾ ಕಣವನ್ನು ರಂಗೇರಿಸುತ್ತಾರೆ. 2019ರ ಲೋಕಸಭಾ ಚುನಾವಣೆಯವರೆಗೆ ಹಾಗೆ ಕ್ರಿಯಾಶೀಲವಾಗಿದ್ದ ಕಾಂಗ್ರೆಸ್, ಬಿಜೆಪಿ ಸೇರಿದಂತೆ ವಿವಿಧ ಪಕ್ಷಗಳ ಹಲವು ನಾಯಕರ ಗೈರುಹಾಜರಿ ಗಮನ ಸೆಳೆಯುತ್ತಿದೆ

ನವದೆಹಲಿ: ಅತ್ಯುತ್ತಮ 'ನೇಪಥ್ಯದ ತಂತ್ರಗಾರ' ಎನಿಸಿದ್ದ ಅಹ್ಮದ್ ಪಟೇಲ್ ಅವರಿಂದ ಹಿಡಿದು 'ಕಾರ್ಯತಂತ್ರ ನಿಪುಣ' ಅರುಣ್ ಜೇಟ್ಲಿವರೆಗೆ ಕಳೆದ ಕೆಲವು ದಶಕಗಳಲ್ಲಿ ಭಾರತದ ಚುನಾವಣಾ ಕಣವನ್ನು ತಮ್ಮ ತಂತ್ರ, ಪ್ರತಿತಂತ್ರ, ಕೌಶಲಗಳಿಂದ ಕಳೆಗಟ್ಟಿಸಿದ್ದ ನಾಯಕರ ಅನುಪಸ್ಥಿತಿ ಪ್ರಸ್ತುತ ಚುನಾವಣೆಯಲ್ಲಿ ಎದ್ದುಕಾಣುತ್ತಿದೆ.

ಬಿಎಸ್‌ಪಿ ಅಧಿನಾಯಕಿ ಮಾಯಾವತಿ ಕಣದಿಂದ ದೂರ ಉಳಿದಿದ್ದರೆ, ಅಹ್ಮದ್ ಪಟೇಲ್, 'ಭವಿಷ್ಯಕಾರ' ರಾಮ್‌ವಿಲಾಸ್ ಪಾಸ್ವಾನ್, ಹಿರಿಯ ಸಮಾಜವಾದಿ ಮುಲಾಯಂ ಸಿಂಗ್ ಮತ್ತು 'ಕೋಶಾಧಿಕಾರಿ' ಮೋತಿಲಾಲ್ ವೋರಾ ಅಸ್ತಂಗತರಾಗಿದ್ದಾರೆ.

ಆಸಕ್ತಿಕರ ಗೈರುಹಾಜರಿ ಎಂದರೆ, ಅದು ಮಾಯಾವತಿ ಅವರದ್ದು. ಪಕ್ಷದ ಜನಪ್ರಿಯ ನಾಯಕಿಯಾಗಿ ದಲಿತ ಮತಗಳ ಮುಖ್ಯ ಪಾಲನ್ನು ತಮ್ಮದಾಗಿಸಿಕೊಳ್ಳುತ್ತಿದ್ದ ಅವರು, ಪಕ್ಷದ ನೇತೃತ್ವವನ್ನು ತಮ್ಮ ಸೋದರಳಿಯ ಮತ್ತು ಉತ್ತರಾಧಿಕಾರಿಯಾದ ಆಕಾಶ್ ಅವರಿಗೆ ಬಿಟ್ಟುಕೊಟ್ಟಿದ್ದಾರೆ. ಹಲವು ರೀತಿಯ ಊಹಾಪೋಹಗಳು ಹರಿದಾಡುತ್ತಿದ್ದರೂ ಮಾಯಾವತಿ ಸಾರ್ವಜನಿಕ ವೇದಿಕೆಗಳಿಂದ ದೂರ ಉಳಿದಿರುವುದು ಏಕೆ ಎನ್ನುವುದರ ಬಗ್ಗೆ ಬಿಎಸ್‌ಪಿಯ ಯಾರೊಬ್ಬರೂ ಬಾಯಿ ಬಿಡುತ್ತಿಲ್ಲ.

ಆಗೀಗ 'ಎಕ್ಸ್' ವೇದಿಕೆಯಲ್ಲಿ ಪೋಸ್ಟ್ ಮಾಡುವುದನ್ನು ಬಿಟ್ಟರೆ, ಪಕ್ಷದ ಪ್ರಚಾರ ಕಾರ್ಯವನ್ನು ಸಂಪೂರ್ಣವಾಗಿ ಅವರು ಆಕಾಶ್‌ಗೆ ಬಿಟ್ಟುಕೊಟ್ಟಿದ್ದಾರೆ. ಸದ್ಯದ ಲೋಕಸಭಾ ಚುನಾವಣೆಯಲ್ಲಿ ಬಿಎಸ್‌ಪಿಯು 'ಇಂಡಿಯಾ' ಮೈತ್ರಿಕೂಟದ ಭಾಗವಾಗುವು-ದಿಲ್ಲ ಎಂದು ಅವರು ಹಲವು ಬಾರಿ 'ಎಕ್ಸ್' ಜಾಲತಾಣದಲ್ಲಿ ಸ್ಪಷ್ಟಪಡಿಸಿದ್ದಾರೆ.

ಬಿಜೆಪಿಯ ಹಿರಿಯ ನಾಯಕ ಮತ್ತು ಮಾಜಿ ಉಪಪ್ರಧಾನಿ ಎಲ್.ಕೆ.ಅಡ್ವಾಣಿ ಮತ್ತು ಕೇರಳದ ಮಾಜಿ ಮುಖ್ಯಮಂತ್ರಿ ಮತ್ತು ಒಂದು ಕಾಲದ ಸಿಪಿಎಂ ತಾರಾ ಪ್ರಚಾರಕ, ಶತಾಯುಷಿ ವಿ.ಎಸ್.ಅಚ್ಯುತಾನಂದನ್ ಅವರು ಸಕ್ರಿಯ ರಾಜಕಾರಣದಿಂದ ದೂರ ಇದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ಅಹ್ಮದ್ ಪಟೇಲ್ ಅವರ ಗೈರು ಬಹಳ ಕಾಡುತ್ತಿದೆ. ವಾಸ್ತವವಾಗಿ, ಪಕ್ಷವನ್ನು ಮುನ್ನಡೆಸುತ್ತಿದ್ದವರು ಮತ್ತು ಚುನಾವಣೆಯ ಜವಾಬ್ದಾರಿ ನಿಭಾಯಿಸುತ್ತಿದ್ದವ-ರೇ ಅವರು. ಚಾಣಾಕ್ಷ ರಾಜಕಾರಣಿಯಾಗಿದ್ದ ಅವರು ಪಕ್ಷದಲ್ಲಿನ ಭಿನ್ನಮತಗಳನ್ನು ನಿಭಾಯಿಸುವುದಲ್ಲದೆ ಹಣಕಾಸು ವ್ಯವಹಾರ-ಗಳನ್ನು ಕೂಡ ನೋಡಿಕೊಳ್ಳುತ್ತಿದ್ದರು. ಪಟೇಲ್ 2020ರಲ್ಲಿ ನಿಧನರಾದರು.

ಅದೇ ರೀತಿ ಮೋತಿಲಾಲ್ ವೋರಾ, ಕಾಂಗ್ರೆಸ್‌ನ ಹಣಕಾಸು ವ್ಯವಹಾರಗಳನ್ನು ವರ್ಷಾನುಗಟ್ಟಲೇ ನಿಭಾಯಿಸಿದವರು. ಉತ್ತರ ಭಾರತದ ರಾಜಕಾರಣದಲ್ಲಿನ ಜಟಿಲತೆಗಳನ್ನು ಅರಿತಿದ್ದ ವೋರಾ, 2020ರ ಡಿಸೆಂಬರ್‌ನಲ್ಲಿ ನಿಧನರಾಗುವವರೆಗೂ, ಕಾಂಗ್ರೆಸ್ ವರಿಷ್ಠರಿಗೆ ಸಲಹೆ, ಸೂಚನೆ ನೀಡುತ್ತಿದ್ದರು.

ಇದೇ ರೀತಿ ನಿರ್ಗಮಿಸಿದವರ ಪೈಕಿ ರಾಮ್‌ವಿಲಾಸ್ ಪಾಸ್ವಾನ್ ಕೂಡ ಒಬ್ಬರು. ಚುನಾವಣೆಯ 'ಗಾಳಿ' ಯಾವ ದಿಕ್ಕಿನತ್ತ ಬೀಸುತ್ತಿದೆ ಎನ್ನುವುದನ್ನು ಕಂಡುಕೊಳ್ಳುವುದರಲ್ಲಿ ನಿಪುಣರಾಗಿದ್ದ ಅವರು, ಅದಕ್ಕೆ ತಕ್ಕಂತೆ ತಮ್ಮ ರಾಜಕೀಯ ನಿಲುವುಗಳನ್ನು ಬದಲಿಸಿಕೊಳ್ಳುತ್ತಿದ್ದರು. ಅಕ್ಟೋಬರ್ 2020ರಲ್ಲಿ ಪಾಸ್ವಾನ್ ನಿಧನದ ನಂತರ ಅವರ ಮಗ ಚಿರಾಗ್ ಪಾಸ್ವಾನ್ ಪಕ್ಷದ ಉಸ್ತುವಾರಿಯನ್ನು ವಹಿಸಿಕೊಂಡಿದ್ದಾರೆ.

ಬಿಜೆಪಿಯ ಅರುಣ್ ಜೇಟ್ಲಿ ಅದ್ವಿತೀಯ ಚುನಾವಣಾ ಕಾರ್ಯತಂತ್ರ ನಿಪುಣರಾಗಿದ್ದರು ಮತ್ತು ಸಂಕಥನ ಕಟ್ಟಬಲ್ಲವರಾಗಿದ್ದರು. 2019ರ ಚುನಾವಣೆಯ ಸಮಯದಲ್ಲಿ ಅವರು ಅನಾರೋಗ್ಯದಿಂದಾಗಿ ಕ್ರಿಯಾಶೀಲರಾಗಿರಲಿಲ್ಲ. ಆದರೂ ಪಕ್ಷದ ನಾಯಕರು ಅವರನ್ನು ಆಗಾಗ್ಗೆ ಸಂಪರ್ಕಿಸಿ ಸಲಹೆ ಸೂಚನೆ ಪಡೆಯುತ್ತಿದ್ದರು.

ಪ್ರಸ್ತುತ ಚುನಾವಣಾ ಕಣದಲ್ಲಿ ಕಾಣದಿರುವ ಮತ್ತೊಬ್ಬ ಪ್ರಮುಖ ನಾಯಕನೆಂದರೆ, ಅದು ಸಮಾಜವಾದಿ ಪಕ್ಷದ ಹಿರಿಯ ಮುಖಂಡರಾಗಿದ್ದ ಮುಲಾಯಂ ಸಿಂಗ್ ಯಾದವ್. ದೇಶದ ಹಿಂದಿ ಭಾಷಿಕ ರಾಜ್ಯಗಳಲ್ಲಿ ಪ್ರಭಾವಿಯಾಗಿದ್ದ ಅವರು, ರಾಜಕಾರಣದ ಒಳಸುಳಿಗಳನ್ನು ಕರಗತ ಮಾಡಿಕೊಂಡಿದ್ದ ಮೇಧಾವಿಯಾಗಿದ್ದರು.

2019ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ದೆಹಲಿಯ ಮಾಜಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್, ಕಣದಿಂದ ಹೊರಗುಳಿದಿದ್ದ ಮಾಜಿ ವಿದೇಶಾಂಗ ಸಚಿವೆ ಸುಷ್ಮಾ ಸ್ವರಾಜ್ ಅವರು 2019ರ ಚುನಾವಣೆ ಅಂತ್ಯಗೊಂಡ ಕೆಲವೇ ತಿಂಗಳಲ್ಲಿ ನಿಧನರಾದರು. ❖

ಎಸ್‌ಪಿ ಚುನಾವಣಾ ಪ್ರಣಾಳಿಕೆ ಬಿಡುಗಡೆ

ಲಖನೌ (ಪಿಟಿಐ): ಎಂಎಸ್‌ಪಿಗೆ ಕಾನೂನಿನ ಖಾತರಿ, ಅಗ್ನಿಪಥ ಯೋಜನೆ ರದ್ದುಗೊಳಿಸುವ ಮತ್ತು 2025ರಲ್ಲಿ ಜಾತಿ ಗಣತಿ ನಡೆಸುವ ಭರವಸೆ-ಗಳನ್ನು ಸಮಾಜವಾದಿ ಪಕ್ಷದ (ಎಸ್‌ಪಿ) ಚುನಾವಣಾ ಪ್ರಣಾಳಿಕೆಯಲ್ಲಿ ನೀಡಲಾಗಿದೆ.

'ಜನತಾ ಕಿ ಮಾಂಗ್ ಪತ್ರ- ಹಮಾರಾ ಅಧಿಕಾರ್' (ಜನರ ಬೇಡಿಕೆ ಪತ್ರ-ನಮ್ಮ ಹಕ್ಕು) ಪ್ರಣಾಳಿಕೆಯನ್ನು ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಅವರು ಬುಧವಾರ ಬಿಡುಗಡೆಗೊಳಿಸಿದರು.

ಪಿಡಿಎ (ಹಿಂದುಳಿದವರು, ದಲಿತರು ಹಾಗೂ ಆದಿವಾಸಿಗಳು) ಸರ್ಕಾರದ 20 ಪುಟಗಳ ದಾಖಲೆ ಎಂದು ಅಖಿಲೇಶ್ ಅವರು ಪ್ರಣಾಳಿಕೆಯನ್ನು ಬಣ್ಣಿಸಿದರು. ಎಸ್‌ಪಿಯು 'ಇಂಡಿಯಾದ' ಒಕ್ಕೂಟದ ಜೊತೆಗೆ ಗುರುತಿಸಿಕೊಂಡಿದೆ.

'ಇಂಡಿಯಾ' ಒಕ್ಕೂಟವು ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳಿಗೆ ಮೀಸಲಿಟ್ಟಿರುವ ಸರ್ಕಾರಿ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿಗೊಳಿಸಲು ಜಾತಿ ಗಣತಿ ನಡೆಸಲಾಗುವುದು ಎಂದು ಅಖಿಲೇಶ್ ಹೇಳಿದರು.

ಹಳೆಯ ಪಿಂಚಣಿ ಯೋಜನೆಯನ್ನು ಮತ್ತೆ ಜಾರಿಗೆ ತರಲಾಗುವುದು, 2029ರ ಹೊತ್ತಿಗೆ ಬಡತನ ನಿರ್ಮೂಲನೆ ಮಾಡಲಾಗುವುದು ಮತ್ತು ಖಾಸಗಿ ವಲಯಗಳಲ್ಲೂ ಸಮಾಜದ ಎಲ್ಲಾ ವಿಭಾಗಗಳ ಜನರ ಪ್ರಾತಿನಿಧ್ಯವನ್ನು ಖಾತರಿಪಡಿಸಲಾಗುವುದು ಎಂದೂ ಪ್ರಣಾಳಿಕೆಯಲ್ಲಿ ಭರವಸೆ ನೀಡಲಾಗಿದೆ.

ಇತರ ಭರವಸೆಗಳು

- ರೈತರ ಕೃಷಿ ಸಾಲ ಮನ್ನಾ
- ಉಚಿತ ನೀರಾವರಿ ಸೌಲಭ್ಯ
- ರೈತರ ಆಯೋಗ ರಚನೆ
- ಭೂರಹಿತ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಪ್ರತಿ ತಿಂಗಳು ₹5,000 ಪಿಂಚಣಿ
- ಸರ್ಕಾರಿ ನೌಕರಿಯಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ

ವೆಲ್ಲೂರು, ಮೆಟ್ಟುಪಾಳ್ಯಂನಲ್ಲಿ ರ್‍ಯಾಲಿ • ಕಚ್ಚತೀವು, ಶಕ್ತಿ ಕುರಿತು ಮತ್ತೆ ಪ್ರಸ್ತಾಪ

ಕಾಂಗ್ರೆಸ್, ಡಿಎಂಕೆ ವಿರುದ್ಧ ಪ್ರಧಾನಿ ವಾಗ್ದಾಳಿ

ವೆಲ್ಲೂರು/ಮೆಟ್ಟುಪಾಳ್ಯಂ (ತಮಿಳುನಾಡು) (ಪಿಟಿಐ): ಕಚ್ಚತೀವು ಮತ್ತು 'ಶಕ್ತಿ' ಹೇಳಿಕೆಗಳಿಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷ ಡಿಎಂಕೆ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಬುಧವಾರ ತೀವ್ರ ವಾಗ್ದಾಳಿ ನಡೆಸಿದರು.

ಕಚ್ಚತೀವು ದ್ವೀಪದ ಸಮಸ್ಯೆ ಕುರಿತು ಈ ಎರಡೂ ಪಕ್ಷಗಳು ದೇಶವನ್ನು ಕತ್ತಲೆಯಲ್ಲಿ ಇರಿಸಿವೆ ಎಂದು ಆರೋಪಿಸಿದ ಅವರು, ಡಿಎಂಕೆಯು ಮಹಿಳೆಯರನ್ನು ಕೆಟ್ಟದಾಗಿ ನಡೆಸಿಕೊಂಡಿದೆ ಎಂದು ಪುನರುಚ್ಚರಿಸಿದರು.

ಇದೇ 19ರಂದು ತಮಿಳುನಾಡಿನಲ್ಲಿ ನಡೆಯಲಿರುವ ಲೋಕಸಭೆ ಚುನಾವಣೆ ಪ್ರಯುಕ್ತ ಅವರು ವೆಲ್ಲೂರು ಮತ್ತು ಮೆಟ್ಟುಪಾಳ್ಯಂನಲ್ಲಿ ಚುನಾವಣಾ ರ್‍ಯಾಲಿಯನ್ನು ಉದ್ದೇಶಿಸಿ ಮಾತನಾಡಿದರು.

ಭ್ರಷ್ಟಾಚಾರ ವಿಷಯದಲ್ಲಿ ಡಿಎಂಕೆ ಮೊದಲ ಹಕ್ಕುಸ್ವಾಮ್ಯ ಹೊಂದಿದೆ. ಕುಟುಂಬ ಕೇಂದ್ರಿತ ಈ ಪಕ್ಷವು ತಮಿಳುನಾಡನ್ನು ಲೂಟಿ ಮಾಡುವ ಉದ್ದೇಶ ಹೊಂದಿದೆ ಎಂದು ಆರೋಪಿಸಿದರು.

ಡಿಎಂಕೆ 'ಕುಟುಂಬ ಕಂಪನಿ'ಯಾಗಿದ್ದು, ತನ್ನ ಹಳೆಯ ಮನಸ್ಥಿತಿಯಿಂದ ರಾಜ್ಯದ ಯುವ ಜನರ ಪ್ರಗತಿಯನ್ನು ತಡೆಯುತ್ತಿದೆ. ಅದು ಜನರನ್ನು ಭಾಷೆ, ಪ್ರದೇಶ, ನಂಬಿಕೆ ಮತ್ತು ಜಾತಿಯ ಮೇಲೆ ವಿಭಜಿಸುತ್ತಿದೆ. ಇದು ಜನರಿಗೆ ಗೊತ್ತಾದ ದಿನ ಅವರಿಗೆ ಒಂದು ಮತವೂ ಬರುವುದಿಲ್ಲ ಎಂಬುದು ಡಿಎಂಕೆಗೆ ಗೊತ್ತಿದೆ ಎಂದು ಅವರು ಹೇಳಿದರು.

ಯಾವ ಸಂಪುಟ ಸಭೆಯಲ್ಲಿ ನಿರ್ಧರಿಸಿದ್ದೀರಿ: ಕಚ್ಚತೀವು ದ್ವೀಪವನ್ನು 1974ರಲ್ಲಿ ಶ್ರೀಲಂಕಾಕ್ಕೆ ಬಿಟ್ಟುಕೊಟ್ಟಾಗ ಕೇಂದ್ರದಲ್ಲಿ ಕಾಂಗ್ರೆಸ್ ಮತ್ತು ತಮಿಳುನಾಡಿನಲ್ಲಿ ಡಿಎಂಕೆ ಅಧಿಕಾರದಲ್ಲಿದ್ದವು. ಇಂತಹ ನಿರ್ಧಾರವನ್ನು ಯಾವ ಸಂಪುಟ ಸಭೆಯಲ್ಲಿ ತೆಗೆದುಕೊಳ್ಳಲಾಯಿತು ಮತ್ತು ಅದರಿಂದ ಯಾರಿಗೆ ಪ್ರಯೋಜನವಾಯಿತು ಎಂದು ಪ್ರಶ್ನಿಸಿದ ಮೋದಿ, ಇವುಗಳಿಗೆ ಕಾಂಗ್ರೆಸ್ ಉತ್ತರಿಸಿಲ್ಲ ಎಂದರು.

ಆ ದ್ವೀಪವನ್ನು ಬಿಟ್ಟುಕೊಟ್ಟ ಬಳಿಕ ತಮಿಳುನಾಡಿನ ಭಾರತೀಯ ಮೀನುಗಾರರನ್ನು ಬಂಧಿಸಲಾಯಿತು, ಅವರ ದೋಣಿಗಳನ್ನು ವಶಪಡಿಸಿಕೊಳ್ಳಲಾಯಿತು. ಆದರೆ, ಕಾಂಗ್ರೆಸ್ ಮತ್ತು ಡಿಎಂಕೆ ನಕಲಿ ಸಹಾನುಭೂತಿ ತೋರಿಸುತ್ತಿವೆ ಎಂದು ಮೋದಿ ಆರೋಪಿಸಿದರು. ಎನ್‌ಡಿಎ ಸರ್ಕಾರವು, ಶ್ರೀಲಂಕಾದಲ್ಲಿ ಗಲ್ಲು ಶಿಕ್ಷೆಗೆ ಗುರಿಯಾಗಿದ್ದ ಐವರು ಮೀನುಗಾರರನ್ನು ರಕ್ಷಿಸಿದೆ ಎಂದರು.

ರಾಹುಲ್ ವಿರುದ್ಧ ಟೀಕೆ: 'ರಾಜಕುಮಾರ ರಾಹುಲ್ ಗಾಂಧಿ ಅವರು ಹಿಂದೂ ನಂಬಿಕೆಯ ಶಕ್ತಿಯನ್ನು ನಾಶಪಡಿಸುವ ಮಾತನಾಡಿದ್ದಾರೆ' ಎಂದೂ ಪ್ರಧಾನಿ ಟೀಕಿಸಿದರು. 'ಡಿಎಂಕೆ ಮನಸ್ಥಿತಿಯೂ ಇದೇ ಆಗಿದೆ. ಅವರೂ ಸನಾತನ ಧರ್ಮದ ಬಗ್ಗೆ ಕೆಟ್ಟದಾಗಿ ಮಾತನಾಡುತ್ತಾರೆ. ರಾಮ ಮಂದಿರ ಉದ್ಘಾಟನೆ ಸಮಾರಂಭವನ್ನು (ಅಯೋಧ್ಯೆಯಲ್ಲಿ) ಬಹಿಷ್ಕರಿಸಿದ್ದಾರೆ' ಎಂದು ಟೀಕಿಸಿದರು.

'ಇಂಡಿಯಾ' ಮೈತ್ರಿಕೂಟದವರು ಮಹಿಳೆಯರನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾರೆ. ಜಯಲಲಿತಾ ಅವರು ಬದುಕಿದ್ದಾಗ ಡಿಎಂಕೆ ಅವರನ್ನು ಹೇಗೆ ನಡೆಸಿಕೊಂಡಿತು ಎಂಬುದು ಎಲ್ಲರಿಗೂ ಗೊತ್ತಿದೆ' ಎಂದು ಹೇಳಿದರು.

'ಬಿಜೆಪಿ ಮತ್ತು ಎನ್‌ಡಿಎಗೆ ದೊರೆಯುವ ನಿಮ್ಮ ಆಶೀರ್ವಾದವು ಸನಾತನ ಶಕ್ತಿ ಮತ್ತು ಮಹಿಳೆಯರ ಗೌರವವನ್ನು ಖಚಿತಪಡಿಸುತ್ತದೆ' ಎಂದರು.

ಮರಳು ಅಕ್ರಮ ಸಾಗಣೆದಾರರಿಂದ ತಮಿಳುನಾಡಿಗೆ ₹4,600 ಕೋಟಿ ನಷ್ಟ-ವಾಗಿರುವುದು ಗೊತ್ತಾಗಿದೆ. ಡಿಎಂಕೆಯು ರಾಜ್ಯದಲ್ಲಿ ಯುವ ಸಮುದಾಯದ ಭವಿಷ್ಯ ರೂಪಿಸುವ ಬದಲಿಗೆ ಮಾದಕ ವ್ಯಸನಿಗಳನ್ನಾಗಿಸುತ್ತಿದೆ. ಇತ್ತೀಚೆಗೆ ಎನ್‌ಸಿಬಿ ಬಂಧಿಸಿದ ಮಾದಕ ವ್ಯಸನಿಗಳು ಯಾವ ಕುಟುಂಬದ ಜತೆ ನಂಟು ಹೊಂದಿದ್ದಾರೆ ಎಂಬುದು ಗೊತ್ತಾಗಬೇಕಿದ್ದು, ತಮಿಳುನಾಡಿನ ಜನರು ಉತ್ತರ ಹುಡುಕುತ್ತಾರೆ ಎಂದು ಪ್ರಧಾನಿ ಹೇಳಿದರು.



ವೆಲ್ಲೂರಿನಲ್ಲಿ ಬುಧವಾರ ನಡೆದ ಬಿಜೆಪಿಯ ಚುನಾವಣಾ ರ್‍ಯಾಲಿಯಲ್ಲಿ ಭಾಗವಹಿಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸನ್ಮಾನಿಸಲಾಯಿತು –ಪಿಟಿಐ ಚಿತ್ರ

'ಮತ ಕೇಳಲು ಮಾತ್ರ ಬರುವ ಮೋದಿ'

ಮಧುರೈ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಚುನಾವಣೆಯ ಸಮಯದಲ್ಲಿ ಮಾತ್ರ ತಮಿಳುನಾಡಿಗೆ ಭೇಟಿ ನೀಡುತ್ತಾರೆ ಎಂದು ಆರೋಪಿಸಿದ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ವಿರೋಧ ಪಕ್ಷಗಳ ಆಡಳಿತವಿರುವ ರಾಜ್ಯಗಳನ್ನು ಗುರಿ ಮಾಡಿಕೊಳ್ಳಲು ಅವರು ಕೇಂದ್ರೀಯ ಸಂಸ್ಥೆಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಹೇಳಿದರು.

ಡಿಎಂಕೆ ಅಭ್ಯರ್ಥಿ ಪರ ಪ್ರಚಾರ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, 'ಚುನಾವಣಾ ಸಮಯದಲ್ಲಿ ಭೇಟಿ ನೀಡಲು ಪ್ರಧಾನಿಯವರಿಗೆ ತಮಿಳುನಾಡು ಪಕ್ಷಿಧಾಮವೇ, ಅಷ್ಟೊಂದು ಹಗೆತನವೇಕೆ, ತಮಿಳರು ದೇಶದ ಪ್ರಜೆಗಳಲ್ಲವೇ' ಎಂದು ಪ್ರಶ್ನಿಸಿದರು. 'ಇದು ಮೋದಿಯ ಭಾರತ' ಎಂದು ಹೇಳಿದರು.

ಚುನಾವಣಾ ಕಣದಲ್ಲಿ...

2ನೇ ಹಂತ: ಕಣದಲ್ಲಿ 1,210 ಅಭ್ಯರ್ಥಿಗಳು

ನವದೆಹಲಿ (ಪಿಟಿಐ): ಏಪ್ರಿಲ್ 26ರಂದು ಮತದಾನ ನಡೆಯಲಿರುವ ಲೋಕಸಭಾ ಚುನಾವಣೆಯ ಎರಡನೇ ಹಂತದಲ್ಲಿ 1,210 ಅಭ್ಯರ್ಥಿಗಳು ಕಣದಲ್ಲಿ ಉಳಿದಿದ್ದಾರೆ ಎಂದು ಚುನಾವಣಾ ಆಯೋಗದ ಅಧಿಕಾರಿಗಳು ತಿಳಿಸಿದ್ದಾರೆ.



ಕೇರಳದ 20 ಲೋಕಸಭಾ ಕ್ಷೇತ್ರಗಳಿಗೆ 500 ಮಂದಿ ನಾಮಪತ್ರ ಸಲ್ಲಿಸಿದ್ದು, ಕರ್ನಾಟಕದ 14 ಕ್ಷೇತ್ರಗಳಿಗೆ 491 ಮಂದಿ ನಾಮಪತ್ರ ಸಲ್ಲಿಸಿದ್ದಾರೆ ಎಂದು ವಿವರಿಸಿದ್ದಾರೆ.

ಎರಡನೇ ಹಂತದಲ್ಲಿ 12 ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶದ 88 ಕ್ಷೇತ್ರಗಳಿಗೆ ಒಟ್ಟು 2,633 ನಾಮಪತ್ರಗಳು ಸಲ್ಲಿಕೆಯಾಗಿದ್ದವು. ಈ ಪೈಕಿ 1,428 ನಾಮಪತ್ರಗಳು ಸ್ವೀಕೃತವಾಗಿದ್ದವು. ಇದರಲ್ಲಿ ಕೆಲವರು ನಾಮಪತ್ರ ಹಿಂತೆಗೆದುಕೊಂಡಿದ್ದಾರೆ ಎಂದು ಹೇಳಿದರು.

ಬಿಜೆಪಿ: 10ನೇ ಪಟ್ಟಿ ಬಿಡುಗಡೆ

ನವದೆಹಲಿ (ಪಿಟಿಐ): ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ 10ನೇ ಪಟ್ಟಿಯನ್ನು ಬಿಜೆಪಿ ಬುಧವಾರ ಬಿಡುಗಡೆ ಮಾಡಿದೆ. ಮಾಜಿ ಪ್ರಧಾನಿ ಚಂದ್ರಶೇಖರ್ ಅವರ ಪುತ್ರ ನೀರಜ್ ಶೇಖರ್ ಅವರನ್ನು ಉತ್ತರ ಪ್ರದೇಶದ ಬಲಿಯಾ ಕ್ಷೇತ್ರದಿಂದ ಕಣಕ್ಕಿಳಿಸಲಾಗಿದೆ.

ಪಶ್ಚಿಮ ಬಂಗಾಳದ ಅಸನ್ಸೋಲ್ ಕ್ಷೇತ್ರದಿಂದ ಎಸ್.ಎಸ್. ಅಹ್ಲುವಾಲಿಯ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. ಅಹ್ಲುವಾಲಿಯ ಅವರು ಈಗ ಬರ್ಧಮಾನ್-ದುರ್ಗಾಪುರ ಕ್ಷೇತ್ರದ ಸಂಸದರಾಗಿದ್ದಾರೆ.

ಹತ್ತನೇ ಪಟ್ಟಿಯಲ್ಲಿ ಉತ್ತರ ಪ್ರದೇಶದ ಏಳು ಕ್ಷೇತ್ರಗಳಿಗೆ, ಪಶ್ಚಿಮ ಬಂಗಾಳ ಮತ್ತು ಚಂಡೀಗಢದ ತಲಾ ಒಂದು ಕ್ಷೇತ್ರಕ್ಕೆ ಅಭ್ಯರ್ಥಿಗಳನ್ನು ಘೋಷಿಸಲಾಗಿದೆ. ಉತ್ತರ ಪ್ರದೇಶದ ಗಾಜಿಪುರ ಕ್ಷೇತ್ರದಿಂದ ಪಾರಸ್‌ನಾಥ್ ರಾಯ್ ಅವರನ್ನು ಕಣಕ್ಕಿಳಿಸಲಾಗಿದೆ.

ಇವಿಎಂ ಕುರಿತು ಅಪಪ್ರಚಾರ: 12 ಪ್ರಕರಣ

ತಿರುವನಂತಪುರ (ಪಿಟಿಐ): ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಕುರಿತು ಸುಳ್ಳು ಸುದ್ದಿ ಹರಡುತ್ತಿದ್ದ ಆರೋಪದಲ್ಲಿ ರಾಜ್ಯದಾದ್ಯಂತ ಒಟ್ಟು 12 ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂದು ಕೇರಳ ಪೊಲೀಸರು ತಿಳಿಸಿದ್ದಾರೆ.

ಮಲಪ್ಪುರ ಜಿಲ್ಲೆ ಮತ್ತು ಎರ್ನಾಕುಳಂ, ತ್ರಿಶ್ಶೂರ್ ನಗರಗಳಲ್ಲಿ ತಲಾ ಎರಡು ಪ್ರಕರಣಗಳು, ತಿರುವನಂತಪುರ ಗ್ರಾಮಾಂತರ, ಕೊಲ್ಲಂ ನಗರ, ಪತ್ತನಂತಿಟ್ಟ, ಆಲಪ್ಪುಳ, ಪಾಲಕ್ಕಾಡ್ ಮತ್ತು ಇಡುಕ್ಕಿ ಜಿಲ್ಲೆಗಳಲ್ಲಿ ತಲಾ ಒಂದೊಂದು ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ಫೇಸ್‌ಬುಕ್ ಪೋಸ್ಟ್ ಮೂಲಕ ವಿವರಿಸಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ನಕಲಿ ಇವಿಎಂಗಳನ್ನು ಬಳಸ-ಲಾಗುತ್ತಿದೆ ಎಂಬ ಸುಳ್ಳುಸುದ್ದಿಯನ್ನು ಪ್ರಚಾರ ಮಾಡಿದ್ದು, ಸಾಮಾಜಿಕ ಮಾಧ್ಯಮಗಳ ಮೇಲೆ ನಿಗಾ ವಹಿಸಲಾಗಿದೆ ಎಂದು ಹೇಳಿದ್ದಾರೆ.






ಜಾಗೃತಿ

ಲೋಕಸಭಾ ಚುನಾವಣೆಗಾಗಿ ಮತದಾನದ ಬಗ್ಗೆ ಜಾಗೃತಿ ಮೂಡಿಸಲು ಬುಧವಾರ ಭೋಪಾಲ್‌ನಲ್ಲಿ ಬೈಸಿಕಲ್ ರ್‍ಯಾಲಿ ನಡೆಸಿದ ನಂತರ ಪ್ರತಿಜ್ಞೆ ಸ್ವೀಕರಿಸಲಾಯಿತು -ಪಿಟಿಐ ಚಿತ್ರ

3 ಬಾರಿ ಮಗಳನ್ನು ಗೆಲ್ಲಿಸಿದ್ದೀರಿ, ಈಗ ಸೊಸೆಯನ್ನು ಗೆಲ್ಲಿಸಿ: ಅಜಿತ್ ಪವಾರ್

ಪುಣೆ(ಪಿಟಿಐ): 'ಶರದ್ ಪವಾರ್ ಅವರ ಮಗಳನ್ನು ಮೂರು ಬಾರಿ ಗೆಲ್ಲಿಸಿದ್ದೀರಿ. ಈ ಬಾರಿ ಅವರ ಸೊಸೆಯನ್ನು ಗೆಲ್ಲಿಸಿ...'

–ಹೀಗೆ ಚುನಾವಣಾ ಪ್ರಚಾರ ನಡೆಸಿದವರು ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್. ಬಾರಾಮತಿ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ತಮ್ಮ ಪತ್ನಿ ಸುನೇತ್ರಾ ಪವಾರ್ ಪರವಾಗಿ ಅಜಿತ್ ಬುಧವಾರ ಮತ ಯಾಚನೆ ಮಾಡಿದರು.



ಬಾರಾಮತಿ ಲೋಕಸಭಾ ಕ್ಷೇತ್ರದಿಂದ ಎನ್‌ಸಿಪಿಯ (ಶರದ್ ಪವಾರ್ ಬಣ) ಅಭ್ಯರ್ಥಿಯಾಗಿ ಸುಪ್ರಿಯಾ ಸುಳೆ ಸ್ಪರ್ಧಿಸಿದ್ದಾರೆ. ಬಾರಾಮತಿ ಕ್ಷೇತ್ರವು ಪವಾರ್ ಕುಟುಂಬದ ಭದ್ರಕೋಟೆ ಎಂದೇ ಹೆಸರಾಗಿದೆ. ಶರದ್ ಪವಾರ್ ಮಗಳು ಸುಪ್ರಿಯಾ ಸುಳೆ ಮೂರು ಬಾರಿ ಇಲ್ಲಿಂದ ಸಂಸತ್‌ಗೆ ಆಯ್ಕೆಯಾ-ಗಿದ್ದಾರೆ.

ಶರದ್ ಪವಾರ್ ಅವರೊಂದಿಗೆ ಹಿಂದೆ ಎನ್‌ಸಿಪಿಯಲ್ಲಿದ್ದ ಅವರ ಸಹೋದರನ ಮಗ ಅಜಿತ್ ಪವಾರ್ ಅವರು ಏಕನಾಥ ಶಿಂದೆ ಜತೆ ಸೇರಿ, ಈಗ ಉಪಮುಖ್ಯಮಂತ್ರಿ ಆಗಿದ್ದಾರೆ. ಈ ಬಾರಿ ಬಾರಾಮತಿ ಕ್ಷೇತ್ರದಲ್ಲಿ ಬಿಜೆಪಿ ಬೆಂಬಲಿತ ಎನ್‌ಸಿಪಿ ಅಭ್ಯರ್ಥಿಯಾಗಿ ಅಜಿತ್ ಅವರ ಪತ್ನಿ ಸುನೇತ್ರಾ ಪವಾರ್ ಸ್ಪರ್ಧಿಸಿದ್ದಾರೆ. ಹೀಗಾಗಿ ಕಣದಲ್ಲಿ ಪವಾರ್ ಕುಟುಂಬದ ಸದಸ್ಯರ ನಡುವೆಯೇ ಜಿದ್ದಾಜಿದ್ದಿ ಏರ್ಪಟ್ಟಿದೆ.

ಕ್ಷೇತ್ರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅಜಿತ್, 'ಬಹಳ ಕಾಲದಿಂದಲೂ ನೀವು ಪವಾರ್ ಅವರ ಜತೆಗಿದ್ದೀರಿ. ಈಗ ಪವಾರ್ ಕುಟುಂಬದವರೇ ಇಬ್ಬರು ಕಣದಲ್ಲಿರುವುದರಿಂದ ಏನು ಮಾಡಬೇಕೆಂದು ನಿಮಗೆ ಗೊಂದಲವಾಗಿರಬಹುದು. ಯಾರಿಗೆ ಮತ ಹಾಕಬೇಕು ಎಂದು ನಿಮಗೆ ಯೋಚನೆಯಾಗಿರಬೇಕು. ಇಷ್ಟು ದಿನ ಪವಾರ್ ಜತೆಗಿದ್ದ ನೀವು ಈಗ ಇನ್ನೊಬ್ಬ ಪವಾರ್‌ಗೆ (ಸುನೇತ್ರಾ ಪವಾರ್) ಮತ ಹಾಕಿ' ಎಂದು ಹೇಳಿದರು.

'1991ರ ಚುನಾವಣೆಯನ್ನು ನೆನಪಿಸಿಕೊಳ್ಳಿ. ಆಗ ನೀವು ಮಗನನ್ನು (ಅಂದರೆ ನನ್ನನ್ನು) ಗೆಲ್ಲಿಸಿದ್ದೀರಿ. ನಂತರ ಅಪ್ಪನನ್ನು, ಅಂದರೆ ಪವಾರ್ ಸಾಹೇಬರನ್ನು, ಗೆಲ್ಲಿಸಿದ್ದೀರಿ. ಅದಾದ ಮೇಲೆ ಮಗಳನ್ನು, ಅಂದರೆ ಸುಪ್ರಿಯಾ ಸುಳೆ ಅವರನ್ನು ಮೂರು ಬಾರಿ ಆಯ್ಕೆ ಮಾಡಿದ್ದೀರಿ. ಈಗ ಸೊಸೆ (ಸುನೇತ್ರಾ ಪವಾರ್) ಅವರನ್ನು ಗೆಲ್ಲಿಸಿ. ಆಗ ಎಲ್ಲವೂ ಸಮತೋಲನವಾಗುತ್ತದೆ' ಎಂದು ಹೇಳಿದರು.

ಮತಗಟ್ಟೆಗಳಲ್ಲಿ ಏರ್ ಕೂಲರ್

ಚಂಡೀಗಢ (ಪಿಟಿಐ): ಲೋಕಸಭೆ ಚುನಾವಣೆ ವೇಳೆಗೆ ಪಂಜಾಬ್‌ನಲ್ಲಿ ವಿಪರೀತ ತಾಪಮಾನ ಇರುವ ಮುನ್ಸೂಚನೆ ಇರುವುದರಿಂದ ಮತಗಟ್ಟೆಗಳಲ್ಲಿ ಏರ್ ಕೂಲರ್, ಫ್ಯಾನ್ ಅಳವಡಿಸಲಾಗುತ್ತದೆ.

ಅಲ್ಲದೇ ಮತದಾರರಿಗೆ ನೀರು, ತಂಪು ಪಾನೀಯ ಹಾಗೂ ಇತರ ಸೌಲಭ್ಯಗಳನ್ನು ಕಲ್ಪಿಸಲಾಗುತ್ತದೆ. ಈ ಕುರಿತು ಜಿಲ್ಲಾಧಿಕಾರಿಗಳು ಸಂಬಂಧಪಟ್ಟವರಿಗೆ ಸೂಚನೆ ನೀಡಿದ್ದಾರೆ ಎಂದು ಪಂಜಾಬ್‌ನ ಮುಖ್ಯ ಚುನಾವಣಾಧಿಕಾರಿ ಸಿಬಿನ್ ಸಿ. ಅವರು ಮಂಗಳವಾರ ಹೇಳಿದ್ದಾರೆ.

ದೇಣಿಗೆ ಸಂಗ್ರಹಕ್ಕಾಗಿ ಟಿಡಿಪಿ ವೆಬ್‌ಸೈಟ್

ಅಮರಾವತಿ (ಪಿಟಿಐ): ಆಂಧ್ರ ಪ್ರದೇಶ ರಾಜ್ಯಕ್ಕೆ ತೆಲುಗು ದೇಶಂ (ಟಿಡಿಪಿ) ಪಕ್ಷದ ಗೆಲುವು ಮುಖ್ಯ ಎಂದು ಪ್ರತಿಪಾದಿಸಿರುವ ಟಿಡಿಪಿ ಮುಖ್ಯಸ್ಥ ಎನ್.ಚಂದ್ರಬಾಬು ನಾಯ್ಡು, ರಾಜ್ಯದ ಜನರು ಪಕ್ಷಕ್ಕೆ ದೇಣಿಗೆ ನೀಡಬೇಕೆಂದು ಕೋರಿದ್ದು ಇದಕ್ಕಾಗಿ ವೆಬ್‌ಸೈಟ್ ಆರಂಭಿಸಿದ್ದಾರೆ.

ಈ ಬಗ್ಗೆ 'ಎಕ್ಸ್' ವೇದಿಕೆಯಲ್ಲಿ ಪೋಸ್ಟ್ ಮಾಡಿರುವ ಅವರು, 'ರಾಜ್ಯದ ಬೆಳವಣಿಗೆಗಾಗಿ, ನಮ್ಮ ಮಕ್ಕಳ ಭವಿಷ್ಯಕ್ಕಾಗಿ ಮತ್ತು ತೆಲುಗು ದೇಶಂಗಾಗಿ ನಾವು ವೆಬ್‌ಸೈಟ್ ಹೊರತಂದಿದ್ದು, ಇದರ ಮೂಲಕ ನೀವು ಸುಲಭವಾಗಿ ದೇಣಿಗೆ ನೀಡಬಹುದಾಗಿದೆ' ಎಂದು ತಿಳಿಸಿದ್ದಾರೆ.

ನಾಯ್ಡು ಅವರು ಪಕ್ಷಕ್ಕೆ ₹99,999 ದೇಣಿಗೆ ನೀಡಿದ್ದಾರೆ. ರಾಜ್ಯವನ್ನು ಪುನರ್ ನಿರ್ಮಿಸಲು ಶ್ರಮಿಸುತ್ತಿರುವ ಪಕ್ಷಕ್ಕೆ ಇದು ಬಲ ನೀಡುತ್ತದೆ ಎಂದು ಅವರು ಹೇಳಿದ್ದಾರೆ.

ಚುಟುಕು

ಲಕ್ಷ ವಿದ್ಯಾರ್ಥಿಗಳಿಂದ ಪತ್ರ ಅಭಿಯಾನ

ಅಸ್ಸಾಂ (ಪಿಟಿಐ): ಲೋಕಸಭೆ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಚಲಾಯಿಸುವಂತೆ ಅಸ್ಸಾಂನ ಕಾಮರೂಪ ಜಿಲ್ಲೆಯ ಒಂದು ಲಕ್ಷ ವಿದ್ಯಾರ್ಥಿಗಳು ತಮ್ಮ ಪೋಷಕರಿಗೆ ಪತ್ರ ಬರೆದಿದ್ದಾರೆ.

ಮೇ 7ರಂದು ನಡೆಯಲಿರುವ ಮೂರನೇ ಹಂತದ ಚುನಾವಣೆಯಲ್ಲಿ ಶೇಕಡ 100ರಷ್ಟು ಮತದಾನದ ಗುರಿ ಹೊಂದಿರುವ ಸ್ವೀಪ್ ಸಮಿತಿ, 'ಮತದಾನಕ್ಕಾಗಿ ಪೋಷಕರನ್ನು ಪ್ರೇರೇಪಿಸಿ' ಎಂಬ ಅಭಿಯಾನವನ್ನು ನಡೆಸುತ್ತಿದೆ. 526 ಶಿಕ್ಷಣ ಸಂಸ್ಥೆಗಳಲ್ಲಿನ 8ರಿಂದ ದ್ವಿತೀಯ ಪಿಯುಸಿವರೆಗಿನ 1 ಲಕ್ಷ ವಿದ್ಯಾರ್ಥಿಗಳು ಅಭಿಯಾನದಲ್ಲಿ ಭಾಗಿಯಾಗಿದ್ದಾರೆ.

'ಮತದಾನ ಮಾಡುವಂತೆ ಪೋಷಕರನ್ನು ಮಕ್ಕಳು ಒತ್ತಾಯಿಸಿದರೆ ಅದು ಭಾವನಾತ್ಮಕವಾಗಿ ಪರಿಣಾಮ ಬೀರುತ್ತದೆ ಎಂಬ ನಂಬಿಕೆಯಿದೆ ಮತ್ತು ವಯಸ್ಕರು ಮುಂದಿನ ಪೀಳಿಗೆಗೆ ಉತ್ತರದಾಯಿಗಳಾಗಿರುತ್ತಾರೆ' ಎಂದು ಕಾಮರೂಪ ಜಿಲ್ಲಾಧಿಕಾರಿ ಕೀರ್ತಿ ಜಲ್ಲಿ ತಿಳಿಸಿದ್ದಾರೆ.

'ಅಂಚೆ ಇಲಾಖೆಯ ಸಹಕಾರದೊಂದಿಗೆ ಅಭಿಯಾನ ನಡೆಸಲಾಗಿದ್ದು, 15 ದಿನಗಳೊಳಗಾಗಿ ಎಲ್ಲ ಪೋಷಕರಿಗೆ ಪತ್ರ ತಲುಪಲಿದೆ. ಪತ್ರ ತಲುಪಿದ ಬಳಿಕ ವಿದ್ಯಾರ್ಥಿಗಳು ತಮ್ಮ ಪೋಷಕರೊಂದಿಗೆ ಆ ಪತ್ರವನ್ನು ಹಿಡಿದುಕೊಂಡು ಸೆಲ್ಫಿ ತೆಗೆದು ಕಳುಹಿಸುವಂತೆ ಪ್ರೇರೇಪಿಸಲಾಗಿದೆ' ಎಂದು ತಿಳಿಸಿದರು.

'ಒಂದು ಲಕ್ಷ ಮನೆಗಳನ್ನು ಗುರಿಯಾಗಿಸಿಕೊಂಡು, ಕನಿಷ್ಠ 7 ಲಕ್ಷ ಜನರನ್ನು ಅಂದರೆ ಶೇಕಡ 90ರಷ್ಟು ಮತದಾರರನ್ನು ತಲುಪುವ ಉದ್ದೇಶವನ್ನು ಹೊಂದಲಾಗಿದೆ' ಎಂದು ಸ್ವೀಪ್ ಘಟಕದ ಉಸ್ತುವಾರಿ ಸುಶಾಂತ ಕುಮಾರ್ ದತ್ತ ಮಾಹಿತಿ ನೀಡಿದ್ದಾರೆ.

ಜಿಗಿ–ನೆಗೆದಾಟ

ಕಾಂಗ್ರೆಸ್ ಮುಖಂಡ ಬಿಜೆಪಿಗೆ

ಜೈಪುರ (ಪಿಟಿಐ): ರಾಜಸ್ಥಾನದ ಕಾಂಗ್ರೆಸ್ ಖಜಾಂಚಿ ಸೀತಾರಾಮ್ ಅಗರ್‌ವಾಲ್ ಅವರು ಬುಧವಾರ ಬಿಜೆಪಿಗೆ ಸೇರ್ಪಡೆಗೊಂಡರು.

ಸೀತಾರಾಮ್ ಅವರು ಕಳೆದ ವಿಧಾನಸಭಾ ಚುನಾವಣೆಯಲ್ಲಿ ವಿದ್ಯಾಧರ್ ನಗರ್ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ದಿವ್ಯಾ ಕುಮಾರಿ ಅವರ ವಿರುದ್ಧ ಸ್ಪರ್ಧಿಸಿ ಸೋತಿದ್ದರು.

ಉಪಮುಖ್ಯಮಂತ್ರಿ ದಿವ್ಯಾ ಕುಮಾರಿ ಹಾಗೂ ಇತರ ಮುಖಂಡರ ಸಮ್ಮುಖದಲ್ಲಿ ಸೀತಾರಾಮ್ ಅವರು ಪಕ್ಷಕ್ಕೆ ಸೇರಿದರು.

ಎಂಥಾ ಮಾತು!



ಭಾರತದ ಪ್ರಜಾಪ್ರಭುತ್ವವು ದೊಡ್ಡ ಸವಾಲನ್ನು ಎದುರಿಸುತ್ತಿದ್ದು, ಬಿಜೆಪಿಯು ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ 2024ರ ಲೋಕಸಭಾ ಚುನಾವಣೆಯು ಕೊನೆಯ ಚುನಾವಣೆ ಎಂಬುದು ಸಾಬೀತಾಗಲಿದೆ. ಬಿಜೆಪಿಯು ಸಂವಿಧಾನವನ್ನು ನಾಶ ಮಾಡಲು ಹವಣಿಸುತ್ತಿದೆ. ಎನ್‌ಡಿಎ ಸರ್ಕಾರದ ಹತ್ತು ವರ್ಷಗಳ ಆಡಳಿತದಲ್ಲಿ ಅನ್ಯಾಯ, ಅರಾಜಕತೆ ಮತ್ತು ದ್ವೇಷ ತಾಂಡವ ವಾಡುತ್ತಿದ್ದು, ಈ ಕಾರಣಕ್ಕಾಗಿಯೇ ಇತಿಹಾಸದಲ್ಲಿ ದಾಖಲಾಗಲಿದೆ. ಕೇಂದ್ರ ಸರ್ಕಾರವು ಮಹಿಳೆಯರು, ಯುವಕರು, ವ್ಯಾಪಾರಿಗಳು ಮತ್ತು ರೈತರಿಗೆ ಮೋಸ ಮಾಡುತ್ತಿದೆ


ಮುಕುಲ್ ವಾಸ್ನಿಕ್, ಕಾಂಗ್ರೆಸ್ ಮುಖಂಡ



ಬಹುಪತ್ನಿತ್ವ, ಬಾಲ್ಯ ವಿವಾಹ ಸೇರಿದಂತೆ ಮಿಯಾ ಸಮುದಾಯಕ್ಕೆ ಸಂಬಂಧಿಸಿರುವ ವಿಚಾರಗಳು ಅಸ್ಸಾಂನಲ್ಲಿ ಲೋಕಸಭಾ ಚುನಾವಣೆಯ ವಿಷಯಗಳಲ್ಲ. ಅಲ್ಪಸಂಖ್ಯಾತ ಸಮುದಾಯದವರ ಸಾಮಾಜಿಕ ಪರಿವರ್ತನೆಗಾಗಿ ಇಂತಹ ವಿಚಾರಗಳನ್ನು ಮುನ್ನೆಲೆಗೆ ತರುತ್ತೇನೆಯೇ ಹೊರತು ಅವರ ಮತಗಳಿಗಾಗಿ ಅಲ್ಲ. ನಾನು ಅವರಿರುವ ಪ್ರದೇಶಗಳಿಗೆ ಭೇಟಿ ನೀಡುತ್ತೇನೆ. ಆದರೆ ಮತಗಳ ಬಗ್ಗೆ ಚರ್ಚಿಸುವುದಿಲ್ಲ. ಅವರ ಅಭಿವೃದ್ಧಿಗಾಗಿ ಶ್ರಮಿಸುತ್ತೇನೆ

ಹಿಮಂತ ಬಿಸ್ವ ಶರ್ಮಾ, ಅಸ್ಸಾಂ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ



ಒಡಿಶಾದ 'ರೇಷ್ಮೆ ನಗರಿ' ಎಂದೇ ಪ್ರಸಿದ್ಧವಾಗಿ-ರುವ ಬೆರ್ಹಾಂಪುರದ ಲೋಕಸಭಾ ಕ್ಷೇತ್ರವು ಈ ಬಾರಿ ಪಕ್ಷಾಂತರಿಗಳ ನಡುವಿನ ಹೋರಾಟಕ್ಕೆ ಸಾಕ್ಷಿಯಾಗಲಿದೆ. ಈಚೆಗೆ ಬಿಜೆಪಿ ತೊರೆದು ಪಕ್ಷಕ್ಕೆ ಸೇರಿದ್ದ ಭೃಗು ಬಕ್ಷಿ ಪಾತ್ರಾ ಅವರನ್ನು ಬಿಜು ಜನತಾ ದಳವು (ಬಿಜೆಡಿ) ಕಣಕ್ಕಿಳಿಸಿದೆ. ಭೃಗು ಅವರು ಬಿಜೆಪಿಯ ಉಪಾಧ್ಯಕ್ಷರಾಗಿದ್ದರು. ಭೃಗು ಅವರ ವಿರುದ್ಧ ಸೆಣಸಲು ಬಿಜೆಪಿಯು, ಬಿಜೆಡಿಯಿಂದ ಉಚ್ಚಾಟನೆಗೊಂಡಿರುವ ಶಾಸಕ ಪ್ರದೀಪ್ ಕುಮಾರ್ ಪಾಣಿಗ್ರಾಹಿ ಅವರನ್ನು ಅಖಾಡಕ್ಕಿಳಿಸಿದೆ. ಕಾಂಗ್ರೆಸ್ ಪಕ್ಷವು ರಶ್ಮಿ ರಂಜನ್ ಪಟ್ನಾಯಕ್ ಅವರನ್ನು ಕಣಕ್ಕೆ ಇಳಿಸಿದೆ. 2019ರ ಚುನಾಣೆಯಲ್ಲಿ ಈ ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಿಜೆಡಿಯ ಚಂದ್ರಶೇಖರ ಸಾಹು ಅವರು 94,844 ಮತಗಳ ಅಂತರದಿಂದ ಬಿಜೆಪಿಯ ಭೃಗು ಬಕ್ಷಿ ಪಾತ್ರಾ ಅವರನ್ನು ಸೋಲಿಸಿದ್ದರು. ಪಿ.ವಿ.ನರಸಿಂಹ ರಾವ್ ಅವರು ಪ್ರಧಾನಿಯಾಗಿದ್ದ ಕಾಲದಲ್ಲಿ ಈ ಕ್ಷೇತ್ರವು ಕಾಂಗ್ರೆಸ್‌ನ ಭದ್ರಕೋಟೆ-ಯಾಗಿತ್ತು. ಆದರೆ 2009ರಿಂದ ಇದು ಬಿಜೆಡಿಯ ಬಿಗಿಮುಷ್ಟಿಯಲ್ಲಿದೆ. ಬಿಜೆಪಿಯು ಕಣಕ್ಕಿಳಿಸಿರುವ ಪ್ರದೀಪ್ ಕುಮಾರ್ ಅವರು ಒಂದು ಕಾಲದಲ್ಲಿ ಬಿಜೆಡಿ ಮುಖ್ಯಸ್ಥ ನವೀನ್ ಪಟ್ನಾಯಕ್ ಅವರ ಆಪ್ತರಲ್ಲಿ ಒಬ್ಬರಾಗಿದ್ದರು. ಪ್ರದೀಪ್ ಅವರನ್ನು ಭ್ರಷ್ಟಾಚಾರದ ಆರೋಪದಲ್ಲಿ ಪೊಲೀಸರು ಬಂಧಿಸಿದ್ದರು. ಬಳಿಕ 'ಜನ ವಿರೋಧಿ ಚಟುವಟಿಕೆ' ಆರೋಪದಲ್ಲಿ ಅವರನ್ನು ಬಿಜೆಡಿಯಿಂದ ಉಚ್ಚಾಟಿಸಲಾಗಿತ್ತು. ಎರಡು ತಿಂಗಳ ಹಿಂದೆಯಷ್ಟೆ ಅವರು ಬಿಜೆಪಿಗೆ ಸೇರ್ಪಡೆಯಾಗಿದ್ದಾರೆ. ಗೋಪಾಲ್‌ಪುರ ಕ್ಷೇತ್ರದಿಂದ ಪ್ರದೀಪ್ ಅವರು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು.

ಮುಖಾಮುಖಿ

ತಿರುನೆಲ್ವೇಲಿ (ತಮಿಳುನಾಡು)



ನೈನಾರ್ ನಾಗೇಂದ್ರನ್ (ಬಿಜೆಪಿ)

ತಮಿಳುನಾಡಿನ ಪ್ರತಿಷ್ಠಿತ ಕ್ಷೇತ್ರಗಳಲ್ಲೊಂದಾದ ತಿರುನೆಲ್ವೇಲಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿಯು ಈ ಬಾರಿ ನೈನಾರ್ ನಾಗೇಂದ್ರನ್ ಅವರನ್ನು ಕಣಕ್ಕಿಳಿಸಿದೆ. ಎಐಎಡಿಎಂಕೆ ಸರ್ಕಾರದಲ್ಲಿ ಸಚಿವರಾಗಿಯೂ ಕಾರ್ಯ ನಿರ್ವಹಿಸಿದ್ದ ನಾಗೇಂದ್ರನ್ ಅವರು ಮಾಜಿ ಮುಖ್ಯಮಂತ್ರಿ ಜೆ. ಜಯಲಲಿತಾ ಅವರ ನಿಧನಾನಂತರ 2017ರಲ್ಲಿ ಬಿಜೆಪಿಗೆ ಸೇರ್ಪಡೆಗೊಂಡಿದ್ದರು. ಉದ್ಯಮಿ ಹಾಗೂ ರಾಜಕಾರಣಿಯಾಗಿರುವ ನಾಗೇಂದ್ರನ್ ಅವರು 2001ರಲ್ಲಿ ಮೊದಲ ಬಾರಿ ಶಾಸಕರಾಗಿ ಆಯ್ಕೆಯಾಗಿದ್ದರು. ರಾಜ್ಯಮಟ್ಟದಲ್ಲಿ ಬಹಳ ಪ್ರಭಾವವಿರುವ ಮುಖಂಡರಾಗಿರುವುದ-ರಿಂದ ಇವರು ಈ ಬಾರಿ ಗೆಲ್ಲುತ್ತಾರೆ ಎಂಬ ವಿಶ್ವಾಸದಲ್ಲಿದೆ ಬಿಜೆಪಿ. ತಿರುನೆಲ್ವೇಲಿಗೆ ಈಚೆಗೆ ರೈಲಿನಲ್ಲಿ ತೆರಳುತ್ತಿದ್ದ ಮೂವರನ್ನು ಬಂಧಿಸಿದ್ದ ಅಧಿಕಾರಿಗಳು, ₹4 ಕೋಟಿ ನಗದು ವಶಪಡಿಸಿಕೊಂಡಿದ್ದರು. ಬಂಧಿತರು ನಾಗೇಂದ್ರನ್ ಅವರ ಬೆಂಬಲಿಗರು ಎಂದು ಆಡಳಿತಾರೂಢ ಡಿಎಂಕೆ ಆರೋಪಿಸಿದೆ.


V/S



ರಾಬರ್ಟ್ ಬ್ರೂಸ್ (ಕಾಂಗ್ರೆಸ್)

2019ರ ಚುನಾವಣೆಯಲ್ಲಿ ಡಿಎಂಕೆ ಅಭ್ಯರ್ಥಿ ಗೆದ್ದಿದ್ದ ತಿರುನೆಲ್ವೇಲಿ ಕ್ಷೇತ್ರದಿಂದ ಈ ಬಾರಿ ಕಾಂಗ್ರೆಸ್, ರಾಬರ್ಟ್ ಬ್ರೂಸ್ ಅವರನ್ನು ಅಖಾಡಕ್ಕಿಳಿಸಿದೆ. ಡಿಎಂಕೆಯು 'ಇಂಡಿಯಾ' ಒಕ್ಕೂಟದಲ್ಲಿರುವುದರಿಂದ ರಾಬರ್ಟ್ ಅವರು ಗೆದ್ದೇ ಗೆಲ್ಲುತ್ತಾರೆಂಬ ವಿಶ್ವಾಸದಲ್ಲಿದೆ ಕಾಂಗ್ರೆಸ್. ವೃತ್ತಿಯಲ್ಲಿ ವಕೀಲರಾಗಿರುವ ರಾಬರ್ಟ್ ಅವರು, 2023ರ ತೆಲಂಗಾಣ ವಿಧಾನಸಭಾ ಚುನಾವಣೆಯ ವೇಳೆ ಎಐಸಿಸಿ ವೀಕ್ಷಕರಾಗಿಯೂ ಕಾರ್ಯ ನಿರ್ವಹಿಸಿದ್ದರು. ಹಿಂದಿನ ಚುನಾವಣೆಗಳಲ್ಲಿ ರಾಬರ್ಟ್ ಅವರು ಕನ್ಯಾಕುಮಾರಿ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಲು ಒಲವು ವ್ಯಕ್ತಪಡಿಸಿದ್ದರು. ಆದರೆ ಪಕ್ಷವು ಅವರನ್ನು ಸ್ಪರ್ಧೆಗಿಳಿಸಿರಲಿಲ್ಲ. ಈ ಬಾರಿ ತಿರುನೆಲ್ವೇಲಿಯಿಂದ ಅದೃಷ್ಟ ಪರೀಕ್ಷಿಸುವ ಅವಕಾಶ ಒದಗಿ ಬಂದಿದೆ. ದೀರ್ಘ ಕಾಲ ಪಕ್ಷ ಸಂಘಟನೆಯಲ್ಲಿ ತೊಡಗಿದ್ದ ರಾಬರ್ಟ್ ಅವರು ಸ್ಥಳೀಯವಾಗಿಯೂ ಪ್ರಭಾವಿ ಮುಖಂಡರಾಗಿದ್ದಾರೆ.

ಷೇರುಪೇಟೆ ವಹಿವಾಟು 354



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,642
ಇಂದಿನ ಅಂತ್ಯ	22,753
▲	111
ದಿನದ ಗರಿಷ್ಠ	22,775

ವಿನಿಮಯ ದರ

$ ಡಾಲರ್	83.31
£ ಪೌಂಡ್	105.61
€ ಯುರೊ	90.36
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1510)
ಸೋಯಾ (ರಿಫೈನ್ಡ್)	₹965 (965)
ಸೂರ್ಯಕಾಂತಿ (ರಿಫೈನ್ಡ್)	₹955 (960)
ಪಾಮೋಲಿನ್	₹968 (970)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹212-376
ದ್ವಿತಳಿ (ಬಿ.ವಿ)	₹286-522

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹15100
ಎಸಿ	₹8680
ಆರ್‌ಪಿ	₹15250
ಆರ್‌ಸಿ	₹9540

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹164.50

ಕರ್ನಾಟಕ ಪೊಲೀಸ್ ಇಲಾಖೆಗೆ ₹33 ಕೋಟಿ ಇನ್ಫೊಸಿಸ್ ನೆರವು



ನವದೆಹಲಿ (ಪಿಟಿಐ): ಸೈಬರ್ ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವುದಕ್ಕೆ ನೆರವಾಗಲು ಇನ್ಫೊಸಿಸ್ ಫೌಂಡೇಶನ್‌ನಿಂದ ಕರ್ನಾಟಕ ಪೊಲೀಸ್ ಇಲಾಖೆಗೆ ₹33 ಕೋಟಿ ಆರ್ಥಿಕ ನೆರವು ನೀಡಲಾಗಿದೆ.

ಬೆಂಗಳೂರಿನಲ್ಲಿ ಇರುವ ಸಿಐಡಿ ಘಟಕ, ಭಾರತೀಯ ದತ್ತಾಂಶ ಭದ್ರತಾ ಸಮಿತಿ (ಡಿಎಸ್‌ಸಿಐ) ಹಾಗೂ ಸೈಬರ್ ಅಪರಾಧಗಳ ತನಿಖೆ ತರಬೇತಿ ಮತ್ತು ಸಂಶೋಧನಾ ಕೇಂದ್ರದ (ಸಿಸಿಐಟಿಆರ್) ಜೊತೆಗೆ ಈ ಕುರಿತ ಒಡಂಬಡಿಕೆಗೆ ಫೌಂಡೇಶನ್ ಅಂಕಿತ ಹಾಕಿದೆ.


ಸೈಬರ್ ಅಪರಾಧಗಳ ತನಿಖಾ ಸಾಮರ್ಥ್ಯವನ್ನು ಮತ್ತಷ್ಟು ಬಲಗೊಳಿಸಲು ಈ ನೆರವು ನೀಡಲಾಗಿದೆ. ಈ ನಿಟ್ಟಿನಲ್ಲಿ ಸಿಸಿಐಟಿಆರ್ ಜೊತೆಗಿನ ಒಡನಾಟವನ್ನು ಮತ್ತೆ ನಾಲ್ಕು ವರ್ಷಗಳವರೆಗೆ ವಿಸ್ತರಿಸಲಾಗಿದೆ. ಡಿಜಿಟಲ್ ಫೊರೆನ್ಸಿಕ್ ಹಾಗೂ ಸೈಬರ್ ಅಪರಾಧದ ತನಿಖೆ ಬಗೆಗಿನ ತರಬೇತಿ ಮತ್ತು ಸಂಶೋಧನೆಗೆ ಇದರಿಂದ ನೆರವಾಗಲಿದೆ ಎಂದು ತಿಳಿಸಿದೆ.

ಮಾರುಕಟ್ಟೆ ಧಾರಣೆ

ಅಡಿಕೆ		ಸಿದ್ದಾಪುರ			
ಕುಮಟ		ಬಿಳಿಗೋಟು	26499-30219	ಚಾಲಿ	32208-36001
ಚಿಪ್ಪು	26019-28507	ಚಾಲಿ	32869-34899	ಕೆಂಪುಗೋಟು	27099-32099
ಕೋಕ	13069-22679	ಕೋಕ	24229-26629	ರಾಶಿ	42109-46909
ಫ್ಯಾಕ್ಟರಿ	11509-21829	ಹಳೆಚಾಲಿ	34099-35009	ಯಲ್ಲಾಪುರ	
ಹಳೆಚಾಲಿ	36089-38399	ಕೆಂಪುಗೋಟು	28889-31469	ಬಿಳಿಗೋಟು	24109-30009
ಹೊಸಚಾಲಿ	31089-34399	ರಾಶಿ	43609-46909	ಕೋಕ	22399-29899
ಶಿವಮೊಗ್ಗ		ತಟ್ಟಿಬೆಟ್ಟೆ	35299-36099	ಹಳೆಚಾಲಿ	36009-36209
ಬೆಟ್ಟೆ	48600-54959	ಶಿರಸಿ		ಹೊಸಚಾಲಿ	30629-35599
ಗೊರಬಲು	28099-33069	ಬೆಟ್ಟೆ	35899-42809	ಕೆಂಪುಗೋಟು	29016-34389
ರಾಶಿ	35069-49499	ಬಿಳಿಗೋಟು	25000-28813	ರಾಶಿ	41489-50395
ಸರಕು	46100-75510			ತಟ್ಟಿಬೆಟ್ಟೆ	36780-41300

ಹೂಡಿಕೆದಾರರ ಸಂಪತ್ತು ಒಂದೇ ದಿನ ₹2.27 ಲಕ್ಷ ಕೋಟಿ ವೃದ್ಧಿ

75 ಸಾವಿರ ದಾಟಿದ ಸೆನ್ಸೆಕ್ಸ್



ಮುಂಬೈ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಬುಧವಾರ ನಡೆದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ತಲುಪಿವೆ.

ಎಫ್‌ಎಂಸಿಜಿ, ಇಂಧನ ಮತ್ತು ಲೋಹದ ಷೇರುಗಳ ಗಳಿಕೆಯಿಂದಾಗಿ ಸೂಚ್ಯಂಕಗಳು ಏರಿಕೆ ಕಂಡವು. ಹೂಡಿಕೆದಾರರ ಸಂಪತ್ತು ಒಂದೇ ದಿನ ₹2.27 ಲಕ್ಷ ಕೋಟಿ ಏರಿಕೆಯಾಗಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ ₹402 ಲಕ್ಷ ಕೋಟಿ ದಾಟಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 354 ಅಂಶ ಹೆಚ್ಚಳವಾಗಿ 75,038ಕ್ಕೆ ಸ್ಥಿರಗೊಂಡಿತು. ವಹಿವಾಟಿನ ವೇಳೆ 75,105ಕ್ಕೆ ಮುಟ್ಟಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 111 ಅಂಶ ಏರಿಕೆ ಕಂಡು 22,753ಕ್ಕೆ ಕೊನೆಗೊಂಡಿತು.

ಐಟಿಸಿ, ಕೋಟಕ್ ಮಹೀಂದ್ರ ಬ್ಯಾಂಕ್, ಭಾರ್ತಿ ಏರ್‌ಟೆಲ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಏಷ್ಯನ್ ಪೇಂಟ್ಸ್, ಟೆಕ್ ಮಹೀಂದ್ರ, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ನೆಸ್ಲೆ ಕಂಪನಿಗಳ ಷೇರು ಮೌಲ್ಯ ಏರಿಕೆಯಾಗಿದೆ.

ಮಾರುತಿ ಸುಜುಕಿ, ಎಚ್‌ಡಿಎಫ್‌ಸಿ ಬ್ಯಾಂಕ್, ಲಾರ್ಸನ್ ಆ್ಯಂಡ್ ಟೊಬ್ರೊ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಮೌಲ್ಯ ಇಳಿಕೆ ಕಂಡಿದೆ. ರಂಜಾನ್ ಹಬ್ಬದ ಅಂಗವಾಗಿ ಷೇರುಪೇಟೆಗೆ ಗುರುವಾರ ರಜೆ ಇರಲಿದೆ.

'ಭಾರತದ ಮಾರುಕಟ್ಟೆಯು ಏಷ್ಯನ್ ಮತ್ತು ಯುರೋಪಿಯನ್ ಮಾರುಕಟ್ಟೆಗಿಂತ ಕೊಂಚ ಹಿಂದುಳಿದಿದ್ದರೂ, ಜಾಗತಿಕ ಮಾರುಕಟ್ಟೆಯಲ್ಲಿ ಸ್ಥಿರವಾದ ಪ್ರದರ್ಶನ ಕಂಡಿದೆ. ಇದು ಸೂಚ್ಯಂಕಗಳು ಏರಿಕೆಗೆ ಕಾರಣವಾಗಿದೆ' ಎಂದು ಜಿಯೊಜಿತ್ ಫೈನಾನ್ಷಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

'ಅಮೆರಿಕದ ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್‌ನ ಬಡ್ಡಿದರ ಕಡಿತ ಹಾಗೂ ಮಾರ್ಚ್ ತಿಂಗಳ ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಚಿಲ್ಲರೆ ಹಣದುಬ್ಬರ ವರದಿಯತ್ತ ಹೂಡಿಕೆದಾರರು ಚಿತ್ತ ನೆಟ್ಟಿದ್ದರಿಂದ ಮಾರುಕಟ್ಟೆ ಏರಿಕೆ ಕಂಡಿದೆ' ಎಂದು ಹೇಳಿದ್ದಾರೆ.

ಬೆಂಗಳೂರಿನಲ್ಲಿ ₹74 ಸಾವಿರ ದಾಟಿದ ಚಿನ್ನ

ನವದೆಹಲಿ (ಪಿಟಿಐ): ಬೆಂಗಳೂರಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಬುಧವಾರ ಏರಿಕೆ ಕಂಡಿದೆ. 10 ಗ್ರಾಂ ಚಿನ್ನದ ಬೆಲೆ ₹74,060ಕ್ಕೆ ಮುಟ್ಟಿದೆ. ಒಂದು ಕೆ.ಜಿ ಬೆಳ್ಳಿ ದರ ₹84,600ಕ್ಕೆ ತಲುಪಿದೆ.

ನವದೆಹಲಿಯ ಚಿನಿವಾರ ಪೇಟೆಯಲ್ಲಿ ಸತತ ಮೂರನೇ ದಿನವೂ ಚಿನ್ನ ಮತ್ತು ಬೆಳ್ಳಿ ದರ ಏರಿಕೆಯಾಗಿದೆ. 10 ಗ್ರಾಂ ಚಿನ್ನದ ಬೆಲೆ ₹160 ಏರಿಕೆಯಾಗಿ, ₹72 ಸಾವಿರದಂತೆ ಮಾರಾಟವಾಯಿತು. ಬೆಳ್ಳಿಯು ಒಂದು ಕೆ.ಜಿಗೆ ₹200 ಹೆಚ್ಚಳವಾಗಿ, ₹84,700ಕ್ಕೆ ಮುಟ್ಟಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಒಂದು ಔನ್ಸ್‌ಗೆ (28.34 ಗ್ರಾಂ) ಕ್ರಮವಾಗಿ 2,356 ಡಾಲರ್ (ಅಂದಾಜು ₹1.96 ಲಕ್ಷ) ಮತ್ತು 27.80 (ಅಂದಾಜು ₹2,343) ಡಾಲರ್‌ನಂತೆ ಮಾರಾಟವಾಗಿದೆ.

'ಮಾರ್ಚ್ ತಿಂಗಳಿನಲ್ಲಿ ಅಮೆರಿಕದ ಚಿಲ್ಲರೆ ಹಣದುಬ್ಬರವು ನಿರೀಕ್ಷೆಗೂ ಮೀರಿ ಏರಿಕೆಯಾಗಿದೆ. ಅಲ್ಲದೆ, ಕೇಂದ್ರೀಯ ಬ್ಯಾಂಕ್ ಆದ ಫೆಡರಲ್ ರಿಸರ್ವ್ ಬಡ್ಡಿದರ ಕಡಿತಕ್ಕೆ ವಿಳಂಬ ಧೋರಣೆ ತಳೆದಿದೆ. ಇಸ್ರೇಲ್-ಪ್ಯಾಲೆಸ್ಟೀನ್ ಬಿಕ್ಕಟ್ಟು ಚಿನ್ನ ಮತ್ತು ಬೆಳ್ಳಿ ದರ ಏರಿಕೆ ಮೇಲೆ ಪರಿಣಾಮ ಬೀರಿದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ (ಸರಕು ಸಂಶೋಧನೆ) ನವನೀತ್ ದಮಾನಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಲೆನ್ಸ್‌ಕಾರ್ಟ್ ಮನವಿಗೆ ಸ್ಪಂದಿಸಿದ ಸಚಿವ

ಬೆಂಗಳೂರು: ಜಮೀನು ಖರೀದಿಗೆ ಸಂಬಂಧಿಸಿದಂತೆ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದ ಲೆನ್ಸ್‌ಕಾರ್ಟ್ ಸಮೂಹದ ಮನವಿಗೆ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು, ಕೇವಲ ಐದು ನಿಮಿಷದಲ್ಲಿ ಸ್ಪಂದಿಸಿ ಗಮನ ಸೆಳೆದಿದ್ದಾರೆ.

ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ 60 ಕಿ.ಮೀ. ಆಸುಪಾಸಿನಲ್ಲಿ ತಮ್ಮ ಉದ್ಯಮದ ಘಟಕ ಸ್ಥಾಪನೆಗಾಗಿ 25 ಎಕರೆ ಜಮೀನಿನ ಅಗತ್ಯವಿದೆ ಎಂದು ಲೆನ್ಸ್‌ಕಾರ್ಟ್ ಸಹ ಸಂಸ್ಥಾಪಕ ಮತ್ತು ಸಿಇಒ ಪೀಯೂಷ್ ಬನ್ಸಲ್, 'ಎಕ್ಸ್'ನಲ್ಲಿ ಪೋಸ್ಟ್ ಹಾಕಿದ್ದರು. ಜಮೀನು ಮಾರಾಟ ಮಾಡಲು ಆಸಕ್ತಿ ಇದ್ದರೆ ತಮಗೆ ಇ-ಮೇಲ್ ಕಳುಹಿಸುವಂತೆಯೂ ಕೋರಿದ್ದರು.



ಈ ಪೋಸ್ಟ್ ಗಮನಿಸಿದ ಸಚಿವರು, 'ಕೈಗಾರಿಕಾ ಇಲಾಖೆಯು ನಿಮ್ಮ ಬೆಂಬಲಕ್ಕಿದೆ. ಅಧಿಕಾರಿಗಳು ತಕ್ಷಣವೇ ನಿಮ್ಮನ್ನು ಸಂಪರ್ಕಿಸ ಲಿದ್ದಾರೆ. ನೀವು ಇರಬೇಕಾದ ಜಾಗ ಕರ್ನಾಟಕ!' ಎಂದು ಮರುಪೋಸ್ಟ್ ಮಾಡಿ ಭರವಸೆ ನೀಡಿದ್ದಾರೆ. ಅಲ್ಲದೆ, ಕಂಪನಿಗೆ ಜಮೀನು ಒದಗಿಸುವ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ವಿಮಾನ ಟಿಕೆಟ್ ದರ ಏರಿಕೆ

ನವದೆಹಲಿ (ಪಿಟಿಐ): ವಿಸ್ತಾರಾ ಏರ್‌ಲೈನ್ಸ್ ಬಿಕ್ಕಟ್ಟು ದೇಶೀಯ ವಿಮಾನ ಸಂಚಾರದ ಮೇಲೆ ಪರಿಣಾಮ ಬೀರಿದ್ದು, ವಿಮಾನಗಳ ಟಿಕೆಟ್ ದರದಲ್ಲಿ ಶೇ 20ರಿಂದ ಶೇ 25ರಷ್ಟು ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಪೈಲಟ್‌ಗಳ ಸೇವೆಯಲ್ಲಿ ತಲೆದೋರಿರುವ ಬಿಕ್ಕಟ್ಟಿನಿಂದಾಗಿ ವಿಸ್ತಾರಾ ಏರ್‌ಲೈನ್ಸ್‌ನ ಶೇ 10ರಷ್ಟು ವಿಮಾನಗಳ ಹಾರಾಟ ರದ್ದಾಗಿದೆ. ಹಾಗಾಗಿ, ವಿಮಾನ ಪ್ರಯಾಣಕ್ಕೆ ಬೇಡಿಕೆ ಹೆಚ್ಚಾಗಿದೆ. ಇದರಿಂದ ಟಿಕೆಟ್ ದರದಲ್ಲಿ ಏರಿಕೆಯಾಗಿದ್ದು, ಪ್ರಯಾಣಿಕರ ಜೇಬಿಗೆ ಕತ್ತರಿ ಬಿದ್ದಿದೆ ಎಂದು ಹೇಳಿದ್ದಾರೆ.

ಬೇಸಿಗೆ ಋತುವಿನಲ್ಲಿ ಸಹಜವಾಗಿ ವಿಮಾನ ಸಂಚಾರಕ್ಕೆ ಬೇಡಿಕೆ ಹೆಚ್ಚಿರುತ್ತದೆ. ಈ ವೇಳೆ ವಿಮಾನಯಾನ ಕಂಪನಿಗಳು ದೇಶೀಯ ಮಾರ್ಗದಲ್ಲಿ ಹೆಚ್ಚು ಆಸನಗಳಿರುವ ವಿಮಾನಗಳ ಸಂಚಾರಕ್ಕೆ ಒತ್ತು ನೀಡುತ್ತವೆ. ವಿಸ್ತಾರಾ ಏರ್‌ಲೈನ್ಸ್‌ನ ದೈನಂದಿನ ಸಂಚಾರದಲ್ಲಿ 20ರಿಂದ 30 ವಿಮಾನಗಳ ಹಾರಾಟ ರದ್ದಾಗಿದೆ. ಆರ್ಥಿಕ ದಿವಾಳಿತನಕ್ಕೆ ಸಿಲುಕಿರುವ ಗೋ ಫಸ್ಟ್‌ನ ಹಲವು ವಿಮಾನಗಳ ಸೇವೆ ಕಡಿತಗೊಂಡಿದೆ. ಮತ್ತೊಂದೆಡೆ ಎಂಜಿನ್ ಸಮಸ್ಯೆಯಿಂದಾಗಿ ಇಂಡಿಗೊ ಕಂಪನಿಯ 70ಕ್ಕೂ ಹೆಚ್ಚು ವಿಮಾನಗಳ ಸೇವೆಯಲ್ಲಿ ವ್ಯತ್ಯಯವಾಗಿದೆ. ಇದೇ ಟಿಕೆಟ್ ದರ ಏರಿಕೆಗೆ ಕಾರಣವಾಗಿದೆ.

'ಕೆಲವು ಮಾರ್ಗಗಳ ದರದಲ್ಲಿ ನಿರೀಕ್ಷೆಗೂ ಮೀರಿ ದರ ಏರಿಕೆಯಾಗಿದೆ. ನವದೆಹಲಿ ಮತ್ತು ಬೆಂಗಳೂರು ನಡುವಿನ ಏಕಮುಖ ಸಂಚಾರ ದರವು ಶೇ 39ರಷ್ಟು ಏರಿಕೆಯಾಗಿದೆ. ನವದೆಹಲಿ ಮತ್ತು ಶ್ರೀನಗರ ನಡುವಿನ ದರ ಶೇ 30ರಷ್ಟು ಹೆಚ್ಚಳವಾಗಿದೆ' ಎಂದು ಟ್ರಾವೆಲ್ ಪೋರ್ಟಲ್ ಇಕ್ಸಿಗೊ ತಿಳಿಸಿದೆ.

ಸ್ವಿಫ್ಟ್, ವಿಟಾರಾ ಬೆಲೆ ಹೆಚ್ಚಿಸಿದ ಮಾರುತಿ ಸುಜುಕಿ

ನವದೆಹಲಿ (ಪಿಟಿಐ): ಮಾರುತಿ ಸುಜುಕಿ ಇಂಡಿಯಾವು ಹ್ಯಾಚ್‌ಬ್ಯಾಕ್ ಕಾರು ಸ್ವಿಫ್ಟ್‌ನ ಬೆಲೆಯನ್ನು ₹25 ಸಾವಿರ ಹಾಗೂ ಎಸ್‌ಯುವಿ ಗ್ರ್ಯಾಂಡ್ ವಿಟಾರಾ ಸಿಗ್ಮಾ ಆವೃತ್ತಿಯ ಬೆಲೆಯನ್ನು ₹19 ಸಾವಿರ ಹೆಚ್ಚಿಸಿದೆ.

ಈ ಬೆಲೆ ಹೆಚ್ಚಳವು ಬುಧವಾರದಿಂದಲೇ ಜಾರಿಗೆ ಬಂದಿದೆ ಎಂದು ಕಂಪನಿಯು ಷೇರುಪೇಟೆಗೆ ತಿಳಿಸಿದೆ.

ಸದ್ಯ ನವದೆಹಲಿಯಲ್ಲಿ ಸ್ವಿಫ್ಟ್‌ನ ಎಕ್ಸ್ ಷೋ ರೂಂ ಬೆಲೆ ₹5.99 ಲಕ್ಷದಿಂದ ₹8.89 ಲಕ್ಷ ಇದೆ. ಗ್ರ್ಯಾಂಡ್ ವಿಟಾರಾದ ಎಕ್ಸ್ ಷೋ ರೂಂ ಬೆಲೆ ₹10.8 ಲಕ್ಷ ಇದೆ.

ಕ್ರ್ಯಾಷ್ ಟೆಸ್ಟ್: ಮಾರುತಿ ಸುಜುಕಿಯು ತನ್ನ ಕೆಲವು ಕಾರುಗಳನ್ನು ಭಾರತ್-ನ್ಯೂ ಕಾರ್ ಅಸೆಸ್‌ಮೆಂಟ್ ಪ್ರೋಗ್ರಾಂ (ಭಾರತ್-ಎನ್‌ಸಿಎಪಿ) ಕ್ರ್ಯಾಷ್ ಟೆಸ್ಟ್‌ಗೆ ಒಳಪಡಿಸಿದೆ ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಕಳೆದ ವರ್ಷದ ಆಗಸ್ಟ್‌ನಲ್ಲಿ ಕೇಂದ್ರ ಸರ್ಕಾರವು ಭಾರತ್-ಎನ್‌ಸಿಎಪಿಗೆ ಚಾಲನೆ ನೀಡಿತ್ತು. ಇದರ ಮೂಲಕ ದೇಶದಲ್ಲಿ ಕಾರುಗಳ ಸುರಕ್ಷತಾ ಸೌಲಭ್ಯಗಳನ್ನು ಅಳೆಯಲಾಗುತ್ತದೆ. ವಯಸ್ಕರು ಹಾಗೂ ಮಕ್ಕಳಿಗೆ ಕಾರು ಎಷ್ಟು ಸುರಕ್ಷಿತವಾಗಿದೆ ಎಂಬುದನ್ನು ಸೊನ್ನೆಯಿಂದ ಐದರವರೆಗಿನ ಶ್ರೇಯಾಂಕದ ಮೂಲಕ ತಿಳಿಸಲಾಗುತ್ತದೆ.

ಕಳೆದ ವರ್ಷ ಟಾಟಾ ಮೋಟರ್ಸ್‌ನ ಎಸ್‌ಯುವಿಗಳಾದ ಸಫಾರಿ ಹಾಗೂ ಹ್ಯಾರಿಯರ್ ಕ್ರ್ಯಾಷ್ ಟೆಸ್ಟ್‌ಗೆ ಒಳಪಟ್ಟಿದ್ದವು. ಈ ಎರಡೂ ಕಾರುಗಳಿಗೆ ವಯಸ್ಕರು ಮತ್ತು ಮಕ್ಕಳ ಸುರಕ್ಷತೆಯಲ್ಲಿ ಐದು ಶ್ರೇಯಾಂಕ ಲಭಿಸಿತ್ತು.

ಭಾರತಕ್ಕೆ ಈ ತಿಂಗಳು ಮಸ್ಕ್ ಭೇಟಿ

ನವದೆಹಲಿ (ಪಿಟಿಐ): ಟೆಸ್ಲಾ ಕಂಪನಿಯ ಸಿಇಒ ಇಲಾನ್ ಮಸ್ಕ್ ಅವರು ಈ ತಿಂಗಳು ಭಾರತಕ್ಕೆ ಭೇಟಿ ನೀಡಲಿದ್ದು, ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಲಿದ್ದಾರೆ. ಇದೇ ವೇಳೆ ದೇಶದಲ್ಲಿ ಕಂಪನಿಯ ಹೂಡಿಕೆ ಬಗ್ಗೆ ಅಧಿಕೃತವಾಗಿ ಘೋಷಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಕಳೆದ ವರ್ಷದ ಜೂನ್‌ನಲ್ಲಿ ಮೋದಿ ಅವರು ಅಮೆರಿಕಕ್ಕೆ ಭೇಟಿ ನೀಡಿದ್ದ ವೇಳೆ ಮಸ್ಕ್ ಅವರನ್ನು ಭೇಟಿ ಮಾಡಿದ್ದರು. 2024ರಲ್ಲಿ ಭಾರತಕ್ಕೆ ಭೇಟಿ ನೀಡುವುದಾಗಿ ಮಾತುಕತೆ ವೇಳೆ ಮಸ್ಕ್ ಪ್ರಕಟಿಸಿದ್ದರು.

ಕೇಂದ್ರವು ಇತ್ತೀಚೆಗೆ ಹೊಸ ಎಲೆಕ್ಟ್ರಿಕ್ ವಾಹನ ನೀತಿಗೆ ಅನುಮೋದನೆ ನೀಡಿದೆ. ದೇಶದಲ್ಲಿ ಕನಿಷ್ಠ ₹4,150 ಕೋಟಿ ಬಂಡವಾಳ ಹೂಡಿಕೆ ಮಾಡಿ ಇ.ವಿ ತಯಾರಿಕಾ ಘಟಕ ಸ್ಥಾಪಿಸುವ ಕಂಪನಿಗಳಿಗೆ ಆಮದು ಸುಂಕದಲ್ಲಿ ರಿಯಾಯಿತಿ ಘೋಷಿಸಿದೆ ಭಾರತದ ಮಾರುಕಟ್ಟೆ ಪ್ರವೇಶಿಸಲು ಮುಂದಾಗಿರುವ ಟೆಸ್ಲಾಗೆ ಇದು ವರದಾನವಾಗಿದೆ.

ಮುಂಬೈ ಧಾರಣೆ

ಶೇಂಗಾ	
10-4-2024	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1510 (1520)
ಒಂದು ವಾರದ ಡೆಲಿವರಿ	1505 (1515)
ಸೋಯಾ ಕಚ್ಚಾ	927 (925)
ಪಾಮ್ ವಾರದ ಡೆಲಿವರಿ	966 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	880 (880)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	₹71,100 (71,650)
ಬೆಳ್ಳಿ ಕೆ.ಜಿ	₹82,000 (82,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ



ತಲ್ಲೀನ... ಆಗ್ರಾದಲ್ಲಿರುವ ವಿಶ್ವವಿಖ್ಯಾತ ತಾಜ್‌ಮಹಲ್‌ನ ಸಮೀಪ ಬುಧವಾರ ಧಾನ್ಯವನ್ನು ಒಕ್ಕಲು ಯಂತ್ರ ಬಳಸಿ ರೈತರು ಬೇರ್ಪಡಿಸಿದರು –ಪಿಟಿಐ ಚಿತ್ರ

ಪೇಟಿಎಂ ಬ್ಯಾಂಕ್ ಸಿಇಒ ರಾಜೀನಾಮೆ

ನವದೆಹಲಿ (ಪಿಟಿಐ): ಪೇಟಿಎಂ ಪೇಮೆಂಟ್ಸ್ ಬ್ಯಾಂಕ್‌ನ (ಪಿಪಿಬಿಎಲ್) ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಸುರೀಂದರ್ ಚಾವ್ಲಾ ಅವರು, ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಪೇಟಿಎಂ ಬ್ಯಾಂಕ್ ವಹಿವಾಟಿಗೆ ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಬಂಧ ಹೇರಿರುವ ಬೆನ್ನಲ್ಲೇ ಚಾವ್ಲಾ ರಾಜೀನಾಮೆ ನೀಡಿದ್ದಾರೆ.

'ವೈಯಕ್ತಿಕ ಕಾರಣ ಹಾಗೂ ವೃತ್ತಿಪರತೆಯನ್ನು ಮತ್ತಷ್ಟು ವಿಸ್ತರಿಸಿಕೊಳ್ಳುವ ಉದ್ದೇಶದಿಂದ ಚಾವ್ಲಾ, ಏಪ್ರಿಲ್ 8ರಂದು ರಾಜೀನಾಮೆ ಸಲ್ಲಿಸಿದ್ದಾರೆ. ಜೂನ್ 26ರಂದು ಅವರನ್ನು ಕಂಪನಿಯ ಉದ್ಯೋಗದಿಂದ ಮುಕ್ತಗೊಳಿಸಲಾಗುವುದು' ಎಂದು ಪೇಟಿಎಂನ ಮಾತೃಸಂಸ್ಥೆ ಒನ್97 ಕಮ್ಯುನಿಕೇಷನ್, ಷೇರುಪೇಟೆಗೆ ತಿಳಿಸಿದೆ. ಆರ್‌ಬಿಐ ಅನುಮೋದನೆ ನೀಡಿದ ಬಳಿಕ ಕಳೆದ ವರ್ಷದ ಜನವರಿಯಲ್ಲಿ ಚಾವ್ಲಾ ಅವರು ಪಿಪಿಬಿಎಲ್‌ಗೆ ಸೇರ್ಪಡೆಗೊಂಡಿದ್ದರು.

ಷೇರಿನ ಮೌಲ್ಯ ಶೇ 1ರಷ್ಟು ಕುಸಿತ: ಚಾವ್ಲಾ ಅವರ ರಾಜೀನಾಮೆ ಬೆನ್ನಲ್ಲೇ ಒನ್97 ಕಮ್ಯುನಿಕೇಷನ್‌ನ ಷೇರಿನ ಮೌಲ್ಯವು ಶೇ 1ರಷ್ಟು ಕುಸಿದಿದೆ. ಬೆಳಿಗ್ಗಿನ ವಹಿವಾಟಿನಲ್ಲಿ ಬಿಎಸ್‌ಇ ಮತ್ತು ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 4ರಷ್ಟು ಕುಸಿತ ಕಂಡಿತ್ತು.

ಒಂದೇ ದಿನ ಕಂಪನಿಯ ಮಾರುಕಟ್ಟೆ ಮೌಲ್ಯವು ₹241.45 ಕೋಟಿ ಕರಗಿದೆ. ಸದ್ಯ ಮಾರುಕಟ್ಟೆ ಮೌಲ್ಯ ₹25,448 ಕೋಟಿ ಆಗಿದೆ. ಪಿಪಿಬಿಎಲ್‌ನಲ್ಲಿ ಒನ್97 ಕಮ್ಯುನಿಕೇಷನ್ ಶೇ 49ರಷ್ಟು ಷೇರುಗಳ ಮೇಲೆ ಒಡೆತನ ಹೊಂದಿದೆ.

ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಷೇರು ಕುಸಿತ

ನವದೆಹಲಿ (ಪಿಟಿಐ): ಉದ್ಯಮಿ ಅನಿಲ್ ಅಂಬಾನಿ ಒಡೆತನದ ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ₹8 ಸಾವಿರ ಕೋಟಿ ಪಾವತಿಸುವಂತೆ ಈ ಹಿಂದೆ ಮಧ್ಯಸ್ಥಿಕೆ ನ್ಯಾಯಾಲಯವು ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿತ್ತು. ಬುಧವಾರ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅಧ್ಯಕ್ಷತೆಯ ತ್ರಿಸದಸ್ಯ ನ್ಯಾಯಪೀಠವು ಆ ತೀರ್ಪನ್ನು ರದ್ದುಪಡಿಸಿದೆ.

ದೆಹಲಿ ಮೆಟ್ರೊ ರೈಲು ನಿಗಮವು (ಡಿಎಂಆರ್‌ಸಿ) ಸಲ್ಲಿಸಿದ್ದ ಮರುಪರಿಶೀಲನಾ ಅರ್ಜಿಯನ್ನು ತ್ರಿಸದಸ್ಯ ಪೀಠ ವಿಚಾರಣೆ ನಡೆಸಿತು.

ನವದೆಹಲಿಯ ಏರ್‌ಪೋರ್ಟ್ ಎಕ್ಸ್‌ಪ್ರೆಸ್‌ವೇ ನಿರ್ಮಾಣಕ್ಕೆ ಸಂಬಂಧಿಸಿದಂತೆ 2008ರ ಆಗಸ್ಟ್‌ನಲ್ಲಿ ಡಿಎಂಆರ್‌ಸಿ ಮತ್ತು ಅನಿಲ್ ಅಂಬಾನಿ ಒಡೆತನದ ದೆಹಲಿ ಏರ್‌ಪೋರ್ಟ್ ಮೆಟ್ರೊ ಎಕ್ಸ್‌ಪ್ರೆಸ್ ಪ್ರೈವೆಟ್ ಲಿಮಿಟೆಡ್ (ಡಿಎಎಂಇಪಿಎಲ್) ನಡುವೆ ಒಪ್ಪಂದವಾಗಿತ್ತು. ನಾಲ್ಕು ವರ್ಷದ ಬಳಿಕ ಈ ಒಪ್ಪಂದ ಮುರಿದು ಬಿದ್ದಿತು. ಇದನ್ನು ಪ್ರಶ್ನಿಸಿ ಡಿಎಂಆರ್‌ಸಿ ಮಧ್ಯಸ್ಥಿಕೆ ನ್ಯಾಯಾಲಯದ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ ನ್ಯಾಯಾಲಯವು, ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್‌ಗೆ ₹3 ಸಾವಿರ ಕೋಟಿ ಹಾಗೂ ಬಡ್ಡಿ ಪಾವತಿಸುವಂತೆ ಆದೇಶ ನೀಡಿತ್ತು. ಇದನ್ನು ಪ್ರಶ್ನಿಸಿ ಡಿಎಂಆರ್‌ಸಿ ತ್ರಿಸದಸ್ಯ ನ್ಯಾಯಪೀಠದ ಮೊರೆ ಹೋಗಿತ್ತು. ಸುಪ್ರೀಂ ಕೋರ್ಟ್ ನೀಡಿದ ತೀರ್ಪಿನ ಬೆನ್ನಲ್ಲೇ ರಿಲಯನ್ಸ್ ಇನ್ಫ್ರಾಸ್ಟ್ರಕ್ಚರ್ ಷೇರಿನ ಮೌಲ್ಯ ಶೇ 20ರಷ್ಟು ಕುಸಿದಿದೆ. ಷೇರಿನ ಬೆಲೆ ₹227ಕ್ಕೆ ಮುಟ್ಟಿದೆ. ಕಂಪನಿಯ ಎಂ–ಕ್ಯಾಪ್ ₹2,250 ಕೋಟಿ ಕರಗಿದೆ.

ಎಸ್.ಆರ್. ಹಿರೇಮಠಗೆ 'ಬೋಧಿವೃಕ್ಷ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಫೂರ್ತಿಧಾಮ ಸಂಸ್ಥೆಯು ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್. ಆರ್. ಹಿರೇಮಠ ಅವರಿಗೆ 2024ನೇ ಸಾಲಿನ 'ಬೋಧಿವೃಕ್ಷ' ಪ್ರಶಸ್ತಿ ಪ್ರಕಟಿಸಿದೆ.



ಎಸ್‌.ಆರ್‌. ಹಿರೇಮಠ

ದಲಿತ ಚಳವಳಿಗಳಲ್ಲಿ ಮುಂಚೂಣಿಯಲ್ಲಿರುವ ಮಂಡ್ಯ ಜಿಲ್ಲೆಯ ಹಾನವಾಡಿಯವರಾದ ಪತ್ರಕರ್ತ ರಾಮ್‌ದೇವ್ ರಾಕೆ, ಮೈಸೂರು ಹಾಗೂ ಕೊಡಗು ಜಿಲ್ಲೆಯಲ್ಲಿ ಬುಡಕಟ್ಟು ಸಮುದಾಯದ ಹಕ್ಕಿಗೆ ಹೋರಾಟ ನಡೆಸುತ್ತಿರುವ ಸುಶೀಲ ನಾಡ, ಬೆಳ್ತಂಗಡಿಯ ಚಾರ್ಮಾಡಿ ಘಾಟ್‌ನಲ್ಲಿ ಸಂಭವಿಸಿರುವ ಅಪಘಾತಗಳಲ್ಲಿ ಸಿಲುಕಿದ ಗಾಯಾಳುಗಳನ್ನು ಆಸ್ಪತ್ರೆಗೆ ಸಾಗಿಸಿ, ಚಿಕಿತ್ಸೆ ಕೊಡಿಸುವ ಕಾರ್ಯವನ್ನು ಮೂರು ದಶಕದಿಂದ ಮಾಡುತ್ತಿರುವ ಹಸನಬ್ಬ, ಋತುಮತಿಯಾದ ಹೆಣ್ಣುಮಕ್ಕಳನ್ನು ಮನೆಯಿಂದ ಹೊರಗೆ ಗುಡಿಸಲು, ಮರದ ಕೆಳಗೆ ಬಿಡುವ ಅನಿಷ್ಟ ಪದ್ಧತಿ ವಿರುದ್ಧ ಹೋರಾಡುತ್ತಿರುವ ಜಿ.ಕೆ. ಪ್ರೇಮ ಅವರಿಗೆ 'ಬೋಧಿವರ್ಧನ ಪ್ರಶಸ್ತಿ' ನೀಡಲಾಗುತ್ತದೆ ಎಂದು 'ಸ್ಫೂರ್ತಿಧಾಮ'ದ ಅಧ್ಯಕ್ಷ ಎಸ್. ಮರಿಸ್ವಾಮಿ ತಿಳಿಸಿದ್ದಾರೆ.



ರಾಮ್‌ದೇವ್ ರಾಕೆ



ಸುಶೀಲ ನಾಡ



ಹಸನಬ್ಬ



ಜಿ.ಕೆ. ಪ್ರೇಮ

'ಬೋಧಿವೃಕ್ಷ' ಪ್ರಶಸ್ತಿ ಫಲಕ, ₹1 ಲಕ್ಷ ನಗದು ಹಾಗೂ 'ಬೋಧಿವರ್ಧನ' ಪ್ರಶಸ್ತಿ ಫಲಕ, ₹25 ಸಾವಿರ ನಗದು ಹೊಂದಿದೆ. ತಳಸ್ತರದವರ ಅಭಿವೃದ್ಧಿ ಮತ್ತು ಏಳಿಗೆಗಾಗಿ ದುಡಿದವರನ್ನು ಗುರುತಿಸುವ, ಗೌರವಿಸುವ ಸಲುವಾಗಿ ಈ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ ಎಂದಿದ್ದಾರೆ.

ಏಪ್ರಿಲ್ 14ರಂದು ಅಂಬೇಡ್ಕರ್ ಜಯಂತಿಯಂದು ಮಾಗಡಿ ಮುಖ್ಯರಸ್ತೆ ಅಂಜನಾನಗರದಲ್ಲಿರುವ 'ಸ್ಫೂರ್ತಿಧಾಮ'ದಲ್ಲಿ ನಡೆಯುವ 'ಅಂಬೇಡ್ಕರ್ ಹಬ್ಬ'ದಲ್ಲಿ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಸಬಿಹಾ ಭೂಮಿಗೌಡ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ಟಿ.ಆರ್. ಚಂದ್ರಶೇಖರ ಭಾಗವಹಿಸಲಿದ್ದಾರೆ ಎಂದು ತಿಳಿಸಿದ್ದಾರೆ.

ಭಾರತೀಯ ವಿದ್ಯಾರ್ಥಿಗಳ ಸಾವು: ಕ್ರಮಕ್ಕೆ ಒತ್ತಾಯ

ವಾಷಿಂಗ್ಟನ್(ಪಿಟಿಐ): ಅಮೆರಿಕದಲ್ಲಿ ಇತ್ತೀಚಿನ ದಿನಗಳಲ್ಲಿ ಭಾರತೀಯ ಮೂಲದ ವಿದ್ಯಾರ್ಥಿಗಳ ಸಾವುಗಳು ಹೆಚ್ಚುತ್ತಿರುವುದಕ್ಕೆ ಕಳವಳ ವ್ಯಕ್ತಪಡಿಸಿರುವ ಭಾರತೀಯರ ಸಂಘಟನೆವೊಂದು, ಈ ವಿಚಾರವಾಗಿ ಕೂಡಲೇ ಪರಿಹಾರಾತ್ಮಕ ಕ್ರಮಕೈಗೊಳ್ಳುವಂತೆ ಸರ್ಕಾರ ಹಾಗೂ ವಿಶ್ವವಿದ್ಯಾಲಯಗಳಿಗೆ ಮನವಿ ಮಾಡಿದೆ.

ಫೌಂಡೇಷನ್ ಫಾರ್ ಇಂಡಿಯಾ ಅಂಡ್ ಇಂಡಿಯನ್ ಡಯಸ್ಪೋರಾ ಸ್ಟಡೀಸ್ (ಎಫ್‌ಐಐಡಿಎಸ್) ಎಂಬ ಸಂಘಟನೆ ಈ ಮನವಿ ಮಾಡಿದೆ.

ವಿದ್ಯಾರ್ಥಿಗಳ ಸಾವಿಗೆ, ಶಂಕಾಸ್ಪದ ಗುಂಡಿನ ದಾಳಿ ಮತ್ತು ಅಪಘಾತ ಗಳು, ಅಪಹರಣ, ಆತ್ಮಹತ್ಯೆ ಮಾಡಿಕೊಳ್ಳುವುದು, ಸುರಕ್ಷತೆ ಕುರಿತು ಅರಿವಿನ ಕೊರತೆ ಸೇರಿದಂತೆ ಹಲವಾರು ಕಾರಣಗಳನ್ನು ಎಫ್‌ಐಐಡಿಎಸ್ ಗುರುತಿಸಿದೆ.

ಜಯದ ಹಾದಿಗೆ ಮರಳುವ ತವಕದಲ್ಲಿ ಆರ್‌ಸಿಬಿ

ವಿರಾಟ್ ಕೊಹ್ಲಿ– ರೋಹಿತ್ ಶರ್ಮಾ ಮುಖಾಮುಖಿ ಇಂದು • ಮುಂಬೈ ಇಂಡಿಯನ್ಸ್‌ಗೆ ಡುಪ್ಲೆಸಿ ಬಳಗದ ಸವಾಲು

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್


ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ವಿರಾಟ್ ಕೊಹ್ಲಿ —ಪಿಟಿಐ ಚಿತ್ರ

ಮುಂಬೈ (ಪಿಟಿಐ): ಸತತ ಸೋಲುಗಳಿಂದ ಕಂಗೆಟ್ಟಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಗುರುವಾರ ಮುಂಬೈ ಇಂಡಿಯನ್ಸ್ ಎದುರು ಕಣಕ್ಕಿಳಿಯಲಿದೆ.

ಈ ಬಾರಿಯ ಟೂರ್ನಿಯಲ್ಲಿ ಒಟ್ಟು ಐದು ಪಂದ್ಯಗಳನ್ನು ಆಡಿರುವ ಆರ್‌ಸಿಬಿ ತಂಡವು ನಾಲ್ಕರಲ್ಲಿ ಸೋತಿದೆ. ಮೊದಲ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಎದುರು ಸೋತಿತ್ತು. ಎರಡನೇ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ಜಯಿಸಿತ್ತು. ಅದರ ನಂತರ ಮೂರು ಹಣಾಹಣಿಗಳಲ್ಲಿ ಸತತ ಸೋಲಿನ ಕಹಿ ಅನುಭವಿಸಿದೆ.

ಆರಂಭದಿಂದಲೂ ಬೌಲಿಂಗ್ ವಿಭಾಗದ ದೌರ್ಬಲ್ಯವು ತಂಡವನ್ನು ಕಾಡಿದೆ. ಇದೀಗ ಬ್ಯಾಟಿಂಗ್ ವಿಭಾಗದ ಲೋಪಗಳೂ ಬಹಿರಂಗವಾಗಿವೆ. ವಿರಾಟ್ ಕೊಹ್ಲಿ (316 ರನ್) ಬಿಟ್ಟರೆ ಉಳಿದವರು ರನ್ ಗಳಿಸುತ್ತಿಲ್ಲ. ನಾಯಕ ಫಫ್ ಡುಪ್ಲೆಸಿ (109 ರನ್), ಗ್ಲೆನ್ ಮ್ಯಾಕ್ಸ್‌ವೆಲ್ (32 ರನ್) ಮತ್ತು ಕ್ಯಾಮರಾನ್ ಗ್ರೀನ್ (68 ರನ್) ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡಿಲ್ಲ. ಕಳೆದ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ಎದುರು ಕೊಹ್ಲಿ ಶತಕ ಗಳಿಸಿದ್ದರು. ಆದರೆ ಆ ಪಂದ್ಯದಲ್ಲಿಯೂ ಬೌಲರ್‌ಗಳು ವಿಫಲರಾದರು.

ಹೋದ ವರ್ಷ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದ್ದ ಏಕದಿನ ವಿಶ್ವಕಪ್ ಟೂರ್ನಿಯ ಸೆಮಿಫೈನಲ್‌ನಲ್ಲಿ ವಿರಾಟ್ ಶತಕ ಬಾರಿಸಿದ್ದರು. ಅದು ಅವರು ಏಕದಿನ ಕ್ರಿಕೆಟ್‌ನಲ್ಲಿ ದಾಖಲಿಸಿದ್ದ 50ನೇ ಶತಕವಾಗಿತ್ತು. ತಮ್ಮ ಅದೃಷ್ಟದ ಅಂಗಳದಲ್ಲಿ ಮತ್ತೆ ಮಿಂಚುವ ನಿರೀಕ್ಷೆಯನ್ನು ಅವರು ಹುಟ್ಟುಹಾಕಿದ್ದಾರೆ. ಅನುಭವಿ ಬೌಲರ್ ಮೊಹಮ್ಮದ್ ಸಿರಾಜ್ ಮತ್ತು ಇತರ ಬೌಲರ್‌ಗಳು ಎದುರಾಳಿ ಬ್ಯಾಟರ್‌ಗಳಿಗೆ ಕಡಿವಾಣ ಹಾಕುವಲ್ಲಿ ಯಶಸ್ವಿಯಾಗುತ್ತಿಲ್ಲ.


ರೋಹಿತ್ ಶರ್ಮಾ

ಇದರಿಂದಾಗಿ ತಂಡವು ಸೋಲುತ್ತಿದೆ. ಅಲ್ಜರಿ ಜೋಸೆಫ್, ರೀಸ್ ಟಾಪ್ಲಿ ಕೂಡ ಮಂಕಾಗಿದ್ದಾರೆ. ಇತ್ತ ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡದ ಸ್ಥಿತಿ ಕೂಡ ಭಿನ್ನವೇನಿಲ್ಲ. ಆರಂಭದ ಮೂರು ಪಂದ್ಯಗಳಲ್ಲಿ ಸತತ ಸೋಲು ಅನುಭವಿಸಿದ್ದ ತಂಡವು ಕಳೆದ ಹಣಾಹಣಿಯಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಎದುರು ಗೆದ್ದಿತ್ತು. ಈಗ ಅದೇ ಆತ್ಮವಿಶ್ವಾಸದಿಂದ ಕಣಕ್ಕಿಳಿಯಲು ಸಿದ್ಧವಾಗಿದೆ.

ಕಳೆದ ಪಂದ್ಯದಲ್ಲಿ ರೋಹಿತ್ ಶರ್ಮಾ ಮತ್ತು ಇಶಾನ್ ಕಿಶನ್ ಉತ್ತಮ ಆರಂಭ ನೀಡಿದ್ದರು. ಕೊನೆಯ ಹಂತದಲ್ಲಿ ರೊಮೆರಿಯೊ ಶೆಫರ್ಡ್ ಮತ್ತು ಟಿಮ್ ಡೇವಿಡ್ ಕೂಡ ಮಿಂಚಿದ್ದರು. ಇದರಿಂದಾಗಿ ಬೃಹತ್ ಮೊತ್ತ ಸೇರಿತ್ತು. ಇವರನ್ನು ಕಟ್ಟಿಹಾಕುವ ಸವಾಲು ಬೆಂಗಳೂರು ಬೌಲರ್‌ಗಳ ಮುಂದಿದೆ.

ಮುಂಬೈ ತಂಡದ ಜಸ್‌ಪ್ರೀತ್ ಬೂಮ್ರಾ, ಗೆರಾಲ್ಡ್ ಕೋಯಿಜಿ, ಆಕಾಶ್ ಮದ್ವಾಲ್, ಪಿಯೂಷ್ ಚಾವ್ಲಾ ಅವರು ಫಫ್ ಬಳಗಕ್ಕೆ ಕಠಿಣ ಸವಾಲೊಡ್ಡಬಲ್ಲವರಾಗಿದ್ದಾರೆ. ಪಾಯಿಂಟ್ ಪಟ್ಟಿಯಲ್ಲಿ ಕೆಳಹಂತದಲ್ಲಿರುವ ಉಭಯ ತಂಡಗಳಿಗೂ ಮುಂಬರುವ ಪಂದ್ಯಗಳಲ್ಲಿ ಗೆಲ್ಲುವುದು ಮಹತ್ವದ್ದಾಗಲಿದೆ. ಆದ್ದರಿಂದ ತುರುಸಿನ ಪೈಪೋಟಿ ನಡೆಯುವ ಎಲ್ಲ ಲಕ್ಷಣಗಳೂ ಇವೆ.

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ರಾಜಸ್ಥಾನ ರಾಯಲ್ಸ್	5	4	1	8	0.871
ಕೋಲ್ಕತ್ತ ನೈಟ್ ರೈಡರ್ಸ್	4	3	1	6	1.528
ಲಖನೌ ಸೂಪರ್ ಜೈಂಟ್ಸ್	4	3	1	6	0.775
ಚೆನ್ನೈ ಸೂಪರ್ ಕಿಂಗ್ಸ್	5	3	2	6	0.666
ಸನ್‌ರೈಸರ್ಸ್ ಹೈದರಾಬಾದ್	5	3	2	6	0.344
ಗುಜರಾತ್ ಟೈಟನ್ಸ್	6	3	3	6	-0.637
ಪಂಜಾಬ್ ಕಿಂಗ್ಸ್	5	2	3	4	-0.196
ಮುಂಬೈ ಇಂಡಿಯನ್ಸ್	4	1	3	2	-0.704
ರಾಯಲ್ ಚಾಲೆಂಜರ್ಸ್ ಬೆಂಗಳೂರು	5	1	4	2	-0.843
ಡೆಲ್ಲಿ ಕ್ಯಾಪಿಟಲ್ಸ್	5	1	4	2	-1.370

ಆರೆಂಜ್ ಕ್ಯಾಪ್: ವಿರಾಟ್ ಕೊಹ್ಲಿ, ಆರ್‌ಸಿಬಿ (316 ರನ್)
ಪರ್ಪಲ್ ಕ್ಯಾಪ್: ಯಜುವೇಂದ್ರ ಚಾಹಲ್, ರಾಜಸ್ಥಾನ ರಾಯಲ್ಸ್ (10 ವಿಕೆಟ್)

ಸನ್‌ರೈಸರ್ಸ್‌ಗೆ ರೋಚಕ ಜಯ


ಅರ್ಧಶತಕ ಸಿಡಿಸಿದ ನಿತೀಶ್ ರೆಡ್ಡಿ

ಮುಲ್ಲನಪುರ (ಪಿಟಿಐ): ನಿತೀಶ್ ರೆಡ್ಡಿ (64; 37ಎ, 4x4, 6x5) ಅವರ ಆಕರ್ಷಕ ಅರ್ಧ ಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ತಂಡವು ಮಂಗಳವಾರ ಐಪಿಎಲ್‌ನ ಪಂದ್ಯದಲ್ಲಿ ಪಂಜಾಬ್ ಕಿಂಗ್ ವಿರುದ್ಧ ಎರಡು ರನ್‌ಗಳ ರೋಚಕ ಜಯ ಸಾಧಿಸಿತು. ಇದರೊಂದಿಗೆ ಕಿಂಗ್ಸ್ ತಂಡದ ಶಶಾಂಕ್ ಸಿಂಗ್ ಹಾಗೂ ಆಶುತೋಷ್ ಶರ್ಮಾ ಅವರ ಹೋರಾಟಕ್ಕೆ ಬೆಲೆ ಸಿಗಲಿಲ್ಲ.

ಸನ್‌ರೈಸರ್ಸ್ ತಂಡವು ನಿತೇಶ್ ಬ್ಯಾಟಿಂಗ್ ಬಲದಿಂದ 20 ಓವರ್‌ಗಳಲ್ಲಿ 9 ವಿಕೆಟ್ ಕಳೆದುಕೊಂಡು 182 ರನ್ ಕಲೆ ಹಾಕಿತು. ಈ ಸವಾಲಿನ ಗುರಿಯನ್ನು ಬೆನ್ನತ್ತಿದ ಆತಿಥೇಯ ತಂಡಕ್ಕೆ ಸನ್‌ರೈಸರ್ಸ್‌ನ ವೇಗದ ಬೌಲರ್‌ಗಳಾದ ಪ್ಯಾಟ್ ಕಮಿನ್ಸ್ ಮತ್ತು ಭುವನೇಶ್ವರ್ ಕುಮಾರ್ ಆರಂಭದಲ್ಲೇ ಆಘಾತ ನೀಡಿದರು. 20 ರನ್ ಗಳಿಸುವಷ್ಟರಲ್ಲಿ ಶಿಖರ ಧವನ್ (14), ಜಾನಿ ಬೇಸ್ಟೊ (0) ಮತ್ತು ಪ್ರಭಸಿಮ್ರನ್ ಸಿಂಗ್ (4) ಅವರನ್ನು ಕಳೆದುಕೊಂಡಿತು.

ನಂತರದಲ್ಲಿ ಸ್ಯಾಮ್ ಕರನ್ (29) ಮತ್ತು ಸಿಕಂದರ್ ರಝಾ (28) ತಂಡಕ್ಕೆ ಕೊಂಚ ಆಸರೆಯಾಗಿ ನಿರ್ಗಮಿಸಿದರು. ಜಿತೇಶ್ ಶರ್ಮಾ (19) ಕೂಡಾ ದೊಡ್ಡ ಹೊಡೆತಕ್ಕೆ ಕೈ ಹಾಕಿ ಔಟಾದರು. ಬಳಿಕ ಶಶಾಂಕ್ (ಔಟಾಗದೆ 46; 25ಎ, 4x6, 6x1) ಮತ್ತು ಅಶುತೋಷ್ (ಔಟಾಗದೆ 33; 15ಎ, 4x3, 6x2) ಅವರು ಸ್ಫೋಟಕ ಬ್ಯಾಟಿಂಗ್ ಮೂಲಕ ಗಮನ ಸೆಳೆದರು. ಜಯದೇವ್ ಉನದ್ಕತ್ ಎಸೆದ ಕೊನೆಯ ಓವರ್‌ನಲ್ಲಿ 29 ರನ್‌ಗಳ ಅಗತ್ಯವಿತ್ತು. ಈ ಓವರ್‌ನಲ್ಲಿ ಮೂರು ಸಿಕ್ಸರ್‌ನೊಂದಿಗೆ 27 ರನ್ ಹರಿದು ಬಂತಾದರೂ ಗೆಲುವಿಗೆ ಎರಡು ರನ್ ಕೊರತೆಯಾಯಿತು. ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗೆ 180 ರನ್ ಗಳಿಸಲಷ್ಟೇ ಶಕ್ತವಾಯಿತು.

ಇದಕ್ಕೂ ಮೊದಲು ಸನ್‌ರೈಸರ್ಸ್‌ಗೆ ಕಿಂಗ್ಸ್ ಬೌಲರ್‌ಗಳು ಆರಂಭದಲ್ಲೇ ಹೊಡೆತ ನೀಡಿದರು. ಟ್ರಾವಿಸ್ ಹೆಡ್ (21), ಏಡೆನ್ ಮರ್ಕರಂ (0), ಅಭಿಷೇಕ್ ಶರ್ಮಾ (16), ರಾಹುಲ್ ತ್ರಿಪಾಠಿ (11), ಹೆನ್ರಿಚ್ ಕ್ಲಾಸೆನ್ (9) ಅವರನ್ನು ಕಳೆದುಕೊಂಡು ಅಲ್ಪ ಮೊತ್ತಕ್ಕೆ ಕುಸಿಯುವ ಆತಂಕದಲ್ಲಿತ್ತು. ಒಂದೆಡೆ ವಿಕೆಟ್‌ಗಳು ಉರುಳುತ್ತಿದ್ದರೂ ನಿತೀಶ್ ಜವಾಬ್ದಾರಿಯುತವಾಗಿ ಆಟವಾಡಿದರು.

ಯುಗಾದಿ ಮುಸ್ಸಂಜೆಗೆ ‘ಚಿನ್ನ’ದ ಹೊಳಪು

ಬೌಲರ್ ಎಸೆತ ಹಾಕದೇ ಪಂದ್ಯ ಆರಂಭವಾಗದು: ಪ್ರಸನ್ನ ಮಾತಿನ ಮೋಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ರಿಕೆಟ್ ಬ್ಯಾಟರ್‌ಗಳ ಆಟವಿರಬಹುದು. ಆದರೆ ಬೌಲರ್ ಮೊದಲ ಎಸೆತ ಹಾಕದೆ ಯಾವ ಪಂದ್ಯವೂ ಆರಂಭವಾಗುವುದಿಲ್ಲ’–

ಸ್ಪಿನ್ ಬೌಲಿಂಗ್‌ನ ದಂತಕಥೆ ಎರ್ರಪಳ್ಳಿ ಪ್ರಸನ್ನ ಅವರ ಈ ಮಾತು ಯುಗಾದಿ ಹಬ್ಬದ ಮುಸ್ಸಂಜೆಯ ಸೊಬಗನ್ನು ನೂರ್ಮಡಿಗೊಳಿಸಿತು. ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ (ಬಿಐಸಿ) ಸಭಾಂಗಣದಲ್ಲಿ ಸೇರಿದ್ದ ಕ್ರಿಕೆಟ್‌ಪ್ರೇಮಿಗಳಲ್ಲಿ ಸಂಚಲನ ಮೂಡಿಸಿತು. 1974ರಲ್ಲಿ ಪ್ರಸನ್ನ ನಾಯಕತ್ವದ ಕರ್ನಾಟಕ ತಂಡವು ಮೊದಲ ಸಲ ರಣಜಿ ಟ್ರೋಫಿ ಗೆದ್ದ ಸಂಭ್ರಮಕ್ಕೆ 50 ವರ್ಷ ತುಂಬಿದ ಸಂದರ್ಭದಲ್ಲಿ ಮಂಗಳವಾರ ಸಂವಾದ ಆಯೋಜಿಸಲಾಗಿತ್ತು. ದಶಕಗಳ ಹಿಂದೆ ಪ್ರಸನ್ನ ಅವರ ಸ್ಪಿನ್ ಮೋಡಿಗೆ ಶರಣಾಗುತ್ತಿದ್ದ ಖ್ಯಾತನಾಮ ಬ್ಯಾಟರ್‌ಗಳಂತೆಯೇ ಈ ಸಂವಾದದಲ್ಲಿ ಅವರ ಮಾತಿನ ಧಾಟಿಗೆ ಕೇಳುಗರು ‘ಕ್ಲೀನ್‌ಬೌಲ್ಡ್’ ಆದರು. ಇತಿಹಾಸಕಾರ ರಾಮಚಂದ್ರ ಗುಹಾ ಅವರು ಸಂವಾದವನ್ನು ನಿರ್ವಹಿಸಿದರು. ಕ್ರಿಕೆಟ್ ಲೇಖಕ ಸುರೇಶ್ ಮೆನನ್ ಮತ್ತು ಕ್ರೀಡಾ ಪತ್ರಕರ್ತೆ ಶಾರದಾ ಉಗ್ರಾ ಮಾತನಾಡಿದರು.

ಆ ಟೂರ್ನಿಯ ಸೆಮಿಫೈನಲ್ ನಲ್ಲಿ ಬಾಂಬೆ ತಂಡವನ್ನು ಸೋಲಿಸಿದ್ದು ಕರ್ನಾಟಕದ ಐತಿಹಾಸಿಕ ಸಾಧನೆ ಯಾಗಿತ್ತು. ಸತತ ಹದಿನೈದು ಬಾರಿ ರಣಜಿ ಟ್ರೋಫಿ ಗೆದ್ದ ಬಾಂಬೆ ತಂಡದಲ್ಲಿದ್ದ ಸುನಿಲ್ ಗಾವಸ್ಕರ್ ಅವರನ್ನು ಔಟ್ ಮಾಡಿದ್ದ ಪ್ರಸನ್ನ ಅವರ ಎಸೆತವು ‘ಬಾಲ್ ಆಫ್ ದಿ ಸೆಂಚುರಿ’ ಎಂದೇ ಹೆಸರಾಗಿದೆ.

ಆ ಎಸೆತದ ಕುರಿತು ಮಾತನಾಡಿದ ಪ್ರಸನ್ನ, ‘ನನ್ನೆದುರಿಗೆ ಗ್ಯಾರಿ ಸೋಬರ್ಸ್, ಸುನಿಲ್ ಗಾವಸ್ಕರ್, ರೋಹನ್ ಕನ್ಹಾಯ್ ಅವರಂತಹ ಶ್ರೇಷ್ಠರಿದ್ದರೂ ಅಷ್ಟೇ. ಅವರು ನನ್ನ ಪಾಲಿಗೆ ಬ್ಯಾಟರ್ ಮಾತ್ರ. ಕ್ರಿಕೆಟ್ ಬ್ಯಾಟ್ಸ್‌ಮನ್ ಗೇಮ್ ಆಗಿದ್ದರೂ ಬೌಲರ್ ಎಸೆತ ಹಾಕದೇ ಪಂದ್ಯ ಆರಂಭವಾಗದು. ಈ ಅಂಶವೇ ನನ್ನ ಗಟ್ಟಿ ಮನೋಭಾವಕ್ಕೆ ಕಾರಣ. ಗಾವಸ್ಕರ್ ಅವರು ದೈಹಿಕವಾಗಿ ಹೆಚ್ಚು ಎತ್ತರವಿಲ್ಲ. ಆದ್ದರಿಂದ ಅವರು ಕ್ರೀಸ್ ನಿಂದ ಮುಂದೆ ಬಂದು ಆಡುವಂತಹ ಎಸೆತ ಪ್ರಯೋಗಿಸಿದೆ. ಡ್ರಿಫ್ಟ್ ಆದ ಚೆಂಡು ಸ್ಟಂಪ್‌ಗಳತ್ತ ನುಗ್ಗಿತು. ಗಾವಸ್ಕರ್ ಔಟ್ ಆದರು’ ಎಂದರು.

‘ಆ ಪಂದ್ಯದಲ್ಲಿ ಮುಂಬೈ ತಂಡದ ನಾಯಕ ಅಜಿತ್ ವಾಡೇಕರ್ ಅವರ ರನ್‌ಔಟ್ ಆಗಿದ್ದು ಪ್ರಮುಖ ತಿರುವು. ಗಾವಸ್ಕರ್ ಔಟಾದರೂ ಇನಿಂಗ್ಸ್‌ಗೆ ಬಲ ತುಂಬಲು ವಾಡೇಕರ್ ಪ್ರಯತ್ನಿಸಿದ್ದರು. ಆದರೆ ಸುಧಾಕರ್ ರಾವ್ ಮಾಡಿದ ಥ್ರೋನಿಂದಾಗಿ ವಾಡೇಕರ್ ರನ್‌ಔಟ್ ಆಗಿದ್ದು ಪ್ರಮುಖ ಘಟ್ಟವಾಯಿತು’ ಎಂದು ಹೇಳಿದರು.

‘ಸೈಯದ್ ಕಿರ್ಮಾನಿ ಭಾರತ ಕಂಡ ಸರ್ವಶ್ರೇಷ್ಠ ವಿಕೆಟ್‌ಕೀಪರ್. ಯಾಕೆಂದರೆ ಅವರು ಚಂದ್ರಾ (ಬಿ.ಎಸ್. ಚಂದ್ರಶೇಖರ್) ಅವರಂತಹ ದಿಗ್ಗಜ ಲೆಗ್‌ಸ್ಪಿನ್ನರ್ ಅವರ ಎಸೆತಗಳಿಗೆ ಕೀಪಿಂಗ್ ಮಾಡಿದ್ದಾರೆ. ಚಂದ್ರಾ ಅವರ ಎಸೆತಗಳ ಚಲನೆಯನ್ನು ಅಂದಾಜಿಸುವುದು ಅಷ್ಟು ಸುಲಭವಾಗಿರುತ್ತಿರಲಿಲ್ಲ. ಒಂದೊಂದು ಬಾರಿ ಚಂದ್ರ ಅವರಿಗೇ ತಮ್ಮ ಎಸೆತದ ತಿರುವಿನ ಅಂದಾಜು ಸಿಗುತ್ತಿರಲಿಲ್ಲ. ಆದರೆ ಬ್ಯಾಟರ್‌ಗಿಂತಲೂ ಮೊದಲೇ ಆ ಎಸೆತಗಳನ್ನು ಅಂದಾಜಿಸುವ ಚಾಕಚಕ್ಯತೆ ಕಿರ್ಮಾನಿ ಅವರದ್ದಾಗಿತ್ತು’ ಎಂದು ಪ್ರಸನ್ನ ಶ್ಲಾಘಿಸಿದರು.

‘ಜಿ.ಆರ್. ವಿಶ್ವನಾಥ್ ಅವರು ಶ್ರೇಷ್ಠ ಬ್ಯಾಟರ್. ನಾನು ಬೌಲಿಂಗ್ ಮಾಡಲು ಕಠಿಣ ಸವಾಲೆನಿಸಬಹುದಾಗಿದ್ದ ಬ್ಯಾಟರ್ ಅವರು. ಅದೃಷ್ಟವಶಾತ್ ನಾನು ಮತ್ತು ಅವರು ಒಂದೇ ತಂಡದಲ್ಲಿದ್ದ ಕಾರಣ ಬೌಲಿಂಗ್ ಮಾಡಲಿಲ್ಲ’ ಎಂದರು.

ತಮ್ಮ ತಂಡದಲ್ಲಿದ್ದ ಕೆ.ಲಕ್ಷ್ಮಣ್, ವಿಜಯಕುಮಾರ್, ವಿಜಯಕೃಷ್ಣ, ಬ್ರಿಜೇಶ್ ಪಟೇಲ್, ಎ.ವಿ. ಜಯಪ್ರಕಾಶ್ ಸೇರಿದಂತೆ ಎಲ್ಲ ಆಟಗಾರರ ಸಂಘಟಿತ ಆಟವನ್ನೂ ಪ್ರಸನ್ನ ಸ್ಮರಿಸಿದರು.


ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿ.ಐ.ಸಿ)ದಲ್ಲಿ ಮಂಗಳವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ರಾಮಚಂದ್ರ ಗುಹಾ, ಸುರೇಶ್ ಮೆನನ್, ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಎರ್ರಪಳ್ಳಿ ಪ್ರಸನ್ನ ಹಾಗೂ ಶಾರದಾ ಉಗ್ರಾ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

‘ಟಿ20 ಮಾದರಿ ಪ್ರೇಕ್ಷಕರ ಗೇಮ್’

‘ಟ್ವೆಂಟಿ–20 ಮಾದರಿಯು ಮೂಲತಃ ಕ್ರಿಕೆಟ್ ಅಲ್ಲ. ಅದು ಪ್ರೇಕ್ಷಕರ ಮನರಂಜನೆಯ ಆಟ. ಬೌಂಡರಿ, ಸಿಕ್ಸರ್‌ಗಳ ಭರಾಟೆಯು ನೋಡುಗರ ಮನಕ್ಕೆ ಮುದ ನೀಡುತ್ತದೆ. ಸಿಕ್ಸರ್, ಬೌಂಡರಿಗಳಿಲ್ಲದ ಟಿ20 ಪಂದ್ಯಕ್ಕೆ ಪ್ರೇಕ್ಷಕರು ಬರುತ್ತಾರೆಂದು ನನಗನಿಸುವುದಿಲ್ಲ. ಆದ್ದರಿಂದ ಈ ಮಾದರಿಯಲ್ಲಿ ಸ್ಪಿನ್ನರ್‌ಗಳು ಬೌಲಿಂಗ್ ಮಾಡುವುದು ಕಷ್ಟ’ ಎಂದು ಪ್ರಸನ್ನ ಹೇಳಿದರು.

‘ಸ್ಪಿನ್ ಬೌಲಿಂಗ್ ಅನ್ನು ಯಾ ರೂ ಯಾರಿಗೂ ಕಲಿಸಲಾಗದು. ಅದು ವಿಭಿನ್ನ ಕಲೆ. ಟಿ20 ಮಾದರಿಯಲ್ಲಿ ಬೌಲರ್‌ಗೆ ಕೇವಲ ನಾಲ್ಕು ಓವರ್ ಮಾಡಲು ಅವಕಾಶವಿದೆ. ಚೆನ್ನಾಗಿ ಬೌಲಿಂಗ್ ಮಾಡದಿದ್ದರೆ ಮುಂದಿನ ಪಂದ್ಯದಲ್ಲಿ ಸ್ಥಾನ ಸಿಗಲ್ಲವೆಂಬ ಒತ್ತಡವಿರುತ್ತದೆ‘ ಎಂದರು

‘ಕಪಿಲ್‌ಗೆ ಸಿಕ್ಕ ಶ್ರೇಯ ಶ್ರೀನಾಥ್‌ಗಿಲ್ಲ’

ಭಾರತದಲ್ಲಿ ವೇಗದ ಬೌಲರ್‌ಗಳು ಬೆಳೆಯಲು ಕನ್ನಡಿಗ ಜಾವಗಲ್ ಶ್ರೀನಾಥ್ ಅವರೇ ಪ್ರಮುಖ ಪ್ರೇರಣೆ. ಆದರೆ ಕಪಿಲ್ ದೇವ್ ಅವರಿಗೆ ಸಿಕ್ಕಷ್ಟು ಶ್ರೇಯ ಶ್ರೀನಾಥ್‌ಗೆ ಸಿಗಲಿಲ್ಲ. ಭಾರತದ ಕ್ರಿಕೆಟ್‌ನಲ್ಲಿ ವೇಗದ ಬೌಲಿಂಗ್ ಬಗ್ಗೆ ಇದ್ದ ಮಿಥ್ಯೆಗಳನ್ನು ತೊಡೆದುಹಾಕಿ ಸಾಮರ್ಥ್ಯ ಮೆರೆದವರು ಶ್ರೀನಾಥ್. ವೇಗದ ಬೌಲರ್‌ಗಳು ಪ್ರವರ್ಧಮಾನಕ್ಕೆ ಬರಲು ಶ್ರೀನಾಥ್ ಕಾರಣರಾದರು ಎಂದು ಕ್ರೀಡಾ ಪತ್ರಕರ್ತೆ ಶಾರದಾ ಉಗ್ರಾ ಹೇಳಿದರು.

‘ಇತಿಹಾಸ ನಿರ್ಮಾಣ’

ನಾನು ಇತಿಹಾಸಕಾರನಾಗಿ ಹಲವಾರು ಐತಿಹಾಸಿಕ ಘಟನೆಗಳ ಅಧ್ಯಯನ ಮಾಡಿರುವೆ. ಆದರೆ ಕರ್ನಾಟಕ ತಂಡವು ದೇಶಿ ಕ್ರಿಕೆಟ್‌ನಲ್ಲಿ ಬಾಂಬೆ ತಂಡವನ್ನು ಸೋಲಿಸಿ ಇತಿಹಾಸ ನಿರ್ಮಾಣ ಮಾಡಿದ್ದನ್ನು ನೋಡಿದೆ ಎಂದು ರಾಮಚಂದ್ರ ಗುಹಾ ಹೇಳಿದರು.

‘ಕರ್ನಾಟಕ - ಮುಂಬೈ ಸೆಮಿಫೈನಲ್ ನಡೆದಾಗ ನಾನು 14 ವರ್ಷದವನಾಗಿದ್ದೆ, ಪಂದ್ಯ ನೋಡುವ ಅವಕಾಶ ಒದಗಿಬಂದಿತ್ತು. ವಾಡೇಕರ್ ರನೌಟ್ ಆಗಿ ನಿರಾಸೆ ಯಿಂದ ತಲೆ ಅಲ್ಲಾಡಿಸುತ್ತ ಪೆವಿಲಿಯನ್‌ಗೆ ಮರಳಿದ್ದರು’ ಎಂದು ಕ್ರಿಕೆಟ್ ಲೇಖಕ ಸುರೇಶ್ ಮೆನನ್ ನೆನಪಿಸಿಕೊಂಡರು

ರಾಜಸ್ಥಾನ ತಂಡಕ್ಕೆ ಮೊದಲ ಸೋಲು: ಶುಭಮನ್ ಗಿಲ್ ಅರ್ಧಶತಕ

ಟೈಟನ್ಸ್‌ಗೆ ಮಣಿದ ರಾಯಲ್ಸ್

ಜೈಪುರ (ಪಿಟಿಐ): ಗುಜರಾತ್ ಟೈಟನ್ಸ್ ಬ್ಯಾಟರ್‌ಗಳು ತಮ್ಮ ಛಲದ ಆಟದ ಮೂಲಕ ರಾಜಸ್ಥಾನ ರಾಯಲ್ಸ್ ತಂಡದ ಗೆಲುವಿನ ಓಟಕ್ಕೆ ತಡೆಯೊಡ್ಡಿದರು. ಇದರಿಂದಾಗಿ ಸಂಜು ಸ್ಯಾಮ್ಸನ್ ಬಳಗವು ಈ ಟೂರ್ನಿಯಲ್ಲಿ ಮೊದಲ ಬಾರಿಗೆ ಸೋತಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಗುಜರಾತ್ ತಂಡವು 3 ವಿಕೆಟ್‌ಗಳಿಂದ ರೋಚಕ ಜಯ ಸಾಧಿಸಿತು.

197 ರನ್‌ಗಳ ಗೆಲುವಿನ ಗುರಿ ಬೆನ್ನಟ್ಟಿದ್ದ ಟೈಟನ್ಸ್ ತಂಡಕ್ಕೆ ಶುಭಮನ್ ಗಿಲ್ (72; 44ಎ, 4X6, 6X2) ಹಾಗೂ ಸಾಯಿ ಸುದರ್ಶನ್ (35 ರನ್) ಅವರು ಉತ್ತಮ ಅಡಿಪಾಯ ಹಾಕಿದರು. ಅದರ ಮೇಲೆ ರಾಹುಲ್ ತೆವಾಟಿಯಾ (22; 11ಎ) ಮತ್ತು ರಶೀದ್ ಖಾನ್ (ಔಟಾಗದೆ 24; 11ಎ) ಗೆಲುವಿನ ಸೌಧ ಕಟ್ಟಿದರು. ಶಾರೂಕ್ ಖಾನ್ (14; 8ಎ) ಕೂಡ ಮಹತ್ವದ ಕಾಣಿಕೆ ನೀಡಿದರು. ರಾಯಲ್ಸ್ ತಂಡದ ಕುಲದೀಪ್ ಸೇನ್ (41ಕ್ಕೆ3) ಮತ್ತು ಯಜುವೇಂದ್ರ ಚಾಹಲ್ (43ಕ್ಕೆ2) ಅವರ ಆಟಕ್ಕೆ ಜಯ ಒಲಿಯಲಿಲ್ಲ.

ಪರಾಗ್‌–ಸಂಜು ಜೊತೆಯಾಟ: ಟಾಸ್ ಗೆದ್ದ ಗುಜರಾತ್ ಟೈಟನ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ರಾಜಸ್ಥಾನ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 196 ರನ್‌ಗಳ ಬೃಹತ್ ಮೊತ್ತ ಪೇರಿಸಿತು. ಪವರ್‌ಪ್ಲೇ ಅವಧಿಯಲ್ಲಿ ರಾಜಸ್ಥಾನ ತಂಡವು 43 ರನ್‌ಗಳಿಗೆ 2 ವಿಕೆಟ್ ಕಳೆದುಕೊಂಡಿತು. ಯಶಸ್ವಿ ಜೈಸ್ವಾಲ್ (24; 19ಎ) ಮತ್ತು ಜೋಸ್ ಬಟ್ಲರ್ ಔಟಾದರು.


ಅರ್ಧಶತಕ ಗಳಿಸಿದ ಗುಜರಾತ್ ಟೈಟನ್ಸ್‌ನ ಶುಭಮನ್ ಗಿಲ್ –ಪಿಟಿಐ ಚಿತ್ರ

ಆದರೆ ಸಂಜು (ಔಟಾಗದೆ 68; 38ಎ, 4X7,6X2) ಮತ್ತು ರಿಯಾನ್ (76; 48ಎ, 4X3, 6X5) ಅವರಿಬ್ಬರ ಜೊತೆಯಾಟವು ತಂಡಕ್ಕೆ ಉತ್ತಮ ಮೊತ್ತ ಪೇರಿಸಲು ಕಾರಣವಾಯಿತು. ಇವರಿಬ್ಬರ ಆಟದ ಭರಾಟೆಗೆ ಕೊನೆಯ 10 ಓವರ್‌ಗಳಲ್ಲಿ 123 ರನ್‌ಗಳು ಹರಿದುಬಂದವು. ಈ ಟೂರ್ನಿಯಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡುತ್ತಿರುವ ರಿಯಾನ್ ಮಿಂಚುತ್ತಿದ್ದಾರೆ. ಇದು ಅವರ ಮೂರನೇ ಅರ್ಧಶತಕವಾಗಿದೆ. ಸಂಜು ಅವರೊಂದಿಗಿನ ಜೊತೆಯಾಟದಲ್ಲಿ ರಿಯಾನ್ 130 ರನ್ (78ಎಸೆತ) ಸೇರಿಸಿದರು.

ಪರಾಗ್ ಅವರು (0 ಮತ್ತು 6) ಎರಡು ಜೀವದಾನ ಗಿಟ್ಟಿಸಿದರು. ಸ್ಪಿನ್ನರ್ ರಶೀದ್ ಖಾನ್ ಬೌಲಿಂಗ್‌ನಲ್ಲಿ ಫೀಲ್ಡರ್ ಮ್ಯಾಥ್ಯೂ ವೇಡ್ ಕೈಚೆಲ್ಲಿದ ಕ್ಯಾಚ್‌ಗಳು ತಂಡಕ್ಕೆ ದುಬಾರಿಯಾದವು. 22 ವರ್ಷದ ರಿಯಾನ್ ಇದರ ಸಂಪೂರ್ಣ ಲಾಭ ಪಡೆದರು. ಇನ್ನೊಂದೆಡೆ ಸಂಜು ಅವರು ಉಮೇಶ್ ಯಾದವ್ ಬೌಲಿಂಗ್‌ನಲ್ಲಿ ಎರಡು ಸತತ ಬೌಂಡರಿ ಬಾರಿಸಿ ತಮ್ಮ ಖಾತೆ ತೆರೆದರು. ಗುಜರಾತ್ ತಂಡದ ಫೀಲ್ಡರ್‌ಗಳ ಲೋಪಗಳ ಲಾಭ ಸಂಜುಗೂ ದಕ್ಕಿತು. ಮೋಹಿತ್ ಎಸೆತವನ್ನು ಬೌಂಡರಿಯತ್ತ ಹೊಡೆದ ಸಂಜು ಕ್ಯಾಚ್ ಪಡೆಯುವಲ್ಲಿ ರಾಹುಲ್ ತೆವಾಟಿಯಾ ವಿಫಲರಾದರು.

ಸಂಕ್ಷಿಪ್ತ ಸ್ಕೋರು: ರಾಜಸ್ಥಾನ ರಾಯಲ್ಸ್: 20 ಓವರ್‌ಗಳಲ್ಲಿ 3 ವಿಕೆಟ್‌ಗೆ 196 (ಯಶಸ್ವಿ ಜೈಸ್ವಾಲ್ 24, ಸಂಜು ಸ್ಯಾಮ್ಸನ್ ಔಟಾಗದೆ 68, ರಿಯಾನ್ ಪರಾಗ್ 76, ಉಮೇಶ್ ಯಾದವ್ 47ಕ್ಕೆ1, ರಶೀದ್ ಖಾನ್ 18ಕ್ಕೆ1, ಮೋಹಿತ್ ಶರ್ಮಾ 51ಕ್ಕೆ1)
ಗುಜರಾತ್ ಟೈಟನ್ಸ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 199 (ಸಾಯಿ ಸುದರ್ಶನ್ 35, ಶುಭಮನ್ ಗಿಲ್ 72, ರಾಹುಲ್ ತೆವಾಟಿಯಾ 22, ರಶೀದ್ ಖಾನ್ ಔಟಾಗದೆ 24, ಯಜುವೇಂದ್ರ ಚಹಲ್ 43ಕ್ಕೆ2, ಕುಲದೀಪ್ ಸೇನ್ 41ಕ್ಕೆ2)
ಪಂದ್ಯದ ಆಟಗಾರ: ರಶೀದ್ ಖಾನ್
ಫಲಿತಾಂಶ: ಗುಜರಾತ್ ಟೈಟನ್ಸ್‌ಗೆ ಮೂರು ವಿಕೆಟ್ ಜಯ.


ಹೆಪಟೈಟಿಸ್: ಭಾರತಕ್ಕೆ 2ನೇ ಸ್ಥಾನ

ಜಿನಿವಾ (ಪಿಟಿಐ): ಭಾರತದಲ್ಲಿ 2022ರಲ್ಲಿ ‘ಹೆಪಟೈಟಿಸ್ ಬಿ ಮತ್ತು ಸಿ’ನ 3.5 ಕೋಟಿ ಪ್ರಕರಣಗಳು ಪತ್ತೆಯಾಗಿದ್ದು, ಇದರೊಂದಿಗೆ ಅತಿ ಹೆಚ್ಚು ಸೋಂಕು ಇರುವ ಜಗತ್ತಿನ ಎರಡನೇ ದೇಶವಾಗಿದೆ. ಮೊದಲನೇ ಸ್ಥಾನದಲ್ಲಿ ಚೀನಾ ಇದೆ ಎಂದು ವಿಶ್ವ ಆರೋಗ್ಯ ಸಂಸ್ಥೆಯ (ಡಬ್ಲ್ಯುಎಚ್‌ಒ) ವರದಿ ತಿಳಿಸಿದೆ.

ಜಾಗತಿಕ ಹೆಪಟೈಟಿಸ್–2024 ವರದಿ ಬಿಡುಗಡೆಯಾಗಿದ್ದು, 2022ರಲ್ಲಿ ಜಗತ್ತಿನಾದ್ಯಂತ 25.4 ಕೋಟಿ ಮಂದಿಗೆ ‘ಹೆಪಟೈಟಿಸ್ ಬಿ’ ಮತ್ತು 5 ಕೋಟಿ ಮಂದಿಗೆ ‘ಹೆಪಟೈಟಿಸ್ ಸಿ’ ಇತ್ತು ಎಂದು ತಿಳಿಸಿದೆ.

‘ಕ್ಯೂಎಸ್’ ರ್‍ಯಾಂಕಿಂಗ್: ಐಐಎಂ–ಬೆಂಗಳೂರಿಗೆ ವಿಶ್ವದ ಅಗ್ರ 50 ಸಂಸ್ಥೆಗಳಲ್ಲಿ ಸ್ಥಾನ

ಅಗ್ರ 25 ಸಂಸ್ಥೆಗಳಲ್ಲಿ ಐಐಎಂ-ಅಹಮದಾಬಾದ್‌ಗೆ ಸ್ಥಾನ



ನವದೆಹಲಿ(ಪಿಟಿಐ): ಉನ್ನತ ಶಿಕ್ಷಣ ಸಂಸ್ಥೆಗಳ ಗುಣಮಟ್ಟ ಕುರಿತ ‘ಕ್ಯೂಎಸ್ ವರ್ಲ್ಡ್ ಯುನಿವರ್ಸಿಟಿ ರ್‍ಯಾಂಕಿಂಗ್ಸ್ ಬೈ ಸಬ್ಜೆಕ್ಟ್’ ಪಟ್ಟಿಯನ್ನು ಬುಧವಾರ ಪ್ರಕಟಿಸಲಾಗಿದ್ದು, ವ್ಯವಹಾರ ಮತ್ತು ವ್ಯವಸ್ಥಾಪನಾ ಅಧ್ಯಯನಕ್ಕೆ ಸಂಬಂಧಿಸಿದ ಮೊದಲ 25 ಅಗ್ರ ಸಂಸ್ಥೆಗಳಲ್ಲಿ ಐಐಎಂ–ಅಹಮದಾಬಾದ್ ಸ್ಥಾನ ಪಡೆದಿದೆ.

ಐಐಎಂ–ಬೆಂಗಳೂರು ಹಾಗೂ ಐಐಎಂ–ಕಲ್ಕತ್ತ, ಈ ಪಟ್ಟಿಯಲ್ಲಿನ ಅಗ್ರ 50 ಸಂಸ್ಥೆಗಳಲ್ಲಿ ಸ್ಥಾನ ಪಡೆದಿವೆ.

ಉನ್ನತ ಶಿಕ್ಷಣ ವ್ಯವಸ್ಥೆಯ ವಿಶ್ಲೇಷಣೆ ನಡೆಸಿ, ರ್‍ಯಾಂಕಿಂಗ್ ನೀಡುವ ಲಂಡನ್ ಮೂಲದ ಕ್ವಾಕ್ವರೇಲಿ ಸೈಮಂಡ್ಸ್(ಕ್ಯೂಎಸ್) ಎಂಬ ಸಂಸ್ಥೆ ಈ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಭಾರತದಲ್ಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ ಅತಿಹೆಚ್ಚು ರ್‍ಯಾಂಕ್ ಪಡೆದ ವಿಶ್ವವಿದ್ಯಾಲಯ ಸ್ಥಾನ ಪಡೆದಿದೆ. ಅಭಿವೃದ್ಧಿ ಅಧ್ಯಯನಕ್ಕೆ ಸಂಬಂಧಿಸಿದ ಜಾಗತಿಕ ರ್‍ಯಾಂಕಿಂಗ್‌ನಲ್ಲಿ ಈ ವಿ.ವಿ 20ನೇ ಸ್ಥಾನ ಪಡೆದಿದೆ.

ದಂತ ವೈದ್ಯಕೀಯ ಅಧ್ಯಯನಕ್ಕೆ ಸಂಬಂಧಿಸಿ, ಚೆನ್ನೈನ ಸವಿತಾ ವೈದ್ಯಕೀಯ ಮತ್ತು ತಾಂತ್ರಿಕ ವಿಜ್ಞಾನಗಳ ಸಂಸ್ಥೆ(ಎಸ್‌ಐಎಂಟಿಎಸ್) 24ನೇ ಸ್ಥಾನ ಪಡೆದಿದೆ.

‘ಉನ್ನತ ಹಂತದಲ್ಲಿ ಗುಣಮಟ್ಟದ ಶಿಕ್ಷಣ ನೀಡುವುದೇ ಶೈಕ್ಷಣಿಕ ಕ್ಷೇತ್ರಕ್ಕೆ ಸಂಬಂಧಿಸಿ ಭಾರತ ಎದುರಿಸುತ್ತಿರುವ ದೊಡ್ಡ ಸವಾಲಾಗಿದೆ. ಇನ್ನೊಂದೆಡೆ ಗುಣಮಟ್ಟದ ಶಿಕ್ಷಣಕ್ಕೆ ಬೇಡಿಕೆಯೂ ಹೆಚ್ಚುತ್ತಿದೆ. ಇದನ್ನೇ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಹೇಳಲಾಗಿದೆ’ ಎಂದು ಕ್ಯೂಎಸ್ ಸಂಸ್ಥೆಯ ಸಿಇಒ ಜೆಸ್ಸಿಕಾ ಟರ್ನರ್ ಹೇಳಿದ್ದಾರೆ.

‘ಕ್ಯೂಎಸ್’ ರ್‍ಯಾಂಕಿಂಗ್ ವರದಿಯ ಪ್ರಮುಖ ಅಂಶಗಳು

- ಭಾರತದ ಮೂರು ಖಾಸಗಿ ಉನ್ನತ ಸಂಸ್ಥೆಗಳಲ್ಲಿಮ ಕೆಲವು ಶೈಕ್ಷಣಿಕ ಕಾರ್ಯಕ್ರಮಗಳು ಈ ವರ್ಷ ಉತ್ತಮ ಪ್ರಗತಿ ದಾಖಲಿಸಿವೆ.
- ಶಿಕ್ಷಣದ ಗುಣಮಟ್ಟವನ್ನು ಮೇಲ್ದರ್ಜೆಗೇರಿಸುವಲ್ಲಿ, ಎಲ್ಲರಿಗೂ ಉನ್ನತ ಶಿಕ್ಷಣ ಲಭ್ಯವಾಗುವಂತೆ ಮಾಡುವ ನಿಟ್ಟಿನಲ್ಲಿ ಇನ್ನೂ ಸಾಕಷ್ಟು ಕೆಲಸವಾಗಬೇಕಿದೆ.
- ಡಿಜಿಟಲ್ ಸನ್ನದ್ಧತೆ ಹಾಗೂ ಜಾಗತಿಕ ಮಟ್ಟದ ಸ್ಪರ್ಧಾತ್ಮಕತೆ ಬಗ್ಗೆಯೂ ಗಮನ ಅಗತ್ಯ
- ಸಂಶೋಧನೆಗೆ ಸಂಬಂಧಿಸಿ ಭಾರತವು ವಿಶ್ವದಲ್ಲಿಯೇ ಪ್ರಮುಖ ಕೇಂದ್ರವಾಗಿ ಹೊರಹೊಮ್ಮುತ್ತಿದೆ. 2017ರಿಂದ 2022ರ ಅವಧಿಯಲ್ಲಿ ಸಂಶೋಧನೆ ಕ್ಷೇತ್ರದಲ್ಲಿನ ಬೆಳವಣಿಗೆ ಶೇ 54ರಷ್ಟು ಹೆಚ್ಚಳ ದಾಖಲಿಸಿದೆ
- ಸಂಶೋಧನಾ ವರದಿಗಳ ಪ್ರಕಟಣೆಗೆ ಸಂಬಂಧಿಸಿದಂತೆ, ಭಾರತವು ವಿಶ್ವದಲ್ಲಿಯೇ ನಾಲ್ಕನೇ ಸ್ಥಾನದಲ್ಲಿದೆ. 2017ರಿಂದ 2022ರ ವರೆಗಿನ ಅವಧಿಯಲ್ಲಿ 13 ಲಕ್ಷ ಸಂಶೋಧನಾ ವರದಿಗಳು ಪ್ರಕಟವಾಗಿವೆ. ಚೀನಾ (45 ಲಕ್ಷ) ಹಾಗೂ ಅಮೆರಿಕ (44 ಲಕ್ಷ) ಮೊದಲ ಎರಡು ಸ್ಥಾನಗಳಲ್ಲಿವೆ.

ಸೈನಿಕ ಶಾಲೆಗಳ ಖಾಸಗೀಕರಣ ವಿರುದ್ಧ ಮುರ್ಮುಗೆ ಖರ್ಗೆ ಪತ್ರ

ನವದೆಹಲಿ (ಪಿಟಿಐ): ದೇಶದಲ್ಲಿರುವ ಸೈನಿಕ ಶಾಲೆಗಳನ್ನು ಖಾಸಗೀಕರಣಗೊಳಿಸುವ ನಡೆ ವಿರೋಧಿಸಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಎರಡು ಪುಟಗಳ ಪತ್ರ ಬರೆದಿದ್ದಾರೆ.

ಈ ಯೋಜನೆಯನ್ನು ಸಂಪೂರ್ಣವಾಗಿ ಹಿಂಪಡೆಯಬೇಕು ಮತ್ತು ಈ ನಿಟ್ಟಿನಲ್ಲಿ ಮಾಡಿಕೊಳ್ಳಲಾಗಿರುವ ಒಪ್ಪಂದಗಳನ್ನು ಕೂಡಲೇ ರದ್ದುಪಡಿಸಬೇಕು ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ದೇಶದಲ್ಲಿ 33 ಸೈನಿಕ ಶಾಲೆಗಳಿವೆ. ಇವುಗಳನ್ನು ರಕ್ಷಣಾ ಸಚಿವಾಲಯದ ಅಡಿ ಇರುವ ಸೈನಿಕ ಶಾಲಾ ಸೊಸೈಟಿ (ಎಸ್‌ಎಸ್‌ಎಸ್) ಎಂಬ ಸ್ವಾಯತ್ತ ಸಂಸ್ಥೆ ನಡೆಸುತ್ತಿದೆ ಎಂದು ಅವರು ವಿವರಿಸಿದ್ದಾರೆ.

ಪಕ್ಷ ರಾಜಕೀಯದಿಂದ ಸಶಸ್ತ್ರ ಪಡೆಗಳನ್ನು ಭಾರತೀಯ ಪ್ರಜಾಪ್ರಭುತ್ವವು ಪ್ರಜ್ಞಾಪೂರ್ವಕವಾಗಿ ದೂರ ಇರಿಸಿದೆ. ಆದರೆ, ಕೇಂದ್ರ ಸರ್ಕಾರವು ಈ ಸಂಪ್ರದಾಯವನ್ನು ಉಲ್ಲಂಘಿಸಿದೆ ಎಂದಿದ್ದಾರೆ.

ಒಂದಾದ ನಂತರ ಒಂದು ಸಂಸ್ಥೆಯ ಶಕ್ತಿಗುಂದಿಸಿದ ಬಳಿಕ, ಸಶಸ್ತ್ರ ಪಡೆಗಳ ಮೇಲೆ ತನ್ನ ಸಿದ್ಧಾಂತವನ್ನು ಹೇರಲು ಆರ್‌ಎಸ್‌ಎಸ್ ಈ ಯೋಜನೆ ಹಾಕಿಕೊಂಡಿದೆ. ಈ ರೀತಿಯ ಸಂಸ್ಥೆಗಳ ಮೇಲೆ ಸಿದ್ಧಾಂತ ಹೇರಿದರೆ ಅದು ಎಲ್ಲರ ಒಳಗೊಳ್ಳುವಿಕೆಯನ್ನು ಹಾಳುಗೆಡವುತ್ತದೆ. ಅಲ್ಲದೇ, ಧಾರ್ಮಿಕ, ಕಾರ್ಪೊರೇಟ್, ಕುಟುಂಬ, ಸಾಮಾಜಿಕ ಮತ್ತು ಸಾಂಸ್ಕೃತಿಕ ನಡವಳಿಕೆಗಳನ್ನು ಸೈನಿಕ ಶಾಲೆಗಳ ಮೇಲೆ ಹೇರುವ ಮೂಲಕ ಆ ಶಾಲೆಗಳ ‘ರಾಷ್ಟ್ರೀಯ ಮಾನ್ಯತೆ’ಗೂ ಧಕ್ಕೆಯಾಗುತ್ತದೆ ಎಂದಿದ್ದಾರೆ.

‘ರಾಷ್ಟ್ರೀಯ ಹಿತಾಸಕ್ತಿಯನ್ನು ಗಮನದಲ್ಲಿರಿಸಿಕೊಂಡು ಸೈನಿಕ ಶಾಲೆಗಳನ್ನು ಖಾಸಗೀಕರಣಗೊಳಿಸುವ ನಿರ್ಧಾರದಿಂದ ಹಿಂದೆ ಸರಿಯಬೇಕು ಎಂದು ಕಾಂಗ್ರೆಸ್ ಆಗ್ರಹಿಸುತ್ತದೆ’ ಎಂದು ಪತ್ರದಲ್ಲಿ ಹೇಳಿದ್ದಾರೆ.

ಮಾಹಿತಿ ಹಕ್ಕಿನಡಿ ಆಧಾರದ ಮೇಲೆ ಪ್ರಕಟವಾಗಿರುವ ತನಿಖಾ ವರದಿ ಅನ್ವಯ, ಸೈನಿಕ ಶಾಲೆಗಳನ್ನು ಸಾರ್ವಜನಿಕ– ಖಾಸಗಿ ಸಹಭಾಗಿತ್ವದ (ಪಿಪಿಪಿ) ಅಡಿಯಲ್ಲಿ ಖಾಸಗೀಕರಣಗೊಳಿಸಲಾಗುತ್ತಿದೆ ಎಂದು ಖರ್ಗೆ ಅವರು ಪತ್ರದಲ್ಲಿ ಗಮನ ಸೆಳೆದಿದ್ದಾರೆ. ‘ಶೇ 62ರಷ್ಟು ಸೈನಿಕ ಶಾಲೆಗಳು ಬಿಜೆಪಿ–ಆರ್‌ಎಸ್‌ಎಸ್ ನಾಯಕರ ಮಾಲೀಕತ್ವದಲ್ಲಿವೆ’ ಎಂದು ವಿವರಿಸಿದ್ದಾರೆ.

ALVA'S Education Foundation®

ALVA'S PRE UNIVERSITY COLLEGE

MOODUBIDIRE - 574227, DK

682 Students above 95%

2027 Students above 90%

2882 Students above 85%

Remarkable Achievement of Alva's PU College Students in II PUC Annual Examination 2024

ADMISSIONS OPEN

SCIENCE
- PCMB
- PCMC
- PCMS
- PCME

NEET / CET / JEE / NATA / NDA / CLAT

COMMERCE
- BASBm
- BAEBm
- EBAC
- EBAS
- EBAH

CA / CS / NDA / CLAT CIVIL SERVICE

ARTS
- HEPS

CLAT / CIVIL SERVICE



6366377823, 6366377825, 6366377827, 6366933727, 8884477588

www.alvaspucollege.org

we have no Branches

ALVA'S
Education Foundation®

ALVA'S PRE UNIVERSITY COLLEGE

MOODUBIDIRE - 574227, DK

682 Students above **95%**

2027 Students above **90%**

2882 Students above **85%**

Remarkable Achievement of Alva's PU College Students in II PUC Annual Examination 2024

ADMISSIONS OPEN

SCIENCE
- PCMB
- PCMC
- PCMS
- PCME

NEET / CET / JEE / NATA / NDA / CLAT

COMMERCE
- BASBm
- BAEBm
- EBAC
- EBAS
- EBAH

CA / CS / NDA / CLAT CIVIL SERVICE

ARTS
- HEPS

CLAT / CIVIL SERVICE



Name	Marks
VIKAS SIDDAPPA KARIGAR	577-96.17%
MANISH V GOWDA	577-96.17%
PRAKRUTHI J	577-96.17%
SANJANA V	577-96.17%
VARNITHA RAVI	577-96.17%
AKSHATA BENAKANAWARI	577-96.17%
ANUPAMA H S	577-96.17%
VEDANT NAGUR	577-96.17%
VISHNU VENKAPPA YADAHALLI	577-96.17%
AMSHITH	577-96.17%
SHRAVANAKUMAR PISHUNAGOUDA PATIL	577-96.17%
K PRATHAP ANCHAN	577-96.17%
SATHWIK S RAO	577-96.17%
JNANESH V	577-96.17%
SPURTHI RAMESHBABU WANAHALLI	577-96.17%



Name	Marks
GOPAL KRISHNA K	577-96.17%
SHREERAKSHA RAJENDRA SWAMI SANGOORMATH	577-96.17%
SHIVU S E	576-96.00%
SHREYA R SHETTY	576-96.00%
YASHWITHA T S	576-96.00%
KUSHAJ	576-96.00%
TANVIKA S A	576-96.00%
SAKSHI MALI	576-96.00%
SANNIDHI PATIL	576-96.00%
DIGANTH D	576-96.00%
NANDAN MOHITE	576-96.00%
RAVI HOSAPETI	576-96.00%
THANUSHREE M R	576-96.00%
NAVATEJ S B	576-96.00%
AKASH SIDDANNA BUDIHAL	576-96.00%



Name	Marks
ANKITHA A S	576-96.00%
ADITI ANAND HALLOLLI	576-96.00%
VISHAL R B	576-96.00%
VISHRUTHA BUSHAN G	576-96.00%
SANTOSH PRABHU	576-96.00%
BALAKRISHNA S	576-96.00%
ANUSHA D K	576-96.00%
PRANATHI P H	576-96.00%
SUNIL BASARIHALLI	576-96.00%
KRITHIKA N	576-96.00%
SHANKAR GOPAL KUMBAR	576-96.00%
KUSUMITHA P	576-96.00%
SAMANVITA	576-96.00%
VARUN SHETTY	576-96.00%
MELISHA LEWIS	576-96.00



Name	Marks
SANSKAR METRI	576-96.00%
SAGAR S DALAVAI	576-96.00%
VARSHITHA DINESH B	576-96.00%
ANUSHA HONNUNGAR	576-96.00%
BABA FAKRUDDIN K M	576-96.00%
NOOTHAN RAJ	576-96.00%
SANJANA PATIL	576-96.00%
SHREE SKANDA V R	576-96.00%
SNEHA SHRISHAIL KHATANVI	576-96.00%
SIDDHARTH DHANUSH R	576-96.00%
SUDEEP M HIREMATH	576-96.00%
ARYAN HEGDE	576-96.00%
DHANUSH R	576-96.00%
AKUL M PATIL	576-96.00
MD SAHIL	576-96.00%



Name	Marks
DWITHI	576-96.00%
NAVEEN	576-96.00%
RAI PREETHI RAMANNA	576-96.00%
BADDEPPA RATHOD	575-95.83%
CHARVI GOWDA S	575-95.83%
GANASHREE A P	575-95.83%
RAGHAVENDRA K S	575-95.83%
BHOOMIKA SHIVARUDRA PARAVANNAVAR	575-95.83%
MITHUN P Y	575-95.83%
ABHISHEK SADASHIV TORASE	575-95.83%
BASAVANTAPPA ARALAHALLI	575-95.83%
K THIPPANNA	575-95.83%
GAYATRI BABU GHARABUDE	575-95.83%
SADHANA RAJENDRA HEGDE	575-95.83%
DEEKSHA K H	575-95.83%



Name	Marks
M YOGANANDA	575-95.83%
PRATHIKA	575-95.83%
SHREYAS GOWDA B A	575-95.83%
GAGAN M R	575-95.83%
PAVAN KUMAR H K	575-95.83%
SANDEEP NAIK H	575-95.83%
SANTRUPTH D P	575-95.83%
SHRISHA BHAT	575-95.83%
SAMBHAV	575-95.83%
BHAVANI SHANKAR D V	575-95.83%
N SAI NIROOP REDDY	575-95.83%
DEEPAK A	575-95.83%
AKSHATHA POOJARY	575-95.83%
ANUSHREE V	575-95.83%
PRATHIKSHA SHENOY	575-95.83%



Name	Marks
BHAVISHYA	575-95.83%
BHOOMIKA H PUJAR	575-95.83%
SAHITHYA BHAT K R	575-95.83%
NITHISHA NEELAMMA B D	575-95.83%
SIDDARTH R BANNI	575-95.83%
KAILASH R H	574-95.67%
NIVEDITA HIREMATH	574-95.67%
PREETHAM J S	574-95.67%
GAGAN B V	574-95.67%
HEMA S	574-95.67%
P S JAGRUTHI GOWDA	574-95.67%
POOJA V	574-95.67%
VINAY HOLABASAPPA HALIGERI	574-95.67%
GOUTAMI CHOUDHARI	574-95.67%
TANISHA ALWANDIKAR	574-95.67%



Name	Marks
AMITH M S	574-95.67%
NAVYA B GOWDA	574-95.67%
PRAKASH JAYAVANT MANDI	574-95.67%
SINCHANA KR	574-95.67%
SATHYA SHREE N	574-95.67%
PARVATAPPA J WANI	574-95.67%
SANIKA RAMESH KODIYA	574-95.67%
PRAMOD ARAKAL	574-95.67%
BHAGYASHRI SADASHIV NYAMAGOUD	574-95.67%
RAVISIDDU S R	574-95.67%
KRUTHAN N K	574-95.67%
ANSTON RAVASAHEB JARALI	574-95.67%
SRUSHTI SIDDANNA KARABASANAVAR	574-95.67%
TEJASWINI BHUPAL MANGAVATE	574-95.67%
ANAGHA SHETTY	574-95.67%



Name	Marks
PRAGATI L CHOUDHARI	574-95.67%
KEERTI JAGAPUR	574-95.67%
SEEMAKURTHI VENU GOPAL	574-95.67%
CHIRANTHA K M	574-95.67%
PUNITH S	574-95.67%
SWATHI	574-95.67%
HANAMANTRAY BALAPPA BIRADAR	574-95.67%
NEHA S	574-95.67%
REVANNA HALAPPA POOJARI	574-95.67%
RISHIT RAJESH SHETTY	574-95.67%
GANESHA S	574-95.67%
AMITH PRASAD S G	574-95.67%
RAGHAVENDRA KULKARNI	574-95.67%
SHRAVYA	574-95.67%
SHETTY VIKHYATH	574-95.67%



Name	Marks
ISHANI REBECCA DSOUZA	574-95.67%
ADITYA M DODAWAD	574-95.67%
SANGAM J H	574-95.67%
MAHATH D	574-95.67%
SUZAN AHMED ALIS	574-95.67%
PRABHATH R NANI	573-95.50%
LAXMI RAVINDRA BELLIKATTI	573-95.50%
MAYA DAYANAND NIDAVANI	573-95.50%
SAMEER S	573-95.50%
SHUBHA M J	573-95.50%
VAISHNAVI K N	573-95.50%
REVATI RAJU NULE	573-95.50%
VARUN V	573-95.50%
SANCHANA BASAVARAJ ADAVI	573-95.50%
VISHWARADYA	573-95.50%



Name	Marks
DARSHAN CHANNAPPA LAMANI	573-95.50%
SAIRAJ PARASHURAM PANDAVE	573-95.50%
AMOGHA VARSHA M NAYAK	573-95.50%
PAVAN	573-95.50%
RAGHAVAREDDY MADDUR	573-95.50%
SHRISHA M	573-95.50%
PARINITHA RAVISH	573-95.50%
PRANAV PARASHURAM SATTI	573-95.50%
BHANUSHREE N S	573-95.50%
MALLANAGOUDA SUBHAS BIRADAR	573-95.50%
CHETHAN GOWDA S N	573-95.50%
HARSHITHA N RAI	573-95.50%
PRIYANKA APPASAB BUYITE	573-95.50%
JEEVAN A E	573-95.50%
KUSHAL GOWDA G S	573-95.50%



Name	Marks
SAGAR RADRATTI	573-95.50%
THANMAYI S	573-95.50%
VARSHA M	573-95.50%
MOHAMMAD SHAHNAWAZ	573-95.50%
PRADEEP KUMAR P	573-95.50%
DARSHAN JAYARAM CHAVAN	573-95.50%
AKASH BHIMAPPA DYAMANNI	573-95.50%
ABHISHEK GOWDA	573-95.50%
ANANYA S POOJARY	573-95.50%
SHARANYA	573-95.50%
HITHAISHI P	573-95.50%
CHINDAKE PRADNYA PRAKASH	573-95.50%
DARSHAN NAMAD	573-95.50%
DURGA DEEPAK M C	573-95.50%
NISARGA G M	573-95.50%

6366377823, 6366377825, 6366377827, 6366933727, 8884477588

www.alvaspucollege.org

we have no Branches

ಕ್ಯಾಂಡಿಡೇಟ್ಸ್ ಚೆಸ್: ಡ್ರಾ ಸಾಧಿಸಿದ ಪ್ರಜ್ಞಾನಂದ, ವಿದಿತ್

ಜಂಟಿ ಅಗ್ರಸ್ಥಾನಕ್ಕೆ ಗುಕೇಶ್

ಟೊರಾಂಟೊ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಅಜರ್‌ಬೈಜಾನ್‌ನ ನಿಜತ್ ಅಬಸೋವ್ ಅವರನ್ನು ಮಣಿಸಿ ಜಂಟಿ ಅಗ್ರಸ್ಥಾನಕ್ಕೆ ಏರಿದರು.

ಇನ್ನೂ ಒಂಬತ್ತು ಸುತ್ತುಗಳು ಬಾಕಿಯಿದ್ದು, 17 ವರ್ಷದ ಗುಕೇಶ್ ಮತ್ತು ರಷ್ಯಾದ ಇಯಾನ್ ನೆಪೊಮ್‌ನಿಯಾಚಿ (ಫಿಡೆ) ಅವರೊಂದಿಗೆ 3.5 ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಅಗ್ರ ಶ್ರೇಯಾಂಕದ ಫ್ಯಾಬಿಯಾನೊ ಕರುವಾನ (ಅಮೆರಿಕ) ಅರ್ಧ ಪಾಯಿಂಟ್‌ನಿಂದ ಹಿಂದೆ ಇದ್ದಾರೆ.

ದಿನದ ಇತರ ಪಂದ್ಯಗಳಲ್ಲಿ ಅಮೆರಿಕದ ಹಿಕಾರು ನಕಾಮುರಾ ಅವರು ಫ್ರಾನ್ಸ್‌ನ ಫಿರೋಜಾ ಅಲಿರೆಜಾ ವಿರುದ್ಧ ಗೆಲುವು ಸಾಧಿಸಿದರೆ, ಭಾರತದ ಆರ್. ಪ್ರಜ್ಞಾನಂದ ಅವರು ಇಯಾನ್ ಅವರೊಂದಿಗೆ ಡ್ರಾ ಮಾಡಿಕೊಂಡರು. ಭಾರತದ ಮತ್ತೊಬ್ಬ ಆಟಗಾರ ವಿದಿತ್ ಗುಜರಾತಿ ಕೂಡ ಕರುವಾನಾ ವಿರುದ್ಧ ಡ್ರಾ ಸಾಧಿಸಿದರು.


ಭಾರತದ ಡಿ. ಗುಕೇಶ್ –ಪಿಟಿಐ ಚಿತ್ರ

ಪ್ರಜ್ಞಾನಂದ ಮತ್ತು ನಕಾಮುರಾ 2.5 ಪಾಯಿಂಟ್‌ಗಳೊಂದಿಗೆ ಜಂಟಿ ನಾಲ್ಕನೇ ಸ್ಥಾನವನ್ನು ಹಂಚಿಕೊಂಡರೆ, ವಿದಿತ್ ಎರಡು ಪಾಯಿಂಟ್‌ಗಳೊಂದಿಗೆ ನಂತರದ ಸ್ಥಾನದಲ್ಲಿದ್ದಾರೆ. ಅಬಸೋವ್, ಅಲಿರೇಝಾ ತಲಾ 1.5 ಪಾಯಿಂಟ್ ಗಳಿಸಿದ್ದಾರೆ.

ಮಹಿಳೆಯರ ವಿಭಾಗದ ಸ್ಪರ್ಧೆಯಲ್ಲಿ ಎಲ್ಲಾ ನಾಲ್ಕು ಪಂದ್ಯಗಳು ಡ್ರಾದಲ್ಲಿ ಕೊನೆಗೊಂಡಿತು.

ಪ್ರಜ್ಞಾನಂದ ಅವರ ಅಕ್ಕ ಆರ್. ವೈಶಾಲಿ ಅವರು ಅನ್ನಾ ಮುಝಿಚುಕ್ (ಉಕ್ರೇನ್) ವಿರುದ್ಧ ಡ್ರಾ ಸಾಧಿಸಿದರೆ, ಕೋನೇರು ಹಂಪಿ ಅವರು ಫಿಡೆಯ ಅಲೆಕ್ಸಾಂಡ್ರಾ ಗೊರ್ಯಾಚ್ಕಿನಾ ವಿರುದ್ಧ ಡ್ರಾದೊಂದಿಗೆ ಚೇತರಿಸಿಕೊಂಡರು.

ಚೀನಾದ ಜೊಂಗ್‌ಯಿ ತಾನ್ (3.5) ಅಂಕಗಳೊಂದಿಗೆ ಅಗ್ರಸ್ಥಾನದಲ್ಲಿದ್ದರೆ, ಅಲೆಕ್ಸಾಂಡ್ರಾ (3) ಎರಡನೇ ಸ್ಥಾನದಲ್ಲಿದ್ದಾರೆ. ವೈಶಾಲಿ, ಕ್ಯಾತರಿನಾ ಲಾಗ್ನೊ (ಫಿಡೆ) ಮತ್ತು ಬಲ್ಗೇರಿಯಾದ ನುರ್ಗ್ಯುಲ್ ಸಲಿಮೋವಾ 2.5 ಅಂಕಗಳೊಂದಿಗೆ ಜಂಟಿ ಮೂರನೇ ಸ್ಥಾನದಲ್ಲಿದ್ದಾರೆ. ಕೋನೇರು 2 ಅಂಕ ಗಳಿಸಿದ್ದಾರೆ.

ಪ್ರಣಯ್, ಸಿಂಧುಗೆ ಮುನ್ನಡೆ

ನಿಂಗ್ಬೋ (ಚೀನಾ) (ಪಿಟಿಐ): ಭಾರತದ ಅನುಭವಿ ಆಟಗಾರ ಎಚ್.ಎಸ್. ಪ್ರಣಯ್ ಅವರು ಇಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಚೀನಾದ ಲು ಗುವಾಂಗ್ ಝು ವಿರುದ್ಧ ಗೆಲುವು ಸಾಧಿಸಿದರು.

ಬುಧವಾರ ನಡೆದ 32ರ ಘಟ್ಟದ ಪಂದ್ಯದಲ್ಲಿ ವಿಶ್ವದ 9ನೇ ರ‍್ಯಾಂಕ್‌ನ ಪ್ರಣಯ್ 17-21, 23-21, 23-21 ರಿಂದ 16ನೇ ಕ್ರಮಾಂಕದ ಗುವಾಂಗ್ ಅವರನ್ನು ಹಿಮ್ಮೆಟ್ಟಿಸಿದರು. ಅವರು ಮುಂದಿನ ಸುತ್ತಿನಲ್ಲಿ ಚೀನಾ ತೈಪೆಯ ಲಿನ್ ಚುನ್-ಯಿ ವಿರುದ್ಧ ಸೆಣಸಾಡುವರು.

ಮಹಿಳೆಯರ ಸಿಂಗಲ್ಸ್‌ನ ಆರಂಭಿಕ ಸುತ್ತಿನಲ್ಲಿ ಭಾರತದ ಪಿ.ವಿ. ಸಿಂಧು 18-21, 21-14, 21-19 ರಿಂದ ಮಲೇಷ್ಯಾದ ಗೋಹ್ ಜಿನ್ ವೀ ಅವರನ್ನು ಮಣಿಸಿದರು. ಸಿಂಧು ಮುಂದಿನ ಸುತ್ತಿನಲ್ಲಿ ಚೀನಾದ ಹಾನ್ ಯು ಅವರನ್ನು ಎದುರಿಸುವರು.

ಭಾರತದ ಲಕ್ಷ್ಯ ಸೇನ್ ಆರಂಭಿಕ ಸುತ್ತಿನಲ್ಲೇ ನಿರ್ಗಮಿಸಿದರು. ಅವರು 19-21, 15-21 ರಿಂದ ಅಗ್ರ ಶ್ರೇಯಾಂಕದ ಶಿ ಯು ಕಿ ಅವರಿಗೆ ನೇರ ಗೇಮ್‌ಗಳಿಂದ ಮಣಿದರು.

ಭಾರತದ ಮತ್ತೊಬ್ಬ ಆಟಗಾರ ಪ್ರಿಯಾಂಶು ರಾಜಾವತ್ ಅವರೂ ನಿರಾಸೆ ಅನುಭವಿಸಿದರು. ಅವರು ಮೊದಲ ಸುತ್ತಿನ ಪಂದ್ಯದಲ್ಲಿ 9-21, 13-21 ರಿಂದ ಎಂಟನೇ ಶ್ರೇಯಾಂಕದ ಲೀ ಝಿ ಜಿಯಾ (ಮಲೇಷ್ಯಾ) ಅವರಿಗೆ ಶರಣಾದರು.

ಮತ್ತೊಂದು ಪಂದ್ಯದಲ್ಲಿ ಕಿದಂಬಿ ಶ್ರೀಕಾಂತ್ ಅವರರು 14-21, 13-21 ರಿಂದ ಇಂಡೊನೇಷ್ಯಾದ ಆಂಥೋನಿ ಸಿನಿಸುಕಾ ಗಿಂಟಿಂಗ್ ಅವರಿಗೆ ಮಣಿದರು.


ಎಚ್‌.ಎಸ್‌. ಪ್ರಣಯ್

ಮಹಿಳೆಯರ ಡಬಲ್ಸ್‌ನಲ್ಲಿ ಪಾಂಡ ಸಹೋದರಿಯರಾದ ರುತುಪರ್ಣ ಮತ್ತು ಶ್ವೇತಪರ್ಣ ಅವರೂ ನಿರ್ಗಮಿಸಿದರು. ಅವರು 8-21, 13-21 ಏಳನೇ ಶ್ರೇಯಾಂಕದ ಜಾಂಗ್ ಶು ಕ್ಸಿಯಾನ್ ಮತ್ತು ಝೆಂಗ್ ಯು ಡಬ್ಲ್ಯು (ಚೀನಾ) ಅವರಿಗೆ ಮಣಿದರು.

ಹಾಕಿ: ಭಾರತಕ್ಕೆ ಹ್ಯಾಟ್ರಿಕ್ ಸೋಲು

ಪರ್ತ್ (ಪಿಟಿಐ): ಭಾರತ ಪುರುಷರ ಹಾಕಿ ತಂಡ ಮೊದಲೆರಡು ಪಂದ್ಯಕ್ಕಿಂತ ಸುಧಾರಿತ ಪ್ರದರ್ಶನದ ಹೊರತಾಗಿಯೂ ಆಸ್ಟ್ರೇಲಿಯಾ ವಿರುದ್ಧ ಬುಧವಾರ ನಡೆದ ಮೂರನೇ ಹಾಕಿ ಟೆಸ್ಟ್ ಪಂದ್ಯದಲ್ಲಿ 1–2 ಗೋಲುಗಳಿಂದ ಪರಾಭವಗೊಂಡಿತು.

ಮೊದಲ ಎರಡು ಟೆಸ್ಟ್‌ಗಳಲ್ಲಿ ಕ್ರಮವಾಗಿ 1-5 ಮತ್ತು 2-4 ರಿಂದ ಸೋತಿದ್ದ ಭಾರತ, ರಕ್ಷಣಾ ಕ್ಷೇತ್ರದಲ್ಲಿ ಉತ್ತಮ ಪ್ರದರ್ಶನ ನೀಡಿದರೂ ಹ್ಯಾಟ್ರಿಕ್ ಸೋಲನ್ನು ತಪ್ಪಿಸಲು ಸಾಧ್ಯವಾಗಲಿಲ್ಲ.

ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಆತಿಥೇಯರು 3–0ಯಿಂದ ಮೇಲುಗೈ ಸಾಧಿಸಿದ್ದಾರೆ. ಶುಕ್ರವಾರ ಇಲ್ಲಿ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯ ನಡೆಯಲಿದೆ.

ಪಂದ್ಯದ ನಾಲ್ಕನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ರೂಪದಲ್ಲಿ ಆತಿಥೇಯರಿಗೆ ಮುನ್ನಡೆ ಗಳಿಸುವ ಅವಕಾಶ ಇತ್ತಾದರೂ ಅನುಭವಿ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಆಕರ್ಷಕ ಡೈವಿಂಗ್ ಮೂಲಕ ತಡೆದರು. ಅದಾದ ಐದನೇ ನಿಮಿಷದಲ್ಲಿ ಆಸ್ಟ್ರೇಲಿಯಾವು ಮೂರು ಪೆನಾಲ್ಟಿ ಕಾರ್ನರ್ ಅವಕಾಶ ಪಡೆದುಕೊಂಡಿತು. ಆದರೆ, ಅವುಗಳನ್ನು ಶ್ರೀಜೇಶ್ ತಡೆಯುವ ಮೂಲಕ ಪರಾಕ್ರಮ ತೋರಿದರು. ಪಂದ್ಯದಲ್ಲಿ ಆಸ್ಟ್ರೇಲಿಯಾವು ಒಟ್ಟು 12ನೇ ಪೆನಾಲ್ಟಿ ಕಾರ್ನರ್ ಅವಕಾಶ ಪಡೆದು ಕೊಂಡಿತ್ತು.

ಭಾರತ ಪರ ಜುಗರಾಜ್ ಸಿಂಗ್ (41ನೇ ನಿಮಿಷ) ಏಕೈಕ ಗೋಲು ಗಳಿಸಿದರು. ಆಸ್ಟ್ರೇಲಿಯಾ ಪರ ಜೆರೆಮಿ ಹೇವಾರ್ಡ್ (44ನೇ ಮತ್ತು 49ನೇ ನಿಮಿಷ) ಗೋಲು ತಂದಿತ್ತರು.

ಸಂಕ್ಷಿಪ್ತ ಸುದ್ದಿ

ಟೇಬಲ್ ಟೆನಿಸ್: ಅಂಜನಾಗೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರಿನ ಅಂಜನಾ ಪಿ. ರಾವ್ ಅವರು ಹೈದರಾಬಾದ್‌ನಲ್ಲಿ ಈಚೆಗೆ ನಡೆದ ಆಲ್ ಇಂಡಿಯಾ ಮಾಸ್ಟರ್ಸ್ ನ್ಯಾಷನಲ್ಸ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ.



40 ವರ್ಷದ ಮೇಲಿನವರ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ ಅಂಜನಾ ಅವರು 11-7, 11-6, 11-7 ರಿಂದ ಹಾಲಿ ಚಾಂಪಿಯನ್ ಪ್ರಸುನ್ನ ಪಾರೇಖ್ (ಗುಜರಾತ್) ಅವರನ್ನು ಮಣಿಸಿ ಚಾಂಪಿಯನ್ ಆದರು. ಸೆಮಿಫೈನಲ್‌ನಲ್ಲಿ ಅವರು ಸಾರಿಕಾ ವಿ. ಅವರನ್ನು ಮಣಿಸಿದ್ದರು.

ಉದ್ದೀಪನ ಮದ್ದು: ಮೂವರ ಅಮಾನತು

ನವದೆಹಲಿ: ಉದ್ದೀಪನ ಮದ್ದು ಸೇವನೆ ದೃಢಪಟ್ಟ ಹಿನ್ನೆಲೆಯಲ್ಲಿ ಗೋವಾ ನ್ಯಾಷನಲ್ ಗೇಮ್ಸ್ ಬೆಳ್ಳಿ ಪದಕ ವಿಜೇತ ಸ್ಟೀಪಲ್ ಚೇಸರ್ ಮೊಹಮ್ಮದ್ ನೂರ್ ಹಸನ್ ಮತ್ತು ಭಾರತದ ವರ್ಲ್ಡ್ ಕ್ರಾಸ್ ಕಂಟ್ರಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಿದ ಹೇಮರಾಜ್ ಗುರ್ಜರ್ ಮತ್ತು ಅಂಜಲಿ ಕುಮಾರಿ ಅವರನ್ನು ತಾತ್ಕಾಲಿಕ ಅಮಾನತುಗೊಳಿಸಲಾಗಿದೆ.

ದೂರ ಓಟಗಾರ ಜಿ. ಲಕ್ಷ್ಮಣನ್ ಮತ್ತು ಸ್ಪ್ರಿಂಟರ್ ಹಿಮಾನಿ ಚಾಂದೆಲ್ ಅವರಿಗೆ ರಾಷ್ಟ್ರೀಯ ಉದ್ದೀಪನ ತಡೆ ಘಟಕವು ಕ್ರಮವಾಗಿ 2 ಮತ್ತು ನಾಲ್ಕು ವರ್ಷಗಳ ನಿಷೇಧವನ್ನು ವಿಧಿಸಿದೆ.

ಒಲಿಂಪಿಕ್ಸ್: ಟ್ರ್ಯಾಕ್–ಫೀಲ್ಡ್ ವಿಭಾಗ ವಿಜೇತರಿಗೆ ನಗದು ಪ್ರಶಸ್ತಿ

ಮೊನಾಕೊ(ಪಿಟಿಐ): ಪ್ಯಾರಿಸ್ ಒಲಿಂಪಿಕ್ ಕೂಟದ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಚಿನ್ನ ಜಯಿಸುವ ಅಥ್ಲೀಟ್‌ಗಳಿಗೆ ₹ 41.60 ಲಕ್ಷ ನಗದು ಪ್ರಶಸ್ತಿ ನೀಡಲು ವಿಶ್ವ ಅಥ್ಲೆಟಿಕ್ (ಡಬ್ಲ್ಯುಎ) ಸಂಸ್ಥೆ ತೀರ್ಮಾನಿಸಿದೆ.

2028ರ ಲಾಸ್ ಏಂಜಲಿಸ್ ಒಲಿಂಪಿಕ್ ಕೂಟದಲ್ಲಿ ಮೊದಲ ಮೂರು ಸ್ಥಾನ ಪಡೆಯುವ ಎಲ್ಲರಿಗೂ ನಗದು ಪ್ರಶಸ್ತಿ ನೀಡುವುದಾಗಿಯೂ ಸಂಸ್ಥೆಯು ಬುಧವಾರ ಘೋಷಿಸಿದೆ.

‘ಈ ಮೂಲಕ ಒಲಿಂಪಿಕ್ ಕೂಟದಲ್ಲಿ ನಗದು ಪ್ರಶಸ್ತಿ ನೀಡಲಿರುವ ಮೊದಲ ಕ್ರೀಡಾ ಸಂಸ್ಥೆಯೆಂಬ ಹೆಗ್ಗಳಿಕೆಗೆ ಡಬ್ಲ್ಯುಎ ಪಾತ್ರವಾಗಲಿದೆ. ಅಥ್ಲೀಟ್‌ಗಳಿಗೆ ನಗದು ಪ್ರಶಸ್ತಿ ನೀಡಿ ಗೌರಿಸುವುದು ಆ ಕ್ರೀಡೆಯ ಉನ್ನತ ಯಶಸ್ಸಿನ ಪ್ರತೀಕವಾಗಿದೆ’ ಎಂದು ಡಬ್ಲ್ಯುಎ ಪ್ರಕಟಣೆಯಲ್ಲಿ ತಿಳಿಸಿದೆ.

ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಭಾರತದ ನೀರಜ್ ಚೋಪ್ರಾ ಅವರು ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಜಯಿಸಿದ್ದರು. ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಈ ಸಾಧನೆ ಮಾಡಿದ ಭಾರತದ ಮೊದಲ ಅಥ್ಲೀಟ್ ಆಗಿದ್ದರು. ಅವರು ಪ್ಯಾರಿಸ್‌ನಲ್ಲಿಯೂ ಚಿನ್ನ ಜಯಿಸುವ ನೆಚ್ಚಿನ ಅಥ್ಲೀಟ್ ಆಗಿದ್ದಾರೆ.

‘ರಿಲೆ ತಂಡಗಳಿಗೂ ಇದೇ ಮೊತ್ತ ನೀಡಲಾಗುವುದು. ತಂಡದೊಳಗಿನ ಅಥ್ಲೀಟ್‌ಗಳನ್ನು ಅದನ್ನು ಹಂಚಿಕೊಳ್ಳುವರು’ ಎಂದು ತಿಳಿಸಲಾಗಿದೆ.

‘2015ರಲ್ಲಿ ನಾವು ಆರಂಭಿಸಿದ್ದ ಈ ಪಯಣದ ಮುಂದುವರಿದ ಭಾಗ ಇದಾಗಿದೆ. ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ)ಯಿಂದ ಬರುವ ಹಣವು ಒಲಿಂಪಿಕ್ ಕ್ರೀಡೆಗಳಿಗೆ ಮರಳಿ ಹೋಗುವಂತೆ ಮಾಡಿರುವುದು ಸಂತಸ ತಂದಿದೆ’ ಎಂದು ಡಬ್ಲ್ಯುಎ ಅಧ್ಯಕ್ಷ ಸೆಬಾಸ್ಟಿಯನ್ ಕೊ ಹೇಳಿದ್ದಾರೆ.

ಕುಂಡ್ಯೋಳಂಡ ತಂಡಕ್ಕೆ ಜಯ

ನಾಪೋಕ್ಲು: ಆತಿಥೇಯ ಕುಂಡ್ಯೋಳಂಡ ತಂಡವು ಕೊಡಗು ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಬುಧವಾರ ನಡೆದ ಪಂದ್ಯದಲ್ಲಿ ಚೆರಿಯಪಂಡ ತಂಡದ ವಿರುದ್ಧ ಗೆಲುವು ದಾಖಲಿಸಿತು.

ದಿವಿನ್ ದೇವಯ್ಯ, ಪ್ರಧಾನ್ ಪೊನ್ನಣ್ಣ, ಕೆ.ಟಿ.ಕಾರ್ಯಪ್ಪ ಮತ್ತು ಪೊನ್ನಪ್ಪ ದಾಖಲಿಸಿದ ಗೋಲುಗಳ ನೆರವಿನಿಂದ ಆತಿಥೇಯ ತಂಡವು ಜಯಿಸಿತು. ಅಂಜಪರವಂಡ ತಂಡದ ಆಟಗಾರರಾದ ಹೇಮಂತ್, ಅವಿನ್ ಚೆಟ್ಟಿಯಪ್ಪ ಹಾಗೂ ದೀಪಕ್ ಸುಬ್ಬಯ್ಯ ತಲಾ ಒಂದು ಗೋಲು ಗಳಿಸಿದರೆ, ಅಂಜಪರವಂಡ ಚಿರಾಗ್ 2 ಗೋಲು ಗಳಿಸಿ ಒಟ್ಟು 5 ಗೋಲುಗಳನ್ನು ದಾಖಲಿಸಿ ತಂಡಕ್ಕೆ ಜಯ ತಂದುಕೊಟ್ಟರು. ಆ ಮೂಲಕ ಅಂಜಪರವಂಡ ಪಳಂಗಿಯಂಡ ವಿರುದ್ಧ ಗೆಲುವು ಸಾಧಿಸಿತು.

ಇತರೆ ಪಂದ್ಯಗಳಲ್ಲಿ ಬೊಳ್ಳೆಪಂಡ ವಾಟೇರಿರ ವಿರುದ್ಧ 1-0 ರಿಂದ ಚೆರಿಯಪಂಡ ಅದೇಂಗಡ ವಿರುದ್ಧ 2-0 ರಿಂದ ಗೆಲುವು ಸಾಧಿಸಿತು. ಮಾಚಿಮಂಡ ಬಾಚಮಂಡ ವಿರುದ್ಧ, ಕೊಂಗಂಡ ಚೊಟ್ಟೇಮಾಡ ವಿರುದ್ಧ, ಅರೆಯಡ ದೇಯಂಡ ವಿರುದ್ಧ 3-0 ಅಂತರದ ಗೆಲುವು ಸಾಧಿಸಿ ಮುಂದಿನ ಸುತ್ತು ಪ್ರವೇಶಿಸಿದವು.